
ರಂಜನೆ ಬೋಧನೆ ಪ್ರಚೋದನೆ

ಲಂಕೇಶ್

• ಮಾರ್ಚ್ 16, 2011 • ಪುಟ 20 • ರೂ. 12/-


ಹೊಸ
ಲೆಮಾರಿನ
ಲ್ಲಣಗಳು



ಶೇಷಾಂಕ

ವಿವಿಧ ದೇಶಗಳ ಹಾಯ್ಕು

ಕನ್ನಡಕ್ಕೆ:
ಡಾ.ಸಿ.ರವೀಂದ್ರನಾಥ್ ಮತ್ತು
ಡಾ.ಅಮೃತ ಕುಮಾರಿ
ಆಯ್ಕೆ-ತೆಲುಗಿನಲ್ಲಿ ಪೆನ್ನಾ ಶಿವರಾಮಕೃಷ್ಣ
ಸಂಪಾದಿಸಿರುವ 'ದೇಶ ದೇಶಾಲ ಹಾಯ್ಕು' ಕೃತಿಯಿಂದ.



ಜೇಡ ಸ್ನಾನ ಮಾಡುತ್ತಿದೆ
ಬಲೆಯಲ್ಲಿ
ಒಂದು ನಗ್ನ ಮಂಜಿನ ಬಿಂದು
-ಡುಬ್ರಾವ್ಕೊ ಕೊರ್ಬ್ಸ್
(ಕ್ರೊಯೇಷಿಯ)

ರಾತ್ರಿ ಈಜುವಾಗ
ಖಾಲಿ ತೋಳುಗಳಲ್ಲಿ
ಚಂದಿರನ ಆಗಮನ
-ಕ್ಯಾಥರಿನ್ ಸ್ಯಾಮುಲೋವಿಚ್ (ಆಸ್ಟ್ರೇಲಿಯ)

ಸಮುದ್ರ ದಾಟಬಹುದು
ಪರ್ವತ ಏರಬಹುದು
ಆಸೆ ಅದುಮಿಡುವುದರ ಒಳಗೆ
-ಕಾಮಾಕುರ ಸಯುಮಿ (ಜಪಾನ್)

ಗರಿಕೆ ನೀರು, ನೀರು ಗರಿಕೆ
ಒಂದರೊಳಗೊಂದು
ನಮ್ಮಿಬ್ಬರಂತೆ
-ಝಿಯೋ ಸವಿನಾ (ಗ್ರೀಸ್)

ರಷ್ಯನ್ ಹಾಯ್ಕು

ಸೂಪರ್ ಮಾರ್ಕೆಟ್-
ತಳ್ಳು ಬಂಡಿಯಲ್ಲಿ
ಮಾಂಸ, ಮದ್ಯ, ಹೂವು ಮತ್ತು ಮಗು
-ಅಲೆಕ್ಸಿ ಅಂಡ್ರೆಯವ್

ಎಲೆಗಳು ಉದುರಿದ ಮೇಲೆ
ರೂಪ ಕಳೆದುಕೊಂಡಿದೆ
ಗಾಳಿ
-ನಟಾಲಿಯ ಲೆವಿ

ಕೋಗಿಲೆ ಹಾರಿಹೋಯಿತು
ಹೇಳಲು ಏನೂ ಇಲ್ಲ
ಹೇಳಿದರೆ ತುಂಬಾ ಇದೆ
-ಅಲೆಕ್ಸಿ ಅಂಡ್ರೆಯೆವ್

ಅವನಿಗೆ ಮಳೆ ಇಷ್ಟ
ಅವಳು
ಕೊಡೆ ಕೊಟ್ಟಳು
-ಅಲೆಕ್ಸಿ ಅಂಡ್ರೆಯೆವ್



ಕವಯಿತ್ರಿಯರ ಹಾಯ್ಕು

ನಾನು ಪಕ್ಷಿಯಾಗಬಲ್ಲೆ
ಮಾತು ಕೊಟ್ಟರೆ ನೀನು
ಕ್ರೂರ ಪಂಜರವಾಗದಂತೆ
-ರೀಟಾ ಓಡೆಹ್ (ಪ್ಯಾಲೆಸ್ಟೈನ್)


ನಿನ್ನ ಹಾದಿಯಲ್ಲಿ
ನನ್ನ ಹೆಜ್ಜೆ ಗುರುತುಗಳು
ಕೆಲವು ಚಿರ ಅಪರಿಚಿತ
-ಸ್ಲಾಟ್ಕಾ ವೊಲೆರಿಕ್ (ಸ್ಲೊವೇನಿಯ)

ಶಿಶಿರ ಸಂಜೆ
ಪ್ರತಿ ಎಲೆಯ ಹಿಂದೆ
ಮರದ ಅಸ್ಥಿಪಂಜರ
-ಫ್ರಾನ್ಸಿಸ್ ಪೊರಾಡ್ (ಅಮೆರಿಕ)

ನನ್ನ ಹಣೆಯ ಮೇಲೆ
ನಿನ್ನ ಆಲೋಚನೆಗಳನ್ನು ಮುದ್ರಿಸಿದೆ
ತುಟಿಗಳಿಂದ
-ಲುದ್ಮಿಲಾ ಬಾಲ್ಸ್‌ನೋವಾ (ಬಲ್ಗೇರಿಯಾ)

ಘರ್ಷಣೆಯ ನಂತರ
ನಮ್ಮ ನಡುವಿನ ಶೂನ್ಯ ತುಂಬುತ್ತಿದೆ
ಮಳೆಯ ಸಪ್ಪಳ
-ಅಲೆಂಕಾ ಜೋರ್‌ಮನ್ (ಸ್ಲೊವೇನಿಯ)

ನನ್ನ ಮನೆ
ಪಕ್ಕದ ಮನೆಯನ್ನು ಸಂತೈಸುತ್ತಿದೆ
ತನ್ನ ನೆರಳಿನಿಂದ
-ಜೆರಾ ಮಾಸ್ಕೋವಿಕ್ (ಕ್ರೊಯೇಶಿಯ)



ಜಾಜಿ ಹೂವೆ!
ಈ ಕ್ಷಣವನ್ನು ಪರಿಮಳಿಸುತ್ತಿರುವುದು
ನೀನಾ? ನಿನ್ನ ಹೆಸರಾ?
- ಒರ್ಲಾಂಡೋ ಗೊಂಜಾಲೆಸ್
(ಕ್ಯೂಬಾ)

ಜೈಲಿನಲ್ಲಿ ಕವಿ
ಅಲ್ಲಿರುವುದು ಆತನ ನೆರಳು
ಅವನಿರುವುದು ಪುಟಗಳ ಮಧ್ಯೆ!
-ಆಗಿಮ್ ವಿಂಕಾ (ಕೊಸೋವೊ)

ಪೋರ್ಚುಗೀಸ್ ಹಾಯ್ಕು

ಈ ಶಿಲೆಗಳು
ಒಂದು ಕಾಲದ ವೃಕ್ಷಗಳು-
ಮತ್ತೂ ಪುರಾತನ ವೃಕ್ಷಗಳು

ನನ್ನ ಕಣ್ಣೀರ ಆಗಸದಲ್ಲಿ
ಬಣ್ಣ ಹಚ್ಚಿಕೊಳ್ಳುತ್ತಿರುವ ಚಿಟ್ಟೆ:
ಕಾಮನ ಬಿಲ್ಲು

ನನ್ನ ಕೈಯಲ್ಲಿ ಆಲಿಕಲ್ಲು
ಅಲ್ಪ ಆಯುಷ್ಯ ಪಡೆದಿರುವ
ಪುಟ್ಟ ಮೋಡ
-ಕಾಸ್ಮಿರೋ ಡಿ ಬ್ರಿಟೊ

ಕ್ರೊಯೇಷಿಯ ಹಾಯ್ಕು

ಏಣಿ ಹತ್ತುತ್ತಿರುವ ಅವನ ನೆರಳು-
ಅನುಮಾನಿಸುತ್ತಾ
ಏಣಿ ನೆರಳನ್ನೇ ಹತ್ತುತ್ತಿದೆ
-ವ್ಲಾದಿಮಿರ್ ಡಿವಿಡ್

ಬೆಳದಿಂಗಳು
ಉದುರುತ್ತಿರುವ ಎಲೆ, ನೆರಳು
ಮಣ್ಣಲ್ಲಿ ಬೆರೆಯುತ್ತಿವೆ
-ವ್ಲಾದಿಮಿರ್ ಡಿವಿಡ್

ಸೂರ್ಯಾಸ್ತ
ಸೆಳೆಯುತ್ತಿವೆ ಆಗಸ ಕಡಲು
ಮಧ್ಯದ ರೇಖೆ ನಾನು
-ಡರ್ಸ್ಕೊ ಮೇಟ್ಸ್


ಅಪ್ಪನ ಸಮಾಧಿ
ಕಪ್ಪು ನುಣುಪು ಅಮೃತಶಿಲೆಯಲ್ಲಿ
ನನ್ನ ಮುಖ
-ಇವಾನ್ ನಡಿಲೊ

ಆಗಸದಲ್ಲಿ ಮಿಂಚು
ನೆಲದ ಮೇಲೆ ಮೊಲ
ಕ್ಷಣದಲ್ಲಿ ಮಾಯ
-ಸ್ಯಾಜೋನೆವಿಕ್

ಮೌನ:
ಗಣಿಯ ಆಳದಲ್ಲಿ
ಬಿಳಿಯ ಚಿಟ್ಟೆ
-ಫ್ರಾನೋ ಲೆಟ್‌ಕೋವಿಚ್

ಈ ಶಿಶಿರದ ಸಂಜೆಯಲ್ಲಿ
ಕಪ್ಪು ಕರವಸ್ತ್ರ:
ರೆಂಬೆಯ ಮೇಲೆ ಕಾಗೆ
-ತಾನಿಸ್ಲಾವ್

ಕನ್ನಡಿಯ ಬಾಗಿಲು ತೆರೆಯುತ್ತಾ
ಪುಟ್ಟ ಮಗು
ಪರ್ವತಗಳನ್ನೇ ಜರುಗಿಸಿತು!
-ಇನೆಸ್ ಕಿಸೆವಿಕ್




ಆಫ್ರಿಕನ್ ಹಾಯ್ಕು

ಪರ್ವತದ ಹಾದಿ:
ಮದಗಜಗಳ ಮಧ್ಯ
ಚಾಟಿ ಹಿಡಿದ ನಾನು
-ನೀಲ್ ರೀಡ್


ಶರಣು ಬಂದ ಯುವತಿ
ಸುಂದರ ಕಣ್ಣುಗಳಲ್ಲಿ
ಸ್ವಚ್ಛಂದ ಸ್ವಪ್ನಗಳು
-ಅನಾಮಿಕ

ಪೊಲೀಸ್ ಸ್ಟೇಷನ್:
ಕಟಕಟೆಯ ಹಿಂದೆ
ಆಫ್ರಿಕಾ
-ಅನಾಟೋಲಿ ಕುಡ್ರವಿಟ್ಸ್ಕಿ



ಶಿಲೆಯ ಕೈಯೊಳಗೆ
ನೀರಿನ ಅಂತಿಮಯಾತ್ರೆ:
ವಸಂತಋತುವಿಗೂ ಅಂತ್ಯವಿದೆ
-ಝುಹರಾ ಎಸ್ಫಾಂಡರಿ (ಇರಾನ್)

ಹೊಸ ತಲೆಮಾರಿನ ತಲ್ಲಣಗಳು



1999 ರಲ್ಲಿ ಲಂಕೇಶ್ ಪತ್ರಿಕೆಯ
ವಾರ್ಷಿಕೋತ್ಸವದ ಅಂಗವಾಗಿ
ಕೊಂಡಿದ್ದ ವಿಚಾರ ಗೋಷ್ಠಿಗೆ ಪಿ.
ಶರು ನೀಡಿದ್ದ ಶೀರ್ಷಿಕೆ
ಟಕದ ಕನಸುಗಳು'. ಈಗ 2011
ನಮ್ಮ 'ಲಂಕೇಶ್' ವಾರ ಪತ್ರಿಕೆ
'ಗೈಡ್' ಮಾಸಪತ್ರಿಕೆಗಳ
ಕೋತ್ಸವ ಮತ್ತು ಲಂಕೇಶರ 76
ಹುಟ್ಟುಹಬ್ಬದ ಕಾರ್ಯಕ್ರಮಕ್ಕೆ ನಾವು
ಮಾಡಿರುವ ವಿಷಯ 'ಕರ್ನಾಟಕದ
ಟ್ಟುಗಳು ಮತ್ತು ಪರಿಹಾರದ ದಾರಿಗಳು'.

ಳೆದ ಒಂದೆರಡು ದಶಕಗಳಲ್ಲಿ ರಾಜಕೀಯವಾಗಿ,
ಾಜಿಕವಾಗಿ, ಸಾಂಸ್ಕೃತಿಕವಾಗಿ, ಆರ್ಥಿಕವಾಗಿ ಕರ್ನಾಟಕ
ಕ ಪಾತಾಳ ತಲುಪಿದೆ ನೋಡಿ.


ಲಂಕೇಶರ ಕಾಲದಲ್ಲೂ ಜ್ಯೋತಿಷಿಗಳಿದ್ದರು. ಆಗ ದ್ವಾರ್ಕಿ
ಂತ ಕೆಲ ರಾಜಕಾರಣಿಗಳಿಗೆ ಅದೆಂತಹದ್ದೋ ಹೇಳಿ
ಿಸುತ್ತಿದ್ದ. ಆದರೆ ಆತನ ಹಾವಳಿ ದೊಡ್ಡ ಮಟ್ಟದಲ್ಲಿ
ದ್ದ ಕಾರಣ ಆತನ ಬಗ್ಗೆ ಬರೆಯುವ ಜರೂರತ್ತು
ಶರ ತಂಡಕ್ಕೆ ಕಂಡುಬಂದಿರಲಿಲ್ಲ.

ಆದರೆ ಇವತ್ತು ದ್ವಾರ್ಕಿಯಂಥ ಹೀನ ಸಂತತಿಯ
ದಂತಿರುವ ನರೇಂದ್ರ ಶರ್ಮ ಎಂಬ 'ಬ್ರಹ್ಮಾಂಡ
' ಟಿವಿ ಚಾನೆಲ್‌ನಲ್ಲಿ ವಕ್ಕರಿಸಿಕೊಂಡು ಲಕ್ಷಾಂತರ
ನ್ನು ಮೌಢ್ಯದತ್ತ ದೂಡುತ್ತಿದ್ದಾನೆ.

ಲಂಕೇಶರ ಕಾಲದಲ್ಲೂ ರೈತ ವಿರೋಧಿ
ರಗಳಿದ್ದವು. ಆದರೆ ನರಗುಂದ ಮತ್ತು ನವಲಗುಂದದಲ್ಲಿ
ಗುಂಡೂ ರಾವ್ ಸರ್ಕಾರ ರೈತರ ಮೇಲೆ ಗುಂಡುಗಳನ್ನು ಹಾರಿಸಿದಾಗ ಆಗಿನ ಸರ್ಕಾರದ ಪತನ ಪ್ರಾರಂಭವಾಗಿತ್ತು. ಆದರೀಗ ಏನಾಗಿದೆ? ಅಧಿಕಾರಕ್ಕೆ ಬಂದ ಹಲವೇ ದಿನಗಳಲ್ಲಿ ಯಡಿಯೂರಪ್ಪನ ಸರ್ಕಾರ ರೈತರನ್ನು ಕೊಂದರೂ ಅಧಿಕಾರದಲ್ಲಿ ಮುಂದುವರೆಯುತ್ತಿದೆ.

ಲಂಕೇಶರ ಕಾಲದಲ್ಲೂ ಹಗರಣಗಳು ನಡೆದಿದ್ದವು. ಆದರೆ ಆಗಿನ ಕಾಲದ ಹಲವು ಲಕ್ಷಗಳ ಬಾಟ್ಲಿಂಗ್ ಹಗರಣ ಮತ್ತು ಮೂರು ಕೋಟಿ ರೂಪಾಯಿಗಳ ಕ್ಲಾಸಿಕ್ ಕಂಪ್ಯೂಟರ್ ಹಗರಣಗಳನ್ನು ಈಗಿನ ಕೋಟ್ಯಂತರ ರೂಪಾಯಿಗಳನ್ನು ದೋಚಿರುವ ರೆಡ್ಡಿ-ಯಡ್ಡಿ-ಚಡ್ಡಿ ಪಡೆಗಳ ಹತ್ತಾರು ಹಗರಣಗಳಿಗೆ ಹೋಲಿಸಿದರೆ ರಾಜಕಾರಣಿಗಳು ಎಷ್ಟು ಹೊಲಸೆದ್ದು ಹೋಗಿದ್ದಾರೆ ಎಂದು ಅರ್ಥವಾಗುತ್ತದೆ.

ಆಗಲೂ ಮಠಾಧೀಶರ ಸ್ವಜಾತಿ ಪ್ರೇಮ ಢಾಳಾಗಿ ಕಾಣಿಸುತ್ತಿತ್ತು, ಆದರೆ ಈಗ ಅವರಲ್ಲಿ ಬಹಳಷ್ಟು ಜನ ಸರ್ಕಾರದ ಖಜಾನೆಗೆ ಕೈ ಹಾಕುತ್ತಾರೆ, ದೇವಸ್ಥಾನಗಳನ್ನೇ ಲಪಟಾಯಿಸುತ್ತಾರೆ, ಸರ್ಕಾರಿ ನೀತಿಗಳನ್ನು ನಿಯಂತ್ರಿಸುತ್ತಾರೆ. ಕೊನೆಗೆ ಭ್ರಷ್ಟ ಸ್ವಜಾತಿ ರಾಜಕಾರಣಿಯ ರಕ್ಷಣೆಗೆ ಬೀದಿಗೆ ಬಿದ್ದು ಲಜ್ಜೆಗೆಟ್ಟವರಂತೆ ಚೀರಾಡುತ್ತಾರೆ.



ಒಮ್ಮೆ ಲಂಕೇಶರ ತಲೆಮಾರಿನ ಒಬ್ಬರ 65ನೇ ಹುಟ್ಟು ಹಬ್ಬಾಚರಣೆ ನಡೆಯುತ್ತಿತ್ತು. ಅದರ ಬಗ್ಗೆ ಲಂಕೇಶರಿಗೆ ಹೇಳಿದಾಗ ಕೆಲಕ್ಷಣ ಸುಮ್ಮನಿದ್ದ ಅವರು ಕೊನೆಗೆ "ಕತ್ತೆಗಳಿಗೂ ವಯಸ್ಸಾಗುತ್ತೆ" ಎಂದು ಮಾರ್ಮಿಕವಾಗಿ ಉತ್ತರಿಸಿದ್ದರು. ಈಗ ಲಂಕೇಶರು ಅದೇ ಮಾತನ್ನು ಚಿದಾನಂದ ಮೂರ್ತಿ ಬಗ್ಗೆ ಹೇಳುತ್ತಿದ್ದರೇನೋ. ಪ್ರತಿ ಕಣದಿಂದಲೂ ಕೋಮು ದ್ವೇಷವನ್ನು ಪಸರಿಸುವ ಈ ಚಿಮೂಗೆ ಗೌರವ ಡಾಕ್ಟರೇಟ್ ಪ್ರಶಸ್ತಿ ನೀಡಿದೆ ಯಡ್ಡಿ ಸರ್ಕಾರ. ಹಾಗೆಯೇ ಭಾರತದ ರೂಪಾಯಿ ಸ್ಥಿರವಾದಷ್ಟೂ ತನ್ನ ಲಾಭಕ್ಕೆ ಧಕ್ಕೆ ಎಂದು ಕಣ್ಣೀರಿಡುವ ದೇಶದ್ರೋಹಿ ಇನ್ಫಿ ನಾರಾಯಣ ಮೂರ್ತಿಯಿಂದ ವಿಶ್ವ ಕನ್ನಡ ಸಮ್ಮೇಳನದ ಉದ್ಘಾಟನೆ ನಡೆಯಲಿದೆ.....

ಇಂತಹ ಸಂದರ್ಭದಲ್ಲಿ ಕೆಲ ರೈತ ಸಂಘಗಳು ರಿಯಲ್ ಎಸ್ಟೇಟ್ ದಲ್ಲಾಳಿಗಳಾಗಿವೆ; ಹಲವಾರು ದಲಿತ ಸಂಘಟನೆಗಳು ಬ್ಲ್ಯಾಕ್‌ಮೇಲ್ ತಂಡಗಳಾಗಿವೆ; ಕನ್ನಡದ ಹೆಸರಲ್ಲಿ ತಲೆ ಎತ್ತಿರುವ ಗುಂಪುಗಳು ಹಫ್ತಾ ವಸೂಲಿಯಲ್ಲಿ ನಿರತವಾಗಿವೆ; ಜನಪರ, ಪ್ರಗತಿಪರ ಹೋರಾಟಗಳು ನಿಶ್ಶಕ್ತವಾಗಿ ಮೂಲೆಗುಂಪಾಗಿದೆ.... ಹೀಗಿದ್ದಾಗಲೂ ಅಸಂಖ್ಯಾತ ರೈತ ದಲಿತ ಕನ್ನಡಪರ ನಾಯಕರು ಹಾಗೂ ಕಾರ್ಯಕರ್ತರು ಈಗಲೂ ಪ್ರಾಮಾಣಿಕ ಕಾಳಜಿಯಿಂದ ಹೋರಾಟ ನಿರತರಾಗಿದ್ದಾರೆ. ಹೊಸ ಭರವಸೆಯ ಬೆಳಕಿನಂತಿದ್ದಾರೆ.

ಈ ಎಲ್ಲದರ ಹಿನ್ನೆಲೆಯಲ್ಲೇ 'ಹೊಸ ತಲೆಮಾರಿನ ತಲ್ಲಣಗಳು' ಎಂಬ ಈ ವಿಶೇಷಾಂಕವನ್ನು ರೂಪಿಸಿದ್ದೇವೆ ಮತ್ತು ಮಾರ್ಚ್ 6 ರಂದು 'ಕರ್ನಾಟಕದ ಬಿಕ್ಕಟ್ಟುಗಳು ಮತ್ತು ಪರಿಹಾರದ ದಾರಿಗಳು' ಎಂಬ ವಿಚಾರ ಗೋಷ್ಠಿಯನ್ನು ಹಮ್ಮಿಕೊಂಡಿದ್ದೇವೆ.

ಪಿ.ಲಂಕೇಶರ ಆಶೆಗಳು ನಮ್ಮೆಲ್ಲರ ಬೇರುಗಳಾಗಿದ್ದರೆ, ಈ ವಿಶೇಷಾಂಕದಲ್ಲಿ ಬರೆದಿರುವ ಲೇಖಕರ ಕಾಳಜಿಗಳು ಎಲ್ಲರ ಕನಸುಗಳ ಚಿಗುರುಗಳ ಸಂಕೇತವಾಗಿವೆ....

ನಮ್ಮೆಲ್ಲರ ಆಶೆ, ಕಾಳಜಿ ಮತ್ತು ತಲ್ಲಣಗಳು ಹೊಸ ಜನಾಂಗವನ್ನು ರೂಪಿಸಲಿ ಎಂಬುದೇ ನಮ್ಮ ಆಶಯವಾಗಿದ್ದು ಈ ವಿಶೇಷ ಸಂಚಿಕೆ ಅದನ್ನ ಬಿಂಬಿಸುತ್ತದೆ ಎಂದು ಭಾವಿಸಿದ್ದೇವೆ.

• ಲಂಕೇಶ್ ಬಳಗ




ಲಂಕೇಶ್-76

ಸ್ಥಳ:
ಸಂಸ ಬಯಲು ರಂಗಮಂದಿರ
ದಿನಾಂಕ: 6.3.2011, ಭಾನುವಾರ
ಸಂಜೆ 5 ರಿಂದ 8.30

ಪಿ. ಲಂಕೇಶ್ 76ನೇ ಹುಟ್ಟುಹಬ್ಬ
ಲಂಕೇಶ್ ವಾರ ಪತ್ರಿಕೆ ಹಾಗೂ ಗೈಡ್ ಮಾಸಿಕದ ವಾರ್ಷಿಕೋತ್ಸವ ಸಮಾರಂಭ,
ಪುಸ್ತಕ ಬಿಡುಗಡೆ-ವಿಚಾರ ಗೋಷ್ಠಿ

ಪುಸ್ತಕ ಬಿಡುಗಡೆ ಇಂದಿರಾ ಲಂಕೇಶರಿಂದ

1. ಪಿ. ಲಂಕೇಶರ - ಮರೆಯುವ ಮುನ್ನ ಸಂಗ್ರಹ-3
2. ಗೌರಿ ಲಂಕೇಶರ - ಕಂಡಹಾಗೆ ಸಂಗ್ರಹ-2
3. ಪಿ. ಲಂಕೇಶ್ ಸಂಪಾದಿಸಿರುವ - ಅಕ್ಷರ ಹೊಸಕಾವ್ಯ (ಮೂರನೇ ಆವೃತ್ತಿ)






ಲಂಕೇಶ್ ನೆನಪು
ಲಂಕೇಶರ ಬರವಣಿಗೆ ಹಾಗೂ ಕಾಳಜಿಗಳ ಕುರಿತು — ಡಾ. ನಟರಾಜ್ ಹುಳಿಯಾರ್


ವಿಚಾರ ಗೋಷ್ಠಿ
ಕರ್ನಾಟಕದ ಬಿಕ್ಕಟ್ಟುಗಳು ಮತ್ತು ಪರಿಹಾರದ ದಾರಿಗಳು

ಪ್ರಸ್ತಾವನೆ	-	ಪಾರ್ವತೀಶ, ಲೇಖಕ
ಮುಖ್ಯ ಅತಿಥಿ	-	ನ್ಯಾ. ಸಂತೋಷ್ ಹೆಗ್ಡೆ ಮಾನ್ಯ ಲೋಕಾಯುಕ್ತರು
ಅತಿಥಿಗಳು	-	ಸಿದ್ದರಾಮಯ್ಯ ವಿರೋಧ ಪಕ್ಷದ ನಾಯಕರು
		ವೈ.ಎಸ್.ವಿ. ದತ್ತ ವಿಧಾನ ಪರಿಷತ್ ಸದಸ್ಯರು
		ಎನ್. ಮಹೇಶ್, ಬಹುಜನ ಸಮಾಜ ಪಕ್ಷದ ನಾಯಕರು
		ಡಾ. ವಾಸು, ಜನಶಕ್ತಿ ಸಂಘಟನೆಯ ಸಂಚಾಲಕರು
		ಡಾ. ಸಿದ್ದನಗೌಡ ಪಾಟೀಲ್, ಸಿಪಿಐ ಕಾರ್ಯದರ್ಶಿ
ಅಧ್ಯಕ್ಷತೆ	-	ಗೌರಿ ಲಂಕೇಶ್




ಕಾರ್ಯಕ್ರಮದ ದಿನದಂದು ಲಂಕೇಶ್ ಪ್ರಕಾಶನದ ಪುಸ್ತಕಗಳ ಮಾರಾಟಕ್ಕೆ ವ್ಯವಸ್ಥೆ ಮಾಡಲಾಗಿದೆ

ಎಲ್ಲರಿಗೂ ಪ್ರೀತಿಯ ಸ್ವಾಗತ



ತೆರೆದ ಮುಗಿಲು

ಎಲೆ ಹಕ್ಕಿಯೇ ಒಣಮರದಲಿ ಕೂತು
ಬೋಳು ಮಾಮರ ಕುರಿತು
ಹಾಡುವೆ ಏಕೆ ವಿಶಾದ ಗೀತೆ?
ಹಾಡು ಬೇಡನ ಬೆವರ ತಗ್ಗಿಸೀತು.
ಬೇಟೆಯುವ ಗುರಿಯಿಟ್ಟಾಗ ಎದೆಗೆ
ಮರದಲಿ ಒಂದೆಲೆ ಇರದು
ಅಡಗಿಸಲು ಎಲೆಮರೆಯಲಿ;
ಎಲೆಗಳ ತರಿದು ಕಟ್ಟಿದೆ ತೋರಣ
ಅರಮನೆಯ ಹೆಬ್ಬಾಗಿಲಿಗೆ.
ಎಲೆ ಹಕ್ಕಿಯೇ
ಬೋಳು ಮರದಲಿ ಕೂತು
ಹಾಡುವೆ ಏಕೆ ಹಸಿವಿನ ಗೀತೆ?
ನೀನು ಗಿಳಿಗೊರವಂಕ ಗೀಜಗ ಬೆಳವಪಾರಿವಾಳ
ಜೀವಕುಲದ ಹಾಡು ಹಾಡುವ ಹುಚ್ಚೆಳೆಂದು
ಡಂಗುರಿಸಿರುವ ತೋಟದೊಡೆಯ.
ಈಗ ನಿನ್ನುಸಿರು ಆರಿದರೆ ಹೊಣೆಯಲ್ಲ ಯಾರೂ
ಹಾಡುವುದು ಅಸಹಜವೆಂದು ಮೊದಲೇ
ಬರೆಹ ಮಾಡಿ ಹಚ್ಚಿದೆ ತೋಟದ ಗೋಡೆಗೆ.
ಎಲೆ ಹಕ್ಕಿಯೇ
ಬೋಳು ಮರದಲಿ ಕೂತು ಹಾಡುವೆಯೇಕೆ
ಸಮತೆಯ ಗೀತೆ?
ನೀನಾರೋ ಚಾರುವಸಂತದ ಮಂದಹಾಸ
ದ ಹಕ್ಕಿನ ಕನಸಿನವಳೆಂದು
ಎದೆಗೆ ಗುರಿಯಿಡಲು ಇಲ್ಲಿ ಕಾವಲಿಗರಿಗೆ ಬೇಡ
ತೋಟದೊಡೆಯನ ಹುಕುಂ.
ಸಮಾನತೆ ಹೊರಹಾಕಿರುವ ಈ ತೋಟದಲಿ
ಹಾಡುವುದೇ ಅಪರಾಧವಲ್ಲ,
ಈಗ ಬೇಟೆಯವ ಮರದ ಬೇರಿಗೆ ಕೊಳ್ಳಿಯಿಟ್ಟಿದ್ದಾನೆ.
ಉರಿವ ಕಿಚ್ಚಿನಲಿ ಮುಕ್ಕ ಚುರ್ರನೆ ಸೀದು ಕೈಗೆ ಸಿಗುವ
ನಿನ್ನ ರುಚಿಕರ ತುಂಡುಗಳ ಕನಸಿನಲಿ ಜೊಲ್ಲುಗರೆದು;
ಮತ್ತೆ ಮರವಿದ್ದರೆ ತಾನೇ ತೋಟದಲಿ
ಮೊಳಗುವುದು ವಸಂತ ಗೀತೆ;
ಮರ ಉರಿದಿದೆ ಚುಯ್ ಚಟ್ ಪಟ್
ಹಬ್ಬಿದ ಹೊಗೆ ಮೋಡ
ಬೇಡನ ಕಣ್ಣೂ ಬಿಡದೆ ಕವಿದಿದೆ ಎಲ್ಲೆಲ್ಲೂ
ಹಾರುವ ಹಕ್ಕಿಗೆ ಯಾವ ಹೊಗೆಗೋಡೆ ಕೈದು;
ತೆರೆದ ಮುಗಿಲು ತೆರೆದಿರುವಾಗ ಹಾರುವ ಹಕ್ಕಿಗೆ
ಕಾಯದ ಕಸುವು ಕೂಡಿಸಿ ಹಾರಬೇಕಷ್ಟೆ ಇಂದು.




• ರಂಗನಾಥ ಕಂಟನಕುಂಟೆ

ಹುಟ್ಟಿದ ದಿನ

ಇಂದು ನಾನು ಹುಟ್ಟಿದ ದಿನ, ಬದುಕಿದ್ದೇನೆಂದು
ರುಜುವಾತುಪಡಿಸಲು ನನ್ನ ಬಳಿ ಯಾವ ಪುರಾವೆಗಳೂ ಇಲ್ಲ
ಇದ್ದ ಸಾಕ್ಷಿಗಳನೆಲ್ಲ ಯಾರೊ ಕದ್ದು ಬಿಟ್ಟರು, ಇಲ್ಲ ಕಳೆದುಕೊಂಡದ್ದು ನನ್ನ ತಪ್ಪು
ಯಾರ ಬದುಕಿನಲ್ಲಿಯೂ ತಮಗೆ ತಾವು ಮಾತ್ರ
ಹೇಳಿಕೊಳ್ಳಬಹುದಾದ ಸತ್ಯ ಹುಟ್ಟಬಾರದು, ನನ್ನ ಬದುಕಿನಲ್ಲಿ
ನನಗೆ ನಾನು ಕೂಡ ಹೇಳಿಕೊಳ್ಳಲಾಗದ ನಿಜ ಉದ್ಭವಿಸಿದ್ದಕ್ಕೆ,
ಉಸಿರು ನಿಲ್ಲುವವರೆಗಿನ ಪರದಾಟ ತಪ್ಪಿದ್ದಲ್ಲ
ಬಟ್ಟೆ ತೊಟ್ಟೂ ಎಲ್ಲ ಕಾಣಿಸುತ್ತಿರುವ ಪರಪಂಚದ ಬಟಾಬಯಲಿನಲಿ
ಎಲ್ಲ ದಸ್ತಾವೇಜುಗಳ ಹಂಗು ಹರಿದು ನಿಲ್ಲಬೇಕೆನುತಿದೆ ಜೀವ
ಕತ್ತಲಲ್ಲಿ ಕಣ್ಣು, ಬೆಕ್ಕಿನ ಹೊಂಚು, ಬಲದಲಿ ಸತ್ತಂತೆ ಬಿದ್ದಿರುವ
ಪಾಪಿ ಇಲಿಗೆ ಹೇಗೆ ತಾನೆ ತಿಳಿದೀತು?
ಲೋಕದ ಆದಿಯಿಂದಲೂ ಹೀಗೆಯೇ......ಎನ್ನುತ್ತದೆ ಇತಿಹಾಸ
ನನ್ನ ಪ್ರಶ್ನೆ ಒಂದಿದೆ ಜಗಕಂಟಕ ತೀರ್ಮಗಾರರಿಗೆ
ಕಾಣುತ್ತಿರುವ ಬಿದ್ದ ಹೆಣದ ಮುಂದೆ ಕುಳಿತು ಸಿಹಿತಿನ್ನುವ ಕಾಲವಿತ್ತೆ?
ಮನೆಯ ಮುಂದಿನ ತಿರುಬೋಕಿ ಹಂದಿ ಓಡಿಸುವ ತ್ರಾಣವಿಲ್ಲದವರೆ
ಅದೆಷ್ಟು ಹತಿಯಾರಗಳು ತುಕ್ಕುಹಿಡಿದವು ನಿಮ್ಮವು ನಿಮ್ಮಂತೆ
ಸತ್ತ ಹೂವಿನ ಪರಿಮಳಕ್ಕೆ ಮುಗಿಬೀಳುವ ಜಗತ್ತು
ತುತ್ತು ಅನ್ನಕ್ಕೆ ಬಾಯಿ ತೆರೆಯುವ ನನ್ನ ಅವಳ ಬಿರುಕು ತುಟಿ
ಬೆಸೆದುಕೊಳ್ಳಲು ಹೇಗೆ ತಾನೇ ಬಿಟ್ಟೀತು?
ಹಾದಿಬೀದಿಯಲ್ಲಿ ಹರಾಜಿಗಿರುವ ಹೂಹೆಣದ ನಗು ನನ್ನದು
ಹೊಟ್ಟೆಬಾಕ ಕ್ರೂರ ಕೈಗಳ ಮಡಿಲು ಸೇರಿದೆ
ಲೋಕದಲ್ಲಿ ಮೊದಲ ಬಾರಿಗೆ ಹುಟ್ಟಿದ ಮಗು...... ನನ್ನಂತೆಯೇ
ಅದೆಷ್ಟು ಬಾರಿ ಅತ್ತೆ, ನಾನು ಸತ್ತೆ ನಾನು ಲೆಕ್ಕ ಸಿಗುತ್ತಿಲ್ಲ
ಸತ್ಯ ಗೊತ್ತಿರುವ ಮುಖ ಹೇಡಿಗಳು ಹೇಗೆ ತಾನೇ ಹೇಳಿಯಾರು
ಯಾರಿಗೂ ಗೊತ್ತಾಗದಂತೆ ಸಾಯಿಸುವ, ಸಾಯುವವರಿಗೂ
ಹೊಸ ವಿಧಾನಗಳ ಪ್ರಯೋಗ ನಡೆಸಿದ್ದಾರೆ ಈ ಕಾಲದ ಮೇಲೆ ನನ್ನ ಮೇಲೂ
ನಾನೂ ಹೀಗೆಯೇ ಎಲ್ಲದಕ್ಕೂ ಎದೆಯೊಡ್ಡುವ ಪಂಡ ಮಣ್ಣು ಮುಕ್ಕುವ ಹಾವಿನಂತೆ
ಬದುಕಿದ್ದೇನೆಯೋ ಇಲ್ಲವೋ ನನಗೆ ಗೊತ್ತಿಲ್ಲದಂತೆ ಬದುಕಿದ್ದೇನೆ. ಇಲ್ಲವೋ?
ಕರಗುತ್ತಿರುವ ಜೀವಸಾಕ್ಷಿಯ ಎದುರು ಎದೆ ಮುಟ್ಟಿಕೊಂಡು ಹೇಳಬಲ್ಲಿರಾ ನೀವು
ಎಷ್ಟು ಪಾಲು ಜೀವವಿದೆ ನಿಮ್ಮ ಆಳದ ಚೇತನಕ್ಕೆ?
ಹುಟ್ಟು, ಹಬ್ಬವಾಗದ ಎಳೆಯ ಕೂಸಿನ
ಸಾವಿನ ರುಚಿ ನೋಡುವ ಅಂಗಾಂಗವೆಲ್ಲ ನಾಲಿಗೆಯಾದ
ತ್ರಿಶೂಲ ಬಾಂಬು ತುಪಾಕಿಯ ಗುಂಡಿಗೆ
ಏನು ಹೇಳುತ್ತದೆ ನಿಮ್ಮ ಗುಂಡಿಗೆ?

(ಪ್ರತಿರೋಧದ ಜೀವಸೆಲೆ ಇರೋಮ್ ಶರ್ಮಿಳಾ ಚಾನೂಗೆ ಈ ಕವಿತೆ ಅರ್ಪಿತ)



• ವೀರಣ್ಣ ಮಡಿವಾಳರ





ಕಾಗೆ ಗಾನ

ಕಾಗೆಗಳು ಸುಮ್ಮ ಸುಮ್ಮನೆ
ಹಾಗೆಲ್ಲಾ ಸಿಕ್ಕಾಪಟ್ಟೆ ಗುಂಪಾಗಿ ಹಾರುತ್ತಾ
ಕಿರುಚುವುದೇ ಇಲ್ಲ; ನಾಟಕವಾಡುವುದಿಲ್ಲ

ಹಾಗೆ ಕಿರುಚಿದರೆ
ಅಲ್ಲೇನೋ ಖಂಡಿತ ಸಂಭವಿಸಿರುತ್ತದೆ
ದುಃಖ ಅಥವಾ ಸುಖ

ಇಂದು ಬೆಳಗು
ಇಂಥದ್ದೊಂದು ಸ್ವರ ಕೇಳಿ
ಬೆಚ್ಚಿ ಬೆದರಿ ಹೊರಬಂದು ಆಲಿಸಿದೆ

ಕಳ್ಳ ಕೋಗಿಲೆಯನ್ನು
ಬಂಧಿಸಲು ಹವಣಿಸುತ್ತಿದ್ದ
ಕಾಗೆಗಳು!

ಇದುವರೆಗೂ ಕಾಗೆಯಿಲ್ಲದ ವೇಳೆ
ಅದರ ಗೂಡಿನಲ್ಲೇ ಮೊಟ್ಟೆಯಿಟ್ಟು
ಹಾಯಾಗಿರುತ್ತಿದ್ದ ಕೋಗಿಲೆಯ ಗುಟ್ಟೀಗ ರಟ್ಟು!

ತನ್ನದರಂತೆಯೇ ಕಾಣುವ
ಕೋಗಿಲೆ ಮೊಟ್ಟೆಯನ್ನು ಕಾಗೆ ಕಾವು ಕೊಟ್ಟು
ದೊಡ್ಡದು ಮಾಡುತ್ತಿದೆ
ಪ್ರೀತಿಯ ಬೆಚ್ಚಗಿನ ಗೂಡಿನಲ್ಲಿ

ಬರೀ ಕುಹೂ ಅಭ್ಯಾಸದಲ್ಲೇ ನಿರತವಾಗಿರೊ ಕೋಗಿಲೆ
ಸ್ವಂತ ಗೂಡು ಮಾಡುವ ಪರಿವೆಯೇ ಇಲ್ಲದೆ
ಮೊಟ್ಟೆ ಮಾತ್ರ ಇಟ್ಟು ಕಾಗೆಯ ಅವಲಂಬಿಸಿರುವ
ಕಳ್ಳ!

ಕಾಗೆ ಗೂಡಿನಲ್ಲಿ ಚೆಂದಕ್ಕೆ ದೊಡ್ಡದಾಗುತ್ತಿರುವ
ತನ್ನ ಮರಿಯನ್ನು ನೋಡಲು ಬಂದ ಕೋಗಿಲೆಯೀಗ
ಕಾಗೆಯ ಕೈಗೆ ಸಿಕ್ಕುಬಿದ್ದಿದೆ!

ಕೋಗಿಲೆಯ ಮರಿಯೀಗ ಕಾಗೆಯ ಮರಿ.
ತನ್ನ ಮರಿಯನ್ನು ಬೇರೆ ಯಾರೋ ಕದ್ದೊಯ್ಯುವ
ಭಯವನ್ನು
ತಾಯಿ ಹಕ್ಕಿ ಸಹಿಸಲು ಸಾಧ್ಯವೇ?....

ತನ್ನ ಗುಂಪೆಲ್ಲವನ್ನೂ ಕರೆಯುತ್ತ
ಹಾಹಾಕಾರ ಮಾಡುತ್ತ ಹೋರಾಡುತ್ತ
ಸತ್ಯಾಗ್ರಹ ಮಾಡುತ್ತ ಕಾಗೆ
ಕೋಗಿಲೆಯನ್ನು ಹೆದರಿಸುತ್ತ ಓಡಿಸುತ್ತಿದೆ
ಹಿಡಿ ಅನ್ನವನ್ನು ಕಂಡಾಗಲೂ ಕಾಗೆ
ಹೀಗೆಯೇ ತನ್ನವರೆಲ್ಲರನ್ನೂ ಕರೆದು
ಹಂಚಿ ತಿನ್ನಲು ಬೊಬ್ಬೆಯಿಡುತ್ತದೆ

ನಿಷ್ಕಪಟ ಸ್ವಭಾವದ ಕಾಗೆಯಿಂದ
ಮನುಷ್ಯ ಆಲಿಸಬೇಕಾದ ಗಾನಸುಧೆ
ಇನ್ನೂ ಇನ್ನೂ ಬಾಕಿ ಉಳಿದಿದೆ.
ಎಂದು ಮಧುರ ಕಂಠದ ಕೋಗಿಲೆ
ಈಗ
ಪಂಚಮದಲ್ಲಿ ಹಾಡುತ್ತಿದೆ.



• ಜ್ಯೋತಿ ಗುರುಪ್ರಸಾದ್

ತಂಡ ತಲ್ಲಣಗಳ ನಡುವೆ

ಕತ್ತು ಕೊಯ್ಯುವುದು ಕಠಿಣ ಕೆಲಸವಲ್ಲವೀಗ
ನಿತ್ಯ ವರದಿಗಳೇ ಸಾಕು ಸಾಕ್ಷಿಯಾಗಿ.
ರಕ್ತಕ್ಕೆ ಹೆದರಿ ಮೂರ್ಛೆ ಹೋಗುತ್ತಿದ್ದ
ಭೀರು ಮನಸ್ಸುಗಳೊಳಗಿನ ಮಲಿನ
ಹರಿಯುತ್ತಲೇ ಇದೆ ರುಧಿರಝುರಿ ನಿತ್ಯನಗ್ನ.
ಉಸಿರೆತ್ತುವೆಲ್ಲರ ಬಾಯಲ್ಲೂ ವ್ಯವಸ್ಥೆ ಭ್ರಷ್ಟ!
ಇರದಿದ್ದೀತೆ ಅಷ್ಟಷ್ಟೇ ಕಾಣಿಕೆ ಸಣ್ಣ-ದೊಡ್ಡವರದೆಲ್ಲ?
ಸತ್ಯದ ಮುಖವಾಡ ತೊಟ್ಟ ಮಿಥ್ಯಗಳ
ವಿಜೃಂಭಣೆ, ಪರ-ವಿರೋಧಪಕ್ಷಗಳೆನ್ನದೆ.
ಆರೋಪಿ ಪ್ರತ್ಯಾರೋಪಿಗಳ ಸ್ವಕುಚಮರ್ಧನದಲ್ಲಿ
ನಲುಗುತ್ತಿದ್ದಾನೆ ನರಜೀತಲ ಫಕೀರ,
ಚೆನ್ನೆಲುಬೇ ಮುರಿದು ಆತ್ಮಹತ್ಯೆಗೆ
ಶರಣಾಗಿವೆ ಬೆವರಿನ ಮೂಲ.
ರೊಟ್ಟಿ ಸೃಷ್ಟಿಸದ ಕಂಪ್ಯೂಟರ್‌ನ ಮೆರವಣಿಗೆಯು
ಸಾರೋಟು ಸರ್ವಪಥಗಳಲ್ಲಿ!
ಎರಡೊಂದಲೆ ಎರಡಕ್ಕೂ ಒದಗದ ತಲೆ
ಕ್ಯಾಲ್ಕುಲೇಟರ್‌ನ ದಾಸ,
ಖಾಲಿಯಾಗುತ್ತಲೆ ಹೊರಟಿದೆ ಯಂತ್ರಕ್ಕಡಿಯಾಳಾಗುತ್ತ,
ಇರದ ಎದೆ-ನಿತಂಬಗಳ
ಕುಣಿಸುವನುಕರಣೆಯು ಎಳೆಮಕ್ಕಳ
ಬಹುಮಾನ ಸಂಕಟದ ರಿಯಾಲಿಟಿ ಶೋಗಳು,
ನೊಬೆಲ್ ಕಳಕೊಂಡ ಸಂಕಟ-ರೋದನ ಹೆತ್ತಕರುಳುಗಳ ತುಂಬ.
ತಲೆಯ ಮೇಲಿರದ ಕಾವಿಕಂತೆಗಳ
ಮೊಲೆಗದ್ದಿಗೆ ಮೇಲಣ ನಿತ್ಯಪ್ರವಚನ,
ಕ್ಯಾಟರಾಕ್ಟು ಬರದ ವಯಸ್ಸಲ್ಲಿ ಅನಿವಾರ್ಯದ ಕಣ್ಣಕಪಿ!
ಅಂತರಿಕ್ಷಕ್ಕವರಿದ್ದೇವೆಂಬ ಬಗ್ಗೆ ಹೆಮ್ಮೆಪಡಬಾರದೆಂದಲ್ಲ,
ನೆಲದ ನಂಟು-ನೇಹಕ್ಕೂ ಎದೆ ಇರಲೇಬೇಕಲ್ಲ?
ಪಟಗ-ಟೊಪ್ಪಿಗೆಗಳೂ ಬೇಡವೇ ಬೇಡವೆಂದರೆ ಹೇಗೆ
ಬಕ್ಕತಲೆಗೆ ಬಡಿದರೆ ನವರತಮಾನದ ಕಲ್ಲು
ಬೊಕ್ಕೆ ಏಳದೇ ಇದ್ದೀತೆ?
ಇಂತೀ, ತಂಡ-ತಲ್ಲಣಗಳ ಕಂಡು ಮಂಜಾದರೆ ಕಣ್ಣು
ದೂಡುವುದು ಯಾರನ್ನು? ಕೋರುವುದು ಯಾರನ್ನು?

• ಡಾ. ಬಸವರಾಜ ಸಾದರ



...ವಾಖಾನೆಯ ...ೇವರು

...ದ್ವಕ್ಕಿದ್ದಂತೆಯೇ ಎದುರಾಗುವ
...ಕಟದ ಸಾವಿಗೆ
...ಾಖಾನೆಯೇ ದಾರಿ
...ಗ ಮುಟ್ಟಿದ್ದಕ್ಕೆ ಸಮಾಧಾನ;
...ದ್ಯ ಭಗವಂತ
...ವರೇ ನಮ್ಮನ್ನು ಕಾಪಾಡು.


...ಂಗಳದಲಿ ಚಳಿ ಹಿಡಿದು
...ಳಿತವರು,
...ಪ್ಪ ಹಾಸಿ ಮಲಗಿದವರು
...ಮ್ಮವರ ಜೀವ ಸುದ್ದಿಗೆ
...ಗ್ನಾ...ಂತರಾದವರು
...ಳಾಗದಂತೆ ಬಿಕ್ಕಳಿಸುವವರು
...ೀಗುವ ಹೆಣವೂ
...ುವ ಜೀವವೂ
...ಲ್ಲಗೆ ನಡೆವ ರೋಗಿಗಳು.

...ಲ್ಲಿ ನೋಡಿದರಲ್ಲಿ ಸ್ಪೆಷಲ್ ವಾರ್ಡುಗಳು
...ಾಯನ್, ಬ್ಲಡ್, ನರ್ಸ್
...ೈತುಂಬ ವೈಯರ್‌ಗಳು
...ಲ್ಲಿ ಚುಚ್ಚಿರುವ ಸೂಜಿಗೆ
...ಂಭತ್ತರ ಅಜ್ಜನನ್ನು
...ಮುಕಿಸುವ ಹಟ,
...ವ ಮಗುವಿನ ಹಣೆಯ ಮೇಲೆ
...ಯಿಟ್ಟ ತಾಯಿಗೆ
...ವ ಸಂಕಟ.
...ವ ತುಂಬಿದ ಕಣ್ಣರೆಪ್ಪೆಯಲಿ
...ಕ್ಕಲ್ಲದ ದಾರಿಗಳು.


...ಷ್ಟೊಂದು ದಾರಿಗಳ ಒರೆಸಿ
...ಭ್ರ ಬಿಳಿಬಟ್ಟೆಯಲಿ
...ುವ ಅರಳಿಸಿ,
...ೀಗಿಗಳು, ಡಾಕ್ಟರುಗಳು
...ರ್ಗಗಳ ಗಾಳಿ ಬೆಳಕಿಗೆ
...ಕಿಂಡಿಯಾಗಿ,
...ಷ್ಟದೇಹ,
...ಲಿ ಯೂನಿಫಾರ್ಮು
...ಕು ತುಂಬಿದ ಕಣ್ಣು
...ದು ಕೈಯಲ್ಲಿ
...ೂತ್ರದ ಚೊಂಬು
...ಕ್ಕೊಂದರಲ್ಲಿ ಮಲದ ತಟ್ಟೆ
...ಡಿದು ಬಂದನವ ನನ್ನ ಕಾಲಬಳಿ,
...ನು ಏಳಲಾರದ ರೋಗಿ
...ಿಡ ಊಟ,
...ಿದ ಔಷಧಿ
...ಲಮೂತ್ರ
...ಲ್ಲಗೆ ಕಾಲು ಎತ್ತಿ
...ುಕಿ, ತಿಣುಕಿ' ಎನ್ನುತ್ತಲೇ
...ತ್ರೆಯಲಿ ಹಾಕಿಸಿಕೊಂಡು
...ದುವಾಗಿ ಅರಳೆಯಿಂದ ಒರೆಸಿ
...ಲ್ಲಗೆ ಹೋದನವ
...ವರುಗಳ ದೇವ
... ಸಂಬಂಧಿಕ



• ಬಸವರಾಜ ಹೂಗಾರ



ಶಾಸಕ ನೆಹರು ಓಲೇಕಾರನ ಪಾತ್ರಾಭಿನಯ!



ಓಲೇಕಾರ

ಹಾವೇರಿಯ ಬಿಜೆಪಿ ಶಾಸಕ ನೆಹರು ಓಲೇಕಾರ 'ತ್ರಿಪಾತ್ರಾಭಿನಯ' ಮಾಡಲು ಹೋಗಿ ರೆಡ್ ಹ್ಯಾಂಡಾಗಿ ಸಿಕ್ಕಿಬಿದ್ದಿದ್ದಾನೆ.

ಈಗಾಗಲೇ ಮೀಡಿಯಾಗಳಲ್ಲಿ ವರದಿಯಾಗಿರುವಂತೆ ಹಾಗೂ ರಾಜ್ಯ ಹೈಕೋರ್ಟ್ ಕೂಡ ಗಮನಿಸಿರುವಂತೆ ಈ ಓಲೇಕಾರ ಲಕ್ಷಾಂತರ ರೂಪಾಯಿ ಸರ್ಕಾರದ ದುಡ್ಡನ್ನು ಕದ್ದು ತಿಂದು ಈಗ ಕಣ್ ಕಣ್ ಬಿಡುತ್ತಿದ್ದಾನೆ.

ಒಂದು ಕಾಲದಲ್ಲಿ ಬ್ಯಾಡಗೆಯಲ್ಲಿ ಸಾಮಾನ್ಯ ಶಿಕ್ಷಕನಾಗಿದ್ದ ಓಲೇಕಾರ ನಂತರ ರಾಜಕೀಯಕ್ಕಿಳಿದು ಶಾಸಕನಾದ. ತನಗೆ ಸಿಕ್ಕ ಶಾಸಕಗಿರಿಯು ದುಡ್ಡು ಮಾಡಲು ದೊರೆತ ಲೈಸೆನ್ಸ್ ಎಂದು ಭಾವಿಸಿದ ಓಲೇಕಾರ ಚಿಕ್ಕದು ದೊಡ್ಡದರ ವ್ಯತ್ಯಾಸವೇ ಇರದಂತೆ ಗುಳುಂ ಮಾಡಲು ಹೊರಟಿದ್ದಾನೆ.

ಇವನ ತ್ರಿಪಾತ್ರಾಭಿನಯ ಒಂದು ಎರಡು ಕ್ಷೇತ್ರಕ್ಕೆ ಸೀಮಿತವಾಗಿಲ್ಲ. ಕರ್ನಾಟಕ ವಾಲ್ಮೀಕಿ ನಾಯಕ ಮಹಾಸಭಾದ ರಾಜ್ಯಾಧ್ಯಕ್ಷ ಸಿರಿಗೆರೆ ತಿಪ್ಪೇಶ್‌ರವರು ಮಾಹಿತಿ ಹಕ್ಕು ಕಾಯ್ದೆಯಡಿ ಹೊರತೆಗೆದಿರುವ ವಿಚಾರಗಳನ್ನು ಒಮ್ಮೆ ಗಮನಿಸಿದರೆ ಸಾಕು ಇವನು ಆರ್ಡಿನರಿ ಪುಢಾರಿಯಲ್ಲ ಬದಲಾಗಿ ಪಕ್ಕಾ ವಂಚಕ ಶಾಸಕ ಎಂಬುದು ಗೊತ್ತಾಗುತ್ತದೆ.

2009ರ ಸೆಪ್ಟೆಂಬರ್ ತಿಂಗಳಲ್ಲಿ ಓಲೇಕಾರ ತಾನು

ಓಲೇಕಾರ ವಿರುದ್ಧ ಜನರ ಪ್ರತಿಭಟನೆ....



ರೋಮ್, ದುಬೈ ಹಾಗೂ ಬೆಂಗಳೂರಿನಲ್ಲಿ ಏಕಕಾಲದಲ್ಲಿ ಇದ್ದ ಹಾಗೆ ತ್ರಿಬಲ್ ಆಕ್ಟಿಂಗ್‌ನ ದಾಖಲೆ ಸೃಷ್ಟಿಸಿ ಲಕ್ಷಾಂತರ ರೂಪಾಯಿ ಪ್ರವಾಸಭತ್ಯೆ ಪಡೆದು ವಂಚಿಸಿರುವುದು ಒಂದು ಕತೆ. ಜೊತೆಗೆ ಓರ್ವ ಶಾಸಕನಾಗಿ, ರಾಜ್ಯ ಪರಿಶಿಷ್ಟ ಜಾತಿ-ವರ್ಗಗಳ ಆಯೋಗದ ಅಧ್ಯಕ್ಷನಾಗಿ ಹಾಗೂ ವಿಧಾನಸಭೆಯ ಭರವಸೆಗಳ ಸಮಿತಿ ಸದಸ್ಯನಾಗಿಯೂ ಇನ್ನೊಂದು 'ತ್ರಿಬಲ್ ಆಕ್ಟಿಂಗ್' ಮಾಡುತ್ತಾ ಅಲ್ಲೂ ತನ್ನ ಶಕ್ತ್ಯಾನುಸಾರ ದುಡ್ಡು ಮಾಡುತ್ತಿರುವ ಇನ್ನೊಂದು ಕತೆಯೂ ಇದೆ.

ಸೆಪ್ಟೆಂಬರ್ 9 ಎಲ್ಲಿದ್ದ -ಯಾಕಿದ್ದ?

ಕರ್ನಾಟಕ ವಿಧಾನಸಭಾ ಸಚಿವಾಲಯದ ಅಧೀನ ಕಾರ್ಯದರ್ಶಿ ಎಚ್.ಎನ್. ಜಗನ್ನಾಥ್ ಎಂಬುವರು ಸಿರಿಗೆರೆ ತಿಪ್ಪೇಶ್‌ಗೆ ಮಾಹಿತಿ ಹಕ್ಕಿನಡಿ ಒದಗಿಸಿರುವ ದಾಖಲೆಗಳು ನಿಜಕ್ಕೂ ಇಂಟೆರೆಸ್ಟಿಂಗಾಗಿದೆ. ಆ ಪ್ರಕಾರ ಮಾನ್ಯ ಶಾಸಕ ಓಲೇಕಾರ್ 2009 ರ ಸೆಪ್ಟೆಂಬರ್‌ನಲ್ಲಿ ಅಧ್ಯಯನ ಪ್ರವಾಸ ಕ್ಕೆಂದು ಇಟಲಿ ಹಾಗೂ ದುಬೈಗಳಲ್ಲಿ ಪ್ರವಾಸ ಮಾಡಿ ಬಂದಿದ್ದಾನಂತೆ.

ಈತ ನಿಜಕ್ಕೂ ಅಲ್ಲಿಗೆಲ್ಲಾ ಹೋಗಿ ಬಂದನಾ ಎಂಬುದು ಒಂದು ಪ್ರಶ್ನೆ?

ಹೋಗಿಬಂದಿರುವುದು ನಿಜ ಎಂದಾದರೂ ಅಲ್ಲಿಗೆ ಏನು ಸ್ಟಡಿ ಮಾಡಲು ಹೋಗಿದ್ದ ಎಂದು ಕೇಳಬೇಕಲ್ಲವೆ?


ಹೇಳಿಕೇಳಿ ಈ ಓಲೇಕಾರ್ ಅಧ್ಯಕ್ಷನಾಗಿರುವುದು ಪರಿಶಿಷ್ಟ ಜಾತಿ ವರ್ಗಗಳ ಆಯೋಗಕ್ಕೆ!

ರೋಮ್-ದುಬೈಗಳಲ್ಲಿ ಇದರ ಬಗ್ಗೆ ಅಧ್ಯಯನ ಮಾಡುವುದೇನಿದೆ?

ನಿಜಕ್ಕೂ ಯಾರಿಗೂ ಅರ್ಥವಾಗಿರದ ಸಂಗತಿಯಿದು.

ಆದರೆ ಈ ಟೂರ್‌ನ ಹೆಸರಲ್ಲಿ ಓಲೇಕಾರ ಟಿಎ, ಡಿಎ, ಹೋಟೆಲ್ಲು, ವಿಮಾನ ಎಂದು ಲಕ್ಷಾಂತರ ರೂಪಾಯಿ ತಿಂದುಹಾಕಿದ್ದಾನೆ. ಮಜಾ ಅಂದರೆ ಅದೇ ದಿನಗಳಲ್ಲಿ ತಾನು ಬೆಂಗಳೂರಿನಲ್ಲೂ ಇದ್ದುದಾಗಿ ದಾಖಲೆ ಸೃಷ್ಟಿಸಿ ಇಲ್ಲೂ ಟಿಎ, ಡಿಎ ಪೀಕಿದ್ದಾನೆ.

ಇದಲ್ಲವಾ ಪ್ರತಿಭೆ ಅಂದರೆ!



ತಿಪ್ಪೇಶ್

ಒಂದು ಮೂಲದ ಪ್ರಕಾರ ಈ ಓಲೇಕಾರ 2009ರ ಆಗಸ್ಟ್ 23 ರಂದು ಬೆಂಗಳೂರಿನಿಂದ ದುಬೈಗೆ ಹೋಗಿದ್ದಾನೆ. ನಂತರ ಸೆಪ್ಟೆಂಬರ್ 6 ರಂದು ರೋಮ್‌ನಿಂದ ದುಬೈಗೆ ಹೋಗುತ್ತಾನೆ. ಕೊನೆಗೆ ಸೆಪ್ಟೆಂಬರ್ 8-9 ರ ರಾತ್ರಿ ದುಬೈನಿಂದ ಬೆಂಗಳೂರಿಗೆ ವಿಮಾನದಲ್ಲಿ ಬರುತ್ತಾನೆ. ಈ ಎಲ್ಲಾ ಓಡಾಟ, ಹೋಟೆಲ್, ಬಾಡಿಗೆ ಕಾರ್ ಖರ್ಚು ಸೇರಿ ಒಟ್ಟು 3 ಲಕ್ಷದ ಇಪ್ಪತ್ತೇಳು ಸಾವಿರಕ್ಕೆ ಬಿಲ್ ತೋರಿಸಿ ಹಣ ಪಡೆದಿದ್ದಾನೆ.

ಮಜಾ ಅಂದರೆ ಇದೇ ದಿನಾಂಕಗಳಲ್ಲಿ ಕರ್ನಾಟಕ ವಿಧಾನಸಭಾ ಸದಸ್ಯರಿಗೆ ಕೊಡುವ ಟಿಎ,ಡಿಎ ಇತ್ಯಾದಿ ಬಾಬ್ತಿನಲ್ಲೂ ಸಾವಿರಾರು ರೂಪಾಯಿ ಹಣ ಪಡೆದುಕೊಂಡಿದ್ದಾನೆ.

ಆದರೆ ಓಲೇಕಾರನ ಅವತಾರ ಇಲ್ಲಿಗೂ ನಿಲ್ಲುವುದಿಲ್ಲ. ರಾಜ್ಯ ಪರಿಶಿಷ್ಟ ಜಾತಿ ಆಯೋಗದ ಲೆಕ್ಕದಲ್ಲೂ ಪ್ರವಾಸಭತ್ಯೆ ಕಿತ್ತು ತಿಂದಿದ್ದಾನೆ ಓಲೇಕಾರ.

ಆಯೋಗದ ದಾಖಲೆಗಳ ಪ್ರಕಾರ 2009 ರ ಸೆಪ್ಟೆಂಬರ್ ತಿಂಗಳಲ್ಲೇ ಓಲೇಕಾರ ಟಿಎ-ಡಿಎ ಹೆಸರಲ್ಲಿ ಒಟ್ಟು 38,636 ರೂಪಾಯಿ ಗುಳುಂ ಮಾಡಿದ್ದಾನೆ. ಅಂದರೆ ಏಕಕಾಲದಲ್ಲಿ ರೋಮ್-ದುಬೈ-ಬೆಂಗಳೂರಿನಲ್ಲಿ ಇದ್ದ ಹಾಗೆ ದಾಖಲೆ ಸೃಷ್ಟಿಸಿದ್ದು ಅಲ್ಲದೆ ಈ ಮೂರೂ ಕಡೆ ಟೂರ್ ಮಾಡಿದ ಬಾಬ್ತು ಲಕ್ಷಾಂತರ ರೂಪಾಯಿ ದುಡ್ಡು ತಿಂದಿದ್ದಾನೆ.

ಕಾನೂನುಬಾಹಿರ ಅಧ್ಯಕ್ಷತೆ

ಕರ್ನಾಟಕ ರಾಜ್ಯ ಅನುಸೂಚಿತ ಜಾತಿ ಮತ್ತು ಅನುಸೂಚಿತ ಬುಡಕಟ್ಟುಗಳ ಆಯೋಗ ಎಂಬುದು ಇದರ ಪೂರ್ತಿ ಹೆಸರು.

ಕಾರ್ಯಾಂಗ, ಶಾಸಕಾಂಗ ಹಾಗೂ ನಿತ್ಯದ ಸಾಮಾಜಿಕ ಬದುಕಿನಲ್ಲಿ ಪರಿಶಿಷ್ಟರ ಮೇಲೆ ನಡೆಯುವ ದೌರ್ಜನ್ಯ ತಾರತಮ್ಯಗಳ ಕುರಿತ ದೂರುಗಳನ್ನು ಪರಿಶೀಲಿಸಿ ಕಾನೂನುಕ್ರಮ ಕೈಗೊಳ್ಳುವ ಸಂವಿಧಾನದತ್ತ ಅಧಿಕಾರ ಈ ಆಯೋಗಕ್ಕಿದೆ. ಆದರೆ ಬಿಜೆಪಿಗಳು ಉದ್ದೇಶಪೂರ್ವಕವಾಗಿ ಆಯೋಗಕ್ಕೆ ಸಾಕಷ್ಟು ಸದಸ್ಯರನ್ನು ನೇಮಿಸದೆ ನಿರ್ಲಕ್ಷಿಸಿದ್ದಾರೆ. ಈ ಹಿಂದೆ 2003 ರಿಂದ 2004 ರವರೆಗೆ ಆಗಿನ ನೆಲಮಂಗಲ ಶಾಸಕ ಅಂಜನಾಮೂರ್ತಿ ಆಯೋಗದ ಅಧ್ಯಕ್ಷರಾಗಿ ದ್ದರು. ನಂತರ ಮೂರು ವರ್ಷ ಕಾಲ ಆಯೋಗದ ಅಧ್ಯಕ್ಷಗಿರಿ ಖಾಲಿಯಿತ್ತು. ನಂತರ 2007 ರಲ್ಲಿ ಕೋಜಾ ಸರ್ಕಾರವಿದ್ದಾಗ ಈ ಓಲೇಕಾರ ಆಯೋಗದ ಅಧ್ಯಕ್ಷನಾಗಿ ನೇಮಕ ಗೊಂಡ. ಆದರೆ ನೆಟ್ಟಗೆ ಒಂದು ದಿನವೂ ಒಂದು ಮೀಟಿಂಗ್ ನಡೆಸಲಿಲ್ಲ. ನೊಂದವರ ಅಹವಾಲು ಆಲಿಸಲಿಲ್ಲ. ಆದರೇನು ಒಂದು ತಿಂಗಳೂ ತಪ್ಪಿಸದೆ ಬಾಡಿಗೆ ಭತ್ಯೆ ಪ್ರವಾಸಭತ್ಯೆ ತಿನ್ನುತ್ತಾ ಬಂದ. ಮಜಾ ಅಂದರೆ ಇದೇ ಓಲೇಕಾರನಿಗೆ ಶಾಸಕರ ಭವನದಲ್ಲೂ ಒಂದು ಕೊಠಡಿ ಇದೆ!

ಇದುವರೆಗೂ ಆಯೋಗದ ಅಧ್ಯಕ್ಷನಾಗಿ ಓಲೇಕಾರ್ ಮಾಡಿರುವ ಸಾಧನೆಯೆಂದರೆ ಪುರುವಂಕರ ಬಿಲ್ಡರ್ಸ್‌ಗೆ ಸಂಬಂಧಿಸಿರುವ ದಲಿತರ ಭೂ ವಿವಾದಗಳನ್ನು ಕೇಳಿ ಬಗೆಹರಿಸಿರುವುದು. ದಲಿತ ಪೊಲೀಸ್ ಅಧಿಕಾರಿಗಳ ಪ್ರಮೋಷನ್ ವಿಚಾರಗಳನ್ನು ಆಲಿಸಿ ಬಡ್ತಿ ಕೊಡಿಸಿರುವುದು ಮಾತ್ರ ಆಗಿದೆ. ಇದರಲ್ಲೂ ಅನೇಕ ಡೀಲ್‌ಗಳು ನಡೆದಿರುವ ರೂಮರ್‌ಗಳಿವೆ. ಆಯೋಗದ ಚೇರ್‌ಮನ್ ಆಗಿ ಈ ವಿಚಾರಗಳತ್ತ ಗಮನಹರಿಸಿರುವುದು ನ್ಯಾಯ ಸಮ್ಮತವಾಗಿಯೇ ಇದೆ. ಆದರೆ ಬಡ ದಲಿತರ್‍ಯಾರೂ ಆಯೋಗದತ್ತ ಬರದಂತೆ ಓಲೇಕಾರನ ಆಡಳಿತ ನಡೆಯುತ್ತಿದೆ. ಅಷ್ಟೇ.

ಈತ ಎಂಥ ಉಡಾಳನೆಂದರೆ ಚೇರ್‌ಮನ್ ಆಗಿ ಕೇಸೊಂದರ ಹಿಯರಿಂಗ್‌ಗೆ ಕುಳಿತಿದ್ದಾಗಲೇ ಎಲ್ಲರೆದುರು "ಅದು ಉದಾಸಿ ಹೇಳಿದಾರೆ, ಅದನ್ನ (ಕೇಸನ್ನ) ಬಿಟ್‌ಬಿಡ್ರಿ" ಎಂದಿದ್ದ. ಸಚಿವ ಉದಾಸಿಗೆ ಫೇವರ್ ಮಾಡುವ ಬಗ್ಗೆ ಈತ ಹೊರಡಿಸಿದ್ದ ಉದ್ಗಾರ ಅದಾಗಿತ್ತು.


ಈ ಆಯೋಗದಲ್ಲಿ ವಸಂತ ಕುಮಾರನೆಂಬ ಸಂಶೋಧನಾಧಿಕಾರಿ ಇದ್ದಾನೆ. ಓಲೇಕಾರನ ವಸೂಲಿ ಏಜೆಂಟ್ ಇವನೆ. ಈ ಆಯೋಗದ ಕಚೇರಿ ನೃಪತುಂಗ ರೋಡಿನಲ್ಲಿದೆ. ಕಚೇರಿಯ ತಿಂಗಳ ಬಾಡಿಗೆಯೇ ಒಂದೂವರೆ ಲಕ್ಷ ರೂಪಾಯಿಗಳಾಗುತ್ತವೆ. ಇಲ್ಲಿ ನೆಟ್ಟಗೆ ಸಿಬ್ಬಂದಿಯೂ ಇಲ್ಲ. ಕುಂಬಯ್ಯ ಎಂಬುವವರನ್ನು ಬಿಟ್ಟರೆ ಬೇರೆ ಸದಸ್ಯರ ನೇಮಕವೂ ಆಗಿಲ್ಲ. ಚೇರ್‌ಮನ್‌ರ ಚೇಂಬರ್ ಅನ್ನೇ ಕೆಲವೊಮ್ಮೆ ಬಾರ್ ಅಂಡ್ ರೆಸ್ಟೋರೆಂಟ್ ರೀತಿ ದುರ್ಬಳಕೆ ಮಾಡುತ್ತಿದ್ದ ಬಗ್ಗೆಯೂ ಕೆಲವರು ಹೇಳುತ್ತಿದ್ದರು.

ಕಳೆದ ನಾಲ್ಕು ವರ್ಷಗಳಲ್ಲಿ ಓಲೇಕಾರ್ ಪರಿಶಿಷ್ಟ ಆಯೋಗದ ಅಧ್ಯಕ್ಷನಾಗಿ ನಯಾಪೈಸೆಯಷ್ಟೂ ಕೆಲಸ ಮಾಡದೆ ಲಕ್ಷಾಂತರ ರೂಪಾಯಿ ಬಾಡಿಗೆ ಭತ್ಯೆ, ಟಿಎ-ಡಿಎ ಕಬಳಿಸಿ ಪರಿಶಿಷ್ಟ ಜನಾಂಗೀಯರಿಗೆ ಅನ್ಯಾಯವೆಸಗಿದ್ದಾನೆ.

2008ರಲ್ಲಿ ವಿಧಾನಸಭಾ ಚುನಾವಣೆ ನಡೆದಾಗ ಆಯೋಗದ ಅಧ್ಯಕ್ಷತೆಗೆ ರಾಜೀನಾಮೆ ನೀಡದೇ ಮತ್ತೆ ಸ್ಪರ್ಧಿಸಿ ಅಲ್ಲೂ ಕಾನೂನು ಉಲ್ಲಂಘಿಸಿದ್ದಾನೆ. ರಾಜ್ಯ ಹೈಕೋರ್ಟ್ ಇದನ್ನೆಲ್ಲಾ ಗಮನಿಸಿ ಓಲೇಕಾರ್‌ನನ್ನು ಹುದ್ದೆಯಿಂದ ಕೆಳಗಿಳಿಸುವಂತೆ ಸರ್ಕಾರಕ್ಕೆ ಸೂಚಿಸಿದೆ.

ಬೆಂಗಳೂರಿನಲ್ಲಿ ಓಲೇಕಾರನ ಕಳ್ಳಾಟಗಳು ಹೀಗಿದ್ದರೆ ಈತನ ಸ್ವಕ್ಷೇತ್ರ ಹಾವೇರಿಯಲ್ಲಿ ಭಜರಂಗಿ ಪುಂಡರ ಜೊತೆ ಸೇರಿ ನಿತ್ಯ ಕೋಮುದ್ವೇಷ ಹಬ್ಬಿಸುವುದೇ ಈತನ ಕಾಯಕವಾಗಿ ಹೋಗಿದೆ. ನೆಹರೂ ಓಲೇಕಾರ್ ಬಗ್ಗೆ ಬಿಜೆಪಿಗಳಿಗೆ ಯಾವ ಆಕ್ಷೇಪವೂ ಇದ್ದಂತಿಲ್ಲ. ಈತ ರಿಪೇರಿಯಾಗಬೇಕಿದ್ದರೆ ಒಂದೋ ಜನ ತಿರುಗಿಬೀಳಬೇಕು ಅಥವಾ ಕೋರ್ಟ್ ಪಾಠ ಕಲಿಸಬೇಕು.

• ವರದಿಗಾರ




04.	ಕಾರ್ಯಕಲಾಪ ಭತ್ಯೆ			2,982
05.	ಆತಿಥ್ಯ ಭತ್ಯೆ			
	ಸೆಪ್ಟೆಂಬರ್			
01.	ಇಂಧನ ವೆಚ್ಚ	1,530	17,671	2,030
02.	ಮನೆ ಬಾಡಿಗೆ ಭತ್ಯೆ		15,000	15,000
03.	ಪ್ರಯಾಣ ಭತ್ಯೆ		29,236	38,656
04.	ಕಾರ್ಯಕಲಾಪ ಭತ್ಯೆ			
05.	ಆತಿಥ್ಯ ಭತ್ಯೆ		5,940	12,687
	ಅಕ್ಟೋಬರ್			
01.	ಇಂಧನ ವೆಚ್ಚ	5,763		8,336
02.	ಮನೆ ಬಾಡಿಗೆ ಭತ್ಯೆ		15,000	15,000

ಓಲೇಕಾರನ ಕಳ್ಳ ಬಿಲ್ಲುಗಳು..

ಬಿಬಿಎಂಪಿ 'ವರ್ಕ್‌ಕೋಡ್' 5 ಸಾವಿರ ಕೋಟಿ ಲೂಟಿ

ಐದು ಸಾವಿರ ಕೋಟಿ ರೂಪಾಯಿಗಳ ಭಾರೀ ಹಗರಣವೊಂದನ್ನು ಕಾಟಾಚಾರದ ತನಿಖೆ ಕೂಡ ನಡೆಸದೇ ಮುಚ್ಚಿ ಹಾಕಿದೆ ಯಡ್ಡಿ ಸರ್ಕಾರ!



ಸುಬ್ರಹ್ಮಣ್ಯಂ ಪಾಲಿಕೆ ಕಮಿಷನರ್ ಆಗಿದ್ದ ಕಾಲದಲ್ಲಿ ಮುಂಡಾಮೋಚಿದ ಎರಡೂವರೆ ಸಾವಿರ ಕೋಟಿ, ಆನಂತರ ಆಡಳಿತಾಧಿಕಾರಿ ಶಿವಕುಮಾರ್ ಮತ್ತು ಭ್ರಷ್ಟ ಇಂಜಿನಿಯರ್‌ಗಳು ಸೇರಿ ನಡೆಸಿದ ಒಂದು ಸಾವಿರ ಕೋಟಿಯ ಬೋಗಸ್ ಬಿಲ್ ದೋಖಾ, ತದನಂತರ ಭರತ್‌ಲಾಲ್ ಮೀನಾ ಪಾಲಿಕೆಗೆ ಆಯುಕ್ತರಾಗಿ ಬಂದನಂತರ ಪೂರೈಸಿದ ಒಂದೂವರೆ ಸಾವಿರ ಕೋಟಿ. ನಕಲಿ ಟೆಂಡರ್ ಮೋಸ, ಏರ್‌ಷೋ ನೆಪದಲ್ಲಿ 320 ಕೋಟಿಯ ಕಾಮಗಾರಿ ಹಗರಣ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ 750 ಕೋಟಿ ರೂಪಾಯಿಗಳ ಮುಂಡಾಯಣ ಮತ್ತೆ 400 ಕೋಟಿಯ ಓಸಿ ಅಂದರೆ ಆಕ್ಯುಪೇಷನ್ ಸರ್ಟಿಫಿಕೇಟ್ ಮೋಸ, 150 ಕೋಟಿಯ ಜಾಹೀರಾತು ತೆರಿಗೆ ವಂಚನೆ; ಹೀಗೆ ಬಿಬಿಎಂಪಿ ಅರ್ಥಾತ್ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದ ನಂತರ ನಡೆದ ಅಷ್ಟೂ ಹಗರಣಗಳ ಕುರಿತು ಸಣ್ಣದೊಂದು ತನಿಖೆಯನ್ನೂ ನಡೆಸದೆ ಇವತ್ತಿಗೂ ದಿಕ್ಕು ತಪ್ಪಿಸುತ್ತಲೇ ಇರುವ ಮುಖ್ಯಮಂತ್ರಿ ಇದರಲ್ಲಿ ಪಡೆದ ಪಾಲೆಷ್ಟು?



ನಂದೀಶ್ ರೆಡ್ಡಿ

2007 ರಿಂದ 2010 ರ ವರೆಗೆ ಹೆಚ್ಚೂಕಮ್ಮಿ ಮೂರು ವರ್ಷಗಳ ಕಾಲ ಆಡಳಿತಾಧಿಕಾರಿಯಿದ್ದ ಜನಪ್ರತಿನಿಧಿಗಳೇ ಇಲ್ಲದ ನಿರಂಕುಶ ಪರಿಸ್ಥಿತಿಯಲ್ಲಿ ಬೆಂಗಳೂರನ್ನು ಅರ್ಧರ್ಧ ಹಂಚಿಕೊಂಡಿದ್ದ ಆರ್. ಅಶೋಕ್ ಮತ್ತು ಕಟ್ಟಾನಾಯ್ಡು ಕೂಡ ಈ ಪಾಪದಲ್ಲಿ ಪಾಲುದಾರರೆ? ಒಂದಲ್ಲ ಎರಡಲ್ಲ ಸರಿಸುಮಾರು ಐದು ಸಹಸ್ರಕೋಟಿಯಷ್ಟು ಭಾರೀ ಮೊತ್ತದ ವಿವಿಧ ಕರ್ಮಕಾಂಡಗಳ ಬಗ್ಗೆ ಏಕೆ ವಿರೋಧ ಪಕ್ಷಗಳು ಕೂಡ ಚಕಾರವೆತ್ತುತ್ತಿಲ್ಲ? ಸದ್ಯ ಪಾಲಿಕೆಯ ವಿರೋಧಿ ನಾಯಕರಾದ ಕಾಂಗ್ರೆಸ್ಸಿನ ಎಂ. ನಾಗರಾಜ್ ಮತ್ತು ಜೆಡಿಎಸ್‌ನ ಪದ್ಮನಾಭ ರೆಡ್ಡಿಯ ಹೊರತಾಗಿ ಬೆಂಗಳೂರಿನ ಜೆಡಿಎಸ್ ಮತ್ತು ಕಾಂಗ್ರೆಸ್ಸಿನ ಶಾಸಕರ್‍ಯಾರೂ ಈ ಬಗ್ಗೆ ಬಾಯಿಬಿಡುತ್ತಿಲ್ಲ?

ಕಟ್ಟಾ-ಅಶೋಕ್?

ಬೆಂಗಳೂರಿನ ಅಷ್ಟೂ ಶಾಸಕರು ಪಕ್ಷಭೇದ ಮರೆತು ವರ್ಕ್‌ಕೋಡ್ ವಂಚನೆಗೆ ಕೈಜೋಡಿಸದೇ ಹೋಗಿದ್ದರೆ ಈ ಹೊತ್ತಿಗಾಗಲೇ ಗಣಿ ಮತ್ತು ಡಿನೋಟಿಫಿಕೇಷನ್ ಕರ್ಮಕಾಂಡಗಳನ್ನೂ ಮೀರಿದ ಪ್ರತಿಭಟನೆ ಹೋರಾಟಕ್ಕೆ ವಿರೋಧ ಪಕ್ಷಗಳು ಅಣಿಯಾಗುತ್ತಿದ್ದವೋ ಏನೋ!

ಸದ್ಯ ಪಾಲಿಕೆಯ ವಿರೋಧಿ ನಾಯಕರಾದ ಎಂ. ನಾಗರಾಜ್ ಮತ್ತು ಪದ್ಮನಾಭ ರೆಡ್ಡಿ ಬಿಟ್ಟರೆ ಬೇರೆ ಯಾರಿಗೂ ಈ ಬಗ್ಗೆ ಅಂಥ ಆಸಕ್ತಿಯಿಲ್ಲ-

ಆದರೆ ಲೂಟಿಯಾಗಿರುವುದು ಹೆಚ್ಚುಕಮ್ಮಿ ಐದು ಸಾವಿರ ಕೋಟಿ. ಗಣಿಲೂಟಿಯ ಮೊತ್ತಕ್ಕೆ ಹೋಲಿಸಿದರೆ ಇದು ಈ ತನಕ ಕರ್ನಾಟಕವನ್ನಾಳಿದ ಯಾವುದೇ ಸರ್ಕಾರವೊಂದರ ಎರಡನೇ ಅತೀ ದೊಡ್ಡ ಕರ್ಮಕಾಂಡ!

2007 ರ ಹೊತ್ತಿಗೆ ಬಿಬಿಎಂಪಿಗೆ ಕಮೀಷನರ್ ಆಗಿದ್ದ ಮಹಾ ಖದೀಮ ಐಎಎಸ್ ಸುಬ್ರಹ್ಮಣ್ಯಂ ಇಡೀ ವರ್ಕ್‌ಕೋಡ್ ವಂಚನೆಯ ಮೂಲ ಪುರುಷ. ಯಡ್ಡಿ ಮಗ ವಿಜಯೇಂದ್ರನ ಮರ್ಜಿಯಿಂದಾಗಿಯೇ ಸುಬ್ರಹ್ಮಣ್ಯಂ ಪಾಲಿಕೆಗೆ ಕಮಿಷನರ್‌ರಾದರೆ ಅದಕ್ಕೆ ಕಟ್ಟಾ ಮತ್ತು ಅಶೋಕ್ ದಲ್ಲಾಳಿಗಳಂತಿದ್ದರು. 2008-09 ನೇ ಸಾಲಿಗೆ ಸಹಜವಾಗೇ ಪಾಲಿಕೆಯ ಬಜೆಟ್ ಮಂಡನೆಯಾಗಿ ಆ ಪ್ರಕಾರವೇ ಕಾಮಗಾರಿಗಳು ನಡೆಯಬೇಕಿತ್ತು. ಪ್ರತಿ ಕಾಮಗಾರಿಗೂ ಟೆಂಡರ್ ಕರೆಯಬೇಕು. ಅದೂ ಇ-ಟೆಂಡರ್ ನಡೆಯಬೇಕು. ಹಾಗೊಮ್ಮೆ ಮಾಮೂಲಿ ಟೆಂಡರ್ ನಡೆದರೂ ಅದಕ್ಕೆ ಬೆಂಗಳೂರಿನ ಪ್ರಮುಖ ದಿನಪತ್ರಿಕೆಗಳಲ್ಲಿ ಜಾಹೀರಾತು ನೀಡಬೇಕು. ಇದೆಲ್ಲಕ್ಕೂ ಮುನ್ನ ಪ್ರತಿ ಕಾಮಗಾರಿಗೂ 'ವರ್ಕ್‌ಕೋಡ್' ಅಂದರೆ ಕಾಮಗಾರಿ ಸಂಕೇತಗಳನ್ನು ನೀಡಬೇಕು. ಹೀಗೆ ಆಯಾ ಕಾಮಗಾರಿಗಳ ಅಗತ್ಯ, ತಾಂತ್ರಿಕತೆ, ಪಾರದರ್ಶಕತೆ ಮತ್ತು ಕಾನೂನು ಬದ್ಧತೆಯನ್ನು ಪಕ್ಕಾ ಮಾಡಿಕೊಂಡ ನಂತರವೇ 'ವರ್ಕ್‌ಕೋಡ್' ನಿಗದಿಸಲ್ಪಡುತ್ತದೆ.

ಆದರೆ ಕಮೀಷನರಾಗಿದ್ದ ಸುಬ್ರಹ್ಮಣ್ಯಂ ಇಂಥ ಯಾವುದೇ ನಿಯಮ ನೀತಿಯನ್ನು ಶಾಸ್ತ್ರಕ್ಕೂ ಪಾಲಿಸಲಿಲ್ಲ. ಖಜಾನೆಯಲ್ಲಿದ್ದ ಸಾವಿರಾರು ಕೋಟಿಯನ್ನು ಹೇಗಾದರೂ ಮಾಡಿ ಲಪಟಾಯಿಸುವ ಒಂದೇ ಹುನ್ನಾರದಿಂದ ಬೇಕಾಬಿಟ್ಟಿ 'ವರ್ಕ್‌ಕೋಡ್' ಕೊಟ್ಟರು. ಇಂಥ ಒಂದು ವರ್ಕ್‌ಕೋಡ್ ಎಂದರೆ ಕಾಮಗಾರಿಯ ಅಷ್ಟೂ ಮೊತ್ತ 'ಶಿವಾರ್ಪಣಮಸ್ತು' ಎಂದೆಂತೆಯೇ ಅರ್ಥ.


ಆ ಹೊತ್ತಿಗೆ ಪಾಲಿಕೆ ಕಮಿಷನರ್‌ಗೆ ಪೀಎ ಆಗಿದ್ದವನು ಜೆ.ಪಿ. ಅಲಿಯಾಸ್ ಜಯ ಪ್ರಕಾಶ್ ಎಂಬ ಗುಮಾಸ್ತ. ಈತನಿಗೆ ನಕಲಿ ಬಿಲ್ ದಂಧೆಯಲ್ಲಿ ಮೊದಲೇ ಪ್ರಾವೀಣ್ಯ ಇತ್ತು. ಅದೇ ವೇಳೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವೂ ಹೊರವಲಯದ ಏರಿಯಾಗಳಲ್ಲಿ 750 ಕೋಟಿಯ ವಿವಿಧ ಕಾಮಗಾರಿಗಳನ್ನು ಕೈಗೆತ್ತಿಕೊಂಡಿತ್ತು. ರಸ್ತೆಯ ಡಾಂಬರೀಕರಣ, ಮೋರಿ ಹೂಳೆತ್ತುವುದು, ಫುಟ್‌ಪಾತ್‌ಗೆ ಕಾಂಕ್ರಿಟ್ಟು; ಇತ್ಯಾದಿ ಯಥಾವತ್ತು ಕಾಮಗಾರಿಗಳನ್ನೇ ಮತ್ತೆಮತ್ತೆ ಮಾಡಿದಂತೆ ಕಳ್ಳಬಿಲ್ಲು ಸೃಷ್ಟಿಸಿ ಸಾವಿರಾರು ಕೋಟಿ ರೂಪಾಯಿಗಳನ್ನು ಮುಂಡಾಮೋಚಲಾಯ್ತು.




ಭರತ್‌ಲಾಲ್ ಮೀನಾ

ಏರ್ ಷೋ ನೆಪದಲ್ಲಿ

ಪ್ರತಿಯೊಂದು ವರ್ಕ್‌ಕೋಡಿಗೂ ಕಮಿಷನರ್ ಸುಬ್ರಹ್ಮಣ್ಯಂ ಕಮಿಷನ್ ಪಡೆದಿದ್ದ. ಕಮಿಷನರ್‌ಗೆ ಪಿಎ ಆಗಿದ್ದ ಜೆ.ಪಿ. ಎಂಥಾ ಕೈಚಳಕ ಮೆರೆದಿದ್ದನೆಂದರೆ ತಾನೊಬ್ಬನೇ ನಾನೂರು ಕೋಟಿಯಷ್ಟು ಕೊಳ್ಳೆ ಹೊಡೆದದ್ದು ಸಾಲದೆ ಕಮಿಷನರ್ ಸುಬ್ರಹ್ಮಣ್ಯಗೆಂದೇ 700 ಕೋಟಿಯಷ್ಟನ್ನು ಖಮಾಯಿಸಿಕೊಟ್ಟ. ಬಿಡಿಎ ಆ ಹೊತ್ತಿಗಾಗಲೇ ಪೂರೈಸಿದ್ದ 750 ಕೋಟಿಯಷ್ಟು ವಿವಿಧ ಕಾಮಗಾರಿಗಳಿಗೆ ಮತ್ತೆ ಪಾಲಿಕೆ ವತಿಯಿಂದಲೇ ಕಾಮಗಾರಿ ನಡೆದಂತೆ ದಾಖಲೆ ಸೃಷ್ಟಿಸಲಾಯ್ತು. ಅಂದರೆ ಒಂದೇ ಕೆಲಸಕ್ಕೆ ಬಿಡಿಎ ಮತ್ತು ಪಾಲಿಕೆಯಿಂದ ಡಬ್ಬಲ್ ಬಿಲ್ಲು!



ಸಿದ್ದಯ್ಯ



ರಸ್ತೆಯೊಂದಕ್ಕೆ ಬಿಡಿಎ ಟಾರು ಹಾಕಿದ್ದರೆ ಅದೇ ಕೆಲಸವನ್ನು ಪಾಲಿಕೆಯೇ ನಡೆಸಿದೆಯೆಂದು ಮತ್ತೊಂದು ಬಿಲ್ಲು ಸೃಷ್ಟಿಸಲಾಯ್ತು. ಬಹುತೇಕ ವರ್ಕ್‌ಕೋಡ್‌ಗಳಿಗೆ ಕಾಮಗಾರಿಯನ್ನೇ ನಡೆಸದೆ ನಕಲಿ ಬಿಲ್ ಸೃಷ್ಟಿಸಲಾಯ್ತು. ಒಂದೇ ಕೆಲಸಕ್ಕೆ ಎರಡು ವರ್ಷದ ಅವಧಿಯಲ್ಲಿ ಬೇರೆಬೇರೆ ಬಿಲ್ಲು ಜಡಿದು ದುಡ್ಡು ದೋಚಲಾಗಿತ್ತು. ಈ ಪೈಕಿ ಯಲಹಂಕ ಶಾಸಕ ವಿಶ್ವನಾಥ್, ಅದೇ ಯಲಹಂಕ ಚೀಫ್ ಇಂಜಿನಿಯರ್ ಪಿ.ಎಸ್. ರಮೇಶ್, ಎಕ್ಸಿಕ್ಯೂಟಿವ್ ಇಂಜಿನಿಯರ್ ಪೇಜರ್ ನಾಗರಾಜ್ ಮುಂತಾದವರೆಲ್ಲ ಸೇರಿ 320 ಕೋಟಿಯ ಮತ್ತೊಂದು ಕರ್ಮಕಾಂಡಕ್ಕೆ ಕೈಯಿಟ್ಟರು.



ಅದು ಎಮರ್ಜೆನ್ಸಿ ವರ್ಕ್‌ಕೋಡ್. ಚಂಡಮಾರುತ, ಭೂಕಂಪದಂಥ ಪ್ರಕೃತಿ ವಿಕೋಪಗಳಾದಾಗ ಬಜೆಟ್‌ನ ಹಂಗೇ ಇಲ್ಲದೆ, ಸರ್ಕಾರದ ಅನುಮೋದನೆಗಾಗಿ ಕಾಯದೆ ತುರ್ತು ಕಾಮಗಾರಿಗಳನ್ನು ನಡೆಸುವ ಅಧಿಕಾರ ಆಯಾ ಪುರಸಭೆ, ನಗರಸಭೆ, ಪಾಲಿಕೆಗಳಿಗಿದೆ. ಇದನ್ನೇ ನೆಪಮಾಡಿಕೊಂಡು 2009 ರಲ್ಲಿ ಯಲಹಂಕದ ಜಕ್ಕೂರು ಏರ್‌ಪೋರ್ಟ್ ನಲ್ಲಿ ನಡೆದ 'ಏರ್‌ಷೋ' ಹೆಸರಲ್ಲಿ ಅಕ್ಕಪಕ್ಕದ ಏರಿಯಾಗಳ ರಸ್ತೆಗಳನ್ನೆಲ್ಲ ಉದ್ಧಾರ ಮಾಡುತ್ತೇವೆಂದು 320 ಕೋಟಿಯಷ್ಟು ಬಿಲ್ಲು ಸೃಷ್ಟಿಸಲಾಯ್ತು. ಪೇಪರ್ ದೋಸೆ ಹಾಕಿದಂತೆ ಕಾಟಾಚಾರಕ್ಕೆ ಡಾಂಬರ್ ಬಳಿದು ಯಲಹಂಕ ಸುತ್ತಮುತ್ತಲ ಅನೇಕ ರಸ್ತೆಗಳ ಅಬಲೀಕರಣ ಮತ್ತು ಕಾಮಗಾರಿ ನಡೆಸಿದಂತೆ ಮಾಡಿ 320 ಕೋಟಿ ರೂಪಾಯಿಗಳನ್ನು ಹುಡಿ ಹಾರಿಸಲಾಗಿತ್ತು.

ಕಳ್ಳ ಟೆಂಡರ್.....!

ಇದಲ್ಲದೇ ಯಲಹಂಕ ವಲಯಕ್ಕೊಂದೇ ಮತ್ತೆ 400 ಕೋಟಿಯಷ್ಟು ಅಭಿವೃದ್ಧಿ ನಿಧಿ ಮಂಜೂರಾಗಿತ್ತು. ಮಲ್ಲೇಶ್ವರಂ ಶಾಸಕ ಅಶ್ವತ್ಥನಾರಾಯಣ ಒಬ್ಬರೇ ಯಡ್ಡಿಗೆ ಪೂಸಿ ಹೊಡೆದು 400 ಕೋಟಿ ರೂಪಾಯಿಗಳ ಮಂಜೂರಾತಿ ಪಡೆದಿದ್ದರು. ಬೊಮ್ಮನಹಳ್ಳಿ ಶಾಸಕ ಸತೀಶ್ ರೆಡ್ಡಿಗೆಂದು 300 ಕೋಟಿಯ ಕಾಮಗಾರಿಗಳನ್ನೂ, ಕೃಷ್ಣರಾಜಪುರದ ನಂದೀಶ್ ರೆಡ್ಡಿಗೆಂದು 350 ಕೋಟಿಯ ಅನುದಾನವನ್ನೂ ರಾಜರಾಜೇಶ್ವರಿನಗರದ ಶ್ರೀನಿವಾಸ್ ಪರವಾಗಿ ಮತ್ತೆ 300 ಕೋಟಿಯಷ್ಟನ್ನೂ, ಸರ್ ಸಿ.ವಿ. ರಾಮನ್‌ನಗರದ ಶಾಸಕ ರಘು ಸಂತೃಪ್ತಿಗೆಂದು 280 ಕೋಟಿಗಳನ್ನು ಯಡ್ಡಿ ಮಂಜೂರು ಮಾಡಿದ್ದರು.

ಇದಲ್ಲದೇ ಬೆಂಗಳೂರು ದಕ್ಷಿಣದ ಶಾಸಕ ಕೃ... ಯಶವಂತಪುರದ ಕರಂದ್ಲಾಜೆ, ದಾಸರಹಳ್ಳಿಯ ಮ... ರಾಜು; ಮುಂತಾದ ಬಿಜೆಪಿ ಶಾ... ಕ್ಷೇತ್ರಾಭಿವೃದ್ಧಿಗೆಂದೇ ತಲಾ 3... ಕೋಟಿಯಷ್ಟು ಮಂಜೂರಾಗಿ... 2008 ಮತ್ತು 2009 ರ ಸಾಲಿ... ನೂರೋ ಇನ್ನೂರೋ ಕೋ... ಮಂಜೂರಾಗಿ 2010 ರ ವೇ... ಬೆಂಗಳೂರಿನ ಪ್ರತಿ ಎಮ್ಮೆಲ್ಲೆ... ಕನಿಷ್ಠ ಮುನ್ನೂರು ಕೋಟಿಯ... ಅಭಿವೃದ್ಧಿ ನಿಧಿ ಮಂಜೂರಾಗಿ...

ಆಯಾ ಕ್ಷೇತ್ರದ ಎಮ್ಮೆಲ್ಲೆಗ... ಇಂಜಿನಿಯರ್‌ಗಳು ಮತ್ತು ಕಂ... ಕ್ಟರುಗಳ ದುಷ್ಟ ಕೂಟವೇ ರೂ... ಗೊಂಡು ಇದೇ ನೆಪದಲ್ಲಿ ಪಾ... ಕಮಿಷನರ್, ಆತನ ಆಪ್ತ ಸ... ಯಕರು ಮಾತ್ರವಲ್ಲದೇ ಪಾಲಿಕೆಯ ಲೆಕ್ಕಾಧಿಕಾರಿಗ... ಅಧಿಕಾರಿಗಳೆಲ್ಲ ಸೇರಿಕೊಂಡೇ ಬೋಗಸ್ ಬಿಲ್ ದಂಧ... ನಿಂತರು. ಇ-ಟೆಂಡರ್ ಬದಲಿಗೆ ಕಾಟಾಚಾರದ ಕಪ... ಟೆಂಡರ್ ನಡೆಸಲಾಯ್ತು. ದೂರದ ಗುಲ್ಬರ್ಗಾ ಬೀದರ್... ಹೇಳಹೆಸರಿಲ್ಲದ ಪತ್ರಿಕೆಗಳಿಗೆ ಟೆಂಡರ್ ಜಾಹೀರಾ... ಕೊಟ್ಟಂತೆ ಮಾಡಿ, ನಕಲಿ ಅರ್ಜಿಗಳ ಆಧಾರದ... ಟೆಂಡರ್ ಆಖೈರುಗೊಳಿಸಿ, ನಡೆಯ... ಕಾಮಗಾರಿಗಳಿಗೆ ಬಿಲ್ಲು ಬರೆ... ದೋಚಲಾರಂಭಿಸಿದ್ದರು. ದಾಸರಹಳ್ಳಿ... ಇ.ಇ. ಕೀರಾನಾಯಕ್ ಒಬ್ಬನೇ 20... ಕೋಟಿಯಷ್ಟು ದೋಚಿದರೆ ಯ... ಹಂಕದ ಇ.ಇ. ಮೋಹನ್‌ದಾ... ಸರಿಸುಮಾರು 150 ಕೋಟಿ ಲಪ... ಯಿಸಿದ್ದ. ರಾಜರಾಜೇಶ್ವರಿ ನಗರ ವಲಯ... ಚೀಫ್ ಇಂಜಿನಿಯರ್ ಎಂ.ಜಿ... ಶ್ರೀನಿವಾಸ್, ದಾಸರಹಳ್ಳಿಯ ಚೀಫ್... ಇಂಜಿನಿಯರ್ ಕೃಷ್ಣಸ್ವಾಮಿ, ಸರ್ ಸಿ.ವಿ... ರಾಮನ್‌ನಗರದ ನಾಗೇಂದ್ರಪ್ಪ, ಬ್ಯಾಟರಾಯನಪುರ... ಪರಮೇಶ್ವರ್, ಯಲಹಂಕದ ದೇವೇಂದ್ರ ನಾಯಕ್... ಬೊಮ್ಮನಹಳ್ಳಿಯ ಕೃಷ್ಣೇಗೌಡ ಮತ್ತು ಸೂಪರಿಂಟೆಂಡಿಂಗ್... ಇಂಜಿನಿಯರ್ ಶ್ರೀಕಂಠೇಗೌಡ, ರಾಜರಾಜೇಶ್ವರಿ ನಗರ... ಇ.ಇ. ಶಿವಾನಂದ, ದಾಸರಹಳ್ಳಿಯ ಇ.ಇ. ಪುಟ್ಟಸ್ವಾಮಿ... ಯಲಹಂಕದ ಪೇಜರ್ ನಾಗರಾಜ್ ಇತ್ಯಾದಿಗಳೆಲ್ಲ ಕಮಿ... ಯೆಂದರೂ ತಲಾ ನೂರೈವತ್ತು ಕೋಟಿಯಷ್ಟು ಕಬಳಿ... ದ್ದರು.

ಮೀನಾ ಕೂಡ ಕುಲಗೆಟ್ಟ

ಇಂಜಿನಿಯರೇ ಈ ಪಾಟ ಖಮಾಯಿಸುತ್ತಾನೆಂದ... ಇನ್ನು ಎಮ್ಮೆಲ್ಲೇಯಾದವನು ಇನ್ನೆಷ್ಟು ನುಂಗಿರಬೇಡ! ಮಲ್ಲೇಶ್ವರಂ ಶಾಸಕ ಅಶ್ವತ್ಥನಾರಾಯಣರಂತೂ ತನ್ನ ತಮ್ಮ ವಿಜಿಯನ್ನು ಮುಂದೆ ಬಿಟ್ಟು ಬೇನಾಮಿ ಕಾಂಟ್ರಾಕ್ಟ್ ದಂಧೆಗಿಳಿದರೆ, ವಿಜಿ ಒಬ್ಬನೇ ದಾಸರಹಳ್ಳಿ ವ್ಯಾಪ್ತಿಯಲ್ಲಿ 200 ಕೋಟಿ ಮೊತ್ತದ ಟೆಂಡರ್ ಗಿಟ್ಟಿಸಿಕೊಂಡಿದ್ದ. ದಾಸರಹಳ್ಳಿಗೆ ಶಾಸಕನಾಗಿರುವವನು ಮುನಿರಾಜು. ತನ್ನದಲ್ಲದ ಇನ್ನಾರೋ ಶಾಸಕನಾಗಿರುವ ಕ್ಷೇತ್ರದಲ್ಲೇ 200 ಕೋಟಿಯ ಟೆಂಡರ್ ಹಿಡಿದ ಅಶ್ವತ್ಥನಾರಾಯಣ ಇನ್ನು ತನ್ನದೇ ಮಲ್ಲೇಶ್ವರಂ ಕ್ಷೇತ್ರದಲ್ಲಿ ಇನ್ನೆಷ್ಟು ದೋಚಬೇಡ?

ಕದ್ದೂಮುಚ್ಚಿ ಸದ್ದಿಲ್ಲದೇ ನಡೆಯುತ್ತಿದ್ದ 'ವರ್ಕ್‌ಕೋಡ್' ಕರ್ಮಕಾಂಡ ಪತ್ರಿಕೆಗಳಲ್ಲಿ ಸುದ್ದಿಯಾಗುತ್ತಿದ್ದಂತೆ ಹುಷಾರಾದ ಯಡ್ಡಿ ಉಪಾಯವಾಗಿ ಸುಬ್ರಹ್ಮಣ್ಯಂರನ್ನು ಎತ್ತಂಗಡಿ ಮಾಡಿ ಆ ಜಾಗಕ್ಕೆ ಸೋಕಾಲ್ಡ್ ನಿಷ್ಠರೆಂದು ಹೆಸರಾಗಿದ್ದ ಭರತ್‌ಲಾಲ್ ಮೀನಾರನ್ನು ತಂದರು. ಸುಬ್ರಹ್ಮಣ್ಯಂ ತೊಲಗಿ ಮೀನಾ ವಕ್ಕರಿಸುವ ನಡುವಿನ ಅವಧಿಯಿತ್ತಲ್ಲ ಈ ಅವಧಿಯನ್ನೇ ಬಳಸಿಕೊಂಡು ಕಮಿಷನರ್ ಸುಬ್ರಹ್ಮಣ್ಯಂರ ಸಹಿಯನ್ನೇ ನಕಲು ಮಾಡಿ ಮತ್ತೆ ಸಾವಿರ ಕೋಟಿಯಷ್ಟು ವರ್ಕ್‌ಕೋಡ್ ಸೃಷ್ಟಿಸಲಾಯ್ತು. ಸುಬ್ರಹ್ಮಣ್ಯಂ ಕಾಲದಲ್ಲೇ ಎರಡೂವರೆ ಸಾವಿರ ಕೋಟಿಯ ವರ್ಕ್‌ಕೋಡ್ ಕೊಟ್ಟದ್ದು ಸಾಲದೆ ಈಗ ಮತ್ತೆ ಸಾವಿರ ಕೋಟಿಯ ಫೋರ್ಜರಿ ವರ್ಕ್‌ಕೋಡ್ ಕೊಟ್ಟದ್ದು ಇಡೀ ಕರ್ಮಕಾಂಡದ ನಿರ್ಲಜ್ಜತೆ ಮತ್ತು ನಿರಂಕುಶತೆಗೆ ಸಾಕ್ಷಿಯಂತಿತ್ತು.

ದುರಂತವೆಂದರೆ 2010 ರ ಹೊತ್ತಿಗೆ ಪಾಲಿಕೆಗೆ ಕಾಲಿಟ್ಟ ಮೀನಾ ಸುಬ್ರಹ್ಮಣ್ಯಂ ಕಾಲ ವರ್ಕ್‌ಕೋಡ್ ದರೋಡೆಯನ್ನು ಬಯಲಿಗೆಳೆಯುತ್ತಾರೆಂದೇ ಎಲ್ಲರೂ ಭಾವಿಸಿದ್ದು ಉಲ್ಟಾ ಹೊಡೆದಿತ್ತು. ಯಾವ ಮರ್ಜಿಯೋ, ಯಾರ ಕಪಿಮುಷ್ಠಿಯೋ ಮೀನಾ ಕೂಡ ಮತ್ತೆ ಒಂದೂವರೆ ಸಾವಿರದಷ್ಟು ವರ್ಕ್‌ಕೋಡ್ ಹುಟ್ಟು ಹಾಕಿದ್ದರು. ಅಲ್ಲಿಗೆ ವರ್ಕ್‌ಕೋಡ್‌ನ ಒಟ್ಟು ಮೊತ್ತ ಐದು ಸಾವಿರ ಕೋಟಿಗೇರಿತ್ತು.


ಪಾಲಿಕೆ ಬಜೆಟ್ಟೇ ಮಹಾಮೋಸ

ನಗರದ ಜನತೆಗೆ ನಾನಾ ಭರವಸೆ ಕೊಟ್ಟು ಅಧಿಕಾರ ಹಿಡಿದ ಬಿಜೆಪಿ ಎಂಥಾ ಟೋಪಿ ಹಾಕಿದೆ ಎಂಬುದಕ್ಕೆ ಈ ಸಲದ ಬಜೆಟ್ಟೊಂದೇ ಸಾಕು. 2010 ಆಗಸ್ಟ್ 30 ರಂದು ನಡೆದ ಪಾಲಿಕೆಯ ಬಜೆಟ್ ಸಭೆಯಲ್ಲಿ ಮೇಯರ್ ನಟರಾಜ್ 8488.54 ಕೋಟಿ ರೂಪಾಯಿಗಳ ಭಾರೀ ಬಜೆಟ್ ಮಂಡಿಸಿದ್ದು ಸರಿಯಷ್ಟೆ.

ಹಕೀಕತ್ತೆಂದರೆ ಈ ಬಜೆಟ್ಟೇ ಬೋಗಸ್ ಬಜೆಟ್ಟಾಗಿತ್ತು! ಸದ್ಯ ಬಿಬಿಎಂಪಿಗಿರುವುದು 1700 ಕೋಟಿ ರೂಪಾಯಿಗಳ ಸಂಪನ್ಮೂಲ ಮಾತ್ರ. ವಿವಿಧ ಹತ್ತು ಬ್ಯಾಂಕ್‌ಗಳಿಂದ ಈಗಾಗಲೇ 1475 ಕೋಟಿ ರೂಪಾಯಿಗಳ ಸಾಲವೂ ಸೇರಿದಂತೆ ಈ ಹಿಂದಿನದ್ದೂ ಲೆಕ್ಕ ಹಾಕಿದರೆ ಬಿಬಿಎಂಪಿಯ ಒಟ್ಟು ಸಾಲದ ಮೊತ್ತವೇ 6 ಸಾವಿರ ಕೋಟಿ. ಇಂಥಾದ್ದರಲ್ಲಿ ಎಂಟೂವರೆ ಸಾವಿರ ಕೋಟಿಯ ಬಜೆಟ್ ಮಂಡಿಸಿದ ನಟರಾಜ್ ಅದಕ್ಕೆ ಎಲ್ಲಿಂದ ದುಡ್ಡು ತರುತ್ತಾರೆ?

ಯಾರಿಗೂ ಅರ್ಥವಾಗದ ಪ್ರಶ್ನೆಯಿದು. ಮೇಯರ್ ಪ್ರಕಾರ 1600 ಕೋಟಿ ತೆರಿಗೆ ಮೂಲಕ ಸಂಗ್ರಹವಾಗುವುದೇ ನಿಜವಾಗಿದ್ದರೆ 2010 ರ ಆಗಸ್ಟ್ ಹೊತ್ತಿಗೆ ಕೇವಲ 6 ತಿಂಗಳಲ್ಲಿ 600 ಕೋಟಿ ಮಾತ್ರ ಸಂಗ್ರಹವಾಗುತ್ತಿರಲಿಲ್ಲ, ಇನ್ನೂ ಹೆಚ್ಚಾಗಬೇಕಿತ್ತು, ಉಳಿಕೆ ಆರು ತಿಂಗಳಲ್ಲಿ ಸಾವಿರ ಕೋಟಿ ಸಂಗ್ರಹವಾಗುತ್ತದೆ ಎನ್ನಲು ಏನು ಗ್ಯಾರಂಟಿ. ಹಾಗೊಮ್ಮೆ 1600 ಕೋಟಿ ಸಂಗ್ರಹವಾದರೂ ಉಳಿದ ಹಣವನ್ನು ಎಲ್ಲಿಂದ ತರುತ್ತಾರೆ? ಈ ಪೈಕಿ ಸರ್ಕಾರ 1300 ಕೋಟಿ ಕೊಡುತ್ತದೆ ಎಂಬುದು ಮೇಯರ್ ವಾದ. ಸರ್ಕಾರ ತನ್ನ ಬಜೆಟ್ಟಿನಲ್ಲಿ ಪಾಲಿಕೆಗೆ ಅನುದಾನವನ್ನೇ ನಿಗದಿಪಡಿಸದೇ ಇರುವಾಗ ಆ ಪಾಟ ದುಡ್ಡನ್ನು ಮುಖ್ಯಮಂತ್ರಿ ಏಕೆ, ಎಲ್ಲಿಂದ ತಂದು ಕೊಡುತ್ತಾರೆ?


ಜಾಹೀರಾತಿನಿಂದ 100 ಕೋಟಿ ಬರುತ್ತದೆ ಎಂಬ ಮೇಯರ್ ನಿರೀಕ್ಷೆಗೆ ಯಾವುದೇ ಆಧಾರವಿಲ್ಲ. ಕಳೆದ ವರ್ಷ ಕೇವಲ 17 ಕೋಟಿ ಜಾಹೀರಾತು ತೆರಿಗೆ ಸಂಗ್ರಹಿಸಿದ್ದ ಪಾಲಿಕೆ ಅಧಿಕಾರಿಗಳು ಈಗಾಗಲೇ ಜಾಹೀರಾತು ಕಂಪೆನಿಗಳ ಜೊತೆ ಕೈಜೋಡಿಸಿದ್ದರಿಂದಾಗಿ ಬೊಕ್ಕಸಕ್ಕೆ ಬರಬೇಕಿದ್ದ ಕೋಟಿಗಟ್ಟಲೆ ದುಡ್ಡು ಖದೀಮರ ಪಾಲಾಗುತ್ತಿದೆ. ಇಂಥಾದ್ದರಲ್ಲಿ ಈ ವರ್ಷ 100 ಕೋಟಿಯ ಜಾಹೀರಾತು ತೆರಿಗೆ ಸಂಗ್ರಹಿಸುತ್ತೇನೆನ್ನುವ ಮೇಯರ್ ನಿರೀಕ್ಷೆಯೇ ಮೋಸ.



ವಿವಿಧ ಕಟ್ಟಡಗಳಿಗೆ ಓಸಿ ಎಂದರೆ ಆಕ್ಯುಪೆನ್ಸಿ ಸರ್ಟಿಫಿಕೇಟ್ ನೀಡುವ ಪಾಲಿಕೆಯ ಅಧಿಕಾರವನ್ನು ಬಿಡಿಎಗೆ ವರ್ಗಾಯಿಸಿದ್ದರಿಂದಾಗಿ ಬಿಬಿಎಂಪಿಗೆ ಪ್ರತಿ ವರ್ಷ 400 ಕೋಟಿ ಲುಕ್ಸಾನಾಗುತ್ತಿದೆ. ವರ್ಷಂಪ್ರತಿ ಆದಾಯವೇ ಸರಿಸುಮಾರು ಸಾವಿರದೈನೂರು ಕೋಟಿಯಿರುವಾಗ ಎಂಟೂವರೆ ಸಾವಿರ ಕೋಟಿಯ ಪಾಲಿಕೆ ಬಜೆಟ್ಟಿಗೆ ಏನಾದರೂ ಅರ್ಥವುಂಟೆ? ಹಾಗೊಮ್ಮೆ ಸಾಲ ತಂದರೂ ಎಷ್ಟು ಅಂತ ಸಾಲ ತರಬಹುದು? ಸರ್ಕಾರ ಸಾಫಿರದ ಮುನ್ನೂರು ಕೋಟಿ ಕೊಟ್ಟರೂ ಉಳಿಕೆ ದುಡ್ಡಿಗೆ ಏನು ಮಾಡುತ್ತಾರೆ? ಎಲ್ಲಿಂದ ತರಲು ಸಾಧ್ಯ?

ಮೇಯರ್ ನಟರಾಜ್‌ರ ಎಂಟೂವರೆ ಸಾವಿರ ಕೋಟಿಯ ಬಜೆಟ್ಟೆಂಬುದು ಎಂಥಾ ಮೋಸವಲ್ಲವೆ? ●


ಯೇನಾ ವಿರುದ್ಧವೂ ವರ್ಕ್‌ಕೋಡ್‌ನ ಲೂಟಿ
ೀಪ ಭುಗಿಲೆದ್ದು ಯಡ್ಡಿ ಸರ್ಕಾರ ಆ ಜಾಗಕ್ಕೆ
ಸ್ಥನವರನ್ನು ತರುವ ಹೊತ್ತಿಗೆ ಇಡೀ ಪಾಲಿಕೆಯು
ಹರಾಜಾಗಿತ್ತು. ಈ ಹೊತ್ತಿಗಾಗಲೇ ಪಾಲಿಕೆ
ನ್ ನಡೆದು ಮೇಯರ್ ಆಯ್ಕೆಯೂ ಆಗಿ ವಿರೋಧ
ನಾಯಕರಾಗಿದ್ದ ಕುರುಬರಹಳ್ಳಿ ನಾಗರಾಜ್ ಪ್ರತಿನಿತ್ಯ
ೊಂದೇ ವರ್ಕ್‌ಕೋಡ್ ಕರ್ಮಕಾಂಡವನ್ನು
ಲಿಗೆಳೆಯತೊಡಗಿದ್ದರು. ಪತ್ರಿಕೆ ಈ ಹಿಂದೆಯೇ
ಗಸ್ ಬಿಲ್ ಕಾಮಗಾರಿಗಳ ಬಗ್ಗೆ ಪದೇಪದೇ
ೆ ಸಮೇತ ಪ್ರಕಟಿಸಿದ್ದ ತನಿಖಾ ವರದಿಗಳೇ ಸಾಕಷ್ಟು
ವೆ ಕಲ್ಪಿಸಿಕೊಟ್ಟಿತ್ತು.



ಆದರೆ ಕಾಲ ಮಿಂಚಿ ಹೋಗಿತ್ತು. ಮೇಯರ್ ಆಯ್ಕೆಯಾಗುವ ಹೊತ್ತಿಗಾಗಲೇ ಸರಿಸುಮಾರು ಮೂರು ಸಾವಿರ ಕೋಟಿಯಷ್ಟು ಬಿಲ್ಲು ಪಾವತಿಯಾಗಿತ್ತು. ಪಾಲಿಕೆ ಎಲೆಕ್ಷನ್ನಿನ ನಂತರವೂ ಮತ್ತೆ 500 ಕೋಟಿ ಮೊತ್ತದ ಬಿಲ್ಲು ಪಾವತಿಯಾಗಿತ್ತು. ಸಿದ್ಧಯ್ಯ ಬಂದ ನಂತರ ವಿರೋಧಿ
ಕರಾದ ನಾಗರಾಜ್ ಮತ್ತು ಪದ್ಮನಾಭ ರೆಡ್ಡಿಯ
ಟನೆಗೆ ಮಣಿದು ಇಡೀ ವರ್ಕ್‌ಕೋಡ್, ಕಾಮ
ಳ ಬಗ್ಗೆ ತನಿಖೆ ನಡೆಸಲೆಂದೇ ಚೀಫ್ ಇಂಜಿನಿಯರ್
ಾಜ್ ಮತ್ತು ಸೂಪರಿಂಟೆಂಡಿಂಗ್ ಇಂಜಿನಿಯರ್
ಕರ್ ನೇತೃತ್ವದಲ್ಲಿ ತನಿಖಾ ತಂಡವೊಂದನ್ನು
ದರೆ; ಅದು ನೀಡಿದ ವರದಿ ನಿಜಕ್ಕೂ
ಕಾರಿಯಾಗಿತ್ತು. ಇಡೀ ವರ್ಕ್‌ಕೋಡ್ ಪ್ರಕರಣವೇ
ಗಳ ಗೂಡಾಗಿತ್ತು. ಬೆಂಗಳೂರಿನ ಬಹುತೇಕ
ು, ಇಂಜಿನಿಯರ್‌ಗಳು, ಲೆಕ್ಕಾಧಿಕಾರಿಗಳೆಲ್ಲ ಸೇರಿ
ೊತ್ತಿಗಾಗಲೇ ಮೂರೂವರೆ ಸಾವಿರ ಕೋಟಿಯನ್ನು
ಯಿಸಿದರು.

ಯಾವ ತನಿಖೆಯೂ ಇಲ್ಲ!

ದೇ ಹೊತ್ತಿಗೆ ಅಕೌಂಟೆಂಟ್ ಜನರಲ್ ಕಚೇರಿಯ
ಆಡಿಟರ್ ಗಂಗಾಧರ್ ಇಡೀ ವರ್ಕ್‌ಕೋಡ್‌ನ
ಮತ್ತೊಂದು ವರದಿ ಕೊಟ್ಟರು. ಆ ಪ್ರಕಾರ
0 ರಷ್ಟು ಕಾಮಗಾರಿಗಳೇ ನಡೆದಿರಲಿಲ್ಲ. ಕಾಟಾ
ಾ, ಕಾನೂನು,




ಾವಳಿಯನ್ನು
ರಲಿಲ್ಲ. ಅಗತ್ಯ
ಕಾಮಗಾರಿಗಳ
ಲ್ಲಿ ಕಪಟ
ೆ ಗಳನ್ನು
ಪ್ರಾಮಾ
ಪರಿಶೀಲನೆ
ದೂ ಇಲ್ಲದೆ
ರು ಕೋಟಿ
ದೋಚಿದ್ದು
ನಾಗಿತ್ತು. ಒಂದೆಡೆ
ರ್ ಜನರಲ್ ಕಚೇರಿಯ ವರದಿ
ಂದೆಡೆ ಪಾಲಿಕೆಯ ತನಿಖಾ ತಂಡವೇ ನೀಡಿದ
ಳ ಆಧಾರದ ಮೇಲೆ ಸರಿಸುಮಾರು 800
ಯ ವರ್ಕ್‌ಕೋಡ್‌ಗಳನ್ನು ಕಮಿಷನರ್
ರದ್ದುಗೊಳಿಸಿದರಾದರೂ, ಆ ಹೊತ್ತಿಗಾಗಲೇ
ರ ಕೋಟಿ ಮೊತ್ತದ ಬೋಗಸ್ ಬಿಲ್ಲುಗಳಿಗೆ
ಹಣ ಪಾವತಿಸಿಯಾಗಿತ್ತು!

ದಲ್ಲ ಎರಡಲ್ಲ ನಾಲ್ಕು ಸಾವಿರ ಕೋಟಿ
ಯಿಗಳು. ಕಾಟಾಚಾರಕ್ಕೆ ಒಂದಷ್ಟು ಮಂದಿ
ಯರ್‌ಗಳನ್ನು ಸಸ್ಪೆಂಡ್ ಮಾಡಲಾಯಿತಾದರೂ
ಹಗರಣದ ಕುರಿತು ಯಾವ ತನಿಖೆಯೂ
ೇ ಇಲ್ಲ. ಸಿಬಿಐ ತನಿಖೆಯಾದರೆ ಮುಖ್ಯಮಂತ್ರಿ,
ಪುತ್ರ, ಮಂತ್ರಿ ಅಶೋಕ್, ಮಾಜಿ ಮಂತ್ರಿ
ಸೇರಿದಂತೆ ಬೆಂಗಳೂರಿನ ಬಹುತೇಕ ಶಾಸಕರೆಲ್ಲ
ಪಾಲಾಗುವುದು ಗ್ಯಾರಂಟಿ.

, ಪಾಲಿಕೆ ವಿರೋಧಿ ನಾಯಕರಾದ ನಾಗರಾಜ್
ಪದ್ಮನಾಭ ರೆಡ್ಡಿ ಬಿಟ್ಟರೆ ರಾಜ್ಯಮಟ್ಟದ
ಾರೂ ಈ ಬಗ್ಗೆ ಚಕಾರವೆತ್ತಿಲ್ಲ. ಲೋಕಾಯುಕ್ತವೇ
ಕೈಗೆತ್ತಿಕೊಂಡರೂ ಪಾಲಿಕೆಯ ಅರ್ಧ
ಯರ್‌ಗಳ ಜೊತೆ ಬೆಂಗಳೂರಿನ ಅರ್ಧ ಶಾಸಕರು
ಿಸಲೇಬೇಕು. ಏಕೆ ಯಾರೂ ಲೋಕಾಯುಕ್ತಕ್ಕೆ
ಸಲ್ಲಿಸುತ್ತಿಲ್ಲ? ನಾಲ್ಕು ಸಾವಿರ ಕೋಟಿಯ
ಲ್ಲಿ ಯಾರ ಪಾತ್ರ ಎಷ್ಟೆಷ್ಟು? ಪಾಲು ಪಡೆದವರು
ು? ಕನಿಷ್ಠ ತನಿಖೆ ಕೂಡ ನಡೆಸದೆ ಮುಚ್ಚಿ
ಸರ್ಕಾರ ಯಾವ ಮುಖ ಹೊತ್ತು ನೈತಿಕತೆಯ
ಾಡುತ್ತದೆ?

• ರಾ. ಸೋಮನಾಥ್

ಅವನ-ನನ್ನ ಕುರಿತ ಸಾಲುಗಳು



-1-
ಅವನ ಮುಂಗುರುಳು ನೇವರಿಸುವಾಗ
ಭಾವುಕ ಭಂಗಿಯಲ್ಲಿ
'ನಾನು ಸತ್ತರೆ..?' ಎಂದ.
'ಹೇಗೊ ಬದುಕೋದೂ..? ಎಂದೆ.
'ನಾನು ಸತ್ತರೆ..?' ಎಂದೆ.
ತಲೆ ಕೆಳಗು ಮಾಡಿದ.
ಹೆಣ್ಣಿಗೆ ನೆನಪು ಗರ್ಭಸ್ಥ
ಪಾಪ, ಗಂಡಿಗೇನು ಗೊತ್ತು?
ಬಾಚಿ ಎದೆಗಪ್ಪಿಕೊಂಡೆ.
ಗಂಡನ್ನು ತೀರಾ ಹೆದರಿಸಬಾರದು..

-2-
ರಾತ್ರಿ, ಆ ದಿಂಬು ಅನಾಥ.
ತುದಿಗಾಲಲ್ಲಿ ಕಾದು ಸೋತ
ಪಾದ ನೋಯುತ್ತೆ ಅಂತ
ಪಾದದಡಿ ಇಟ್ಟುಕೊಂಡೆ.
ನನ್ನ ದಿಂಬು ಹತಾಶ ಕಂಬನಿಯಲ್ಲಿ ತೋಯ್ದಿದೆ.
ಭೂಮಿ ಮಳೆಗಾಗಿ ಕಾಯುತ್ತೆ
ಅಂದವರಾರು..?

-3-
ನನ್ನವನಿಗೆ ತಾಯಿಯಾದೆ
ದಾಸಿಯಾದೆ
ಮಂತ್ರಿಯಾದೆ
ವೇಶ್ಯೆಯಾಗುತ್ತೇನೆಂದರೆ
ನಡುಗುತ್ತಾನೆ.
ಪತ್ನಿಯಾಗು ಅಂತ ಗೋಗರೆಯುತ್ತಾನೆ.

-4-
ಇವನು ನನ್ನೊಳಗಿಳಿದಾಗ
ಅವನು ಮನದೊಳಗಿದ್ದ.
ನನ್ನೊಳಗೆ ದ್ವಾಸುಪರ್ಣಾ
ವಚನೀಯವಾದರೆ ಇದು
ಬೆಚ್ಚಿ ಬೀಳುವರು.
ಭೂಮಿಯ ತೂಕಕ್ಕಿಡುವ ತಕ್ಕಡಿಯಿದ್ದರೆ
ಆದರಲ್ಲಿ ನನ್ನನ್ನು ತೂಗಿ
ತೀರ್ಪು ನೀಡಿ.

-5-
ಹಣೆಗೆ ಬಿಂದಿ ಇಟ್ಟು
ಹೂ ಮುಡಿದ ಮುಖವೆಷ್ಟು ಸುಂದರ..!
ಅನ್ನುತ್ತಾನೆ.
ಅವನಿಗೆ ಹೇಳಬೇಕು
ಋತುಸ್ರಾವದ ಜಿನುಗೂ ನೋಡು..
ನಾನೆಂದರೆ ಇವೆಲ್ಲಾ..
ಆದರೂ ಬೇರೆ.
ಅವನೆಲ್ಲಿ..?
ಇದನ್ನು ನೋಡಬಲ್ಲವನು..?

-6-
ಅವನೋ ಸುಡುಸುಡು
ಹಗಲೆಲ್ಲಾ ಅಲೆವ ಸೂರ್ಯ.
ನಾನೋ ಒಳಮನೆಯ
ಜಂತಿಗಂಟಿದ
ಮೊಸರು ಕುಡಿಕೆ.
ಇಂದು ಮುಂಜಾನೆ ಯಾರೋ,
ನಸು ತೂಗಿಬಿಟ್ಟು ಅಷ್ಟು ತುಯ್ತು
ಆಹ್..!
ಅವನ ಕಿರುನಗೆಯ ಕಿರಣ
ನನ್ನ ಮುಟ್ಟಿದೆ. ನಾನೀಗ ವಿವಶ.

-7-
ನನ್ನ ಕನಸಿಗೆ ಹುಳಿ ಹಿಂಡಿದ ಅವನು.
ಪರವಾಗಿಲ್ಲ.
ಹೆಪ್ಪುಗಟ್ಟಿ ಕೂತಿದ್ದೇನೆ
ಬೆಳಕು ಹರಿವಾಗ
ದೈನಿಕದಲ್ಲಿ ಕಡೆದು
ನವನೀತವಾಗಿ
ಚಿಮ್ಮುವೆ.
ಮುಳುಗಲೊಲ್ಲೆ.

-8-
ಅವನ ಬೆರಳುಗಳು
ನನ್ನ ಗಲ್ಲ ಸವರಿದಾಗ
ಆರ್ದ್ರವಾಗಿ ಅರಳಿದ್ದೆ.
ಈಗೆಲ್ಲಿ ಅವನು..?
ಅವನ ಬಿಂಬ
ನನ್ನ ಒಡಲಲ್ಲಿ.
ಒಡಲ ಕಂದನಿಗೆ ಹೇಳುವೆ
ಕರ್ಣನ ಪಾಲಿಗೆ ಉರಿವ ಸ್ವಪ್ನ
ಸೂರ್ಯನೂ ಅಪರಿಚಿತ.

• ಕೆ.ಇಂದ್ರಾಣಿ

ಕೋಟಿ ಚಂದ್ರಮರ ಬೆಳದಿಂಗಳು

ಈ ಭೂಮಿ
ತನ್ನೊಡಲಲ್ಲಿ
ಲಾವಾ-ನದಿಗಳನ್ನು ಹರಿಸಿ
ಅನಂತ ವಸಂತಗಳನ್ನು
ಅರಳಿಸಿದೆ
ಈ ಭೂಮಿ
ಶಿಲಾಪರ್ವತಗಳೆದೆಯಲ್ಲಿ
ತಿಳಿಜಲದ ಒರತೆ ದಯಪಾಲಿಸಿದೆ
ನಾವು
ಈ ಭೂಮಿಯ ಮಕ್ಕಳು
ಹೃದಯದಲ್ಲಿ
ಕಿಚ್ಚು, ಕವಲುಗಳಂತಿಟ್ಟುಕೊಂಡು
ಹೂವಾಗಿ ಅರಳುತ್ತೇವೆ.
ಅಸೀಮ ಕತ್ತಲಿನಲ್ಲಿ
ಮಿಂದೆದ್ದ ಕನಸುಗಳು
ನಕ್ಷತ್ರಗಳಾಗಿ ಮಿನುಗುತ್ತಿವೆ
ಪ್ರಿಯೆ,
ನಮ್ಮ ತುಟಿಗಳಲ್ಲಿ
ಕೋಟಿ ಚಂದ್ರಮರ ಬೆಳದಿಂಗಳಿದೆ.

• ಪೀರ್ ಬಾಷಾ





ಫೈಜ್ ನೆನಪು



೧.
ಹಾಳುಬಿದ್ದ ತೋಟಕ್ಕೆ ಮೆಲ್ಲನೆ ವಸಂತ ಕಾಲಿಟ್ಟಂತೆ
ಬೆಳಗಿನ ತಂಗಾಳಿ ಬೆಂಗಾಡಲ್ಲಿ ಕಮ್ಮನೆ ಬಿಸಿದಂತೆ
ನರಳುವ ರೋಗಿ ನೆಪವೇ ಇಲ್ಲದೆ ಗೆಲುವಾದಂತೆ
ನೆನ್ನೆ ರಾತ್ರಿ ನಿನ್ನ ಕಳೆದು ಹೋದ ನೆನಪು
ಸುಮ್ಮಸುಮ್ಮನೆ ಬಂದು ನನ್ನೆದೆ ಕದ ತಟ್ಟಿತು.


೨.
ಮುಂದಿ ನನ್ನ ಶಾಯಿ ಲೇಖನಿ ಕಿತ್ತುಕೊಂಡರೆ ಚಿಂತೆ ಇಲ್ಲ
ಬೆರಳನ್ನೇ ಅದ್ದಿದ್ದೇನೆ ಗುಂಡಿಗೆಯ ಬಿಸಿ ರಕ್ತದಲ್ಲಿ
ನಾಲಿಗೆಗೆ ಸಂಕೋಲೆ ಹಾಕಿದರೆ ಚಿಂತೆ ಏನೇನೂ ಇಲ್ಲ
ಸರಪಳಿಯ ಉಂಗುರುಂಗುರಗಳೂ ಉಸಿರೀತು ನನ್ನ ಮಾತು.

೩.
ತುಟಿಗಳಿಗೆ ಅಂಕೆ ಇಲ್ಲ
ಆಡು ಮಾತಾಡು
ನಾಲಿಗೆ ಇನ್ನೂ ನಿನ್ನದೇ
ಆಡು ಮಾತಾಡು.
ದೇಹ ನಿನ್ನ ಸ್ವಂತದ್ದು
ಆಡು ಮಾತಾಡು.
ಜೀವ ಇನ್ನೂ ಉಳಿದಿದೆ
ಆಡು ಮಾತಾಡು

ನೋಡು ಕಮ್ಮಾರನ ಕುಲುಮೆಯಲಿ
ಜಗಿದೆದ್ದಿದೆ ಜ್ವಾಲೆ, ಕೆಂಪೇರಿದೆ ಲೋಹ
ಸಡಿಲಾಗಿದೆ ಎಲ್ಲ ಬೀಗಗಳ ಬಾಯಿ
ತುಂಡಾಗಿ ಬಿದ್ದಿದೆ ಸರಪಳಿ.

ದೇಹ ನಾಲಿಗೆಗಳ ಸಾವಿನ ಮುಂಚಿನ
ಈ ಎರಡು ಗಳಿಗೆ ಸಮಯವೇ ಸಾಕು
ಆಡು ಮಾತಾಡು
ಸತ್ಯ ಇನ್ನೂ ಉಸಿರಾಡುತ್ತಲಿದೆ
ಆಡು ಮಾತಾಡು
ಹೇಳಲೇ ಬೇಕಾದ್ದು ಹೇಳಿಯೇಬಿಡು
ಆಡು ಮಾತಾಡು.


• ಕನ್ನಡಕ್ಕೆ ಶ್ರೀ



2011 ಖ್ಯಾತ ಉರ್ದು ಕವಿ ಫೈಜ್ ಅಹಮದ್ ಫೈಜ್ ಅವರ ಜನ್ಮ ಶತಮಾನೋತ್ಸವ.

ಶಿವನಿಗೇ ಬತ್ತಿ ಇಟ್ಟ ಬ್ರಹ್ಮಾಂಡ ಪಿಂಡ

ಐದೆಣ್ಣೆ ದೀಪ ಹಚ್ಚದ ಮಾತ್ರಕ್ಕೇ ಪ್ರಳಯ ಸಂಭವಿಸುವುದಿಲ್ಲ ಎಂದು ಸಹಸ್ರಾರು ಹೆಂಗಸರನ್ನು ಮಂಕುದಿಣ್ಣೆಗಳನ್ನಾಗಿಸಿದ ಪಾಖಂಡಿ ಜ್ಯೋತಿಷಿ ನರೇಂದ್ರ ಶರ್ಮ ಈಗ ಲೇಟೆಸ್ಟ್ ತರಲೆಯೊಂದನ್ನು ಹುಟ್ಟು ಹಾಕಿದ್ದಾನೆ. ಅದು ಶಿವರಾತ್ರಿ ಪ್ರಯುಕ್ತ ಆತನಿಗಾದ ಸ್ಪೆಷಲ್ ಜ್ಞಾನೋದಯವಂತೆ!



ಶಿವರಾತ್ರಿಯಂದು ಶಿವನಿಗೆ ಕೇವಲ ಬಿಲ್ವಪತ್ರೆಯ ಅರ್ಚನೆ ಮಾಡಿದರೆ ಅದರಿಂದ ನಯಾಪೈಸೆಯ ಪ್ರಯೋಜನ ವಿಲ್ಲವಂತೆ. ಕಾಲ ಬದಲಾದ ಹಾಗೆ ಶಿವಪರಮಾತ್ಮನ ಅಭಿರುಚಿಯೂ ಬದಲಾಗಿ ಹಳೇ ಬಿಲ್ವಪತ್ರೆ ಈಗ ಅಷ್ಟಾಗಿ ಇಷ್ಟವಾಗುತ್ತಿಲ್ಲವಂತೆ. ಬದಲಿಗೆ ಚಿಗುರನ್ನು ತಂದು ಅರ್ಚನೆ ಮಾಡಿಬಿಟ್ಟರೆ ಆ ಶಿವನಿಗೆ ಭಯಂಕರ ಖುಷಿಯಾಗಿ ಇಷ್ಟಾರ್ಥ ಸಿದ್ಧಿ ಗ್ಯಾರಂಟಿಯಂತೆ. ಕೇವಲ ಬಿಲ್ವದ ಚಿಗುರಷ್ಟೇ ಅಲ್ಲ, ಮಾವಿನ ಚಿಗುರು, ಆಲದ ಚಿಗುರು, ಬೇವಿನ ಚಿಗುರು, ತುಂಬಿಯಿಂದ ಹಿಡಿದು, ಹೊಂಗೆಯ ಚಿಗುರು ಯಾವುದೇ ಗಿಡಗಂಟಿಯ ಚಿಗುರಾದರೂ ಶಿವಪರಮಾತ್ಮ ಸಂತೃಪ್ತನಾಗಿ ವರ ನೀಡುತ್ತಾನಂತೆ.

ಇದು ಮೊನ್ನೆ ಅಂದರೆ ಮಾರ್ಚ್ 2 ರ ಬುಧವಾರದ ಝೀ ಟೀವಿಯ ಶಿವರಾತ್ರಿ ಸ್ಪೆಷಲ್ ಬ್ರಹ್ಮಾಂಡದಲ್ಲಿ ಶರ್ಮ ನುಡಿದ ರಣ ಜ್ಯೋತಿಷ್ಯ!

ಈ ಹಿಂದೆ ಮನೆಯಲ್ಲಿ ನಾಯಿಗಳಿರುವುದೇ ಕೆಡಕು. ನಾಯಿಗಳಿದ್ದರೆ ದೇವತೆಗಳು ಸುಳಿಯೋಲ್ಲ ಎಂದು ಶರ್ಮ ಬುರುಡೆ ಬಿಟ್ಟಿದ್ದಕ್ಕೆ ಸಾವಿರಾರು ಮಂದಿ ತಾವು ಸಾಕಿದ ನಾಯಿಗಳನ್ನೆಲ್ಲ ಬೀದಿಗೆಸೆದರು. ರೊಚ್ಚಿಗೆದ್ದ ಪ್ರಾಣಿ ದಯಾ ಸಂಘದವರು ಶರ್ಮನ ಮನೆಗೇ ನುಗ್ಗಿ ಅಟ್ಟಾಡಿಸಿ ಹೊಡೆದರು. ಒದೆ ತಿಂದ ಶರ್ಮ ತನ್ನ ವರಸೆ ಬದಲಾಯಿಸಿ ನಾಯಿ ನಾರಾಯಣ, ಸಾಕ್ಷಾತ್ ದತ್ತಾತ್ರೇಯ ಎಂದು ತಪ್ಪು ತಿದ್ದುಕೊಂಡನಾದರೂ ಈ ಬಾರಿ ನಾಯಿ ಬದಲಿಗೆ ಕ್ಷೌರಿಕರನ್ನು ಬಲಿಪಶು ಮಾಡಿಬಿಟ್ಟಿದ್ದ. ಮುತ್ತೈದೆಯರು ಸಂಜೆ ದೀಪ ಹಚ್ಚಿದ ಮೇಲೆ ಕ್ಷೌರಿಕರ ಮುಖ ನೋಡೋದೇ ಅಪಶಕುನ ಎಂದುಬಿಟ್ಟ.

ಇದರಿಂದ ಸಿಟ್ಟಿಗೆದ್ದ ಸವಿತಾ ಸಮಾಜದ ಯುವಕರು ಸುವರ್ಣ ವಾಹಿನಿಯ ಕಚೇರಿಗೇ ನುಗ್ಗಿ ಶರ್ಮನನ್ನು ಹುಡುಕಾಡಿದರೆ ಮೊದಲೇ ಇದರ ವಾಸನೆ ಹಿಡಿದಿದ್ದ ಶರ್ಮ ಹಿಂಬಾಗಿಲಿಂದ ಎಸ್ಕೇಪಾಗಿದ್ದ. ಸಿಕ್ಕಿದ್ದರೆ ಆವತ್ತೂ ಒದೆ ಬೀಳುತ್ತಿತ್ತು. ಹುಷಾರಾದ ಸುವರ್ಣ ಟೀವಿಯವರೂ ನಯವಾಗೇ ಶರ್ಮನನ್ನು ಹೊರಹಾಕಿದ್ದಾಯ್ತು. ಈಗ 'ಝೀ ಕನ್ನಡ'ದ ಕರ್ಮ!

ಶಿವನಿಗೆ ಬಿಲ್ವಾರ್ಚನೆ ಬೋರಾಗಿದೆ ಎಂದು ಈತನಿಗೆ ಆದೇ ಹಿಮಾಲಯದ ತಪಸ್ವಿ ಹೇಳಿದನೋ ಅಥವಾ ಯಾರೋ ಹುಚ್ಚಾಸ್ಪತ್ರೆಯ ಗಿರಾಕಿಯೊಬ್ಬನನ್ನು ಹಿಮಾಲಯದ ಸಂತನೆಂದು ಈತ ಭ್ರಮಿಸಿದ್ದಾನೋ ಗೊತ್ತಿಲ್ಲ. ಗಿಡಗಂಟೆಯ ಚಿಗುರು ಶಿವಪರಮಾತ್ಮನಿಗೆ ಪ್ರಿಯವಾಗಿದ್ದೇ ಆದರೆ ಅದನ್ನು ಕನಿಷ್ಠ ಶರ್ಮನಾದರೂ ಪ್ರಾಕ್ಟಿಕಲ್ ಆಗಿ ಆಚರಿಸಿರಬೇಕಲ್ಲವೆ?


ಇಷ್ಟು ದಿನ ಶಿವನಿಗೆ ಚಿಗುರು ಮುಡಿಸಿದ್ದಕ್ಕೆ ಸಂತೃಪ್ತನಾದ ಆ ಭಗವಂತ ಧನಕನಕ ನೀಡದೇ ಹೋದರೂ ಕನಿಷ್ಠ ಶರ್ಮನ ಹೊಟ್ಟೆ ಬೊಜ್ಜನ್ನಾದರೂ ಕರಗಿಸಬೇಕಿತ್ತಲ್ಲವೆ? ಹಾಳಾಗಲಿ ಇಂಥ ಶರ್ಮನನ್ನು ಮದುವೆಯಾಗುವಂತೆ ಯಾರಾದರೂ ಬ್ರಾಹ್ಮಣ ಕನ್ನೆಗೆ ಆ ದೇವರು ಧೈರ್ಯ ವನ್ನಾದರೂ ತುಂಬಬೇಕಿತ್ತು. ಬಂಡಲ್ ಜ್ಯೋತಿಷ್ಯ ಹೇಳಿಕೊಂಡು ಹೊಟ್ಟೆ ಹೊರೆಯುವ ದುರ್ಗತಿಯಂತೂ ಖಂಡಿತ ಇರುತ್ತಿರಲಿಲ್ಲ, ಇದ್ಯಾವುದೂ ಆ ದೇವರು ಕರುಣಿಸದೇ ಹೋದರೂ ನಿಜಕ್ಕೂ ಶರ್ಮ ಹೇಳುವಂತೆ ಆ ದೇವರೇನಾದರೂ ಇದ್ದಿದ್ದೇ ಆಗಿದ್ದರೆ ಕನಿಷ್ಠ ಪರಿ[...] ಕಾಳಜಿಯಿಂದಾದರೂ ಗಿಡಗಂಟೆಗಳ ಚಿಗುರನ್ನು ಚ[...] ನಿಸರ್ಗಕ್ಕೇ ಕಂಟಕವಾದ ಇಂಥ ವಿನಾಶವನ್ನಂ[...] ಹೇಳಿಸುತ್ತಿರಲಿಲ್ಲ.

ಶಿವರಾತ್ರಿಗೆಂದು ಒಂದು ಗಿಡದ ಚಿಗುರನ್ನು ಚಿವುಟ[...] ಅದು ಮತ್ತೆ ಚಿಗುರುವುದು ಮುಂದಿನ ಶಿವರಾತ್ರಿ ಹೊ[...] ಪ್ರತಿ ವರ್ಷ ಈ ರೀತಿ ಮೊಳೆತ ಚಿಗುರನ್ನೆಲ್ಲ ಶಿ[...] ಹೆಸರಲ್ಲಿ ಚಿವುಟುತ್ತಾ ಹೋದರೆ ಯಾವುದೇ ಊ[...] ಯಾವೊಂದು ಮರಗಿಡವೂ ಉಳಿಯುವುದೇ ಇಲ್ಲ. ಯ[...] ದೇವರಾದರೂ ಇಂಥ ಕಂಟಕ ಪೂಜೆಯನ್ನು ಬಯಸ[...] ದುಂಟಾ? ನಿಜಕ್ಕೂ ದೇವರಿದ್ದಿದ್ದೇ ಆಗಿದ್ದರೇ [...] ನಿಸರ್ಗನಾಶಕ್ಕೆ ಕಾರಣನಾದ ಶರ್ಮನನ್ನು ನಾಶ ಮಾಡ[...] ಬಿಡುತ್ತಾನಾ?

ಮೊನ್ನೆ ಶಿವರಾತ್ರಿಯ ದಿನ ಶರ್ಮ ಚಿಗುರು ಪೂಜೆ[...] ದುಷ್ಟಾಲೋಚನೆ ಬಿತ್ತುತ್ತಿದ್ದಂತೆ ಪಾಲಿಕೆಯ ಅರಣ್ಯ ಸಿಬ್[...] ಆಗಷ್ಟೇ ಫುಟ್‌ಪಾತ್ ಅಗಲಕ್ಕೂ ನೆಟ್ಟಿದ್ದ ಗಿಡಗಳ ಚಿಗು[...] ಮೂರ್ಖ ಭಕ್ತಾದಿಗಳ ಪಾಲಾಗಿದೆ. ಅವಿನ್ನೂ ಚಿಗುರುವ[...] ಯಾವ ಕಾಲಕ್ಕೊ? ಅರಣ್ಯ ಇಲಾಖೆ ಈಗಲಾದರೂ ಅ[...] ನಾಶಕ್ಕೆ ಕರೆಕೊಟ್ಟ ಶರ್ಮನನ್ನು ರುಬ್ಬಿ ಲಾಕಪ್ಪಿಗೆ ಹಾಕಬೇ[...] ನರಸಿಂಹಯ್ಯ ಬದುಕಿದ್ದರೆ ಏನು ಮಾಡುತ್ತಿದ್ದರೊ. ಕ[...] ಪರಿಸರವಾದಿಗಳಾದರೂ ಈತನ ವಿರುದ್ಧ ಪೊಲೀಸ[...] ದೂರು ಕೊಡಬೇಕು. ಪರಿಸರಕ್ಕೆ, ನಾಡಿಗೆ ಕೊನೆಗೆ ಕಾಡಿ[...] ಕಂಟಕನಾದ ಶರ್ಮನನ್ನು ಸರ್ಕಾರ ಇನ್ನೂ [...] ಸಹಿಸಿಕೊಂಡಿದೆ?

ಜ್ಯೋತಿಷಿಯೊಬ್ಬ ಹೇಗೆ ಪಿಡುಗಾಗಿ ಪರಿಣಮಿ[...] ತ್ತಾನೆಂಬುದಕ್ಕೆ ಇದು ಮತ್ತೊಂದು ಉದಾಹರಣೆಯಷ್[...]

ಚಿಕ್ಕಮಗಳೂರು: ಎಂಆರ್‌ಪಿಎಲ್ ಇಂಧನ ಕಳ್ಳರೊಂದಿಗೆ ಪೊಲೀಸ್ ಶಾಮೀಲು?



ಸ್ವಾಮಿ

ಚಿಕ್ಕಮಗಳೂರು ಜಿಲ್ಲೆಯ ಮೂವರು ಖಾಕಿ ಖದೀಮರು ಕಳ್ಳತನಕ್ಕಿಳಿದಿದ್ದಾರೆ. ಹಾಗೊಂದು ಖಚಿತ ವರ್ತಮಾನ ಇನ್ನೊಂದೆರಡು ದಿನಗಳಲ್ಲಿ ಇಡೀ ಜಿಲ್ಲೆಯನ್ನು ಬೆಚ್ಚಿ ಬೀಳಿಸಲಿದೆ. ಇಂಧನ ಕಳ್ಳರ ತಂಡದೊಂದಿಗೆ ನಿಕಟ ಸಂಪರ್ಕವಿಟ್ಟುಕೊಂಡಿರುವ ಕೊಳುಬಾಕ ಖಾಕಿಗಳ ಜಾತಕ ಬಯಲಾಗಲಿದೆ.

ಮೂಡಿಗೆರೆ ತಾಲ್ಲೂಕಿನ ಗೋಣಿಬೀಡು ಸಮೀಪದ ಹಿರೇಶಿಗರ ಎಂಬಲ್ಲಿ ಪೆಟ್ರೋಲ್ ಮತ್ತು ಡಿಸೆಲ್ ಕಳ್ಳತನ ನಡೆದಿದೆ. ಅದು ಮಂಗಳೂರಿನಿಂದ ಬೆಂಗಳೂರಿಗೆ ಸಾಗಿಸುವ ಬೃಹತ್ ಕೊಳವೆ ಮಾರ್ಗದಿಂದ ಎಂಬುದು ಅಚ್ಚರಿಗೆ ಕಾರಣ. ಎಂಆರ್‌ಪಿಎಲ್ ಕಂಪೆನಿಯ ಸುಪರ್ದಿಯಲ್ಲಿರುವ ಈ ಇಂಧನ ಸಾಗಾಣಿಕೆ ಎಂಟು ವರ್ಷಗಳ ಹಿಂದೆ ಶುರುವಾಗಿತ್ತು, ಸುಮಾರು 350ಕ್ಕೂ ಅಧಿಕ ಕಿಲೋ ಮೀಟರ್ ಉದ್ದವಿರುವ ಕೊಳವೆ ಮಾರ್ಗವಿದು. ಮಂಗಳೂರು ಬಂದರಿನಿಂದ ಒಮ್ಮೆ ಪೆಟ್ರೋಲ್ ಮತ್ತೊಮ್ಮೆ ಡೀಸೆಲ್ ಅನ್ನು ಈ ಮಾರ್ಗದಲ್ಲಿ ದಿನಂಪ್ರತಿ ಸಾಗಿಸ ಲಾಗುತ್ತದೆ. ಕೊಳವೆ ಮಾರ್ಗದ ಉದ್ದಕ್ಕೂ ಅಲ್ಲಲ್ಲಿ ಮಾಪನ ಕೇಂದ್ರಗಳನ್ನು ನಿರ್ಮಿಸಲಾಗಿದೆ. ಕಬ್ಬಿಣ, ಉಕ್ಕು, ಸಿಮೆಂಟ್ ಮತ್ತಿತರ ಕಟ್ಟುಮಸ್ತಾದ ಕಚ್ಚಾ ವಸ್ತುಗಳಿಂದ ಪೈಪ್‌ಗಳನ್ನು ತಯಾರಿಸಲಾಗಿದೆ. ಇಪ್ಪತ್ತು ಅಡಿ ಆಳದಲ್ಲಿ ಪೈಪ್‌ಗಳನ್ನು ಹೂಳಲಾಗಿದೆ. ಈ ಕೊಳವೆ ಮಾರ್ಗಕ್ಕೆ ಕಾವಲುಗಾರರಿದ್ದಾರೆ. ಹತ್ತು ಕಿಲೋಮೀಟರ್‌ಗೆ ಒಂದು ಕಾವಲು ಕೇಂದ್ರವಿದೆ. ಕೊಳವೆ ಮಾರ್ಗದಲ್ಲಿ ವ್ಯತ್ಯಯವಾದರೆ ಕೂಡಲೆ ತಿಳಿಯುವ ಆಧುನಿಕ ಉಪಕರಣಗಳಿವೆ. ಆದರೂ ಕೊಳವೆಯನ್ನು ಕೊರೆದು ಹದಿನೆಂಟು ಸಲ ಕಳ್ಳತನ ಮಾಡಲಾಗಿದೆ!

ಕಳೆದೆರಡು ತಿಂಗಳಿನಿಂದ ಹಿರೇಶಿಗರ ಎಂಬಲ್ಲಿ ಎಂಆರ್‌ಪಿಎಲ್ ಕೊಳವೆಯಿಂದ ಇಂಧನ ಕಳ್ಳತನ ನಡೆಯುತ್ತಿದೆ. ಅದು ಕಂಪೆನಿಯ ಉಪಕರಣದಲ್ಲಿ ಪತ್ತೆಯಾಗಿದೆ. ಆರಂಭದಲ್ಲಿ ಎಲ್ಲೆಂಬುದು ತಿಳಿದಿರಲಿಲ್ಲ, ಹಾಗೆ ಹುಡುಕಿ ಬಂದ ಕಂಪೆನಿಯ ಕೆಲಸಗಾರರಿಗೆ ಸಿಕ್ಕಿದ್ದು ಗೋಣಿಬೀಡು ಬಳಿಯ ಹಿರೇಶಿಗರ ಎಂಬ ಸ್ಥಳ. ಹೇಮಾವತಿ ನದಿಯ ಮಧ್ಯದಿಂದ ಜಪಾನ್ ಮಾದರಿಯ ಅತ್ಯಾಧುನಿಕ ಡ್ರೈರಿಂಗ್ ಸೆಟ್‌ನಿಂದ ಉಕ್ಕಿನ ಕೊಳವೆಯನ್ನು ಕೊರೆದಿದ್ದಾರೆ. ಅದು ಎಂಆರ್‌ಪಿಎಲ್ ಇಂಜಿನಿಯರ್ ಪ್ರಕಾಶ್ ಎಂಬಾತನ ಪ್ಲಾನಿಂಗ್ ಪ್ರಕಾರವೇ ನಡೆದಿದೆ ಅನ್ನುವುದು ವಿಶೇಷ. ಆತನೊಂದಿಗೆ ಸಹಕರಿಸಿದ್ದು ಅರೇಹಳ್ಳಿಯ ಬಿಎಸ್‌ಪಿ ಪ್ರಮುಖ ಮುಖಂಡ ರಾಜುಶೆಟ್ಟಿ ಮತ್ತು ಸತೀಶ್.




ವೇದಮೂರ್ತಿ

ಈ ರಾಜುಶೆಟ್ಟಿಯೇನು ಕಡಿಮೆ ಆಸಾಮಿಯಲ್ಲ. ಹಿಂದೊಮ್ಮೆ ಅರೆಹಳ್ಳಿಯಲ್ಲಿ ಇದೇ ಪೈಪ್‌ಲೈನ್ ತುಂಡರಿಸಿ ಸಿಕ್ಕಿ ಬಿದ್ದು ಜೈಲು ಪಾಲಾಗಿದ್ದ ಮನುಷ್ಯ. ಹೊರ ಬಂದವನು ಮತ್ತದೇ ಚಾಳಿ ಮುಂದುವರಿಸಿದ್ದ. ಮೂಡಿಗೆರೆ ಬಳಿಯ ಗೌಡಹಳ್ಳಿ ಎಂಬಲ್ಲಿ ಎಂಆರ್‌ಪಿಎಲ್ ಪೈಪ್ ಲೈನ್‌ಅನ್ನು ಮತ್ತೆ ಕೊರೆದು ಅಮಾಯಕರನ್ನು ಸಿಕ್ಕಿಸಿ ತಾನು ಕೇಸಿನಿಂದ ಬಚಾವಾಗಿದ್ದ. ಅಲ್ಲಿಂದ ಸ್ಥಳ ಬದಲಾಯಿಸಿ ಈತ ಬಂದಿದ್ದು ಜನವಸತಿಯಿಲ್ಲದ ಹಿರೇಶಿಗರಕ್ಕೆ.

ರಾಜುಶೆಟ್ಟಿ ಮತ್ತವನ ಪಟಾಲಂ ಜೊತೆ ಕೈಜೋಡಿಸಿದ್ದು ಸ್ಥಳೀಯ ಖದೀಮರ ಹಿಂಡು. ಪಾಲಾಕ್ಷ ಯಾನೆ ವಿಜಯಕುಮಾರ್ ಎಂಬಾತನ ಮನೆಯಂಗಳಕ್ಕೆ ನಲ್ಲಿ ನೀರಿನಂತೆ ಹೇಮಾವತಿ ನದಿಯಿಂದ ಡೀಸೆಲ್ ಮತ್ತು ಪೆಟ್ರೋಲ್ ಸರಬರಾಜಾಗಿದೆ. ಅದಕ್ಕಾಗಿ ಪಾಂಡು, ತುಳಸಿದಾಸ ಯಾನೆ ತುಳಸಿ ಪ್ರಸಾದ್, ಸೀಗೆಹಳ್ಳಿ ಸತೀಶ್, ಸೂರಿ, ಮುರಳಿ, ರಾಜು, ಹರೀಶ್, ಇಂಜಿನಿಯರ್ ಪ್ರಕಾಶ್, ಜಿಜಯೇಂದ್ರ, ಮಧುಸೂದನ, ನಾಗೇಶ್ ಶೆಟ್ಟಿ, ಮದನ ಎಂಬ ಕಳ್ಳರ ಹಿಂಡೊಂದು ಶ್ರಮಿಸಿದೆ. ಹಿರೇಶಿಗರದ ಹೇಮಾವತಿ ನದಿ ಮಧ್ಯದಿಂದ ಪಾಲಾಕ್ಷನ ಮನೆ ತನಕ ಭರೋಬ್ಬರಿ ಆರು ನೂರು ಮೀಟರ್ ಬ್ಲಾಕ್ ಪೈಪ್‌ಅನ್ನು ನೆಲದಡಿ ಬಳಸಿದ್ದರು.

ಅದು ಎರಡು ಇಂಚಿನ ಪೈಪು. ಇದನ್ನು ಹದಿನೈದು ದಿನಗಳ ಪರಿಶ್ರಮದಿಂದ ನೆಲದಡಿ ಹೂತಿದ್ದಾರೆ. ಅದಾದನಂತರ ಅವರು ಕಳೆದ ಎರಡು ತಿಂಗಳ ಅವಧಿಯಲ್ಲಿ ಆ ಪೈಪ್ ಮೂಲಕ ಕದ್ದದ್ದು 56 ಕೋಟಿ ರೂ.ಗಳ ಇಂಧನವನ್ನು! ಹೀಗೆ ಕದ್ದ ಇಂಧನವನ್ನು ಸಾಗಿಸುವಾಗ ಈ ಕಳ್ಳರ ತಂಡ ಚಾಣಾಕ್ಷತೆ ತೋರಿದೆ. ಹತ್ತು ಚಕ್ರಗಳ ಟಿಪ್ಪರ್‌ನೊಳಗೆ ಇಂಧನವನ್ನು ಸಾಗಿಸಲು ಟ್ಯಾಂಕರ್ ಮಾಡಿಕೊಂಡಿದ್ದಾರೆ. ಅದರ ಮೇಲೆ ಮರಳು ತುಂಬಿ ಕಳಿಸಿದ್ದಾರೆ. ಇಂಥಾ ಖದೀಮರಿಗೆ ಸಾಥ್ ನೀಡಿದವರು ಯಾರು ಗೊತ್ತಾ? ಮೂಡಿಗೆರೆ ಸರ್ಕಲ್ ಇನ್ಸ್‌ಪೆಕ್ಟರ್ ಜಿ.ಟಿ.ಸ್ವಾಮಿ, ಗೋಣಿಬೀಡು ಸಬ್‌ಇನ್ಸ್‌ಪೆಕ್ಟರ್ ಸುನೀಲ್ ಕುಮಾರ್ ಮತ್ತು ಚಿಕ್ಕಮಗಳೂರು ಸರ್ಕಲ್ ಇನ್ಸ್‌ಪೆಕ್ಟರ್ ಸಿದ್ದಯ್ಯ!



ಸಿದ್ದಯ್ಯ

ಅಕ್ರಮ ಪೆಟ್ರೋಲ್ ತುಂಬಿದ್ದ ಎರಡು ಟ್ಯಾಂಕರ್‌ಗ[...] ಜಿ.ಟಿ.ಸ್ವಾಮಿ ಖುದ್ದಾಗಿ ಪೊಲೀಸ್ ಜೀಪಿನಲ್ಲಿ ಫೆ[...] ರಂದು ಕೊಟ್ಟಿಗೆಹಾರ ಅರಣ್ಯ ತಪಾಸಣೆ ಗೇಟು ದಾ[...] ಬಂದಿರುವುದು ದೃಢಪಟ್ಟಿದೆ. ಮಂಗಳೂರು ಮ[...] ಚಿಕ್ಕಮಗಳೂರು ಸೇರಿದಂತೆ ರಾಜ್ಯದ ವಿವಿಧ ಜಿಲ್ಲೆಗ[...] ಇಂಧನವನ್ನು ಸಾಗಿಸಲು ಈ ಪೊಲೀಸ್ ಅಧಿಕಾರಿ[...] ತಂಡ ಸಂಪೂರ್ಣ ಸಹಕರಿಸಿದೆ ಎಂಬುದರಲ್ಲಿ ಅನುಮ[...] ವಿಲ್ಲ. ಇಂಧನ ಕಳ್ಳತನದಲ್ಲಿ ಕೆ.ಎ.04 5061 ಸಂಖ್ಯೆ[...] ಹರೀಶ್ ಎಂಬಾತನಿಗೆ ಸೇರಿದ 800 ಕಾರು, ಎಕ್ಸಿ[...] ಕೆ.ಎ. 04 5524 ಸಂಖ್ಯೆಯ ಕಾರನ್ನು ಬಳಸಲಾಗಿ[...] ಇವೆಲ್ಲವೂ ಅಡೆತಡೆಯಿಲ್ಲದೇ ನಡೆಯಲು ಖಾಕಿಪಿಂಡಗ[...] ಕಳ್ಳರ ತಂಡಕ್ಕೆ ರಕ್ಷಣೆ ನೀಡಿವೆ. ಯಾವಾಗ ಖದೀ[...] ಖಾಕಿ ಪಿಂಡಗಳು ಇಂಧನ ಕಳ್ಳತನದಲ್ಲಿ ಸಿಕ್ಕಿ ಬೀಳ[...] ಮುನ್ಸೂಚನೆ ದೊರೆಯಿತೋ ಚಿಕ್ಕಮಗಳೂರಿನ ಹಿರಿ[...] ಖಾಕಿಗಳು ಅವರ ರಕ್ಷಣೆಗೆ ಮುಂದಾಗಿಬಿಟ್ಟಿದ್ದಾರೆ.

ಆರಂಭದಲ್ಲಿ ಸಿಕ್ಕಿಬಿದ್ದವನು ಮಧುಸೂದನ. ಅಲ್ಲಿಂದ[...] ಪ್ರಕರಣವನ್ನು ಮುಚ್ಚಿ ಹಾಕುವ ಪ್ರಯತ್ನಗ[...] ನಡೆಯತೊಡಗಿದವು. ಅದೇ ಹೊತ್ತಿಗೆ ಡಿವೈಎಸ್[...] ವೇದಮೂರ್ತಿಯವರ ಎಂಟ್ರಿಯಾಗಿದೆ. ಜಿಲ್ಲೆಯ ಮಟ್[...] ಇವರು ಖಡಕ್ ಪೋಲಿಸ್ ಅಧಿಕಾರಿ. ಅವರು ಬಂಧಿ[...] ಮಧುಸೂದನನ ವಿಚಾರಣೆ ನಡೆಸಿದ್ದಾರೆ. ಬಳಿಕ ಒಂದೊಂ[...] ರಹಸ್ಯಗಳನ್ನು ಜಾಲಾಡತೊಡಗಿದ್ದಾರೆ. ಆಗ ಸರ್ಕ[...] ಇನ್ಸ್‌ಪೆಕ್ಟರ್ ಜಿ.ಟಿ. ಸ್ವಾಮಿ, ಸಿದ್ದಯ್ಯ, ಸುನೀ[...] ಕುಮಾರ್‌ರೆಂಬ ಮೂರ್ಖ ಖಾಕಿ ಪಿಂಡಗಳ ಜನ್ಮ ಕುಂಡ[...] ಸಿಕ್ಕಿದೆ. ಪ್ರಕರಣದ ಮಾಸ್ಟರ್ ಮೈಂಡ್ ರಾಜುಶೆಟ್ಟಿ ಮ[...] ಸತೀಶ್‌ರೊಂದಿಗೆ ಈ ಮೂವರು ಖಾಕಿಗಳು ಕಳೆದೆರ[...] ತಿಂಗಳುಗಳಿಂದ ನಿರಂತರ ದೂರವಾಣಿ ಸಂಪರ್ಕದಲ್ಲಿರುವು[...] ಪತ್ತೆಯಾಗಿದೆ. ವಿಷಯ ಲೋಕಾಯುಕ್ತ ಸಂತೋಷ್ ಹೆ[...] ತನಕ ಮುಟ್ಟಿದೆ.

ಈ ಹಗರಣದಲ್ಲಿ ಸಿಕ್ಕಿಬೀಳುವ ಭೀತಿಯಿಂದ ಖಾಕಿಗ[...] ಮೂಡಿಗೆರೆ ಎಂಎಲ್‌ಎ ಎಂ.ಪಿ.ಕುಮಾರಸ್ವಾಮಿ ಮೇ[...] ಒತ್ತಡ ತಂದು ಪ್ರಕರಣವನ್ನು ಮುಚ್ಚಿ ಹಾಕಲು ಯತ್ನಿಸಿದ್ದಾ[...] ಬಳಿಕ ಅರಣ್ಯ ವಸತಿ ವಿಹಾರ ಧಾಮದ ಅಧ್ಯ[...] ಎಂ.ಕೆ.ಪ್ರಾಣೇಶ್‌ರನ್ನು ಕಾಣಲು ಹೋಗಿ ಮುಖ[...] ಉಗಿಸಿಕೊಂಡಿದ್ದಾರೆ. ಸಾಧ್ಯವಿಲ್ಲ ಎನ್ನಿಸಿದಾಗ ಡಿವೈಎಸ್[...] ವೇದಮೂರ್ತಿ ಬಳಿ ಹೋಗಿ ಬೇಡಿಕೊಂಡಿದ್ದಾರೆ. ಕಡಕ[...] ವೇದಮೂರ್ತಿ ಜಪ್ಪಯ್ಯ ಅಂದಿಲ್ಲ. ಪ್ರಕರಣದ ಕಟ್ಟ ಕಡೆಯ[...] ಆರೋಪಿಯನ್ನು ಬಿಡದೆ ಬಂಧಿಸುವುದಾಗಿ ಎದೆ ಸೆಟೆ[...] ನಿಂತಿದ್ದಾರೆ.

ಸದ್ಯದ ಮಟ್ಟಿಗೆ ಹದಿನಾಲ್ಕು ಮಂದಿಯ ಮೇಲೆ[...] ಪ್ರಥಮ ಮಾಹಿತಿ ವರದಿ ಸಿದ್ಧಪಡಿಸಲಾಗಿದೆ. ಪ್ರಭಾವಿಗಳ[...] ದಂಡು ಮಾತ್ರ ತಪ್ಪಿಸಿಕೊಳ್ಳಲು ಹೆಣಗಾಟ ನಡೆಸುತ್ತಿದೆ[...] ಇದು ಗಂಭೀರ ವಿಷಯವಾಗಿರುವುದರಿಂದ ಉನ್ನತ ಮಟ್ಟದ[...] ತನಿಖೆ ನಡೆಸಿದರೆ ಬಹುಶಃ ಎಲ್ಲಾ ಬದ್ಮಾಶ್ ಖಾಕಿ[...] ತಿಮಿಂಗಿಲಗಳು ಬಲೆಗೆ ಬೀಳುವುದು ಶತಸ್ಸಿದ್ಧ.

• ಅಜೀಜ್ ಕಿರುಗುಂದ

ಯೋಗ್ಗರ ಕೈಯಲ್ಲಿ ರಾಜಕೀಯ ಅಧಿಕಾರವೂ, ನ ಕೈಲಿ ದೇವರು, ಭ್ರಷ್ಟರ ಹಟ್ಟೋಟಿಯಲ್ಲಿ ಸರ್ಕಾರಿ ಹೇಗೆ ಸಿಲುಕಿ ನರಳುತ್ತಿವೆಯೋ ಅದರ ವರೆದ ಭಾಗವಾಗಿ ಈಗ ಕನ್ನಡತನವೂ ಕಳ್ಳನೊಬ್ಬನ ಲುಕಿದೆ.

ಳಗಾವಿಯಲ್ಲಿ ನಡೆಯಲಿರುವ ಎರಡನೇ ವಿಶ್ವ ಕನ್ನಡ ನದ ಉದ್ಘಾಟನೆ ಇನ್ಫೋಸಿಸ್‌ನ ನಾರಾಯಣ ಕೈಯಲ್ಲಿ ನಡೆಯಲಿದೆ. ನಿರೀಕ್ಷಿಸಿದಂತೆ ಈ ನಾ. ರ್ತಿಯ ಪರ-ವಿರೋಧದ ಚರ್ಚೆಯೂ ಈಗ ವಾಗಿದೆ. ಬಹಳ ಮುಖ್ಯವಾಗಿ ಕನ್ನಡತನ ನೆಂಬುದರ ಹೊಸ ವ್ಯಾಖ್ಯಾನಗಳು ತೇಲಿಬರುತ್ತಿವೆ. ಕ್ರಿಯೆಯಲ್ಲಿ ಅಸಲಿ ಕನ್ನಡ ಪ್ರೇಮಿ ಯಾರು? ಕದ ಬಗೆಗಿನ ಕಾಳಜಿಯೆಂದರೆ ಏನೆಂಬುದರ ಹೊಸ ನೆಯೊಂದನ್ನು ಇದು ಹುಟ್ಟು ಹಾಕುತ್ತಿದೆ.

ಜೆಪಿಗಳು ಕರ್ನಾಟಕದಲ್ಲಿ ಜನರನ್ನು ಲಿಂಗಾಯತ ಲಿಂಗಾಯತೇತರ ಎಂದು ವಿಭಜಿಸಿ ತಮ್ಮ ಬುಡ ಡಿಕೊಂಡಿದ್ದರು. ಈ ವಿಭಜನೆಯ ಸಾರ್ವಜನಿಕರಲ್ಲಿ, ಂಗದಲ್ಲಿ, ಶಾಸಕಾಂಗದಲ್ಲಿ, ಮಠಗಳಲ್ಲಿ ಈಗ ಹೊಕ್ಕಿದೆ. ಡೈರಿ ಹಾಲಿಗೆ ಎರಡು ರೂಪಾಯಿ ಹಧನ ನೀಡುವ ಆಮಿಷವೊಡ್ಡಿ ಇದೇ ಬಿಜೆಪಿ ಕದ ಗ್ರಾಮಾಂತರ ಪ್ರದೇಶಗಳಲ್ಲಿ ತನ್ನ ಪ್ರಭಾವ ಳ್ಳಲು ಯತ್ನಿಸುತ್ತಾ ಅಲ್ಲೂ ಜನರನ್ನು ವಿಭಜಿಸಿತ್ತು. ಜೆಟ್ ಹೆಸರಿನಲ್ಲಿ ರೈತ ನಾಯಕ ನಂಜುಂಡಸ್ವಾಮಿ ಲ್ಲಿ ಯಾತರದ್ದೋ ಯೋಜನೆ ಪ್ರಕಟಿಸಿ ಕೊಂಚ ಕೆಯಿದ್ದ ರೈತ ಸಮುದಾಯವನ್ನು ಈಗ ವಿಭಜಿಸಲು ದೆ.

ವೆಲ್ಲದರ ಮುಂದುವರೆದ ಭಾಗವಾಗಿಯೇ ಈಗ ಣ ಮೂರ್ತಿ ಕನ್ನಡತನದ ಪ್ರತಿನಿಧಿಯೆಂಬಂತೆ ನ್ನಡಿಗನೆಂಬಂತೆ ಜನರ ಮೇಲೆ ಹೇರಲ್ಪಡುತ್ತಿದ್ದಾನೆ. ನೆಗೆ ಇಲ್ಲೂ ಸಂಭವಿಸಲಿರುವುದು ವಿಭಜನೆಯೇ ವೇರೇನೂ ಅಲ್ಲ.

ವಿಶ್ವ ಸಮ್ಮೇಳನ ಕಳ್ಳನ ಕೈಗೆ ಕನ್ನಡ

ನಾ.ಮೂರ್ತಿ ಪರವಾಗಿ ಈಗಾಗಲೇ ಕೋಮುವಾದಿ ದಿನಪತ್ರಿಕೆಗಳು, ಪ್ರಚಾರ ಆರಂಭಿಸಿವೆ. ಇಂಟರ್‌ನೆಟ್, ಬ್ಲಾಗ್‌ಗಳಲ್ಲಿ ಜಾಣ ಚಿಡ್ಡಿ ಬ್ರಾಹ್ಮಣರು ದಡ್ಡ ಶೂದ್ರರು "ನಾರಾಯಣ ಮೂರ್ತಿ ಸಮ್ಮೇಳನ ಯಾಕೆ ಉದ್ಘಾಟಿಸ ಬಾರದು?" ಎಂದು ವಾದ ನಡೆಸುತ್ತಿದ್ದಾರೆ. ಕನ್ನಡ ಪ್ರಭಾದಲ್ಲಿ ಪ್ರತಾಪ ಸಿಮ್ಮನು ನಾ.ಮೂರ್ತಿ ರಾಷ್ಟ್ರಗೀತೆಗೂ ಅವಮಾನ ಮಾಡಿದ್ದ ಘಟನೆಯನ್ನೇ ಪ್ರಸ್ತಾಪಿಸದೆ ಅವರ ಪರವಾಗಿ ಭರ್ಜರಿ ಭಂಡವಾದ ಮಂಡಿಸಿದ್ದಾನೆ.

ಭೂಗಳ್ಳ-ತೆರಿಗೆ ಕಳ್ಳ ಮೂರ್ತಿ

ಈ ನಾರಾಯಣ ಮೂರ್ತಿ ಕರ್ನಾಟಕದಲ್ಲಿ ಹುಟ್ಟಿ ದ್ದಾನೆಂಬುದನ್ನು ಬಿಟ್ಟರೆ ಅವನಿಗೂ ನೈಜ ಕನ್ನಡತನ ಹಾಗೂ ಕರ್ನಾಟಕದ ಪರ ಕಾಳಜಿಗಳಿಗೂ ಸಂಬಂಧವಿಲ್ಲ. ಹಾಲಿ ಈತ ನಡೆಸುತ್ತಿರುವ ವ್ಯಾಪಾರಕ್ಕಂತೂ ಕನ್ನಡ ಬೇಕೇ ಇಲ್ಲ. ಕನ್ನಡಿಗರೂ ಬೇಕೇ ಬೇಕು ಎಂತಲೂ ಇಲ್ಲ. ಹಾಗಾಗಿ ಬೆಂಗಳೂರು, ಮೈಸೂರು, ಮಂಗಳೂರುಗಳಲ್ಲಿ ಇನ್ಫೋಸಿಸ್ ಕಂಪನಿಯ ಶಾಖೆಗಳಿದ್ದರೂ ಅಲ್ಲೆಲ್ಲೂ ಶೇ. 20 ರಷ್ಟು ಕನ್ನಡಿಗರು ಸಿಗುವುದಿಲ್ಲ. ನಾ.ಮೂರ್ತಿಯ ದಂಧೆಯ ಏಳ್ಗೆಗಾಗಿ ತಮ್ಮ ಜಮೀನುಗಳನ್ನು ಕಳೆದುಕೊಂಡ ನೂರಾರು ಕನ್ನಡ ರೈತರ ಕುಟುಂಬಗಳ ಯಾರೊಬ್ಬರಿಗೂ ಇನ್ಫೋಸಿಸ್ ಚಿಕ್ಕ ಉದ್ಯೋಗಗಳನ್ನೂ ಬಿಡುವುದಿಲ್ಲ. ಇವನ ದಂಧೆಗೆ ಕನ್ನಡ ಭಾಷೆ, ಸಂಸ್ಕೃತಿಗಳ ಬೇರುಗಳೇ ಇಲ್ಲ. ಇದೊಂದು ರೀತಿಯ ಕಳೆ ಸಸ್ಯದ ರೀತಿ. ಯಾವ ನೀರಿನಲ್ಲಿ ಎಸೆದರೂ ತೇಲಿಕೊಂಡೇ ಇರಬಲ್ಲದು. ಹಾಗಾಗಿಯೇ ನಾ.ಮೂರ್ತಿ ಭಂಡತನದಿಂದ ಕನ್ನಡ ಭಾಷೆಯ ಅನಗತ್ಯತೆಯ ಬಗ್ಗೆ, ರಾಷ್ಟ್ರಗೀತೆ ಉಂಟು ಮಾಡುವ ಮುಜುಗರದ ಬಗ್ಗೆ ಹೇಳಿಯೂ ಬಚಾವಾಗಬಲ್ಲ. ಆಶ್ಚರ್ಯ ಏನೆಂದರೆ ಇದೇ ನಾ.ಮೂರ್ತಿ ಈಗ ತೆರಿಗೆ ಕದ್ದು ಸಿಕ್ಕಿಬಿದ್ದಿದ್ದಾನೆ.

ಕೇಂದ್ರ ಸಚಿವ ಪಳನಿಯಪ್ಪನ್ ಇತ್ತೀಚೆಗೆ ಸಂಸತ್‌ನಲ್ಲಿ ಹೇಳಿಕೆ ನೀಡಿರುವ ಪ್ರಕಾರ 450 ಕೋಟಿ ರೂಪಾಯಿ ತೆರಿಗೆ ಕದ್ದಿದ್ದಾನೆ ಈ ಮಹಾನ್ ಉದ್ಯಮಿ. ಸಾಫ್ಟ್‌ವೇರ್ ಇಂಜಿನಿಯರ್‌ಗಳನ್ನು ಕೆಲಸದ ನಿಮಿತ್ತ ಆರೆಂಟು ತಿಂಗಳ ಕಾಲ ಯೂರೋಪ್ ಮತ್ತು ಅಮೆರಿಕಗೆ ಕಳಿಸಿ, ದುಡಿಸಿ ದುಡ್ಡು ಮಾಡುವ 'ಬಾಡಿ ಶಾಪಿಂಗ್' ದಂಧೆಯನ್ನೇ ಸಾಫ್ಟ್‌ವೇರ್ ರಫ್ತು ಎಂದು ಬಿಂಬಿಸಿ ತೆರಿಗೆ ರಿಯಾಯಿತಿ ಗಿಟ್ಟಿಸಿದ್ದ ಈ ಖದೀಮ. ಆದರೆ ಆದಾಯ ತೆರಿಗೆಯ 1961 ರ ಕಾಯ್ದೆ ಕಲಂ 10A/10B/10AA ಪ್ರಕಾರ ಮೂರ್ತಿ ಸರ್ಕಾರಕ್ಕೆ ಸುಳ್ಳು ದಾಖಲೆ ಕೊಟ್ಟು ವಂಚಿಸಿರುವುದು ಈಗ ಸಾಬೀತಾಗಿದೆ. ತೆರಿಗೆ ಕದಿಯುವ ಚಾಳಿ ಮೂರ್ತಿಗೆ ಹೊಸದೇನಲ್ಲ. ಈ ಹಿಂದೆ ಇನ್ಫೋಸಿಸ್ ಕಂಪನಿ ಚಂಡೀಘಡದಲ್ಲಿ SEZ ಸ್ಥಾಪಿಸುವಾಗಲೂ ನೂರಾ ಹತ್ತು ಕೋಟಿ ರೂಪಾಯಿಗಳ ತೆರಿಗೆ ವಂಚನೆ ನಡೆಸಿ ಸಿಕ್ಕಿಬಿದ್ದಿತ್ತು.

ನಾರಾಯಣ ಮೂರ್ತಿ ಇದಕ್ಕೆಲ್ಲಾ ಮುಜುಗರ ಪಡುವಷ್ಟು ಸೂಕ್ಷ್ಮಜ್ಞನಲ್ಲ. ಈತನನ್ನು ನೇರವಾಗಿ ಸರ್ಕಾರವೇ ಪ್ರಮೋಟ್ ಮಾಡುತ್ತಿರುವುದರಿಂದ ಜನಸಾಮಾನ್ಯರ, ಹೋರಾಟಗಾರರ, ಬುದ್ಧಿಜೀವಿಗಳ ವಿರೋಧವನ್ನು ಈತ ಲೆಕ್ಕಿಸುವುದೂ ಇಲ್ಲ ಎಂಬುದು ವಾಸ್ತವ.

ಆದರೆ ಈಗ್ಗೆ 25 ವರ್ಷಗಳ ಹಿಂದೆ ನಡೆದ ಮೊದಲನೇ ವಿಶ್ವ ಕನ್ನಡ ಸಮ್ಮೇಳನದಲ್ಲೂ ಪ್ರತಿಭಟನೆಗಳಾಗಿದ್ದವು. ನೂರಾರು ಜನ ಪ್ರತಿಭಟಿಸಿ ಜೈಲು ಸೇರಿದ್ದರು. ಇವತ್ತಿನ ಸಂದರ್ಭ ಅವತ್ತಿನಕ್ಕಿಂತ ತೀರಾ ಭಿನ್ನವಾಗೇನೂ ಇಲ್ಲ. ಹಾಗಾಗಿ ನಾರಾಯಣ ಮೂರ್ತಿ ಪಟಾಲಂ ಹಾಗೂ ಬಿಜೆಪಿಗಳು ಜಂಟಿಯಾಗಿ ಕನ್ನಡ ಹಾಗೂ ಕನ್ನಡತನಗಳ ಮೇಲೆ ನಡೆಸಲು ಹೊರಟಿರುವ ದೌರ್ಜನ್ಯವನ್ನು ಪ್ರತಿಭಟಿಸಬೇಕಿರುವುದೇ ಈ ಕ್ಷಣದ ತುರ್ತಾಗಿದೆ. •



ನವಬಂಡವಾಳಶಾಹಿಯ ಸುರಕ್ಷಿತ ಚಲನೆಗಾಗಿ, ಸಾವಿರ ಸಾವಿರ ಕೋಟಿಗಳ ಲಾಭದ ದುರಾಸೆಗಾಗಿ ಅವರು ಮಾತೃಭಾಷೆಯ ಸಂಹಾರಕ್ಕೆ ಕೊಡಲಿ ಎತ್ತಬಲ್ಲರು. ಸಂವಿಧಾನದ ಸಮಾಜವಾದಿ ನಿಲುವುಗಳನ್ನು ಧಿಕ್ಕರಿಸಿ ದಲಿತ-ಮತ್ತು ಕೆಳವರ್ಗಗಳ ಹಿತವನ್ನು ಮೆಟ್ಟಲು ಕಾಲೆತ್ತಬಲ್ಲರು. ಸಂವಿಧಾನಬದ್ಧ ರಾಷ್ಟ್ರೀಯ ಲಾಂಛನಗಳನ್ನು ಅವಮಾನಿಸಬಲ್ಲರು. ಇಂಥ ಮನುಷ್ಯ ವಿಶ್ವ ಕನ್ನಡ ಸಮ್ಮೇಳನವನ್ನು ಉದ್ಘಾಟಿಸಲು ಅನರ್ಹ.

ನುಡಿ ಹಂತಕ ನಾರಾಯಣ ಮೂರ್ತಿಯಿಂದ ನುಡಿಹಬ್ಬಕ್ಕೆ ಚಾಲನೆ!

ಳಗಾವಿಯಲ್ಲಿ ನಡೆಯಲಿರುವ ವಿಶ್ವ ಕನ್ನಡ ಸಮ್ಮೇಳ ನುದ್ಘಾಟನೆಗೆ ಏಕಾಏಕಿ ಕಾರ್ಪೊರೇಟ್ ದಣಿ ಣ ಮೂರ್ತಿಯವರನ್ನು ಆಹ್ವಾನಿಸುವ ಮೂಲಕ ಕ ಸರಕಾರ ನಾಡಿನ ಸಂವೇದನಾಶೀಲ ವಿಚಾರವಂತ ಳಿಗೆ ಶಾಕ್ ನೀಡಿದೆ. ಕರ್ನಾಟಕ ಏಕೀಕರಣ ಚಳವಳಿ, ಚಳವಳಿಗಳನ್ನೊಳಗೊಂಡಂತೆ ನಾಡು ನುಡಿಗಳ ತ್ತು ಏಳಿಗೆಗಾಗಿ ಜೀವ ತೇಯುತ್ತ ಬಂದ ಹಿರಿಯ ದ್ದವು. ಸಾಹಿತ್ಯ, ಸಂಗೀತ, ನಾಟಕ, ಚಿತ್ರರಂಗ, ಮೊದಲಾದ ಕ್ಷೇತ್ರದಲ್ಲಿ ಕರ್ನಾಟಕದ ಘನತೆಯನ್ನು ಮಟ್ಟದಲ್ಲಿ ಎತ್ತಿ ಹಿಡಿದ ಸಾಂಸ್ಕೃತಿಕ ವಕ್ತಾರರಿದ್ದರು. ಕರಣದ ಆಕ್ರಮಣಕ್ಕೆ ತುತ್ತಾಗಿ ನಾಶವಾಗುತ್ತಿರುವ ಕ ಭಾಷೆ, ಸಂಸ್ಕೃತಿಗಳ ಅಳಿವು ಉಳಿವುಗಳನ್ನು ವಿಶ್ವಮಟ್ಟದಲ್ಲಿ ಗಂಭೀರವಾಗಿ ಚಿಂತಿಸುತ್ತಿರುವ ರಿದ್ದರು. ಕರ್ನಾಟಕ ಸರಕಾರ ಹಾಗೂ ದ ಸ್ವಾಗತ- ಸಮಿತಿಗೆ ಇವರಾರೂ ನೆನಪಾಗದೇ ಮಾತೃಭಾಷಾ ನಿಲುವಿನ ಣ ಯವರಿಗೆ ಮಣೆ ವುದು ಸಾಂಸ್ಕೃತಿಕ ಲ್ಲಿ ದೊಡ್ಡ ನವನ್ನು ಸೃಷ್ಟಿಸಿದೆ. ದಿನಗಳ ದೊಡ್ಡ ಸಂತೆಯುಲ್ಲಿ ಭಾಗವಹಿಸಲು ರಾದವರು ವಿಚಿತ್ರ ಮುಜುಗರವನ್ನು ಅನುಭವಿ . ಈ ಕಾರಣಕ್ಕೆ, ಕೆಲವರು ಸಮ್ಮೇಳನವನ್ನು ಸುವ ಸಾಧ್ಯತೆ ಇದೆ. ಕೆಲವರು ಸಮ್ಮೇಳನದ ಲಿಂದಲೇ ವಿರೋಧಿಸುವ ಸನ್ನಾಹದಲ್ಲಿದ್ದಾರೆ.

ಈಗಾಗಲೇ ಚಂದ್ರಶೇಖರ ಪಾಟೀಲ, ಬಸವರಾಜ ಸಬರದ ಅವರು ತಮ್ಮ ವಿರೋಧ ವ್ಯಕ್ತಪಡಿಸಿದ್ದಾರೆ. ಬರಗೂರು ರಾಮಚಂದ್ರಪ್ಪನವ ರಂತೂ ಮುಖ್ಯಮಂತ್ರಿಗಳಿಗೆ ಪತ್ರ ಬರೆದು ನಾರಾಯಣ ಮೂರ್ತಿಗಳನ್ನು ಆಹ್ವಾನಿಸದಂತೆ ಕೋರಿದ್ದಾರೆ. ಈ ಸಂದರ್ಭದಲ್ಲಿ ಕರ್ನಾಟಕದ ಸಾಂಸ್ಕೃತಿಕ ಲೋಕ ಒಕ್ಕೊರಲಿನಿಂದ ಪ್ರತಿಭಟಿಸಿ ವಿಶ್ವ ಕನ್ನಡ ಸಮ್ಮೇಳನದ ಮಾನವನ್ನು ಕಾಪಾಡಬೇಕಿದೆ.

ನಾರಾಯಣ ಮೂರ್ತಿಯವರು ಈ ಹಿಂದೆ ಸಮಾರಂಭ ವೊಂದರಲ್ಲಿ ಆಗಿನ ಮುಖ್ಯಮಂತ್ರಿ ಕುಮಾರಸ್ವಾಮಿಯವರಿಗೆ ಒಂದರಿಂದ ಹತ್ತನೆಯ ತರಗತಿಯವರೆಗೆ ಕಡ್ಡಾಯವಾಗಿ ಇಂಗ್ಲಿಷ್ ಮಾಧ್ಯ ಮದಲ್ಲಿ ಶಿಕ್ಷಣ ನೀಡಬೇಕೆಂದು ತಾಕೀತು ಮಾಡಿದ್ದರು. ಕಾರ್ಪೊ ರೇಟ್ ಜಗತ್ತಿನ ಹಿತಾಸಕ್ತಿಗಾಗಿ ತಾಯ್ನುಡಿಯನ್ನು ಬಲಿಕೊಡ ಬೇಕೆಂಬ ಫರ್ಮಾನು ಹೊರಡಿಸಿ ದ್ದರು. ಸಾಫ್ಟ್‌ವೇರ್ ಹಾರ್ಡ್‌ವೇರ್ ಉದ್ಯಮಗಳಲ್ಲಿಯ ನೌಕರಶಾಹಿ ಅವಕಾಶಗಳೆಲ್ಲ ಮೇಲುಜಾತಿ ಮೇಲುವರ್ಗಗಳಿಗೆ ಹರಿದು ಹೋಗಬೇಕೆಂಬ ಉದ್ದೇಶದಿಂದ ಮೀಸಲಾತಿಯನ್ನು ವಿರೋಧಿಸಿದ್ದರು. ವಿದೇಶೀ ಕಾರ್ಪೊರೇಟ್ ದಣಿಗಳ ಮರ್ಜಿ ಹಿಡಿಯಲು 'ರಾಷ್ಟ್ರಗೀತೆ'ಯ ಬಗ್ಗೆ ಅವಮಾನಕರ ಹೇಳಿಕೆ ನೀಡಿ ತಮ್ಮ ಸುಪ್ತವಾದ ಕೋಮುವಾದಿ ಅಜೆಂಡಾವನ್ನು ಹೊರಹಾಕಿದ್ದರು. ಆಗೆಲ್ಲ ಸಾಂಸ್ಕೃತಿಕ ಲೋಕದ ದಿಗ್ಗಜರ ಹಾಗೂ ಪ್ರಗತಿಪರ ಚಿಂತಕರ ಖಂಡನೆಗೆ ಒಳಗಾಗಿದ್ದರು. ನವಬಂಡವಾಳಶಾಹಿಯ ಸುರಕ್ಷಿತ ಚಲನೆಗಾಗಿ, ಸಾವಿರ ಸಾವಿರ ಕೋಟಿಗಳ ಲಾಭದ ದುರಾಸೆಗಾಗಿ ಅವರು ಮಾತೃಭಾಷೆಯ ಸಂಹಾರಕ್ಕೆ ಕೊಡಲಿ ಎತ್ತಬಲ್ಲರು. ಸಂವಿಧಾನದ ಸಮಾಜವಾದಿ ನಿಲುವುಗಳನ್ನು ಧಿಕ್ಕರಿಸಿ ದಲಿತ-ಮತ್ತು ಕೆಳವರ್ಗಗಳ ಹಿತವನ್ನು ಮೆಟ್ಟಲು ಕಾಲೆತ್ತಬಲ್ಲರು. ಸಂವಿಧಾನಬದ್ಧ ರಾಷ್ಟ್ರೀಯ ಲಾಂಛನಗಳನ್ನು ಅವಮಾನಿಸಬಲ್ಲರು. ಇಂಥ ಮನುಷ್ಯ ವಿಶ್ವ ಕನ್ನಡ ಸಮ್ಮೇಳನವನ್ನು ಉದ್ಘಾಟಿಸಲು ಅನರ್ಹ.



• ಎಂ.ಡಿ. ಒಕ್ಕುಂದ

ಜಾಗತೀಕರಣದ ಕಾಲು ಶತಮಾನದ ಅವಧಿಯಲ್ಲಿ ಕಾರ್ಪೊರೇಟ್ ದಣಿಗಳು ಕೇಂದ್ರ ಮತ್ತು ರಾಜ್ಯ ಸರಕಾರಗಳನ್ನು ಅವುಗಳ ಆರ್ಥಿಕ ಯೋಜನೆ, ರಾಜಕೀಯ ನಡೆಗಳನ್ನು ಸಂಪೂರ್ಣವಾಗಿ ನಿರ್ದೇಶಿಸುವ ಹಾಗೂ ನಿಯಂತ್ರಿಸುವ ಮಟ್ಟದಲ್ಲಿ ಬೆಳೆದಿದ್ದಾರೆ. ಸಾಂಸ್ಕೃತಿಕ ಲೋಕವನ್ನು ತಮ್ಮ ಮೂಗಿನ ನೇರಕ್ಕೆ ಬಳಸಿಕೊಳ್ಳುವ ಯತ್ನವನ್ನು ನಿರಂತರವಾಗಿ ಮುಂದುವರೆಸಿದ್ದಾರೆ. ಬಂಡವಾಳಶಾಹಿ ಆರ್ಥಿಕತೆಯ ಲಾಭಾಂಶದ ಬಿಂದುವಿನಷ್ಟು ಖರ್ಚಿನಲ್ಲಿ ಅಸಂಖ್ಯ ಉತ್ಸವ, ಆಚರಣೆ, ಸಮಾರಂಭಗಳನ್ನು ಭರ್ಜರಿಯಾಗಿ ನಡೆಸುತ್ತ ಸಾಂಸ್ಕೃತಿಕ ಲೋಕಗಳನ್ನು ಸಾಂಸ್ಕೃತಿಕವಾದ ವಿಧಾನದಲ್ಲಿಯೇ ತನ್ನ ಭಾಗವಾಗಿಸಿಕೊಳ್ಳುವ ವ್ಯವಸ್ಥಿತ ಹುನ್ನಾರಗಳು ನಡೆಯುತ್ತಿವೆ. ಈ ಪ್ರಕ್ರಿಯೆಗೆ ಪ್ರಭುತ್ವಗಳು ಮಾಧ್ಯಮಗಳಾಗಿ ಬಳಕೆಯಾಗುತ್ತಿವೆ. ನಾರಾಯಣಮೂರ್ತಿ ಯವರನ್ನು ಉದ್ಘಾಟನೆಗೆ ಆಹ್ವಾನಿಸುವುದನ್ನು ಗಮನಿಸಿದರೆ ವಿಶ್ವ ಕನ್ನಡ ಸಮ್ಮೇಳನ ಕೂಡ ಪ್ರಭುತ್ವ ಮತ್ತು ಬಂಡವಾಳಶಾಹಿಗಳು ಒಟ್ಟಾಗಿ ತಮ್ಮ ಜನವಿರೋಧಿ ನಿಲುವುಗಳಿಗೆ ಸಾಂಸ್ಕೃತಿಕ ಕ್ಷೇತ್ರದ ಒಪ್ಪಿಗೆಯನ್ನು ಉತ್ಪಾದಿಸುವ ಹುನ್ನಾರ ನಡೆಸಿದಂತೆ ಭಾಸವಾಗುತ್ತದೆ. ಕರ್ನಾಟಕದಲ್ಲಿ ನಿರಂತರವಾಗಿ ನಡೆಯುತ್ತಿರುವ ಉತ್ಸವಗಳು ಕೋಮುವಾದ ಮತ್ತು ಕಾರ್ಪೊರೇಟ್ ಮೌಲ್ಯಗಳ ಪ್ರಚಾರದ ವೇದಿಕೆಗಳಾಗಿ ಬಳಕೆಯಾಗುತ್ತಿರು ವುದನ್ನು ನೆನಪಿಸಿಕೊಳ್ಳಬಹುದಾಗಿದೆ. ವಿಶ್ವ ಕನ್ನಡ ಸಮ್ಮೇಳನವು ಕೋಮುವಾದ ಹಾಗೂ ಜಾಗತೀಕರಣ ಗಳೆಂಬ ಸಂಯಾಮಿ ಅವಳಿಗಳ ತುಳಿತಕ್ಕೆ ಸಿಕ್ಕು ದಿಕ್ಪಾಪಾಲಾಗುತ್ತಿರುವ ನಾಡು, ನುಡಿ, ಸಂಸ್ಕೃತಿ, ಸಮಾಜ, ಆರ್ಥಿಕತೆಗಳನ್ನು ಕುರಿತು ಗಂಭೀರವಾಗಿ ಚರ್ಚಿಸಿ ಉಳಿವಿನ ದಾರಿಗಳನ್ನು ಶೋಧಿಸಬೇಕಾದ ಬೃಹತ್ ವೇದಿಕೆಯಾಗಬೇಕಾ ಗಿತ್ತು. ಆದರೆ ಆರ್ಥಿಕ ಅಸಮಾನತೆಯನ್ನು ಹೆಚ್ಚಿಸಿ ರೈತರ ಬಡವರ, ದಲಿತರ ಆತ್ಮಹತ್ಯೆ ಸಾವು-ನೋವುಗಳಿಗೆ ಕಾರಣವಾಗಿರುವ, ಮತಾಂಧತೆಯನ್ನು ಬಿತ್ತುತ್ತ ಹಿಂಸೆಯನ್ನು ಉತ್ಪಾದಿಸುತ್ತಿರುವ ನವಬಂಡವಾಳಶಾಹಿ ವ್ಯವಸ್ಥೆಯ ಪ್ರತಿನಿಧಿಗೆ ಅದನ್ನು ಒಪ್ಪಿಸಿರುವುದು ಪ್ರಶ್ನಾರ್ಹವಾಗಿದೆ. ದೇಶೀ ಭಾಷೆ, ಸಂಸ್ಕೃತಿಗಳ ತಲೆ ಮೇಲೆ ಬಸ್ಮಾಸುರ ಹಸ್ತ ಚಾಚಿರುವ ಜಾಗತೀಕರಣದ ಫಲಾನುಭವಿಯೊಬ್ಬರಿಗೆ ದೀಪ ಹಚ್ಚಲು ನೀಡಿರುವ ಅವಕಾಶ ಅವರು ಹಚ್ಚಿರುವ ಬೆಂಕಿಯನ್ನು ಮರೆಮಾಡುವ ತಂತ್ರವೂ ಆಗಿದೆ. ಹೀಗಾಗಿ ನಾಡಿನ ಬಗ್ಗೆ ಕಾಳಜಿ ಇರುವ ಪ್ರತಿಯೊಬ್ಬರೂ ನಾರಾಯಣ ಮೂರ್ತಿಗಳು ವಿಶ್ವ ಕನ್ನಡ ಸಮ್ಮೇಳನವನ್ನು ಉದ್ಘಾಟಿಸುವುದನ್ನು ಪ್ರತಿಭಟಿಸಬೇಕಿದೆ. ವೈಯಕ್ತಿಕವಾಗಿ ಅವರನ್ನು ಅವಮಾನಿಸಬಲ್ಲ, ನಾಡು ನುಡಿ ಸಂಸ್ಕೃತಿಗಳನ್ನು ಕುರಿತಾದ ಜಾಗತೀಕರಣದ ಸಂಹಾರಕ ನೀತಿಯನ್ನು ವಿರೋಧಿಸಲು. •



ಕನ್ನಡ ರಂಗಭೂಮಿ ಸಮಕಾಲೀನ ಸ್ಪಂದನ

ರಂಗಪ್ರತಿಭೆ ಬಿ.ವಿ.ಕಾರಂತರ ಒಂದು ಪ್ರಸಿದ್ಧ ಮಾತಿದೆ "ಸಿನಿಮಾ ಪರದೆ ಮೇಲೆ ಮನುಷ್ಯನ ಗಾತ್ರಕ್ಕಿಂತ ದೊಡ್ಡದಾಗಿ ತೋರಿಸುತ್ತದೆ. ಟಿ.ವಿ. ಮನುಷ್ಯನ ಗಾತ್ರಕ್ಕಿಂತ ಚಿಕ್ಕದಾಗಿ ತೋರುತ್ತದೆ. ರಂಗಭೂಮಿ ಮಾತ್ರ ಮನುಷ್ಯನನ್ನು ಇರು ವಷ್ಟನ್ನು ಮಾತ್ರ ತೋರುತ್ತವೆ." ಈ ಮಾತಿನಲ್ಲಿ ಅನೇಕ ಒಳ ಅರ್ಥಗಳಿವೆ. ನಾವು ಇರುವುದಕ್ಕಿಂತ ದೊಡ್ಡ ಇಲ್ಲವೇ ಸಣ್ಣದಾಗಿ ನೋಡಲು ಹೆಚ್ಚು ಇಷ್ಟಪಡುತ್ತಿದ್ದೇವೆ ನಿಸುತ್ತದೆ. ಸಮಕಾಲೀನ ರಂಗಭೂಮಿಯ ಚಟುವಟಿಕೆ ಗಳೇನು? ನಿಷ್ಕ್ರಿಯತೆಯೆ? ಕ್ರಿಯಾಶೀಲತೆಯೇ? ಎಂಬ ಅನುಮಾನಗಳು ಎದುರಾಗುತ್ತವೆ. ಕೆಲವರು ರಂಗಭೂಮಿ ಯನ್ನು ಏಣಿ ಮಾಡಿಕೊಂಡು ಸಿನಿಮಾ, ದೂರದರ್ಶನದ ಶಿಖರವೇರುತ್ತಾರೆ. ಏರಿದ ಮೇಲೆ ಏಣಿಯನ್ನು ಕಾಲಲ್ಲೊದೆ ಯುತ್ತಾರೆಂದು ಆಪಾದಿಸುತ್ತಾರೆ. ಆದರೆ ಕೊಟ್ಟ ಚಿತ್ರಾನ್ನವನ್ನೇ ತಿಂದುಕೊಂಡಿರಿ ಎಂದು ಹೇಳಲು ರಂಗಕರ್ಮಿಗಳಿಗೂ ನೈತಿಕ ಹಕ್ಕಿಲ್ಲ. ಹಣಬಂದ ಕಾಲಕ್ಕೆ ಕರೆದು ಕೊಡಬಹುದಾದ ಸಂಭಾವನೆಯ ಕಾಸು ಕೊಡುವ ಒಳ್ಳೆಯ ಗುಣಗಳಿಲ್ಲದಿರು ವುದರಿಂದ ಅನೇಕ ರಂಗಪ್ರತಿಭೆಗಳನ್ನು ಹೆಚ್ಚು ಕಾಲ ತಮ್ಮ ಹಿಡಿತದಲ್ಲಿಟ್ಟುಕೊಳ್ಳಲಾಗುತ್ತಿಲ್ಲ. ಇನ್ನು ರಂಗಭೂಮಿಯೇ ದಿಕ್ಕೆಟ್ಟು ಕುಳಿತಂತಿದೆ. ವಿಧಾನಸೌಧದಲ್ಲಿ ನಡೆಯುವ ನಿತ್ಯ ನಾಟಕಕ್ಕೆ ಸರಿಯಾಗಿ ಕಾಲು ಹಾಕಲಾರದೆ ಅಲ್ಲಿಗಿಂತ ಒಳ್ಳೆಯ ನಾಟಕ ಮಾಡಲಾಗುತ್ತಿಲ್ಲವೆಂದು ತಾವೇ ನಿರ್ಧರಿಸಿ, ಬಣ್ಣ ಹಚ್ಚಿಕೊಂಡರೂ ಡಲ್ಲಾಗುವ ಭಯದಿಂದ ನಾಟಕ ಆಡುತ್ತಿಲ್ಲವೆನಿಸುತ್ತದೆ.

ಹೊಸ ನೂರಾರು ಪ್ರತಿಭೆಗಳು ರಂಗಭೂಮಿಯಲ್ಲಿ ಕ್ರಿಯಾಶೀಲವಾಗಿವೆ. ಆದರೆ ಆ ಪ್ರತಿಭೆಗಳನ್ನು ಗುರುತಿಸುವ, ಪ್ರೋತ್ಸಾಹಿಸುವ ಹಿರಿತನ ಹಿರಿಯರಲ್ಲಿ ಕಡಿಮೆಯಾಗಿದೆ. ಹೊಸ ಕನಸುಗಳನ್ನು ಹೊತ್ತು ರವೀಂದ್ರ ಕಲಾಕ್ಷೇತ್ರದತ್ತ ಬರುವ ಹೊಸಬರಿಗೆ ಎಲ್ಲಾ ಕದಗಳೂ ಮುಚ್ಚಿವೆ. ಅವು ತೆರೆಯುವುದು ಪಳಗಿದ ಇವೆಂಟ್ ಮ್ಯಾನೇಜರ್‌ಗಳಿಗೆ ಮಾತ್ರ. ಅದು ಹಂಪಿ ಉತ್ಸವವಿರಲಿ, ಪಟ್ಟದಕಲ್ಲು, ಬದಾಮಿ, ಬನವಾಸಿ, ತಲಕಾಡು, ದಸರಾ ಮುಂತಾದ ಯಾವ ಉತ್ಸವದಲ್ಲೂ ಇಂತಿಷ್ಟು ಬಾಬ್ತು ರೆಗ್ಯುಲರ್ ಕ್ಯಾಂಡಿಡೇಟ್ಸ್‌ಗಳಿಗೆ ರಂಗಭೂಮಿ ಹೆಸರಲ್ಲಿ ಸಂದಾಯವಾಗುವ ಅದ್ಭುತ ನಾಟಕ ಬಣ್ಣ ಹಚ್ಚದೇ ನಡೆದುಬಿಡುತ್ತದೆ. ಹೊಸಬರಿಗೆ ಐದು ಸಾವಿರ ಪ್ರೋತ್ಸಾಹಧನಕ್ಕೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಗಳ ಕಂಬವಿಲ್ಲದ ಬಿಲ್ಡಿಂಗನ್ನು ಸುತ್ತಿ ಈ ಅನುದಾನದ ಸಹವಾಸಬೇಡವೆನಿಸುತ್ತದೆ.


ಒಂದು ಕಡೆ ಎನ್‌ಎಸ್‌ಡಿ ಎಂಬ ಬಿಳಿಯಾನೆ ಕೇವಲ ಶಿಬಿರ ಮಾಡಿ ತನ್ನ ಚಾಪ್ಟರನ್ನು ಮುಗಿಸುತ್ತಿದೆ. ಏಕೆಂದರೆ ರಾಷ್ಟ್ರೀಯ ನಾಟಕ ಶಾಲೆ ಮತ್ತೊಂದು ಶಕ್ತಿ ಕೇಂದ್ರವಾಗಿ ರಂಗಭೂಮಿ ಬೆಂಗಳೂರಿನಲ್ಲಿ ಬೆಳೆಯುವುದು ಬೇಕಾಗಿಲ್ಲ. ವಿರೋಧ ವ್ಯಕ್ತಪಡಿಸಹೋದ ರಂಗಮಿತ್ರರನ್ನು ಅನಂತ ಮೂರ್ತಿ, ಕಂಬಾರರು ಸಭ್ಯತೆಯ ನೀತಿಪಾಠ ಹೇಳಿಕಳಿಸಿದ್ದು ನಮ್ಮೆದು ರಿಗಿದೆ. ಅನುರಾಧ ಕಪೂರ್ ಎಂಬ ನಿರ್ದೇಶಕಿ ದಿಲ್ಲಿ ದರಬಾರನ್ನು ಹಂಚಿಕೊಳ್ಳಲು ಸಿದ್ಧರಿಲ್ಲ. ಇದರ ನಡುವೆ ರಾಷ್ಟ್ರೀಯ ನಾಟಕ ಶಾಲೆಯ ಆರ್‌ಆರ್‌ಸಿ ಅಸ್ತಿತ್ವ ಏನೆಂಬುದೇ ಅರ್ಥವಾಗುವುದಿಲ್ಲ.

ಮತ್ತೊಂದು ಕಡೆಯಲ್ಲಿ ಹೆಗ್ಗೋಡಿನಲ್ಲಿ ನಾಟಕದ ಬದಲಿಗೆ ಮಡೆಸ್ನಾನದ ಅನಿಷ್ಟ ಆಚರಣೆಯ ಸಮರ್ಥನೆ ನಡೆದಿದೆ. ಮನೆಯೂ ಕಂ ನಾಟಕ ಕಾಲೇಜೂ ಮತ್ತದರ ನೌಕರರೂ ಆಗಿರುವ ಅಕ್ಷರ ರಂಗವಿವೇಕಕ್ಕೂ ನಮ್ಮ ಅಂಧಶ್ರದ್ಧೆಗೂ ಯಾವ ಸಂಬಂಧವೂ ಇಲ್ಲವೆಂದು ಇತ್ತೀಚಿಗೆ ಜಗಜ್ಜಾಹೀರು ಮಾಡಿಕೊಂಡರು. ಅವರು ತಮ್ಮಲ್ಲಿಗೆ ಬಂದ ವಿದ್ಯಾರ್ಥಿಗಳಿಗೆ ಏನನ್ನು ಕಲಿಸಬಹುದೆಂಬುದರ ಬಗ್ಗೆ ಹೊಸ ಅನುಮಾನಗಳು ಕಾಡುತ್ತಿವೆ. ರಂಗದೊಳಗಿದ್ದೂ ಎಂಜಲೆಲೆ ಮೇಲೆ ಉರುಳು ಹಾಕುವುದು ತಪ್ಪಲ್ಲವೆಂದು ಸಂಸ್ಕೃತಿ ಎಂಬ ದೊಡ್ಡ ಪದದೊಳಗೆ ಸಮರ್ಥನೆ ಮಾಡಿ ಕೊಂಡರೆ, ತಾವು ಹಚ್ಚಿಕೊಂಡಿರುವ ಬಣ್ಣ ಯಾವುದೆಂಬುದು ಜಗತ್ತಿಗೆ ಗೊತ್ತಾಗದೇ ಇರುತ್ತದೆಯೇ? ಹಾಗಾದರೆ ರಂಗಚಿಂತನೆ ಎಂಬುದು ಪ್ರಸ್ತುತವೇ? ಅಪ್ರಸ್ತುತವೇ? ರಂಗಭೂಮಿ ಸದಾ ಸಮಕಾಲೀನತೆಯ ಸ್ಪಂದನ ಎಂಬೊಂದು ಮಾತಿದೆ. ಸಮಕಾಲೀನಗೊಳ್ಳದಿರುವುದು ಯಾವುದು ರಂಗದಲ್ಲಿರಲು ಸಾಧ್ಯ ಇಲ್ಲ ಎಂಬುದೊಂದು ಆದರ್ಶ. ಆದರೆ 'ಶೂದ್ರ ತಪಸ್ವಿ'-ಯಂಥ ನಾಟಕದಲ್ಲಿ ನೀನಾಸಂ ಕಲಾಮಂಡಳಿ ಯಜ್ಞೋಪವೀತ ಪ್ರದಾನ ಮಾಡುವ ಮೂಲಕ ಕುವೆಂಪು ಅವರ ಆಲೋಚನೆಯನ್ನೂ ಹೇಗೆ ಭ್ರಷ್ಟಗೊಳಿಸಬಹುದೆಂಬುದಕ್ಕೆ ಉದಾಹರಣೆಯಾಗಿದೆ. ಒಂದು ಪ್ರಜ್ಞಾಪೂರ್ವಕವಾದ ಹುನ್ನಾರ ಈ ನಾಟಕದ ಮೂಲಕ ನಡೆಯುತ್ತಿದೆ. ಕುವೆಂಪು ಬಗ್ಗೆ ಗೌರವ ಇದ್ದರೆ, ಅವರ ಸಾಹಿತ್ಯದ ಅಂತರ್ಯವನ್ನು ತಿಳಿದವರಾಗಿದ್ದರೆ, ನೀನಾಸಂನ 'ಶೂದ್ರ ತಪಸ್ವಿ' ನಾಟಕ ಪ್ರದರ್ಶನವನ್ನು ಸರಿಯಾಗಿ ಮಾಡಬೇಕು. ಬದಲಿಗೆ ಇಂಥ ವಿಕೃತಿಗಳು ಯೋಗ್ಯವಾದು ದಲ್ಲ. ಯಜ್ಞೋಪವೀತದ ಪಾವಿತ್ರ್ಯ ಏನೆಂದು ಸಾಮಾನ್ಯ ಜನರಿಗೆ ಗೊತ್ತಿದೆ. ಇದನ್ನು ಮಾಡಲು ರಂಗಭೂಮಿ ಹೀಗೆ ಬೇಕಾಬಿಟ್ಟಿ ಬಳಕೆಯಾಗಬೇಕಾಗಿಲ್ಲ.

ರಂಗಭೂಮಿ, ನಾಟಕ ಎಂದ ತಕ್ಷಣವೇ ಭೂತದ ಬೆನ್ನೇರಿ ಹೋಗುವುದೇ ಅಧಿಕ. ರಂಗಭೂಮಿ ಬರಹಗಳೇ ಕಡಿಮೆ. ಕ್ರಿಯಾತ್ಮಕ ರಂಗ ತನ್ನ ಡಾಕ್ಯುಮೆಂಟೇಷನ್ ಕಡೆ ಗಮನ ಹರಿಸುವುದು ಕಡಿಮೆ ಅಥವಾ ಅಂಥದ್ದಕ್ಕೆಲ್ಲ ವ್ಯಯಿಸಲು ಹಣ ಇರದಿರಬಹುದು. ಅದರಿಂದಾಗಿ ರಂಗಭೂಮಿ ಚಟುವಟಿಕೆಯೆಂಬುದು ಕುರುಹು ತಿಳಿಯದ ನೀರೊಳ ಹೆಜ್ಜೆಯಂತಿರುತ್ತದೆ. ರಂಗಭೂಮಿಯಲ್ಲಿ ಹಳತ ಕಥೆ ಹೇಳಿದರೆ ಏನಾದೀತು? ಇದನ್ನೇಕೆ ಹೇಳುತ್ತೇವೆ? ಎಪ್ಪತ್ತರ ದಶಕದ ಬಗ್ಗೆ ನಮಗೊಂದು ವೈಚಾರಿಕ ಗಂಗೋತ್ರಿಯ ಮೂಲ ದಿನಗಳೆಂಬ ಹಳಹಳಿಕೆ ಇದೆ. ಅದರಲ್ಲೂ ಎಡಪಂಥೀಯ ವೈಚಾರಿಕತೆ ಉಂಟುಮಾಡಿದ ಹೊಸತನಕ್ಕೆ ಮೈಯೊಡ್ಡಿ ಕನ್ನಡ ರಂಗಭೂಮಿ ಬೆಳೆದಿರುವ ಸ್ಪಷ್ಟ ಹೆಜ್ಜೆಗಳನ್ನು ಅಲ್ಲಿಂದ ಗುರುತಿಸುತ್ತೇವೆ.

ರಂಗಭೂಮಿಯಲ್ಲಿ ಕಲಾತ್ಮಕತೆಗೆ ಮಹತ್ವ ಕೊಟ್ಟವರಿದ್ದಾರೆ. ನಾಟಕ ಅದೊಂದು ಅಭಿವ್ಯಕ್ತಿ ಕ್ರಮವಾಗಿ ಮಾತ್ರ ಮುಖ್ಯ ಎಂದು ಮಾತ್ರ ತಿಳಿದವರಿದ್ದಾರೆ. ಆದರೆ ಅದೊಂದು ಸಾಮಾಜಿಕ ಪರಿವರ್ತನೆಯ ಪ್ರಮುಖ ಸಾಧನವೆಂದು ತಿಳಿದವರು. ಮೇಲಿನವರಿಗಿಂತ ರಂಗಭೂಮಿ ಯನ್ನು ಹೆಚ್ಚು ಸಶಕ್ತಗೊಳಿಸಿದ್ದಾರೆ. ಏಕೆಂದರೆ ರಂಗಪಠ್ಯ ಏನನ್ನು ಕುರಿತದ್ದು ಮತ್ತು ಯಾರನ್ನು ಕುರಿತದ್ದು ಎಂಬುದೂ ಮುಖ್ಯ. ಎಷ್ಟೋ ಜನ ಇನ್ನೂ ರಂಗ ಪ್ರವೇಶವನ್ನೇ ಪಡೆಯಲಾಗಿಲ್ಲ. ಎಷ್ಟೋ ಜನದ ಪಠ್ಯ ನಾಟಕವಾಗಲು ಸಿದ್ಧತೆಯನ್ನೂ ಮಾಡಿಕೊಂಡಿಲ್ಲ. ಎಂದರೆ ಕೆಲವರನ್ನು ಹೊರಗೇ ಇಡಲಾಗಿದೆ. ಪ್ರಬಂಧಕ್ಕಿಂತ ಅನುಬಂಧಗಳೇ ಹೆಚ್ಚಾಗಿರುವ ಸಾಧ್ಯತೆಗಳು ನಮ್ಮ ಮುಂದಿವೆ. ಕಳೆದ ಮೂರು ದಶಕಗಳಲ್ಲಿ ನಡೆದಿರುವ ರಂಗಚಟುವಟಿಕೆಗಳು ಬೃಹದಾಕಾರದ ಸಮುದಾಯವೊಂದನ್ನು ನಿರ್ಮಾಣ ಮಾಡಿವೆ. ಅಭಿರುಚಿಗಳನ್ನು ತಿದ್ದಲಾಗಿದೆ. ಚಿಂತನಕ್ರಮ ವೊಂದನ್ನು ಬೆಳೆಸಲಾಗಿದೆ. ಸಾಮಾಜಿಕ ಅಸ್ತ್ರವಾಗಿ ರಂಗ ಭೂಮಿ ಬಹುಮುಖ್ಯ ವಾಗ್ವಾದಗಳನ್ನು ಹುಟ್ಟುಹಾಕಿದೆ. ಗುಬ್ಬಿ ವೀರಣ್ಣ, ಬಿ.ವಿ.ಕಾರಂತ, ಬಸವರಾಜ ಗುಡಗೇರಿ, ಎಂ.ಪಿ.ಪ್ರಕಾಶ್ ಎಂದರೆ ಕೇವಲ ವ್ಯಕ್ತಿಗಳ ಹೆಸರಷ್ಟೇ ಅಲ್ಲ. ಅವುಗಳ ಹಿಂದೆ ಬೃಹದಾಕಾರದ ರಂಗಸಂಸ್ಕೃತಿ ಇದೆ. ಸಾಹಸ ಪ್ರಯೋಗಗಳು ಸ್ಮೃತಿಪಟಲದಲ್ಲಿ ಹರಿ ಹಾಯುತ್ತವೆ. ಇಂಥ ಹೆಸರುಗಳು ಸ್ಮರಣಿಕೆಯಲ್ಲಿ ಹಿನ್ನೆಲೆಯಾಗಿಟ್ಟುಕೊಂಡು ಇಂದಿನ ರಂಗಪ್ರತಿಭೆಗಳ ಬಗ್ಗೆ ಹೆಚ್ಚು ಮಾತನಾಡುತ್ತಾ ಹೋಗಬೇಕಾಗಿರುವುದು ನಮ್ಮ ಇಂದಿನ ಜವಾಬ್ದಾರಿ ಯಾಗಿದೆ. ಹೇಳಿಕೇಳಿ ಬೆಂಗಳೂರಿನಲ್ಲಿ ರಂಗಚಟುವಟಿಕೆ ಹೆಚ್ಚು ಕ್ರಿಯಾಶೀಲ, ಹವ್ಯಾಸಿ, ವೃತ್ತಿಪರರು, ಕಾಲೇಜು ರಂಗಭೂಮಿ ಕಾರ್ಮಿಕ ರಂಗಭೂಮಿ ಹೀಗೆ ನಾನಾ ರೀತಿಯ ಚಟುವಟಿಕೆಗಳಿವೆ. ಇವಕ್ಕೆ ದೂರದ ಒಂದು ಬಿಸಿಲುಗುದುರೆ ಹಿಡಿವ ಹುನ್ನಾರವಿದೆ. ಸಿನಿಮಾ, ಟಿವಿಯಲ್ಲಿ ತಮ್ಮ ಭವಿಷ್ಯ ಕಾಣುವವರ ತರಬೇತಿ ಕೇಂದ್ರ ಗಳೂ ರಂಗಚಟುವಟಿಗಳೇ ಆಗಿವೆ. ಜಯನಗರದ ಎಚ್.ಎನ್. ಸಭಾಂಗಣ ರಂಗ ತಾಲೀಮಿನ ರಾಶಿಯೇ ಆಗಿವೆ. ಆದರೂ ಬೆಂಗಳೂರಿನಾಚೆ ಅನೇಕ ರಂಗಪ್ರತಿಭೆಗಳು ಕ್ರಿಯಾಶೀಲವಾಗಿವೆ.

ಮೈಸೂರು ರಂಗಾಯಣ ಮತ್ತು ಅನೇಕ ಹವ್ಯಾಸಿ ತಂಡಗಳು, ಶಿವಮೊಗ್ಗ ಮಂಗಳೂರು, ತುಮಕೂರು, ಧಾರವಾಡ, ಬೆಳಗಾವಿ, ವಿಜಾಪುರ, ಗುಲ್ಬರ್ಗಾ, ದಾವಣಗೆರೆ, ರಾಯಚೂರು, ಬಳ್ಳಾರಿ, ಕೋಲಾರ, ಚಾಮರಾಜನಗರ ಮುಂತಾದ ಕಡೆ ಅಲ್ಲಿಯ ತಂಡಗಳು ಪ್ರಯೋಗ ಮತ್ತು ಪ್ರದರ್ಶನಗಳಲ್ಲಿ ಕ್ರಿಯಾಶೀಲವಾಗಿವೆ. ಸಾಣೆಹಳ್ಳಿ, ಚಿತ್ರದುರ್ಗ, ಕುಂದಾಪುರ ರಂಗಶಿಕ್ಷಣಕ್ಕೆ ಮಹತ್ವ ನೀಡಿವೆ. ಇತ್ತೀಚಿಗೆ ಮೈಸೂರಿನ ಜೆಎಸ್‌ಎಸ್ ಸಂಸ್ಥೆಯವರೂ ಈ ನಿಟ್ಟಿನಲ್ಲಿ ಕ್ರಿಯಾಶೀಲರಾಗಿದ್ದಾರೆ. ಸಮುದಾಯ ಸಂಘಟನೆ ಇಂದಿಗೂ ತನ್ನ ಚಿಂತನೆ ಮತ್ತು ರಂಗಪ್ರಯೋಗಗಳಿಂದ ಜೀವಂತವಾಗಿದೆ. ರಾಯಚೂರು ಘಟಕ 'ಟ್ರೈನ್ ಟು ಪಾಕಿಸ್ತಾನ್' ಪ್ರದರ್ಶನ ಮಾಡಿದೆ. ಕೇಂದ್ರ ಸಮಿತಿ ಸತ್ಯು ಅವರಿಂದ 'ರಾಜರಾಣಿ ಮಂತ್ರಿ ತಂತ್ರಿ' ನಾಟಕವನ್ನು ಠಾಕೂರರ ಸ್ಮರಣೆಗಾಗಿ ಪ್ರದರ್ಶಿಸಿದೆ. ಉಡುಪಿ, ಭಾರತ ಯಾತ್ರಾ ಕೇಂದ್ರ ರಂಗಸ್ಪರ್ಧೆಗಳ ಮೂಲಕ ಕ್ರಿಯಾಶೀಲವಾಗಿದೆ.



• ರಾಜಪ್ಪ ದಳವಾಯಿ

ಕಾರ್ನಾಡರ ಬಗ್ಗೆ ಕಂಬಾರರ ಬಗ್ಗೆ ಗೌರವವನ್ನಿಟ್ಟು ಕೊಂಡು ಮುಂದುವರೆದ ರಂಗಚಟುವಟಿಕೆಗಳ ಬಗ್ಗೆ, ಹೊಸಬರ ಪ್ರಯತ್ನಗಳನ್ನು ಗುರುತಿಸದಿದ್ದರೆ ಅಷ್ಟರಮಟ್ಟಿಗೆ ನಾವು ರಂಗಭೂಮಿಯ ಸಮಕಾಲೀನ ಚಟುವಟಿಕೆಗಳನ್ನು ಗಮನಿಸುತ್ತಿಲ್ಲವೆಂದೇ ಭಾವಿಸಬೇಕಾಗು ತ್ತದೆ. ನಿತ್ಯನೂತನ ಯತ್ನಗಳಲ್ಲಿ ತೊಡಗಿರುವ ರಂಗಕರ್ಮಿಗಳಿಗೆ ಅನುಭವ, ಪಕ್ವತೆಯ ಕಡೆ ತುಡಿಯುತ್ತಿರುವ, ಸಾಗುತ್ತಿರುವ ರಂಗನಡಿಗೆ ಅಚ್ಚರಿಯನ್ನು ಮೂಡಿಸುತ್ತದೆ. ಚಂಪಾಶೆಟ್ಟಿಯವರ 'ಗಾಂಧಿ ಬಂದ', ದಾಕ್ಷಾಯಿಣಿ ಭಟ್‌ರ 'ದಿಶಾಂತರ'ದಂಥ ಪ್ರಯೋಗಗಳು ಹೊಸ ರಂಗಸಾಧ್ಯತೆಗಳನ್ನು ತೋರಿವೆ. ಹಾಲ್ಕುರಿಕೆ ಥಿಯೇಟರ್ ಮೂಲಕ ಶಿವಶಂಕರ್ ಮಾಡುತ್ತಿರುವ ಪ್ರಯೋಗಗಳು, ಹೊಸ ನಾಟಕಗಳು ನಿಜಕ್ಕೂ ಶಕ್ತಿಯುತವಾದವು. 'ಕೋರೆಗಾಂವ್', 'ಮಣೆಗಾರ', 'ಆ ಕನಸಿನ ಬಣ್ಣಗಳು' ಹೊಸ ಸಂವೇದನೆ, ಹೊಸ ನಿರೂಪಣ ಕ್ರಮದಿಂದಾಗಿ ಗಮನ ಸೆಳೆಯುತ್ತವೆ. ಶ್ರೀಧರಮೂರ್ತಿ ಕಲಾನಿರ್ದೇಶಕರಾಗಿ, ನಿರ್ದೇಶಕರಾಗಿ ಹೆಸರಾದವರು. ಅವರ 'ಗುಣಮುಖ' ಒಂದು ಮಹತ್ವದ ಪ್ರದರ್ಶನ. ಮುತ್ತುರಾಜ್ ಅವರ 'ಒಂದು ಬೊಗಸೆ ನೀರು' ರಮೇಶ್ ಆನೇಕಲ್ ಅವರ 'ದಾರುಣ ಭಾರತ' ಕೆಎಸ್‌ಐಡಿಎಲ್ ಚಂದ್ರು, ಮೈಕೋ ಶಿವಣ್ಣ ಜಿಪಿಓ ಚಂದ್ರು ಮುಂತಾದವರು ಪಳಗಿದ

ನಿರ್ದೇಶಕರಾಗಿ ನಮ್ಮ ನಡುವೆ ತುಂಬಾ ಚಟುವಟಿಕೆ
ಇದ್ದಾರೆ. ಅವರ ಒಂದೊಂದು ಪ್ರಯೋಗಗಳು
ವಸ್ತುವಿನ ಹುಡುಕಾಟದಲ್ಲಿ ತೊಡಗಿದಂತಿವೆ. ರಾಯ
ಆಲ್ದಾಳ್, ಗುಲ್ಬರ್ಗಾದ ಶಂಕರಯ್ಯ ಘಂಟಿ, ಶಿವ
ಬಿ.ಚಂದ್ರೇಗೌಡ, ಸಾಸ್ವೆಹಳ್ಳಿ ಸತೀಶ್ ತುಮಕೂರಿನ ರ
ಪಾಲಸಂದ್ರ, ಎಚ್.ಎಂ.ರಂಗಯ್ಯ, ಕೋಲಾರದ 'ಅ
ಹುಟ್ಟುಹಾಕಿರುವ ನೂರಾರು ರಂಗಪ್ರತಿಭೆಗಳು ಮು
ಪಿಚ್ಚಳ್ಳಿ ಶ್ರೀನಿವಾಸ್, ರಾಜಪ್ಪರಂಥ ಗಾಯಕರು, ಕಲಾ
ಬಾಲಗುರು ಮೂರ್ತಿಯಂಥ ಅಲೆಮಾರಿ
ಸುಡುಗಾಡ ಸಿದ್ಧರ ಜೀವನ ಸಂಕಥನವನ್ನು ರಂಗಕ್ಕೆ
ಹೊಸದೊಂದು ರಂಗಾಶ್ಚರ್ಯವನ್ನೇ ಉಂಟು ಮಾ
ರಾಜಪ್ಪ ಇದಕ್ಕೆ ಅದ್ಭುತವಾದ ಸಂಗೀತ ಸಂಯೋ
ಮಾಡಿದ್ದರು. ನಾಟಕ 'ಬುಡ್ಡನಾದ'ದಲ್ಲಿ ಅಪರಿಚಿತ ಅಲೆ
ಲೋಕವೊಂದನ್ನು ಕನ್ನಡದಲ್ಲಿ ಹೀಗೆ ಸೃಜಿಸುವ ಮ
ಹೊಸ ಜೀವಸತ್ವವೊಂದನ್ನು ಬಾಲಗುರುಮೂರ್ತಿ
ರಂಗಭೂಮಿಗೆ ನೀಡಿದ್ದಾರೆ. ರಂಗ ನಿರಂತರ ಇ
ಪ್ರದರ್ಶಿಸಿದ ಪ್ರಮೋದ್ ಶಿಗ್ಗಾಂವ್ ನಿರ್ದೇಶನದ ಡಿ.ಕೆ
ಕಾದಂಬರಿ ಆಧಾರಿತ 'ಮಿತ್ತ ಬೈಲು ಯಮ
ಕಾದಂಬರಿಯನ್ನು ಬಸುಸೂಳೇರಿ
ರಂಗಕೃತಿಯಾಗಿ ಒಳ್ಳೆಯ ಅಳ
ಮಾಡಿದ್ದರು. ಯಮುನಕ್ಕನ ಪಾತ
ಮತ್ತು ಮುರು ಡಯ್ಯನಂಥ ಕಲಾ
ಶಕ್ತಿಯುತವಾದ ಪ್ರದರ್ಶನ ಇದಾ
'ಯಶೋಧರೆ ಮಲಗಿರಲಿಲ್ಲ'
ತುಂಬಾ ಸೆನ್ಸಿಬಲ್ ಆದ ರಂಗಪ್ರ
ಚಿತ್ರಕಲಾ ಪರಿಷತ್ತಿನಲ್ಲಿ ಧ್ರುವಕು
ನಿರ್ದೇಶನದಲ್ಲಿ ಪ್ರಸಿದ್ಧ ಕಲ
ಎಂ.ಎಸ್.ಮೂರ್ತಿಯವರ ಕೃತಿ
ರಂಗಕ್ಕೆ ಅಳವಡಿಸಲಾಗಿತ್ತು. ಚಿತ್ರ ಕಲಾವಿದನೊಳಗೆ
ಬದುಕಿನ ವಿನ್ಯಾಸಗಳಿರುತ್ತವೆಂಬುದಕ್ಕೆ
ಉದಾಹರಣೆಯಾಗಿತ್ತು. ರಂಗಾಯಣದಲ್ಲಿ 'ರೇಖಂಡೆ
ನಾಟಕವನ್ನು ನಿರ್ದೇಶನ ಮಾಡಿದ ಕಲಾವಿದೆ ಪ್ರ
ಬೇಂದ್ರೆ. ಈ ನಾಟಕದ ಮೂಲಕ ತಾನೊಬ್ಬ ಪ್ರ
ನಿರ್ದೇಶಕಿ ಎಂಬುದನ್ನು ಸಾಬೀತುಪಡಿಸಿದ
ರಂಗಾಯಣದ ಮಂಗಳಾ ಅವರ ನಾಟಕಗಳ
ಎಚ್.ಎಲ್.ಪುಷ್ಪರ 'ಭೂಮಿಯಲ್ಲಿ ಇವಳು' ನಾಟಕ, ಗ
ಶ್ರೀನಿವಾಸರ 'ಹಿಟ್ಟಿನ ಹುಂಜ' ನಾಟಕವನ್ನು ಭಿನ್ನ ಬಗೆ
ನಿರ್ದೇಶನ ಮಾಡಿ ಮುಂಬೈನಲ್ಲಿ ಸುದ್ದಿ ಮಾಡಿ
ಕಂಡಿದ್ದೇನೆ. ಗೋವಿಂದ ರಾಜ ಬೈಚಕುಪ್ಪೆ ಕಾ
ರಂಗಭೂಮಿಯಲ್ಲಿ ಕ್ರಿಯಾಶೀಲವಾಗಿರುವ ನಿರ್ದೇ
ತುಂಬಾ ಸಂವೇದನಾಶೀಲ ಕವಿತೆ ಬರೆಯುವ
ನಟನಾಗಿ, ನಿರ್ದೇಶಕನಾಗಿ ತೀರಾ ಸೀರಿಯ
ತೊಡಗಿಕೊಂಡಿದ್ದಾನೆ. ದೂರದ ಹುಬ್ಬಳ್ಳಿಯಲ್ಲಿ ನಾ
ಮೇಸ್ಟ್ರಾಗಿ ಕೆಲಸ ಮಾಡು
ಮಕ್ಕಳ ರಂಗಭೂಮಿ
ಗಂಭೀರ ಪ್ರಯೋಗಗ
ತೊಡಗಿರುವ ಮಲ್ಲೇಶ್ ಪಾ
ಮೇಕಪ್ ಮಾಡುತ್ತಲೇ ನಿರ್ದೇ
ರಾದ ಸಾಹುಕಿ ರಾಮಕೃಷ್ಣ ಬೆ
ರಂಗದ ಆಲದ ಮರವೊ
ಬೆಳಲು ಬಿಟ್ಟಂತೆ ಕೆ.ರಾವ
ಹೆಕ್ಕಿ ತೆಗೆದ ನೂರಾರು ಪ್ರತಿಭೆ
ಬೆಳ್ತೂರು ಕೂಡ ಒಬ್ಬರು.
ರಂಗಭೂಮಿಯಲ್ಲಿ
ಕ್ರಿಯಾಶೀಲ ನಿರ್ದೇಶಕರಾಗಿ ದುಡಿಯುತ್ತಿದ್ದಾರೆ. ಜೈ
ಮೇಕಪ್‌ಮನ್ ಆಗಿ ತೊಡಗಿಕೊಂಡಿದ್ದಾರೆ. ರಂಗಸಂಗಿ
ಭಿನ್ನ ದಾರಿ ಕೊಟ್ಟವರು ಇಸ್ಮಾಯಿಲ್ ಗೋನಾ
ಬೀದಿ ರಂಗಭೂಮಿಯನ್ನು ಸಂಗೀತದಿಂದ ಹೆಚ್ಚು
ಮಾಡಿದವರು. ಗಜಾನನ ಹೆಗಡೆ, ವೆಂಕಟ
ಜೋಶಿಯಂಥವರು ಹೆಚ್ಚಿನ ಸಾಧನೆ ಮಾಡಿದವರಾಗಿ
ಹೊಸಹೊಸ ಹಾಡುಗಳನ್ನು ಸಂಯೋಜಿಸುವ ಮು
ಹವ್ಯಾಸಿ ರಂಗಭೂಮಿಯನ್ನು ಹೆಚ್ಚು ಕಲಾತ್ಮ
ನಾದಮಯವೂ ಮಾಡುತ್ತಿದ್ದಾರೆ. ಲೈಟ್ಸ್ ಜಗ್ಗು ಎ
ಪ್ರಸಿದ್ಧರಾದವರು ಕಲಾವಿದ ಜಗದೀಶ್ ಪಯಾ
ಚಿಂತನೆಗೆ, ವ್ಯವಹಾರಕ್ಕೆ, ಸ್ನೇಹಕ್ಕೆ ಹೆಸರಾದವರು. ಲೈಟಿ
ಎಂಬುದು ಕೇವಲ ಹವ್ಯಾಸವಲ್ಲ, ಅಲ್ಲಿಯೂ ಒ
ವೃತ್ತಿಪರತೆ ಇದೆಯೆಂಬುದನ್ನು ತೋರಿದವರು. ಬಿಎ
ನಾಗರಾಜ್‌ರಂಥ ಪ್ರತಿಭಾವಂತ ಬೆಳಕಿನ ತಜ್ಞ
ಗುರುತಿಸಬೇಕು. ಮಂಜುನಾರಾಯಣ ಕಲಾವಿದನಾಗಿ, ಬೆ
ವಿನ್ಯಾಸಕಾರರಾಗಿ ಹೆಚ್ಚು ಕೆಲಸ ಮಾಡುತ್ತಿದ್ದಾರೆ. ರಂಗಭೂ
ಯನ್ನು ಗಂಭೀರ ಅಧ್ಯಯನ ಕ್ಷೇತ್ರವೆಂದು ತಿ
ಮಂಜುನಾರಾಯಣ ಭರವಸೆಯ ಬೆಳಕಿನ ತಜ್ಞ ವ
ನಿರ್ದೇಶಕ. ಒಂದು ರೀತಿ ನಮ್ಮ ಸಿಜಿಕೆ ದಾರಿ
ಸಾಗುತ್ತಿರುವ ಗೆಳೆಯ ನೀನಾಸಂನಲ್ಲಿ ಕಲಿತು ಬ
ಮಹದೇವ್ ಲೈಟಿಂಗ್ ಡಿಸೈನ್‌ನಲ್ಲಿ ವೃತ್ತಿಪರರೇ ಆಗಿ


ನಟನಾಗಿ ಈಗಲೂ ಮಂಟೇಸ್ವಾಮಿಯಾಗಿ, ತ
ಸಂವೇದನಾಶೀಲ ನಿರ್ದೇಶಕನಾಗಿ 'ಸ್ಮಶಾನ ಕುರುಕ್ಷೇ
'ಒಂದು ಬೊಗಸೆ ನೀರು', 'ಕುಲಂ', 'ದಾರಾಶಿ

...ಗಗಳನ್ನು ನಿರ್ದೇಶಿಸಿದ ಸಂಪತ್ತು ನಟನೆ, ನಿರ್ದೇಶನಕ್ಕೆ ... ಒತ್ತು ನೀಡಿದ್ದಾರೆ. ಗುಲ್ಬರ್ಗಾ ವಿಶ್ವವಿದ್ಯಾಲಯದ ...ರ್ಥಿಗಳಿಗೆ ನಿರ್ದೇಶಿಸಿದ 'ಕುಲಂ' ಕ್ಯಾಂಪಸ್ ...ನಾಗಿ ಇಂದಿಗೂ ಜೀವಂತವಾಗಿರುವ ನಾಟಕವಾಗಿದೆ. ...ರ್ ಹುಡುಗಿ ನಿರ್ದೇಶಿಸಿದ 'ಮಾದಾರ ಚೆನ್ನಯ್ಯ' ...ರ ಹಾಡುಗಳು ಇನ್ನೂ ಗುನುಗುನಿಸುತ್ತಿವೆ. ನಾಟಕಗಳ ...ರಿವ್ಯೂ, ಉಲ್ಲೇಖಗಳೇ ಅಗತ್ಯವಿಲ್ಲ ಎನ್ನುವ ಕಾಲಕ್ಕೆ ...ತಳ್ಳಿ ನಾಗರಾಜ್ ಗ್ರಾಮೀಣ ರಂಗಭೂಮಿ ಕುರಿತು ...ರಂತೆ ಈಗ ಸಮಕಾಲೀನ ಪ್ರಯೋಗಗಳ ಬಗ್ಗೆಯೂ ...ಮುತ್ತಿರುವುದು ರಂಗಚಟುವಟಿಕೆಗಳ ಪರಿಚಯಿಸುವ ...ತ್ವ ಕಾರ್ಯ ಮಾಡುತ್ತಿದ್ದಾರೆ.

...ಇತ್ತೀಚೆಗೆ ಕರ್ನಾಟಕ ನಾಟಕ ಅಕಾಡೆಮಿ ನಾಟಕ ...ರಾ ಶಿಬಿರ ನಡೆಸಿತು. ಹತ್ತಾರು ಜನ ಹೊಸ ...ಟಕಕಾರರು ತುಂಬಾ ಸೀರಿಯಸ್ಸಾದ ನಾಟಕಗಳನ್ನು ...ದಿದ್ದಾರೆ. ಪ್ರಯೋಗದ ಸಾಧ್ಯತೆಗಳನ್ನು ...ದಿಟ್ಟುಕೊಂಡು ಆ ನಾಟಕಗಳ ಪರಿಶೀಲಿಸಿದಾಗ ...ಗಳ ಸತ್ವವನ್ನು ಮನಗಾಣಲು ... ಅಮೃತಮತಿಯನ್ನು ಮತ್ತೆ ...ಸದಾಗಿ ನೋಡಿರುವ ನಟ ...ರ ಪ್ರಯತ್ನವಾಗಲಿ, ಬುದ್ಧ ...ನ ಪ್ರೇಮತತ್ವವನ್ನು ಬಿತ್ತಬಲ್ಲ ...ಶ್ ಅವರ ನಾಟಕವನ್ನಾಗಲಿ ... ಶಿಬಿರದ ನಿರ್ದೇಶಕನಾಗಿ ...ಯುಲು ಸಾಧ್ಯವೇ ಇಲ್ಲ, ನಮ್ಮ ...ವಿನ ತುಂಬಾ ಗಂಭೀರ ...ಟಕಕಾರ ಲಕ್ಷ್ಮೀಪತಿ ಕೋಲಾರ. ... 'ಅಲ್ಲಮನ ಬಯಲಾಟ' ...ನ ಕನ್ನಡ ರಂಗಭೂಮಿಯ ... ವಿನ್ಯಾಸದ, ಸವಾಲಿನ ನಾಟಕ. ...ದೇಶಕನಿಗೆ ಒಂದು ನಾಟಕ ...ವಾಗಿರಬೇಕು ಎಂಬೊಂದು ...ಗೆ ಈ ನಾಟಕ ನಿಜವಾಗಿಯೂ ಸಾಕ್ಷಿಯಾಗಿದೆ. ಸಿಜಿಕೆ ... ರಂಗಕನಸುಗಳಲ್ಲಿ ಅಲ್ಲಮ ಕೂಡ ಒಬ್ಬ. ಅವರ ...ಷ್ನ ಮುಂದೆ ರಂಗನಿರಂತರ ಕೆ.ರಾಮಕೃಷ್ಣಯ್ಯನವರ ...ದೇಶನದಲ್ಲಿ ಮೊದಲಿಗೆ ಪ್ರದರ್ಶನ ಕಂಡಿತ್ತು. ಮೈಕೋ ...ಂಕರ್ ಅವರಂಥ ನಟರು ಅಲ್ಲಮನಾಗಿ ಶೆಟ್ಟರಂಥ ...ದರ ಅನಿಮಿಷರಾಗಿ ಅದ್ಭುತವಾದ ಪ್ರದರ್ಶನವಾಗಿತ್ತು. ...ತಿಗೆ ಸಿ.ಬಸವಲಿಂಗಯ್ಯನವರು ಶಿವಸಂಚಾರಕ್ಕೆ ಈ ...ವನ್ನು ನಾಗಾರ್ಜುನನ ಮಾಧ್ಯಮಿಕ ತತ್ವಜ್ಞಾನದ ...ಶಕ ಪ್ರತಭಿಜ್ಞಾನದ ಹಿನ್ನೆಲೆಯಲ್ಲಿ ನಿರ್ದೇಶಿಸಿದ್ದಾರೆ. ...ಾ ಗಂಭೀರ ನಾಟಕವಾಗಿ ನಮ್ಮ ನಡುವೆ 'ಅಲ್ಲಮನ ...ಲಾಟ'ವಿದೆ. ಇದರ ಭಾಷೆ ತಾತ್ವಿಕತೆಯ ತುತ್ತತುದಿ ...ೀ ಹೇಳಬೇಕು. ಮೂಲತಃ ಸಂವೇದನಾಶೀಲ ...ವಾದ ಲಕ್ಷ್ಮೀಪತಿಯಂಥವರಿಗೆ ಮಾತ್ರ ಸಾಧ್ಯವಾಗಬಲ್ಲ ... ಇದು. ಇದರ ತಾತ್ವಿಕ ಜಿಜ್ಞಾಸೆ ಕನ್ನಡ ಭಾಷೆ ...ನಕ್ಕೆ ತಲುಪಿದ ತುದಿ ಎನ್ನಬಹುದು. ಮತ್ತೊಬ್ಬ ...ಟಕಕಾರ ಕೆ.ವೈ.ನಾರಾಯಣಸ್ವಾಮಿ ಬೀದಿನಾಟಕಗಳ ...ಂಕ ಪ್ರೊಸೀನಿಯಂಗೆ ಬಂದ ಇವರ ಮೊದಲ ನಾಟಕ ...ಭಾರತ' ಪಾತ್ರಗಳು ಮತ್ತು ನಾಟಕಕಾರನ ಸಂವಾದದ ...ಕತೆ ಹೊಂದಿದ ಈ ನಾಟಕವನ್ನು ಪ್ರಮೋದ್ ...ವ್ ಚೆನ್ನಾಗಿ ನಿರ್ದೇಶಿಸಿದ್ದರು. ಪಂಪ ಮತ್ತು ಅವನ ...ಗಳನ್ನು ಮುಖಾಮುಖಿ ಮಾಡಿದ ನಾಟಕ. 'ಯೋಗಿ ...ರುಣ' ಇವರ ಮತ್ತೊಂದು ಮುಖ್ಯ ನಾಟಕ. ಮತ್ತಷ್ಟು ...ಮವನ್ನು ಬಯಸುವ ನಾರಾಯಣಸ್ವಾಮಿ ನಾಟಕಗಳು ...ಸ್ಪೀಡಿನಿಂದ ಜಂಪ್ ಆಗುತ್ತಿವೆ. ಲಕ್ಷ್ಮೀಪತಿ ...ರಂಥ ಧ್ಯಾನವಿಲ್ಲದೆ ನಾಟಕಗಳು ನಿಲ್ಲಲಾರವು. ...ನಾಥ ರಂಗಾಯಣ ಅವರ 'ಅಶ್ವಪರ್ವ','ಅರಿಹಂತ', ...ಗಳು ರಂಗಭೂಮಿಗೆ ಹೊಸ ಸತ್ವವಾಗಿವೆ. ...ನಾಥ ಬೆಳಕೆರೆಯ 'ಶರೀಫ' ದಂಥ ನಾಟಕಗಳ ...ಂಕ ಹೊಸ ನಾಟಕಕಾರರ ಒಂದು ಪಡೆಯನ್ನೇ ಕನ್ನಡ ...ಭೂಮಿ ಹೊಂದಿದೆ. ಈಗ ಇವರನ್ನು ಕುರಿತು ...ಡದೆ ಇನ್ನೂ ಕಂಬಾರರು, ಕಾರ್ನಾಡರ ಬಗ್ಗೆ ...ಡುತ್ತ ಕುಳಿತರೆ ಏನಾಗಬಹುದು? ನಮ್ಮೆದುರಿಗಿನ ...ಪ್ರತಿಭೆಗಳ ಬಗ್ಗೆ ಅಲಕ್ಷ್ಯ ಮಾಡಿದಂತಾಗು ತ್ತದೆಯಲ್ಲವೇ? ...ನ್ನು ಕೆಲವು ರಂಗಪ್ರತಿಭೆಗಳು ಈಗ ನೆನಪಾಗುತ್ತಿವೆ. ...ಜೀವ ಗಂಗೇರ, ಶ್ರೀಪಾದ ಭಟ್, ಡಾ.ಶ್ರೀಶೈಲ ...ರ, ರಾಯಚೂರಿನ ಅಲ್ತಾಫ್, ನೆಲಮಂಗಲದ ...ತ, ಛಾಯಾಭಾರ್ಗವಿ, ಹನುಮಕ್ಕ, ರಂಗಕೋಗಿಲೆ ... ಕುಲಕರ್ಣಿ, ಕಾವ್ಯಸ್ಫೂರ್ತಿ, ಅನ್ನಪೂರ್ಣ ಕಂಬಾರ ...ಡವರು ನಾಟಕಕಾರರಾಗಿ, ಚಿಂತಕರಾಗಿ, ನಟನೆಯಲ್ಲಿ ...ಶನದಲ್ಲಿ ಸಕ್ರಿಯರಾಗಿದ್ದಾರೆ. ಅನೇಕ ಪ್ರತಿಭೆಗಳು ...ನಾಟಕದಿಂದ ಬಂದವು. ಕೆಲವು ಬೀದಿನಾಟಕಕ್ಕೆ ...ವಾಗಿಯೇ ಉಳಿದಿವೆ. ತಮ್ಮ ಪ್ರದೇಶದಲ್ಲಿ ತಮ್ಮ ... ನಿರಂತರಾಗಿ ಒಂದಷ್ಟು ದಿನ ಬೀದಿನಾಟಕದಲ್ಲಿ ...ಕೊಳ್ಳುವ ಕಲಾವಿದರು, ನಿರ್ದೇಶಕರೂ ಇದ್ದಾರೆ. ... ಖಿದ್ಮೆ, ಅಂಜನಪ್ಪ ಲೋಕಿಕೆರೆ, ಖ್ವಾಜಾ ...ಸುದ್ದೀನ್, ಚಕ್ರಪಾಣಿ, ಶಂಕ್ರಣ್ಣ, ಸಂಕಣ್ಣನವರ, ...ಜ ಹಾಗಡ, ದಲಿತ ರವಿ, ರಮೇಶ್ವರಾನಂದ ಸ್ವಾಮಿ,

ಶಶಿ ಕುಮಾರ, ಶಿವಕುಮಾರ, ಸುಧಾನಂದ ಸುವರ್ಣ, ಸಿರಿಗೆರೆಯ ರಾಜು ಮತ್ತು ಶೈಲ, ಮಧು, ವನಿತಾ ತುಮಕೂರು, ರವಿ ಕೋಲಾರ, ಬಾಸಪ್ಪ ದಾವಣಗೆರೆ, ಮಲ್ಲಿಕಾರ್ಜುನ ಬಿರಾದಾರ, ಸಂಗಯ್ಯ ಹಳ್ಳದ ಮಠ, ಸಲ್ಮಾ ಮೈಸೂರು, ಪಂಪ, ಹೊಸೇಟೆಯ ಅಬ್ದುಲ್ಲಾ ಬೀದಿ ರಂಗಭೂಮಿಗೆ ಮುಡಿಪಾದ ಕಲಾವಿದ, ನಿರ್ದೇಶಕ ಮತ್ತು ಸಂಘಟಕ ಮಂಗಳ, ಮಂಜುಳಾ ದೊಡ್ಡಬಳ್ಳಾಪುರ, ಅನಸೂಯುರ, ರಾಂಯ್ಯ, ಗುಲ್ಬರ್ಗಾದ ಸಂದೀಪ, ರಾಘವೇಂದ್ರ, ತುಮಕೂರಿನ ಗಂಗರಾಜು, ಬಸವರಾಜು, ಕಾಂತರಾಜು ಮುಂತಾದ ಅಸಂಖ್ಯಾತ ಪ್ರತಿಭೆಗಳು ಬೀದಿನಾಟಕದಲ್ಲಿ ತೊಡಗಿವೆ. ಜಗನ್ ಪವಾರ್, ಬೇಕಲ್ ಮುಂತಾದವರು ಗಾಯಕರಾಗಿ, ನಟರಾಗಿ, ನಿರ್ದೇಶಕರಾಗಿ ಬೀದಿ. ರಂಗಭೂಮಿಗೆ ಹೊಸ ಸತ್ವವನ್ನು ನೀಡಿದ್ದಾರೆ.

ಅಕಾಡೆಮಿಕ್ಕಾಗಿ ಅಧ್ಯಯನಕ್ಕೆ ತೊಡಗಿರುವ ನೂರಾರು ಜನ ಕರ್ನಾಟಕದಲ್ಲಿ ರಂಗಭೂಮಿಯನ್ನು ಅಭ್ಯಸಿಸುತ್ತಿದ್ದಾರೆ. ಕನ್ನಡದಲ್ಲಿ ಕನ್ನಡ ನಾಟಕಗಳ ಬಗ್ಗೆ ತಿಳಿಯಲು ಇದ್ದ



ಎರಡು ಪುಸ್ತಕಗಳೆಂದರೆ ತ.ಸು.ಶಾಮರಾಯರ 'ಕನ್ನಡ ನಾಟಕ' ಎರಡನೆಯದು ಮತ್ತು ಮಹತ್ವದ್ದು ಡಾ.ಕೆ.ಮರುಳಸಿದ್ದಪ್ಪನವರ 'ಆಧುನಿಕ ಕನ್ನಡ ನಾಟಕ'. ಆದರೆ ಇಂದು ನೂರಾರು ಪುಸ್ತಕಗಳಿವೆ. ರಂಗಭೂಮಿ ಚರಿತ್ರೆ, ಪ್ರಯೋಗ, ಸಿದ್ಧಾಂತ, ನಟರು, ನಿರ್ದೇಶಕರು, ನೇಪಥ್ಯದವರು, ವಿವಿಧ ತಂತ್ರಜ್ಞರನ್ನೇ ಕುರಿತು ಪ್ರತ್ಯೇಕ ಪುಸ್ತಕಗಳು ಬಂದಿವೆ. ಎಂ.ಎ., ಪದವಿ, ಡಿಪ್ಲಮೊ ನಾಟಕವನ್ನೇ ಅಧ್ಯಯನ ಮಾಡಿದ ಅನೇಕ ಪ್ರತಿಭೆಗಳು ಕರ್ನಾಟಕದಲ್ಲಿವೆ. ರಾಷ್ಟ್ರೀಯ ನಾಟಕ ಶಾಲೆ ಮತ್ತು ಅದರ ಹೊರತಾಗಿಯೂ ಅನೇಕ ರೀತಿ ರಂಗಶಿಕ್ಷಣ ಪಡೆದವರಿದ್ದಾರೆ. ಕೆಲವರು ಶಿಬಿರಗಳಿಂದ ರಂಗಭೂಮಿಗೆ ಬಂದಿದ್ದಾರೆ. ಕೆಲವರು ಯಾವ ತರ ಬೇತಿಯೂ ಇಲ್ಲದೆ ಮಾಡುತ್ತಾ ನೋಡುತ್ತಾ ಕಲಿತಿದ್ದಾರೆ. ನಾಟಕಗಳ ಅಧ್ಯಯನ, ರಂಗಭೂಮಿಯ ಅಧ್ಯಯನ ಇಂದು ವ್ಯಾಪಕವಾಗಿ ಬೆಳೆದಿದೆ. ಡಾ.ಗೋವಿಂದಸ್ವಾಮಿ, ಡಾ.ರವಿಕುಮಾರ್ ಬಾಗಿ, ಡಾ.ವಿದ್ಯಾ ಮುಂತಾದವರು ನಾಟಕ, ರಂಗಭೂಮಿ, ಕುರಿತು ನಡೆಸಿದ ಅಧ್ಯಯನಕ್ಕೆ ಪಿಎಚ್‌ಡಿ, ಪಡೆದಿದ್ದಾರೆ. ಸಾಂಸ್ಕೃತಿಕ ಕಲಾ ಜಾಥಾಗಳ ಕುರಿತ ಅಧ್ಯಯನ ಬಾಗಿ ಅವರ ಒಂದು ಮುಖ್ಯ ಸಂಶೋಧನೆ. ವಿವಿಧ ವಿಶ್ವವಿದ್ಯಾಲಯಗಳಲ್ಲಿ ರಂಗಭೂಮಿ ಕುರಿತ ಅಧ್ಯಯನ ನಡೆಯುತ್ತಿದೆ. ಬೇರೆ ಬೇರೆ ಜ್ಞಾನ ಶಿಸ್ತಿನವರು ರಂಗಭೂಮಿಯನ್ನು ಅಧ್ಯಯನ ಮಾಡುತ್ತಿದ್ದಾರೆ.


ರಂಗಭೂಮಿಯ ಎನರ್ಜಿ ಎಷ್ಟೆಂದು ಹೇಳುವುದು. ಕೇವಲ ಕ್ಷೇತ್ರದಲ್ಲಿ ತೊಡಗಿದವರ ಹೆಸರು ಪಟ್ಟಿ ಮಾಡಲಿಕ್ಕೆ ವರ್ಷ ಕಾಲ ಬೇಕು. ಇನ್ನು ಇವರೆಲ್ಲ ಮಾಡಿರುವ ಕೆಲಸದ ವಿವರ ವಿಶ್ಲೇಷಣೆಗೆ ಒಂದು ಜೀವಮಾನ ಸಾಲದು. ಅಸಂಖ್ಯ ಪ್ರತಿಭೆಗಳನ್ನು ಮುಖಾಮುಖಿಯಾಗದಿದ್ದರೆ ನಮಗೆ ಬೆಳವಣಿಗೆ ಎಲ್ಲಿದೆ? ರಂಗಕ್ಕೆ ಬಂದವರೆಲ್ಲ ಸಿನಿಮಾ, ಟಿವಿಗೆ ಹೋಗುತ್ತಾರೆ ಎಂಬುದು ಕೇವಲ ಒಂದು ಗುಲ್ಲು ಅಷ್ಟೆ. ರಂಗದಲ್ಲೇ ಇರುವವರನ್ನು ಕುರಿತು ನಾವು ಏನು ಯೋಚಿಸುತ್ತಿದ್ದೇವೆ? ಇದುವರೆಗೂ ನಾನು ಹೆಸರಿಸಿದ ಯಾರಿಗೂ ಯಾವುದೇ ಅನುದಾನ ಸಿಗುವುದಿಲ್ಲ, ಇವರ್‍ಯಾರೂ ಯೋಜನೆಗಳ ಯಾಚಕರಲ್ಲ, ಯಾರದೋ ಯೋಜನೆಯಲ್ಲಿ ದುಡಿಯುವ ಶ್ರಮಜೀವಿಗಳಷ್ಟೇ. ಒಬ್ಬೊಬ್ಬ ಒಂದೊಂದು ಜಗತ್ತಿನಂತಿರುವ ಪ್ರತಿಭಾಶಾಲಿಗಳು. ಇನ್ನೊಂದು ಕಡೆ ನೋಡಿ... ರಂಗಭೂಮಿಯ ಚಟುವಟಿಕೆ ಮಾಡುತ್ತೇನೆಂದು ಕರ್ನಾಟಕ ಸರ್ಕಾರ ಮತ್ತು ಭಾರತ ಸರ್ಕಾರದಿಂದ ಅನುದಾನ ಪಡೆಯುತ್ತಿರುವವರ ವಿವರಗಳನ್ನು ಸರ್ಕಾರ ಪ್ರಕಟಿಸಬೇಕು ಅಥವಾ ಮಾಹಿತಿ ಹಕ್ಕನಡಿ ಅದರ ವಿವರ ಪಡೆದು ಹಾಗೆ ಪಡೆಯುವವರು ರಂಗಭೂಮಿಗೆ ಮಾಡುತ್ತಿರುವ ಕೆಲಸ ಎಷ್ಟು ಪ್ರಮಾಣದ್ದು? ಇವರ ಶ್ರಮ ಎಷ್ಟು? ಎಂದು ಸರಿದೂಗಿ ವಿವೇಚಿಸಿ, ಅನುದಾನವು ಹೆಚ್ಚು ಜನರನ್ನು ತಲುಪುವಂತೆ ಮಾಡಬೇಕು. ಅಂದರೆ ಸರ್ಕಾರಕ್ಕೊಂದು ತಕ್ಷಣವೇ 'ಥಿಯೇಟರ್ ಪಾಲಿಸಿ' ಬೇಕು. ಅದು ವೃತ್ತಿರಂಗಭೂಮಿ ಇರಲಿ, ಹವ್ಯಾಸಿ ರಂಗಭೂಮಿ ಇರಲಿ, ರಂಗಶಿಕ್ಷಣ ಕೇಂದ್ರಗಳಿರಲಿ ಹೊಸಬರನ್ನು ಪ್ರೋತ್ಸಾಹಿಸುವ ಇರಾದೆ ಇರದಿದ್ದರೆ ಹೊಸದೇನನ್ನು ನಾವು ನಿರೀಕ್ಷಿಸಲು ಸಾಧ್ಯ?

ರಂಗಭೂಮಿ ಎಪ್ಪತ್ತರ ದಶಕದಲ್ಲಿ ಕೇವಲ ರಂಗಭೂಮಿಗಷ್ಟೇ ಸೀಮಿತ ಆಗಿರಲಿಲ್ಲ, ಅದು ಬೀದಿ ಪ್ರತಿಭಟನೆ ಕೂಡ ಆಗಿತ್ತು, ಅಂದಿಗಿಂತ ಇಂದು ನಮ್ಮ ನಡುವೆ ಸಮಸ್ಯೆ ಅಧಿಕವೂ ಸಂಕೀರ್ಣವೂ ಆಗಿವೆ. ಇಂದು ರಂಗಭೂಮಿಯ ಜವಾಬ್ದಾರಿ ಹೆಚ್ಚಾಗಿದೆ. ಆದರೆ ರಂಗಭೂಮಿ ಕೇವಲ ರಂಗಮಂದಿರಕ್ಕೆ ಸೀಮಿತವಾಗಿದೆಯೇನೋ ಎಂಬಂತೆ ಭಾಸವಾಗುತ್ತಿದೆ. ರಾಜಕೀಯ ನಾಟಕವೇ ಪ್ರಾಧಾನ್ಯತೆ ಪಡೆದಿದೆ. ಅಂಥದ್ದರ ಮುಂದೆ ನಾಟಕವೇ ದಲ್ಲಾಗುತ್ತಿರುವ ಲಕ್ಷಣಗಳೂ ಕಾಣುತ್ತಿವೆ. ೩೦ ವರ್ಷಗಳಿಗಿಂತ ಇಂದು ರಂಗಭೂಮಿಯಿಂದ ಹುಟ್ಟುವಳಿ ಹೆಚ್ಚಿದೆ. ಅನುದಾನ ಹೆಚ್ಚಿದೆ. ಇದು ರಂಗಭೂಮಿಯನ್ನು ಪ್ರತಿಭಟನಾ ಅಸ್ತ್ರದಿಂದ ನಿಷ್ಕ್ರಿಯಗೊಳಿಸಿದೆಯೇ? ಅಥವಾ ಜಾಗತೀಕರಣದ ಹುನ್ನಾರಗಳು ಮುಂದೆ ತನ್ನ ಆಕರ್ಷಣೆಯನ್ನು ಕಳೆದುಕೊಂಡಿದೆಯೇ? ಅಥವಾ ರಂಗಭೂಮಿ ಚಟುವಟಿಕೆ ಆಳುವ ಪಕ್ಷಗಳಿಗೆ ಬೇಕಿಲ್ಲವೇ? ರಂಗದಿಂದ ಜನ ಶಿಕ್ಷಣ ಪಡೆಯುತ್ತಿದ್ದು ಪ್ರಜಾಪ್ರಭುತ್ವ ಪ್ರಸ್ತಾವಳಿಯ ಮೇಲೆ ನಿಲ್ಲುವುದಕ್ಕೆ ಸಹಾಯಕವಾಗಿದೆಯೇ? ಅಥವಾ ರಂಗಭೂಮಿ ಪರಿಣಾಮ ಏನೂ ಆಗದೇ ಜನ ಅವೈಚಾರಿಕತೆಯಲ್ಲಿ ತೊಳಲುತ್ತಿದ್ದಾರೆಯೆ? ಖಾಸಗೀಕರಣದ ಪರಿಣಾಮವಾಗಿ ಜನಕ್ಕೆ ಗೊಂದಲ ಅಧಿಕವಾಗಿ ತಮ್ಮ ಉಳಿಕೆಯ ಪ್ರಶ್ನೆಗೆ ಹೆಚ್ಚು ಮಹತ್ವ ನೀಡುತ್ತಿದ್ದಾರೆಯೇ? ಮುಂತಾದ ಪ್ರಶ್ನೆಗಳು ನಮಗೆ ಎದುರಾಗುತ್ತವೆ. ಸದ್ಯದ ಕನ್ನಡ ರಂಗಭೂಮಿ ೨೫ ಲಕ್ಷ ರೂಪಾಯಿ ಬಜೆಟ್‌ನ 'ಮಲೆಗಳಲ್ಲಿ ಮದುಮಗಳು' ನಾಟಕವನ್ನು ಒಂದು ತುದಿ ಎಂದುಕೊಂಡಂತೆ, ಒಂದು ಲಕ್ಷದ ೨೫ ನಾಟಕಗಳನ್ನು ಚಿಂತಿಸಬೇಕಾಗುತ್ತದೆ. ರಾಜರತ್ನ ಹೇಳಿದಂತೆ 'ಆನೆ ಬದ್ಕಬೇಕಂದ್ರ ಆಡು ಬಲಿ' ಆಗಬಾರದು. ಹೊಸಬರಿಗೆ ಶೇಕಡಾ ೫೦ ರಷ್ಟು ಅನುದಾನವನ್ನು ನೀಡದಿದ್ದರೆ ಹೊಸಬರು ರಂಗಭೂಮಿಗೆ ಬಂದು ಏನು ಮಾಡಬೇಕಾಗುತ್ತದೆ? ಯಾರೋ ಒಬ್ಬಿಬ್ಬರ ಹಿತಾಸಕ್ತಿಗೆ ನೂರಾರು ಜನರ ಹಿತಾಸಕ್ತಿಯನ್ನು ಬಲಿಕೊಡುವುದು ಸರಿಯಲ್ಲ, ಸರ್ಕಾರ ತನ್ನ ರಂಗನೀತಿಯನ್ನು ಖಚಿತಗೊಳಿಸಿ ಪ್ರಕಟಿಸಬೇಕು. ಕಾರ್ಯಕ್ರಮಸೂಚಿ ರಂಗಭೂಮಿಗೆ ಸಂಬಂಧಿಸಿದಂತೆ ಬದಲಾಗಬೇಕು. ಹೀಗಿನಂತೆ ಅನುಕೂಲ ಪಡೆದವರೇ ಮತ್ತೆ ಮತ್ತೆ ಪಡೆದಂತಾಗಬಾರದು. ರಂಗಭೂಮಿಯ ಸಮಕಾಲೀನ ಸ್ಪಂದನವನ್ನು ಮನಗಂಡು ಅದಕ್ಕೆ ತಕ್ಕ ನಿಯಮಾವಳಿ ರೂಪಿತವಾಗಬೇಕು. ಒಂದು ಪ್ರದೇಶದ ರಂಗಪ್ರದರ್ಶನ ಮತ್ತೊಂದು ಕಡೆ ನಡೆಯುವಂತೆ ಒಂದು ನೆಟ್‌ವರ್ಕ್‌ನ್ನು ಸಿದ್ಧಪಡಿಸಬೇಕಾಗಿರುತ್ತದೆ. ಇಲ್ಲದಿದ್ದರೆ ಅನೇಕ ನಾಟಕಗಳು ಒಂದೇ ಪ್ರಯೋಗಕ್ಕೆ ತೀರಿಹೋಗ ಬೇಕಾದ ಅನಿವಾರ್ಯ ಒದಗುತ್ತದೆ.

ಕನ್ನಡ ರಂಗಭೂಮಿಯ ಸಮಕಾಲೀನ ಸ್ಪಂದನ ಬಹಳ ಅದ್ಭುತವಾದುದು. ರಂಗಕ್ಕೆ ಬಿದ್ದ ವ್ಯಕ್ತಿ ಒಬ್ಬ ದಿಟ್ಟ ವ್ಯಕ್ತಿಯಾಗಿ ಬಾಳಿ ಬದುಕುವ ಛಾತಿಯನ್ನು ಕಲಿಯುತ್ತಾನೆ. ಬದುಕಿನ ಸವಾಲುಗಳನ್ನು ಎದುರಿಸುವ ಶಕ್ತಿಯನ್ನು ರಂಗ ಆತನಿಗೆ ನೀಡಿರುತ್ತದೆ, ಎಲ್ಲೋ ಕಳೆದುಹೋಗಬಹುದಿದ್ದ ಅನೇಕ ಟ್ಯಾಲೆಂಟ್‌ಗಳು ಇಂದು ರಂಗಭೂಮಿಯಲ್ಲಿ ಬದುಕನ್ನು ಕಂಡುಕೊಳ್ಳುತ್ತಿರುವುದು ಸಾಮಾನ್ಯವಾದ ವಿಚಾರವೇನೂ ಅಲ್ಲ, ಆದ್ದರಿಂದ ರಂಗಭೂಮಿಯ ಬಗೆಗೆ ಹೊಸದಾಗಿ ಚಿಂತಿಸಿ ಹೊಸ ರೂಪುರೇಷೆಗಳನ್ನು ಅನುಷ್ಠಾನಗೊಳಿಸಬೇಕಾದ ಸುಸ್ಥಿತಿ ನಮಗೆ ಎದುರಾಗಿದೆ. ಇಲ್ಲದಿದ್ದರೆ ದುಃಸ್ಥಿತಿ ಎಂಥದ್ದೆಂದು ತಿಳಿದೇ ಇದೆ. ರಂಗಪ್ರಜ್ಞೆ ಮೂಲತಃ ಒಂದು ಬೌದ್ಧಿಕ ಚಟುವಟಿಕೆ. ರಂಗ ಮುಖೇನ ಶಿಕ್ಷಣ ಯೋಚಿಸುತ್ತಿರುವ ಕಾಲಕ್ಕೆ ಇದನ್ನು ನಗಣ್ಯ ಮಾಡಿದರೆ ಏನು ಪ್ರಯೋಜನ. ತಂತ್ರಜ್ಞತೆ, ಪರಿಣತಿ ಎಂಬುದು ಒಂದು ದೇಶದ ಸಂಪತ್ತು, ರಾಮಕೃಷ್ಣ ಉರಾಳ ಎಂಬ ರಂಗಮಿತ್ರ ಯಕ್ಷಗಾನದ ಸಲುವಾಗಿ ರಂಗಭೂಮಿ ಅಳವಡಿಕೆಗಾಗಿ ದೇಶವಿದೇಶ ಸುತ್ತುತ್ತಿದ್ದಾನೆ. ಚೆಸ್ವಾನಂಥ ನಟ ಆಂಟನ್ ಚೆಕಾವ್‌ನ 'ಪಂಥ'ವನ್ನು ಅದ್ಭುತ ವಾಗಿ ಅಭಿನಯಿಸುತ್ತಾನೆ. ಅಯ್ಯೋ, ಅಯ್ಯೋ ಹೇಳುತ್ತಾ ಹೋದರೆ ಕೊನೆಯಲ್ಲಿ? ಕ್ಷಮಿಸಿ, ನಾನು ಬಿಟ್ಟ ಹೆಸರುಗಳು ಸಾವಿರಾರು. ಸಮಕಾಲೀನ ಕನ್ನಡ ರಂಗಭೂಮಿ ಎಂದರೆ ಇದು, ಅಸಂಖ್ಯಾತ ಯುವ ಮನಸ್ಸಿನೊಳಗೆ ಅರಳುತ್ತಿರುವ ರಂಗಭೂಮಿ ಹೊಸಹೊಸ ಕನಸುಗಳ ಹೊತ್ತು ಹೊಸದಾಗುತ್ತಿದೆ. ನನಸು ಮಾಡಲು ನಮಗೆ ಬೇಕಿರುವುದು ಒಂದು ಮುಗುಳ್ನಗೆ; ಒಂದಷ್ಟು ಚಿತ್ತಾನ್ನ, ಚಹಾ ಖರ್ಚಿನ ಚಿಲ್ಲರೆ ಕಾಸಿನ ಸಹಾಯ. ಚಿಲ್ಲರೆ ಮಾತಾಡಿ ಪ್ರತಿಭೆಗಳನ್ನು ಕೊಲ್ಲುವ ಬದಲು ಮೌನವಾಗಿದ್ದರೆ ಹೊಸ ಪ್ರತಿಭೆಗಳು ಚಿಗುರುತ್ತವೆ. ಲೂಸ್ ಟಾಕ್ ಎರಡು ಪೀಳಿಗೆಯಲ್ಲಿ ಅನುಮಾನ ಸೃಷ್ಟಿಸಿದೆ. ಸೃಜನಾತ್ಮಕತೆಗೆ ನಿರ್ಭೀಥ ಕೂಡಾ ಮುಖ್ಯ. ... ಸಂಕೋಲೆಗಳಿಂದ ಪ್ರತಿಭೆಗಳ ಸೃಷ್ಟಿ ಸಾಧ್ಯವಿಲ್ಲ. ಸದ ನಾವು ಸುಮ್ಮನಿದ್ದರೂ ಸಾಕು ಸಾವಿರಾರು ಪ್ರತಿಭೆಗಳು ಅವಕಾಶಕ್ಕೆ ಅವು ಅದು ಬೆಳೆದೇ ಬೆಳೆಯುತ್ತವೆ. ●

ಅವರು ರಾಷ್ಟ್ರಗೀತೆ ಹಾಡಿದರು

ತಾಯ ಬಸಿರ ಬಿಸಿ ಕತ್ತಲಲ್ಲಿ ಬೆವರಿ ಉಸಿರಾಡುತ್ತಿದ್ದಾರೆ
ಬೆಳಕ ಕಾಣುವ ಖಾತರಿಯಿಲ್ಲ ಎಳೆದು ಬಿಡುವ ಉಸಿರೂ ಇಂತಿಷ್ಟೆ ಅಳೆದು.
ಅಗೋ! ಅದಿರು ಅದುರಿ ಉದುರುತ್ತಿದೆ
ತಾಯಿ ಮೈಮುರಿದಳೇ?
ಇದೇನು ತಾಯ ಮಮತೆಯ ಹುಲಿಮುದ್ದಿನ ಬಸಿರೊ, ಸಮಾಧಿಯೋ
ಹೊರ ದಾರಿ ಮುಚ್ಚಿದೆ, ತಲೆ ಮೇಲೆ ಬ್ರಹ್ಮಾಂಡವೆ ಅಮುಕಿದೆ
ತಾಯಿ ಕಾಪಾಡು ಆಚೆಗೆಸೆ ಈ ಮಾನವರನ್ನು ಮರಳಿ ಹೆತ್ತಂತೆ
ಬಸಿರ ಬೇಗೆಗೆ ಮುದುಡಿದ್ದಾರೆ
ಅರವತ್ತೊಂಭತ್ತು ದಿನದಲ್ಲಿ
ಉಗುರಗಲ ಬ್ರೆಡ್, ಎರಡು ಹನಿ ನೀರಲ್ಲಿ ಜೀವ ಮಿಡುಕಿದೆ
ಮಕ್ಕಳ ಮುಖ ಮಸುಕಾಗಿದೆ ಮಡದಿಯ ಧ್ವನಿ ಮರೆತಿದೆ



ಇಲ್ಲಿ ಕನಸಿಗೂ ಗವ್ವೆಂಬ ಕತ್ತಲದೇ ಬಣ್ಣ ಭಾರಃ
ಕಾಲ ನಿಂತಿದೆ ಮೌನ ನಿರೀಕ್ಷೆಯಲ್ಲಿ
ಭರವಸೆಯ ಕುಡಿಯೊಂದು ಇಳಿಯಿತು ಮನುಷ್ಯನ ವಾಸನೆ ಹೊತ್ತು
ಕಣ್ಣುಗಳು ಕೀಲಿಸಿವೆ ಒಳಗಿಳಿದ ಕೊರೆಯಂತ್ರದ ಮೂತಿಗೆ
ಇದಲ್ಲವೆ ದೈವದ ಕುರುಹು? ರೂಹು?
ಮತ್ತೆಲ್ಲ ಜೀವ ಸಂಭ್ರಮ ದೇಶವೆ ಹುಚ್ಚೆದ್ದು ಊಟ ನೀರು ಮಾತ್ರೆ ಎಲ್ಲ ಎಲ್ಲ
ಮೂರಿಂಚಿನ ಕೊಳವೆಯ ಹೊಕ್ಕುಳ ಬಳ್ಳಿ



ಮತ್ತೆ ಇಳಿದದ್ದು ಧ್ವನಿವರ್ಧಕ:
ಜೀವ ಪ್ರೀತಿಗೆ, ಹೊರೆವ ಭಾವಕ್ಕೆ ಬಾಯ್ಬಿಟ್ಟಿದೆ ಇವರಿಗೆ
ಇವರೋ,
ಮಡದಿ ಮಕ್ಕಳ ಜೊತೆ ಮಾತಾಡಲೊಲ್ಲರು
ನಗಲೊಲ್ಲರು ಬಿಕ್ಕಿ ಅಳಲೊಲ್ಲರು
ಈ ಜೀವ, ಈ ಲೋಕ, ಎಲ್ಲ ಸೇರಿ ಈ ದೇಶ.
ಹಾಗೆಂದೇ ಕೊರಳೆತ್ತಿ ಹಾಡಿದ್ದಾರೆ
ಎಲುಬು ಗೂಡಾದ ಎದೆ ಸೆಟೆಸಿ, "... ನೀಲಾಕಾಶ ಹರಡಿದೆ ನಿನ್ನ ಮೇಲೆ..."
ರಾಷ್ಟ್ರಗೀತವೂ ಎದೆಯ ಹಾಡಾಗಿ ನೆಲದ ಹಾಡಾಗಿ
ಈಗ ಈ ಮಂದಿ ಜಗದಗಲ ಹಬ್ಬಿ...


(ಚಿಲಿಯ ಸ್ಯಾನ್ ಜೋಸ್‌ನ ತಾಮ್ರದ ಗಣಿಕುಸಿತದಲ್ಲಿ 69 ದಿನಗಳ ಕಾಲ ಸಿಲುಕಿ ನಂತರ ಹೊರಬಂದ ಕಾರ್ಮಿಕರನ್ನು ಕುರಿತು)


● ಸುಮಾ ಎಂಬಾರ್

ಮಾಲತಿ ಬಿಕ್ಕುತ್ತಿದ್ದಾಳೆ ಅಂತ ಆ ಅರೆಬರೆ ಎಚ್ಚರದಲ್ಲಿ ಅನ್ನಿಸಿತಾದರೂ, ಆ ಕ್ಷಣ ಅವಳ ಅಳುವಿನ ಕಾರಣ ಕೇಳಲಿಕ್ಕಾಗಲಿ, ಸಮಾಧಾನಿಸಲಾಗಲಿ ದಿನೇಶನಿಗೆ ಮನಸ್ಸಾಗಲಿಲ್ಲ. ವಾರದ ನಿದ್ದೆಯನ್ನೆಲ್ಲ ಒಂದೇ ರಾತ್ರಿಯಲ್ಲಿ ಮುಗಿಸಬೇಕು ಎಂದು ಅವನೇ ಆಗಾಗ ಜೋಕು ಮಾಡುವ ಶನಿವಾರದ ಬೆಳಗಿನ ಜಾವ ಅದು. ದಿನದಂತೆ ಆಗಿದ್ದರೆ ಇಷ್ಟೊತ್ತಿಗಾಗಲೇ ಅವನು ರೇಲ್ವೆ ಸ್ಟೇಷನ್ನಿನಲ್ಲಿರಬೇಕಿತ್ತು. ಸುಮ್ಮನೆ ಕೈತೆಗೆದು ಹೊರಳಿ ಮಲಗಿದ. ಎಚ್ಚರಿದ್ದೂ ನಿದ್ದೆ ಬಂದವಳಂತೆ ಉಸಿರು ಕಾದ ಮಾಲತಿಗೆ ಗಂಡನ ಬಗ್ಗೆ ಪಾಪ ಅನ್ನಿಸಿತಾದರೂ ತನ್ನ ಹೊಕ್ಕಳಕುರಿ ಕಿತ್ತುಬರುವ ಸಂಕಟಕ್ಕೆ ಸಣ್ಣಗೆ ಹೀಗೆ ಕಣ್ಣೀರು ಹನಿಸಿ ಶಾಂತಗೊಳಿಸುವುದಲ್ಲದೆ ಮತ್ತೆ ಏನು ಮಾಡಲೂ ತಿಳಿದಿರಲಿಲ್ಲ. ಮದುವೆಯಾದ ಈ ಮೂರು ವರ್ಷಗಳಲ್ಲಿ ಗಂಡನಿಗೆ ಇಷ್ಟದ ಅಡುಗೆ, ಖುಷಿಯಾಗುವ ಬಟ್ಟೆ ಅಂತ ಕಾಳಜಿ ಮಾಡುವ ಹಾಗೆ ಅವನಿಗಿಷ್ಟವಾಗದ ಈ ಅಳುವನ್ನು ಅದುಮಿಡಲೂ ರೂಢಿಮಾಡಿಕೊಳ್ಳುತ್ತಿದ್ದಳು. ಒತ್ತಿ ಹಿಡಿದಷ್ಟೂ ನೆಲಹುಲ್ಲಿನಂತೆ ಠಣ್ಣನೆ ಸೆಟೆದು ನಿಲ್ಲುವ ನೋವಿನ ಮೀಟುತನಕ್ಕೆ ತನಗೆ ತಾನೇ ತಬ್ಬಿಬ್ಬೂ ಆಗುತ್ತಿದ್ದಳು. ಈ ಮೂರು ವರ್ಷಗಳಲ್ಲಿ ಕಿರಿಕಿರಿ ಆಗಿದ್ದರೆ ಅದು ಗಂಟಲೊಳಗೆ ನೆಟ್ಟ ಮೀನಿನ ಮುಳ್ಳಿನಂತ ತನ್ನ ನೋವಿನ ಕಾರಣಕ್ಕೆ ಅಂತ ಅವಳು ಒಪ್ಪಿಕೊಳ್ಳುತ್ತಾಳೆ. ಆದರೆ ದಿನೇಶ ಮಾತ್ರ ಈ ಹೆಣ್ಣನ್ನು ಅರ್ಥಮಾಡಿಕೊಳ್ಳಲಾಗದೆ ಒದ್ದಾಡಿದ್ದಾನೆ. ಹಾಗೆ ಅವಳ ಆಚೀಚೆಗಳನ್ನು ಕೆದಕಿ, ಕೆಬರಿ ಅಲ್ಲಿ ಭರೀ ಒಳಮಣ್ಣಿನ ಆರ್ದ್ರವನ್ನು ಮಾತ್ರ ಕಂಡು 'ಇದೊಂದು ವಿಚಿತ್ರದ್ದು' ಅಂತ ಹೊಂದಿಕೊಳ್ಳಲು ತೊಡಗಿದ್ದಾನೆ. ಆಗೀಗ ಮಾತ್ರ ಅವನ ಸಿಟ್ಟು, ಆರೋಪ ಎಲ್ಲಕ್ಕೂ ತನ್ನ ಈ ವಿಷಾದ ನೆಪವಾಗುವುದು ಮಾಲತಿಗೆ ಮತ್ತಿಷ್ಟು ದಿಗಿಲು ಹುಟ್ಟಿಸುತ್ತಿದೆ. ಅವಳು ಮರೆಯಲಾಗದ ಕೆಲವು ಚಿತ್ರಗಳಲ್ಲಿ ಒಂದು ಹೀಗಿದೆ. ಆವತ್ತು ಮಗುವಿಗೆ ಮೊಲೆ ಕುಡಿಸುತ್ತ ಕೂತವಳಿಗೆ ಹೀಗೇ ಕಣ್ಣೀರು ಇಳಿಯುತ್ತಿತ್ತೇನೋ 'ಏನು ಮಾರಾಯ್ತಿ ಕೂಸಿನ ಬಗ್ಗೆ ಕಾಳಜಿ ಬೇಡವಾ? ಅವೂ ನಿನ್ನ ಕಣ್ಣೀರು ತಿಂದೇ ಬೆಳೀಬೇಕಾ?' ಅಂತ ರಾತ್ರಿ 8 ಗಂಟೆಗೆ ಮನೆಗೆ ಬಂದು ಬೂಟಿನ ಲೇಸು ಬಿಡಿಸುತ್ತಿದ್ದ ದಿನೇಶ ಗದರಿದ್ದ. 'ನೀನು ಬೆಳಿಗ್ಗೆ 5 ಕ್ಕೆ ಹೋಗಿ ಇಷ್ಟೊತ್ತಿಗೆ ಬರೋದು. ಕೂಸಿನ ಕಾಳಜಿ ನನಗಿಲ್ಲವಾ?' ಅಂತೇನೋ ಕೇಳಬೇಕು ಅಂದವಳಿಗೆ ಅದೂ ಆಗದೆ ಬರಿದೆ ಮಿಕಿಮಿಕಿ ನೋಡಿ ಕಣ್ಣೊರೆಸಿಕೊಂಡಳು. ದಿನೇಶನಿಗೂ 'ಛೆ' ಅನ್ನಿಸಿತಾದರೂ ತಾನು ಮಾತಾಡಿದ್ದು ತಪ್ಪೋ ಸರಿಯೋ ತಿಳಿಯದೆ ಗೊಂದಲಿಸಿದ. ಹಾಳಾಗಲಿ ಅಂತ ಟಿ.ವಿ. ಹಚ್ಚಿದ್ದ. ಮತ್ತೆ ಇಂಥವು ರಿಪೀಟಾಗದ ಹಾಗಿರಬೇಕು ಅಂತ ಮಾಲತಿಯೂ ಪ್ರಯತ್ನಿಸುತ್ತಲೇ ಇದ್ದಾಳೆ. ದಿನೇಶನಿಲ್ಲದ ಇಡೀ ಹಗಲು ಅವಳಿಗಿರುವುದರಿಂದ ಇದೆಲ್ಲ ಮುಗಿಸಿ ಹುರುರಾಗಿ ಇರುವ ಸವಲತ್ತು ಸಿಕ್ಕಿಬಿಟ್ಟಿದೆ. ಆಗಾಗ ಒಬ್ಬಳೇ ಮಾತಾಡುವ ಅಳುವ ತಾನು 'ಸರಿಯಿದ್ದೇನೆ ಅಲ್ಲ?' ಅಂತ ತಂತಾನೇ ಮುಟ್ಟಿನೋಡಿಕೊಳ್ಳುವ ಏನೆಲ್ಲ ಚೋದ್ಯಗಳೂ ನಡೆಯತೊಡಗಿವೆ. ಮಗಳು ಹುಟ್ಟಿದ ಮೇಲೆ ನಾನು ಬಹಳ ದುರ್ಬಲಳಾಗುತ್ತಿದ್ದೇನೆಯೇ? ಅಮ್ಮ ಇಲ್ಲದ ಎಷ್ಟೆಲ್ಲ ವರ್ಷ ಕಳೆದಿಲ್ಲವಾ? ಅಂತ ಮತ್ತೆ ಮತ್ತೆ ತನ್ನ ತಾ ರಮಿಸಿಕೊಳ್ಳುವುದೇ ಆಗಿಹೋಗಿದೆ.

ಇದೆಲ್ಲ ದಿನೇಶನಿಗೆ ಗೊತ್ತಿಲ್ಲ ಅಂತಲ್ಲ. ಆದರೆ ಯಾವುದು ಗೊತ್ತು? ಎಷ್ಟು ಗೊತ್ತು ಅಂತ ಅವನೂ ಬಡಬಡ ಹೇಳಿಕೊಂಡವನಲ್ಲ. ಜುಮ್ಮಗೋಡ ನಾರಾಯಣ್ಣನ ಮಗಳು ಮಾಲತಿ, ಬಿ.ಎ. ಇವಳನ್ನು ಮೊಗಟದ ಸುಬ್ರಾಯಣ್ಣನ ಮಗ ದಿನೇಶ ಮಂಗಳೂರಿನಲ್ಲಿ ನೌಕರಿ ಮಾಡುವವ ಮದುವೆಯಾಗುವುದು ಶತಮಾನದ ಅಚ್ಚರಿಗಳಲ್ಲಿ ಒಂದಾಗಿಬಿಟ್ಟಿತ್ತು. ತಾನು ಅಂತಹ 'ಅಹಾ' ಅನ್ನಿಸುವಷ್ಟು ಚಂದ ಅಲ್ಲ. ಅಪ್ಪನ ಪೆನಶನ್ ಮತ್ತು ಒಂದಿಷ್ಟು ಭೂಮಿ ಯಾತಕ್ಕೂ ಸಾಕಾಗಲ್ಲ ಅಂತ ಗೊತ್ತೇ ಇರುವ ಮಾಲತಿಗೂ 'ಯಾವ ದೇವರ ಪ್ರಸಾದ ಇದು' ಅಂತಲೂ ಕನ್‌ಫ್ಯೂಸ್ ಆಗೋ ಹಾಗೆ ಆಗಿತ್ತು. ಬಿ.ಎ. ಮುಗಿಸಿ ನಾಲ್ಕು ವರ್ಷ ದಿನಕ್ಕೊಂದೊಂದು ದೇವರಿಗೆ ನಡೆದುಕೊಳ್ತಾ ಬಚ್ಚಲ ಹೊಂಡದ ಬಾಳೆಗಿಡದ ಹಾಗೆ ಇದ್ದುಬಿಟ್ಟಿದ್ದಳು. ಹಾಗೆ ಕಂಡರೆ ಅವಳು ಶಾಲೆ ಕಲಿತದ್ದೇ ದುಮ್ಮಾನದಲ್ಲಿ. ಕಾಲೇಜಿನ ಸರ್ಕಲ್ಲಿನಲ್ಲಿ ರೊಯ್ಯನೆ ಸೈಕಲ್ ತಿರುಗಿಸಿದ ಯಾವನೋ 'ಎಲ್ಲೋ ಜೋಗಪ್ಪ ನಿನ್ನರಮನೆ' ಅಂತ ಜೋರಾಗಿ ಹಾಡಿಬಿಡುತ್ತಾನೇನೋ, ಇನ್ಯಾವನೋ ಜೋರಾಗಿ 'ಹೋ ಹೋ' ಅಂತ ನಕ್ಕುಬಿಡುತ್ತಾನೇನೋ, 'ಕಲಿಕಾಲ ಮಾರಾಯ, ಆಗಬಾರ್ದಿಲ್ಲ ಆತೀದೋ' ಅಂತ ಯಾವುದೋ ವ್ಯಂಗ್ಯ ಅನ್ನೋ ಬುಗಿಲಿ ಸಲ್ಲಿ ಬೆವರಿಳಿದು ಕಾಲ ಚಪ್ಪಲಿ ಸಳಸಳ ಜಾರುತ್ತಿತ್ತು. ಹಾಗೆಲ್ಲ 'ಟೊಂಟ್ ಹೊಡೆಯುವವರು' ಯಾರೋ ಅಲ್ಲ, ಅಲ್ಲೇ ಮನೆ ಸುತ್ತಮುತ್ತಲವರೇ. ಮೊಕ ಎತ್ತಿ ಕಂಡರೆ ಸೀತಕ್ಕನ ಮಗನೋ, ಪರಮೇಸರಣ್ಣನ ಮಗನೋ ಹಿಂಗೆ ನಮ್ಮವರು ಅಂತ ಆಗಿರುವವರು. ಚೂರು ಬಂಡಿಹಬ್ಬದ ಕರೆ, ಲಗ್ನಪತ್ರಿಕೆ ಕರೆ ನೆನಪಿಟ್ಟರೆ ದೂರದ ಹತ್ತಗಡಿ ಯವರೇ. ದ್ಯಾಮಜ್ಜಿ ಹೇಳೋ ಹಂಗೆ 'ಉಂದೇ ಬೇರ ಮಗಾ. ಹ್ಯಾಂಗ ಹ್ಯಾಂಗೋ ಸುತ್ತ ಹರದಾಡವ ಅಟ್ಟೆ' ದಿನೇಶ ಮದುವೆಗೆ ಒಪ್ಪಿದಾಗಲೂ ಅವರ ಅವ್ವ ಅನ್ನಪೂರ್ಣ ತನ್ನ ತವರುಮನಿ ಹತ್ತಗಡಿ ಅಂತ ವೆಂಕಟ್ರಮಣ ದೇವರ ಮುಂದೆ ದ್ಯಾಮಜ್ಜಿ ತುಪ್ಪದ ದೀಪ ಹಚ್ಚಿದ್ದಳು. ಕನ್ನಡ ಶಾಲೇಲಿ ಗೆಳತಿಯರಾಗಿದ್ದ ಸುಮಿತ್ರ, ಸಂಧ್ಯಾ ಜಾನಕಿ ಎಲ್ಲ ಹೈಸ್ಕೂಲಲ್ಲಿ ಕಡೆಗೆ ಕಾಲೇಜಿನಲ್ಲೂ ನಕ್ಕಾಗೆ ಮಾಡ್ತ ನಗದೆ, ಮಾತಾಡಿದಂಗೆ ಮಾಡ್ತ ಮಾತಾಡದೆ ಹಿಂದಿನಿಂದ ಪಿಸಿಪಿಸಿ ಮಾಡುತ್ತಿದ್ದ ಆ ಅಖಂಡ ಕಾಲವನ್ನು ಅದು ಹೇಗೆ ದಾಟಿದೆ ಅಂತ ನೆನೆಸಿಕೊಂಡರೆ ಈಗಲೂ ಮಾಲತಿಗೆ ಚಿಟ್ಟೆ ಚಿಟ್ಟ ಚೀರಿ ಅಳುವಂತೆ ಆಗಿಬಿಡುತ್ತದೆ. ಮದುವೆಗೆ ಮಧ್ಯಸ್ಥಿಕೆ ಮಾಡಿದ್ದ ಎಂಟ್ರಾಯಣ್ಣ 'ಪಾಯಸ ಉಂಬೋ ದಿನ' ದೊಡ್ಡ ದನೀಲಿ 'ಇಟ್ಟ ಉರ್ಸ ನೋಡಿ ನಾ ಮಗುನ್ನ ಉಂದ ಕೂದಲೆಳಿಯಟ್ಟ ಕೊಂಕ ತಿಗೋಕ್ಕಾಗ. ಇಂಥ ಮುಗ ಸಿಗೂದು ನಸೀಬ" ಅಂದಿದ್ದ. ಎಷ್ಟೋ ವರ್ಷ ಕತ್ತಿನ ಮೇಲೆ ಮೂಟೆ ಹೊತ್ತವಳಂತೆ ಬದುಕಿದ್ದವಳು ಮೊದಲ ಬಾರಿ ಹೊರೆ ಇಳಿಸಿದವಳ ನಿರಾಳದಲ್ಲಿ ಅತ್ತಿದ್ದಳು. 'ನನ್ನ ಮಗ್ಳ ವಕೀಲ್ಕಿ ಮಾಡ್ಬೇಕ ಹಾಂ' ಅನ್ನುತ್ತ ಶಟ್ಲಿ ನುರ್ದು ತಿನ್ನಿಸ್ತಿದ್ದ ಅಮ್ಮನ ನೆನಪು ಅಳಿಸ್ತಾ 'ಮಾಲತಿ ಪಾಸ್ ಕಡಾ, ಮಾಲತಿ ಪಳದಿ ಲಾಯ್ಕ ಮಾಡ್ತಿದ ಕಡಾ, ಮಾಲತಿ ಗನಾ ಮುಗ ಕಡಾ ಪಾಪ' - ಇಷ್ಟು ಸರ್ಟಿಫಿಕೇಟ ಸಂಪಾದಿಸುವಲ್ಲಿ ಜೀವ ಹುರುಪಳಿಸಿ ಹೋಗಿ ಬಿಟ್ಟಿತ್ತು. ಮಗಳನ್ನು ವಕೀಲಿ ಮಾಡಿಸ್ಬೇಕಂತ ಕನಸು ಕಂಡಿದ್ದ ಗ್ರಾಮಸೇವಕಿ ಶಾಂತಕ್ಕ ಮಗಳನ್ನ ಮಾತು ಸತ್ತವಳನ್ನಾಗಿ ಮಾಡಿ ಬಿಸಾಡುತ್ತಾಳೆಂದು ಯಾರು ನಂಬಲು ಸಾಧ್ಯವಿತ್ತು?

ಏನಾಗಿತ್ತು ನನ್ನ ಅಮ್ಮನಿಗೆ? ಹಾಗ್ಯಾಕೆ ಮಾಡಿದಳು? ಈ ಪ್ರಶ್ನೆ ಮಾಲತಿಯೊಳಗೆ ಸಣ್ಣಗೆ ನುಲಿದು ನುಲಿದು ತಿಕ್ಕಿತಿಕ್ಕಿ ಕರ್ಪೂರದ ಹಾಗೆ ಅವಳೊಳಗೆಲ್ಲ ಹಬ್ಬಿಕೊಂಡುಬಿಟ್ಟಿದೆ. ಆವತ್ತು ಹಿಂಚಡಕ್ಕೆ ನೌಕರಿಗೆ ಹೋದ ಅಮ್ಮ ಮನೆಗೆ ಬರದೇ ಯಾರ ಹತ್ತಿರವೊ ಅಪ್ಪನಿಗೆ ಒಂದು ಲಕೋಟೆ ಕಳಿಸಿದ್ದಳು. "ಕ್ಷಮಿಸಿ, ನಾನು ಇನ್ನು ಮನೆಗೆ ಬರುವುದಿಲ್ಲ. ಹುಡುಕುವುದೆಲ್ಲ ಬೇಡ. ಮಾಲತಿ ಯಾವತ್ತೂ ನನ್ನ ಮುದ್ದು ಮಗಳೇ, ಸಾಧ್ಯವಾದರೆ ಈ ಅಮ್ಮನನ್ನು ಕ್ಷಮಿಸು." ಜಗಲಿ ಮೇಲೆ ಕೂತು ದಾಡಿ ಕೆರೆದು ಕೆರೆದು ನುಣ್ಣಗೆ ಸವರಿಕೊಳ್ಳುತ್ತ, ಸಮ ಸಮ ಹತ್ತು ಕೊಡ ನೀರನ್ನಾದರೂ ತಲೆದಿಡೀ ಸುರುವಿಕೊಂಡು ಜಳಕ ಮಾಡುತ್ತ ಥೇಟ್ ನಾರಾಯಣ ದೇವರಂತೆ ಹಸನ್ಮುಖಿಯಾಗಿರುತ್ತಿದ್ದ ಅಪ್ಪ ಆವತ್ತು ಹಾಕಿದ ದಿಗಿಣ ಕಂಡರೆ... ಆ ಚೀಟಿಯನ್ನೇ ಕಚಪಚ ತುಳಿದಿದ್ದ. ಅಜ್ಜಿ ಕೈಯಿಂದ ಚೀಟಿ ಸಕುಟುಂಬ ಪರಿವಾರ ವರ್ಗದ ಓದಿನ ಉಸ್ತುವಾರಿಕೆಗೆ ಕೈಬದಲಿ ಆಗಿ ಆಗಿ ಯಾವುದೋ ಅಪಶಕುನ ಅನ್ನುವಂತೆ ಮತ್ತೆ ಮನೆಗೆ ಬಂದಿತ್ತು. ಸತ್ತ ಮನೆಗೆ ಮಾತಾಡಿಸಲು ಬರುವವರಂತೆ ಆಗುವವರು ಆಗದವರು ನಕ್ಕವರು ಅತ್ತವರು ಎಲ್ಲ ಬಂದು, ಅಮ್ಮನ ಫೋಟೋದಿಂದ ಚಪ್ಪಲಿವರೆಗೆ ಎಲ್ಲ ಬಿಸಾಕಿ, ಮುಚ್ಚಿ ಕಪಾಟಿಗೆ ಹಾಕಿ, ಆಟದ ಹಿಂದಿನ ಬಣ್ಣದ ಚೌಕ ಯಂತೆ ಮನೆ ಅನ್ನೋ ಮನೆ ಅಪರಾತಪರಾ ಆಗಿ ದಿಕ್ಕೆಟ್ಟು ತಲೆಕೆಳಗೆ ಹಾಕಿ ಕೂತಾಗ ತಾಯ ಸೆರಗಿನ ಮರೆಯಲ್ಲಿ ಬೆಳೆಯುತ್ತಿದ್ದ ಮಾಲತಿ ಎಂಬ ಹೆಣ್ಣು ಕೂಸಿನ ಸ್ಥಿತಿ ಏನಾಯಿತೆಂದು ಯಾರು ನೋಡಬೇಕು? ಎಲ್ಲರಿಗೂ ಅವರವರಿಗೆ ಹತ್ತಿದ್ದನ್ನು ಒರೆಸಿ ಒರೆಸಿ ಒಟ್ಟು ಹಾಕುವ ಧಾವಂತ. ಈಗಲೂ ಮಡಚಿ ಮಡಚಿ ಮುಪ್ಪಡರಿ ಹೋದ ಆ ಚೀಟಿಯನ್ನು ತಾನು ಯಾಕೆ ಕಾದು ಕದ್ದು ಇಟ್ಟುತಂದೆ ಅನ್ನುವುದು ಮಾಲತಿಗೂ ಸ್ಪಷ್ಟವಿಲ್ಲ. ಅಪ್ಪ ಅಮ್ಮ ಮತ್ತು ತಾನು ಇರುವ ಒಂದು ಹಳೆಯ ಫೋಟೋ ಮತ್ತು ಅಮ್ಮ ಓಡಿಹೋಗುವ ಹಿಂದಿನ ಸಂಕ್ರಾಂತಿಗೆ ತಂದುಕೊಟ್ಟಿದ್ದ ಕೆಂಪು ಫ್ರಿಲ್ಲಿನ ಫ್ರಾಕು ಅವಳ ಗುಪ್ತನಿಧಿಯಾಗಿ ಉಳಿದುಬಿಟ್ಟಿವೆ. ಕೆಲವೊಮ್ಮೆ ಕಂದ ಅಮೂಲ್ಯ ಮಲಗಿದ ಮಧ್ಯಾಹ್ನ ಇವೆಲ್ಲ ಹೊರಬಂದು ಕೋಣೆಯಲ್ಲಿ ಹರಡಿ ಕೆಲವು ಕಣ್ಣೀರಿನ ಹನಿ ತಿಂದು ಮತ್ತೆ ಒಳಹೋಗುತ್ತವೆ.





• ಡಾ. ವಿನಯಾ

ನಿನ್ನ ಕಂಡೆ ಮಾಯಿ

ಇದರ ಅರ್ಥ ಮಾಲತಿಯೇ ಸಾವಿರ ಸಲ ಮತ್ತೆ ಮತ್ತೆ ಹೇಳಿಕೊಂಡ ಹಾಗೆ ಅವಳಿಗೇನೂ ಅಮ್ಮನ ಬಗ್ಗೆ ಪ್ರೀತಿಯಿದೆ ಅಂತಲ್ಲ ಅಥವಾ ಹೀಗೆ ಎಲ್ಲರೂ ಹೇಳುತ್ತಿದ್ದ ಹಾಗೆ 'ಗಂಡ ಬೇಡ, ಮಗಳೂ ಬೇಡವಾ? ಅಂತ ಯಾರದೋ ಹಿಂದೆ ಓಡಿಹೋದವಳನ್ನು ಪ್ರೀತಿಸುವುದ ಕ್ಯಾಗುತ್ತದಾ?' ಎಷ್ಟು ಸಲ ಮಾಲತಿಯೇ ಅಂದುಕೊಂಡಿಲ್ಲ, ಅಮ್ಮ ಸತ್ತು ಹೋಗಿದ್ದರೆ ಎಷ್ಟು ಛಲೋ ಇರ್ತಿತ್ತು, ಈ ಚೀಟಿ ಬಂದ ಹಾಗೆ 'ಹೀಗೆ ಹೀಗೆ' ಅಂತ ಒಂದು ತಾರು ಬಂದರೆ? ಕಡೆಗೆ ಒಂದು ಸುದ್ದಿ ಬಂದರೆ? ಹೋಗಲಿ, ಎಂಥದೋ ಕೆಟ್ಟ ಕಾಯಿಲೆಯಂತೆ. ಗಂಡನಿಗೆ ಮಗಳಿಗೆ ಹತ್ತಿಗ್ಗಿತ್ತೀತು ಅಂತ ಹೆದರಿ ಯಾವುದೋ ಆಶ್ರಮ ಸೇರಿದಳಂತೆ ಅಂತ ಒಂದು ಫೋನು, ಊಹುಂ ಟಿ.ವಿ. ಸೀರಿಯಲ್ಲುಗಳ ಗುಂಟ ಮಾಲತಿ ತನ್ನ ಸಂಕಟಕ್ಕೊಂದು ಮುಕ್ತಾಯ ಕೊಡಲು ತವಕಿಸಿದ್ದೇ ಬಂತು. ಕಡೆಕಡೆಗೆ ಮನೆ ಅನ್ನೋದು ಹೊರಗಿನ ಯಾವ ಗಾಳಿಯೂ ಹೊಕ್ಕಾಡದಷ್ಟು ಬರಿಯಾಯ್ತು. ಅಮ್ಮ ಇಲ್ಲವಾಗುತ್ತ ನೆನಪು ಒಳಗೇ ಕೊಳೆತು ದಫನ್ ಆಗುತ್ತ, ಅಮ್ಮನ ಬಗ್ಗೆ ಉಸಿರೆತ್ತುವುದೇ ಮಹಾಪರಾಧವಾಗುತ್ತ ಅಪ್ಪಿತಪ್ಪಿ ದ್ಯಾಮಜ್ಜಿಯ ಕೂಡ ಎಲ್ಲೋ ಹೋದರೆ 'ಓ ನಾರಾಯಣನ ಮಗ್ಳ, ಪಾಪ' ಅಂತ ಕರುಣೆಯ ತುರಿಕೆ ಹತ್ತಿಸಿಕೊಂಡು ಇಲ್ಲಿಯವರೆಗೆ ಬಂದಾಗಿತ್ತು. ಆಗಾಗ ಮಾಲತಿ ತನ್ನೊಳಗೆ ಕುದ್ದು ಕುದ್ದು ಅರಳಿ ಮಂತ್ರವಾದಂತ ಮಾತುಗಳನ್ನು ಹೇಳಿಕೊಳ್ಳುವುದಿದೆ. 'ತಾನು ಮಾಲತಿ ಅನ್ನೋ ಹೆಣ್ಣಾಗಲಿಲ್ಲ, ಗ್ರಾಮಸೇವಕಿ ಶಾಂತಳ ಮಗಳಲ್ಲವಾಗುವ ದರ್ದಿನಲ್ಲಿಯೇ ಕಳೆದುಹೋದೆ.'


ಮಾಲತಿಯದು ಯಾವತ್ತೂ ಈ ಹಿಂಗಾಲಿನ ನಡಿಗೆ. ಅವಳಿಗೆ ಗೊತ್ತು, ಅದು ಎಷ್ಟು ಭಯಾನಕ ಅಂತ. ಮುಖ ಅಡಿಯಾಗಿ ಬಿದ್ದರೆ ಎದೆಯನ್ನು ಮಣ್ಣಾದರೂ ತಡವುತ್ತದೆ. ಮುಖ ಮೇಲೆ ಮಾಡಿ ಬಿದ್ದರೆ ಕಣ್ಣೆದುರು ಬರೀ ಖಾಲಿ ಆಕಾಶ ಕವಚಿಕೊಳ್ಳುತ್ತದೆ. ಯಾರು ಇದನ್ನು ಬೇಕು ಅಂತಾರೆ? ಮಾಲತಿಯೂ ಇತ್ತಿತ್ತಲಾಗಂತೂ ಮುರಿದ ಕಾಲನ್ನು ಎತ್ತಿ ಹಾಕುವವಳಂತೆ ತನ್ನನ್ನು ಹಿಂಚಡದ ದಿನೇಶನ ಹೆಂಡತಿಯಾಗಿ ಮಾತ್ರ ಇಟ್ಟುಕೊಳ್ಳಲು ನೋಡುತ್ತಿದ್ದಳು. ಹಾದಿಬದಿ ಪಾನಿಪುರಿ ತಿಂದು ಹೊಹೊಹೊ ಅಂತ ಎಂತದಕ್ಕೋ ನಕ್ಕು ಗಂಡನ ಬೈಕ್ ಹಿಂದೆ ಕೂತು ಬಂದ ರಾತ್ರಿಯೂ ಮಗಳಿಗೆ ಮೊಲೆ ಉಣ್ಣಿಸುವಾಗ 'ಅಮ್ಮ ನನ್ನನ್ನು ಹೀಗೆ ಎತ್ತಿಕೊಂಡಿರಬಹುದೇ? ನಾನವಳ ಮೊಲೆಯನ್ನು ಹೀಗೇ ಕುಡಿದಿರಬಹುದೆ? ಮತ್ತೆ ಯಾಕೆ ಅವಳು ಎಲ್ಲ ಬಿಸಾಕಿ ಹೋದದ್ದು?' ಅಂತನೇ ಕುದಿ ಯಾಗುತ್ತಿತ್ತು. ಮದುವೆ ಆಗಿ ಬಂದಮೇಲೆ ಅಮ್ಮ-ಅಪ್ಪನ ಸಂಬಂಧದ ನೆನಪನ್ನೂ ಹೆಕ್ಕಿ ಹೆಕ್ಕಿ ತೆಗೆದಿದ್ದಳು. ಅವರಿಬ್ಬರೂ ಪ್ರೀತಿಯಿಂದ ಮಾತಾಡಿಕೊಂಡದ್ದಾಗಲಿ ಸಿಟ್ಟಿನಿಂದ ಕಿರುಚಾಡಿದ್ದಾಗಲಿ ನೆನಪಾಗುತ್ತಿರಲಿಲ್ಲ. ಅಮ್ಮ ಮಾತ್ರ ಆಗಾಗ ನನ್ನ ದಟ್ಟ ಕೂದಲಿಗೆ ಎಣ್ಣೆ ಹಚ್ಚುವಾಗ, ಬಾಚುವಾಗ 'ಇಕಾ ಹಿಂಗೆ ಮಾಲತಿ. ಕಲ್ತಕಾ ನನ್ನೇ ಕಾಯ್ಬೇಡ ತಿಳ್ತಾ' ಅಂತ ನಡುಗುವ ಕಂಠದಲ್ಲಿ ಉಸುರುತ್ತಿದ್ದುದು ಬೆನ್ನಿಗೆ ಬೆಚ್ಚಗೆ ಹತ್ತಿದಂತಿದೆ. ಹೀಗೆ ಮಾಲತಿ ನೂಲು ಸುತ್ತುತ್ತಿರುವುದನ್ನು ದಿನೇಶ 'ಮಮ್ಮಿಯಾಗುವುದು' ಅಂತ ಅಣಕಿಸುತ್ತಾನೆ. ಅವನ ಮೂಡು ಸರಿಯಿದ್ದರೆ ನಿಂತನಿಂತಲ್ಲೇ ಇಲ್ಲವಾಗಿಬಿಡುವ ಅವಳು ಅವನ ಮಾತಿನಲ್ಲಿ 'ಈಜಿಪ್ಟಿನ ಮಮ್ಮಿಯಾದಳು' ಅಂತ ಲೆಕ್ಕ. ಇವತ್ತು ಬೆಳಿಗ್ಗೆ ಬೆಳಿಗ್ಗೆ ಹಾಸಿಗೆಯಲ್ಲೇ ಕಣ್ಣು ತೆಗೆದು ಬಿದ್ದವಳನ್ನು ... 'ಏನೆ, ಮತ್ತೆ ಮಮ್ಮಿ ಆದೆಯಾ?' ಅಂದ. ಧಿಗ್ಗನೆ ಎದ್ದು ಕೂತವಳೆ 'ನಿನ್ನೆ ಅಮ್ಮ ಕಂಡಿದ್ದಳು' ಅಂತ ಬಿಕ್ಕಲು ಶುರು. ಈಗ ಮೆಟ್ಟಿ ಬಿದ್ದು 'ಎಲ್ಲೇ' ಅಂತ ಕೂಗಿದ್ದು ದಿನೇಶನೇ. ಮಾಲತಿ ಹೇಳುವ 'ಕಂಪ್ಯೂಟರ್ ಕಲ್ಲು' ದಿನೇಶನಂತ ದಿನೇಶ ಕೂಡ ಆ ಕ್ಷಣ ಮೊಣಕಾಲಲ್ಲಿ ಮುಖ ಹಾಕಿ ಅಳುತ್ತಿದ್ದವಳನ್ನ ಬಳಸಿ ಎದೆಗಾನಿಸಿಕೊಂಡ ಅವಳ ಮಾತನ್ನು ಕೇಳಲು 'ಇಕಾ ನಾನಿದ್ದೇನೆ' ಅನ್ನುವ ಹರಹಿನಲ್ಲಿ.


ನಿನ್ನೆ ಮಾಲತಿ ಮನೆಯ ಟೆರೇಸಿನ ಮೇಲೆ ಬಟ್ಟೆ ಹಾಕುತ್ತಿದ್ದಾಗ, ಕೆಳಗೆ ಬಾಗಿಲ ಮುಂದಿನ ರಸ್ತೆಯಲ್ಲಿ ಯಾರೋ 'ಮೇಡಂ ಮೇಡಂ' ಅಂತ ಕರೆದದ್ದು. ಓ ಅನ್ನುವುದರೊಳಗೆ 'ಮೇಡಂ ಸ್ಪೇಷಿ ಕನ್ಸೇಶನ್ ರೇಟದೆ' ಅಂತ ಹಳದಿ ಹಸಿರು ಪ್ಯಾಕ್ ತೋರಲು ಅವಳು ಕೈ ಎತ್ತುವುದಕ್ಕೂ, ಮಲಗಿದ್ದ ಅಮೂಲ್ಯ ಏಳುತ್ತಾಳೆ ಅಂತ ಇವಳು ಅಲ್ಲಿಂದಲೇ 'ಬೇಡ ಬೇಡ ಹೋಗಿ' ಅಂತ ಕೂಗಿ ಮುಂದೆ ಬರುವುದಕ್ಕೂ, ಅವಳು ಸೋತವಳ ಹಾಗೆ ಕೈ ಇಳಿಸಿ ಹೆಗಲ ಚೀಲವನ್ನು ಈ ಕಡೆಯಿಂದ ಆ ಕಡೆ ಹಾಕಿಕೊಂಡು, ಕಪ್ಪು ಬಿಳಿ ಕೂದಲಿನ ಗಂಟು ಕಟ್ಟಿದ ಕಪ್ಪು ಬಣ್ಣದ ಮುದುಕಿ ಒಡೆದ ಹಿಮ್ಮಡಿ ಎತ್ತಿ ಮುಂದೆ ಸರಿಯುವುದಕ್ಕೂ, ಸರಿಯಾಗಿ ಬಿಟ್ಟಿತ್ತು.

ಮಾಲತಿಗೆ ಆ ಕ್ಷಣ ಏನಾಯಿತು ಅಂತ ಈಗಲೂ ಹೇಳಲಾಗುತ್ತಿಲ್ಲ. 'ಅಮ್ಮಾ' ಅಂತ ತಾನು ಚೀರಿಬಿಟ್ಟದ್ದು ಅವಳಿಗೂ ಕೇಳಿಸಿದೆ ಮತ್ತು ಅವಳು ಅಮ್ಮನೇ. ಅದಕ್ಕೇ ಮುಂದಿನ ಮನೆಯಲ್ಲಿ ಕೇಳದೆ, ಅಥವಾ ನನಗೂ ಮತ್ತೊಮ್ಮೆ ಸ್ಪೇಷಿ ಅಂತ ಎಲ್ಲರಂತೆ ಪಿರಿಪಿರಿ ಹಚ್ಚದೆ ಹೋಗಿಬಿಟ್ಟಿದ್ದಾಳೆ ಮತ್ತು ಅತ್ತ ಹೋಗುತ್ತ ಸೆರಗಿಂದ ಕಣ್ಣು ಒತ್ತಿಕೊಂಡಿದ್ದಾಳೆ ಮತ್ತು ಮೂಗಿನ ಆ ಕೆಂಪು ಹರಳಿನ ನತ್ತು ಖಂಡಿತ ಅಮ್ಮನದೇ ಮತ್ತು ನಾನು ಹುಚ್ಚಿಯ ಹಾಗೆ ನಿಂತುಬಿಟ್ಟೆ. ಓಡಿಹೋಗಬೇಕಿತ್ತು, ಹೋಗಿ ಕರೆಯಬೇಕಿತ್ತು, ಕೇಳಬೇಕಿತ್ತು, ಅಂತ ಹೀಗೆ ಏನೇನೋ... ಪುಟ್ಟ ಕೂಸಿನ ಹಾಗೆ ಅರ್ಧರ್ಧ ಮಾತು. ಎಷ್ಟೆಲ್ಲ ಕೊಂಡಿಗಳು. ದಿನೇಶ ಮಾಲತಿಯ ಬೆನ್ನು ಸವರುತ್ತ ಉಗುಳು ನುಂಗುತ್ತ ಕುಳಿತ. ಅವಳು ಅಮ್ಮ ಹೌದಾ? ಹಾಗಾದರೆ ಅವ ಎಲ್ಲಿ? ಅಥವಾ ಅವಳು ಇನ್ನಾರದೋ ಅಮ್ಮನೋ? ಸಿಗಲಾರದ ಎಳೆಗೆ ಎಲ್ಲಿ ಬೆಸುಗೆ? ಕಂಡ ಹಾಗೆ ಇದ್ದೂ ಕಾಣಲಾಗದ ಏನೆಲ್ಲ ಈ ಬೆಳಕಿನ ಕಣಗಳಡಿ ಕೂತಿವೆ. ಏನು ಮಾಡಬೇಕೋ ತೋಚಲಿಲ್ಲ ದಿನೇಶನಿಗೆ. ತೋಚಿದ್ದು ಇಷ್ಟೇ. "ನಿನ್ನ ಸೀರೆಯ ಮಡಿಕೆಯೊಳಗಿನ ಆ ನಿಮ್ಮ ಹಳೇ ಫೋಟೋ ಇದೆಯಲ್ಲ, ಅದನ್ನು ಶೋಕೇಸಿಗೆ ಇಡುವಾ. ನಮ್ಮ ಮದುವೆಯ ಫೋಟೋ ಪಕ್ಕವೇ. ಸದ್ಯಕ್ಕೆ ನೀನು ಸಮಾಧಾನ ಮಾಡಿಕೋಬೇಕು ಅಷ್ಟೇ. ಅವಳು ಅಮ್ಮ ಹೌದಾ ಅಲ್ಲವಾ ಎಂತ ಹೇಳುವುದು ಮಾರಾಯ್ತಿ? ಅಮ್ಮ ಆಗಿದ್ದರೆ ಅವಳು ಮತ್ತೊಮ್ಮೆ ಯಾವಾಗಲೋ ಹಾಯುತ್ತಾಳೆ. ಆಗ ಗಬಕ್ಕನೆ ಹಿಡಿದುಬಿಡುವಾ ಆಯ್ತಾ" ಅಂದ. ಅಮ್ಮನೊಟ್ಟಿಗೆ ಹನೇಹಳ್ಳಿಯ ಗದ್ದೆ ಹಾದು ಅಜ್ಜನ ಮನೆಗೆ ಹೋಗುವಾಗ ಚಟ್ಟೆ ಹಿಡಿಯಲಾಗದೆ ಕುಸುಕುಸು ಮಾಡುವಾಗ ಅಮ್ಮ ಹೀಗೇ ಹೇಳುತ್ತಿದ್ದಳು. 'ಮತ್ತೆ ಹಿಡಿಯುವಾ ಮಗಾ, ಈಗ ಬಾ'. ಮಾಲತಿ ಕಣ್ಣೊರೆಸಿಕೊಂಡಳು. ಮಲಗಿದ್ದ ಕೂಸು ನಿದ್ದೆಗಣ್ಣಲ್ಲಿಯೇ ಹಾಲು ಕುಡಿದಂತೆ ಬಾಯಿ ಪಿಟಪಿಟ ಮಾಡುತ್ತಿತ್ತು.

ne deepest definition of youth is
yet untouched by tragedy.
lfred North Whitehead


ಭ್ರಷ್ಟಾಚಾರ, ಕೋಮುವಾದ, ಪ್ರಾಕೃತಿಕ ಸಂಪತ್ತಿನ ಲೂಟಿ, ಕನ್ನಡ ಭಾಷೆ, ನೆಲ-ಜಲಕ್ಕೆ ಆಗುತ್ತಿರುವ ಅನ್ಯಾಯದ ಪ್ರಶ್ನೆಯನ್ನೆತ್ತಿಕೊಂಡು ಯಾಕೆ ಯಾವಾಗಲೂ ಅದೇ ದೇವನೂರ ಮಹಾದೇವ, ಅದೇ ಅನಂತಮೂರ್ತಿ, ಚಂಪಾ, ಬರಗೂರು, ಜಿ.ರಾಜಶೇಖರರು ಮಾತ್ರ ಕಾಣಿಸಿಕೊಳ್ಳುತ್ತಾರೆ? ಈ ಹೊಸ ತಲೆಮಾರಿನ ಹುಡುಗರಿಗೇನಾಗಿದೆ? ಪತ್ರಿಕೆಗಳಲ್ಲಿ ಪ್ರಕಟವಾಗುವ ಟಾಪ್‌ಟೆನ್ ಕೃತಿಗಳ ಲೇಖಕರ ಪಟ್ಟಿಯಲ್ಲಿ ಕಾಣಿಸಿಕೊಳ್ಳುವ ಯಾರೊಬ್ಬರೂ ಯಾಕೆ ಯಾವ ಹೋರಾಟಗಳಲ್ಲೂ ಕಣ್ಣಿಗೆ ಬೀಳುವುದಿಲ್ಲ?





ಪ್ರಬಂಧ

ನನ್ನ ಕಾಲದ ತಲ್ಲಣಗಳು



■ ಕೆ.ಎಲ್.ಚಂದ್ರಶೇಖರ್ ಐಜೂರ್

...ಮಾಗಿ ಎಂಟು ತಿಂಗಳ ಹಿಂದೆ ಇದೇ 'ಲಂಕೇಶ್' ...ಕೆಯಲ್ಲಿ 'ದೇಶಕಾಲ'ದ ಕುರಿತು ಚರ್ಚೆ ಶುರು ...ಅದೇ ಹೊತ್ತಿಗೆ ನನ್ನೂರು ರಾಮನಗರದ ಸಮೀಪ ...ಯಲ್ಲಿ ಮೇಲ್ವರ್ಗದವರು ದಲಿತರನ್ನು ಸಾಮಾಜಿಕ ...ಕ್ಕೆ ಒಳಪಡಿಸಿದ್ದರು. ಒಂದು ಸಂಜೆ ಬಸ್ಸಿನಿಂದಿಳಿದು ...ಾಟುತ್ತಿದ್ದ ನನ್ನನ್ನು ಗೆಳೆಯ ಪ್ರಕಾಶ್ ...ದವರಿಗಂತೂ ಅಂಕನಹಳ್ಳಿ ಗೊತ್ತಿಲ್ಲ, ನಿನಗೂ ...ಗುರು? ಈ ಸಮಾಜದ ಕಷ್ಟಗಳಿಗೆ ಯಾವತ್ತೂ ...ಕೊಡದ ಆ ಗೊಡ್ಡುಗಳೊಂದಿಗಿನ ವಾಗ್ವಾದವೇ ...ಖ್ಯವಾ?" ಎಂದು ಮುಖಕ್ಕೆ ಹೊಡೆದಂತೆ ಪ್ರಶ್ನೆ ...ನಾನು ರೈತನಾಯಕಿ ಅನುಸೂಯಮ್ಮನವರೊಂದಿಗೆ ...ಗೆ ಹೋಗುವತನಕ ಪಾಪಪ್ರಜ್ಞೆಯಲ್ಲಿ ಬೇಯುತ್ತಿದ್ದೆ. ...ಲಿಟ್ಟಾಗ 'ನಮಗಿದೇನೂ ಹೊಸದಲ್ಲ, ಗಾಯ ...ಂಡು ಮಾಡಿಸಿಕೊಂಡು ರೂಢಿಯಾಗಿ ಬಿಟ್ಟಿದೆ. ...ರೊಂದಿಗೆ ಬದುಕುವುದನ್ನು ಕಲಿತು ಕೊಂಡಿದ್ದೇವೆ' ...ಭಂಗಿಯಲ್ಲಿ ನಾಲ್ಕೈದು ಮಂದಿ ಇಳಿವಯಸ್ಸಿನ ... ನನಗೆ ಕಂಡರು. ಅಲ್ಲಿಂದ ನೂರು ಮೈಲಿ ...ಮೈಸೂರು ಕಡೆಯ ಹಳ್ಳಿಯೊಂದರ ದಲಿತರ ...ಜಾವರ ವಿಶ್ವೇಶರ ತೀರ್ಥರು ಕಾಲಿಟ್ಟು 'ಅಸ್ಪೃಶ್ಯತೆ ...ನ್ನು ಮೇಲೆ ಎಸಗಿರುವುದು ಕ್ರೌರ್ಯ' ಎಂದು ...ಾಧ್ಯಮದ ಬ್ರೇಕಿಂಗ್ ನ್ಯೂಸ್‌ಗಳಲ್ಲಿ ಮಿಂಚುತ್ತಿದ್ದರು. ...ಾಡುವವರ ಹಾದಿಬೀದಿಗಳಲ್ಲಿ ತಿಂದು ಬೆಳೆದು ...ನರಾಗಿರುವ ಪೇಜಾವರರಂಥವರು ಕೊಲೆಗಡುಕರ ...ಿ ಹೋಗಿ 'ನೀವು ಮಾಡುತ್ತಿರುವ ಕ್ರೌರ್ಯ ...ೂ ನಿಲ್ಲಿಸಿ' ಎಂದು ಹೇಳುವಷ್ಟು ಶುದ್ಧ ...ನ್ನು ಯಾವ ದೇವರಿಂದಲೂ ಪಡೆದುಕೊಂಡಿಲ್ಲ ...ಂದು ನಾನು ನನ್ನ ಗೆಳೆಯರು ಹೇಳಿಕೊಂಡು ...ಗೆ ನಕ್ಕು ಸುಮ್ಮನಾಗಿದ್ದೆವು.

...ಶ್ಯತೆಯನ್ನು ಜೀವಂತವಾಗಿಡುವ ಇಂಡಿಯಾದ ...ದವರ ವಿಕಾರಗಳು ಕೊಬ್ಬುತ್ತಿರುವಾಗಲೇ ...ನಲ್ಲಿ ದಲಿತರು ಮೈಮೇಲೆ ಮಲ ಸುರಿದುಕೊಂಡು ...ಗಿಳಿದಿದ್ದಾರೆ. ಮನುಷ್ಯತ್ವದ ಪರ ನಿಲ್ಲುವ ಯಾರೂ ... ಮಾದರಿಯ ಹೋರಾಟವನ್ನು ಒಪ್ಪಲಾರರು. ...ದ ಪ್ರಖರ ಮತ್ತು ಪರ್ಯಾಯ ಮಾದರಿಯನ್ನು ...ಕಿದ ದಲಿತ ಚಳವಳಿ ಈಗ ಲೆಟರ್‌ಹೆಡ್ ... ರೂಪತೊಟ್ಟಿದೆ. ಈ ಸಂಘಟನೆಗಳ ನಾಯಕರ ...ತನ ಶೋಷಿತರ ಮಾತೆಯಂತಿರುವ ಅಂಬೇಡ್ಕರ್ ...ವಾದ ವ್ಯಕ್ತಿತ್ವವನ್ನು ಕಿರಿದುಗೊಳಿಸುತ್ತಿದೆ. ಚಳವಳಿ ...ೂರ್ಣ ದಾರಿ ತಪ್ಪಿದ್ದರಿಂದಲೇ ಬಿಜೆಪಿಯಂತಹ ...ನಮ್ಮನ್ನು ಬಿಗಿಯಾಗಿ ಆವರಿಸಿಕೊಂಡಿದೆ. ...ಯದ ತೀರ್ಪುಗಳನ್ನು, ನ್ಯಾಯಾಧೀಶರ ...ನ್ನು ತನಗೆ ಬೇಕಾದಂತೆ ಬರೆಸಿಕೊಳ್ಳುವ ಶಕ್ತಿ ...ಮ್ಮನ್ನು ಆಳುತ್ತಿರುವ ಸರ್ಕಾರಕ್ಕಿದೆ. ಚುನಾವಣೆಯ ...ಗಳಲ್ಲಿ ಕೊಂಚ ಮೆತ್ತಗಾಗಿ ನಂತರ ತಮ್ಮ ಅಸಲಿ ...ಳಿಗೆ ಅಂಟಿಕೊಳ್ಳುವ ಬಿಜೆಪಿ ಈಗ ಮತ್ತದೇ ... ಕಮಲದ ಜೊತೆಗೆ ಅಲ್ಪಸಂಖ್ಯಾತರ ಧಾರ್ಮಿಕ ... ವರಮಾನ ತೆರಿಗೆ ವ್ಯಾಪ್ತಿಗೆ ಒಳಪಡಿಸುವ ...ಧಿ ನೀತಿಗೂ ಕೈಹಾಕಿದೆ. ಆರೆಸ್ಸೆಸ್ಸನ್ನು ...ು ಬಿಜೆಪಿಯ ಮುಖ್ಯ ಅಜೆಂಡಾಗಳಲ್ಲೊಂದು. ...ತೆ ಚರ್ಚ್‌ಗಳ ಮೇಲಿನ ದಾಳಿಗೆ ಸಂಬಂಧಿಸಿದ ...ಮದ ವರದಿ ಹೊರಬಿದ್ದಿದೆ. ಶಾಸಕಾಂಗ, ...ಗಗಳನ್ನು ಅಗ್ಗದ ರೇಟಿಗೆ ಖರೀದಿ ...ನ ಈ ಸರ್ಕಾರಕ್ಕೆ ನ್ಯಾಯಾಂಗವನ್ನು ...ವುದು ಕಷ್ಟವೇ?

...ಧರ ನಡುವೆ ಇಂಡಿಯಾದ ...ರ್ಗ ಮಾರುಕಟ್ಟೆ ಕೇಂದ್ರಿತ ಕೊಳ್ಳುಬಾಕ ...ಸಿಧಾನವಾಗಿ ತಳ ಊರುತ್ತಿರುವುದನ್ನು ...ಡಿರುವ ...ಧ್ಯಮಗಳು ...ಷ್ಟುಪಂಥ ...ಗಳ

...ರ್ಮಾಂತರ- ...ಗಳ ದಿವ್ಯದರ್ಶನವನ್ನು ಮುಕ್ತಿಯಾಗಿ ಪ್ರಸಾರ ..., ವೈದಿಕರ ಮನೆಯ ತಲ್ಲಣಗಳನ್ನು ನಾಡಿನ ...ಬಂತೆ ಬಿಂಬಿಸುತ್ತಾ ಅದನ್ನೇ ಟಿ.ವಿ. ...ಗಳಲ್ಲಿ ಬಿಡಿಬಿಡಿಯಾಗಿ ಹಂಚಿ, ...ಗದ ಪೆಡುಳನ್ನು ಚಾನೆಲ್ ಕಿಲಾಡಿಗಳು ...ಷ್ಟು ತೆಕ್ಕೆಗೆ ತೆಗೆದುಕೊಂಡಿದ್ದಾರೆ. ...ನರ ಖಾಸಗಿ ದುಃಖ, ಸುಖ ...ದಲ್ಲಿ ನಡೆಯುವ ಜಾತ್ರೆ, ಚುನಾವಣೆಗಳಲ್ಲಿ ... ಕೊಟ್ಟಾಳಿ, ಕೈಚಾಚುವ ಅಸಹಾಯಕರ ಚಿತ್ರಗಳು, ಸಣ್ಣ ತಪ್ಪಿಗೆ ಸಾರ್ವಜನಿಕರಿಂದ ಪೆಟ್ಟುತಿಂದ ವ್ಯಕ್ತಿಯ ತಲೆತಗ್ಗಿಸಿದ ಭಂಗಿ, ಕೆರೆಯೊಂದರಲ್ಲಿ ಟೆಂಪೋ ಮಗುಚಿ ಮಡದಿ ಮಕ್ಕಳನ್ನು ಕಳೆದುಕೊಂಡ ಅಸಹಾಯಕರ ಸಂಕಟ ಇವೆಲ್ಲ ಮಾಧ್ಯಮದ ಕಣ್ಣಿಗೆ ಯಾವತ್ತೂ ಮಾರಾಟದ ಸರಕೇ. ಹೀಗಾಗಿ ಇವತ್ತು ಮಾಧ್ಯಮದಲ್ಲಿ ನೈತಿಕತೆಗಿಂತ ಭಂಡತನ ವಿಜೃಂಭಿಸತೊಡಗಿದೆ. **Professional Ethics** ನಾಶವಾಗಿ ಲಾಭಕೋರತನ ಕಾಲಿಟ್ಟಿದೆ.

ಒಂದೇ ಬಣ್ಣದ ಟೀ-ಶರ್ಟ್ ತೊಟ್ಟ ನಲ್ವತ್ತು ಜನರ ಸಣ್ಣ ಗುಂಪೊಂದು ಪ್ಲಕಾರ್ಡ್ ಹಿಡಿದು ಬೆಂಗಳೂರಿನ ಗಾಂಧಿ ಪ್ರತಿಮೆ ಎದುರು ನಡೆಸುವ ಹೋರಾಟ ಪತ್ರಿಕೆಯೊಂದರ ಮೊದಲ ಪುಟದ ಸುದ್ದಿಯಾಗುತ್ತದೆ. ತಮಗೆ ನೀಡುತ್ತಿರುವ ವೇತನ ರೂಪದ ಗೌರವಧನದಲ್ಲಿ ನೂರು ರೂಪಾಯಿ ಹೆಚ್ಚಿಸುವಂತೆ ಸಾವಿರಾರು ಸಂಖ್ಯೆಯಲ್ಲಿ ಸೇರಿ ಬೇಡಿಕೆ ಇಟ್ಟು ಬೀದಿಗಿಳಿಯುವ ಅಂಗನವಾಡಿ ಕಾರ್ಯಕರ್ತೆಯರ ಹೋರಾಟ ಆರನೇ ಪುಟದ ಮೂಲೆಯೊಂದರಲ್ಲಿ ಕಣ್ಣಿಗೆ ಬೀಳದಂತೆ ಕಾಣಿಸಿಕೊಳ್ಳುತ್ತದೆ. ದೇಶಕಾಲದ ವಿದ್ವಾಂಸರು ತಮ್ಮ ಕಾರು ಕೆಟ್ಟು ಆಟೋ ಹಿಡಿದು ಕಲಾಕ್ಷೇತ್ರಕ್ಕೆ ಬಂದದ್ದು, ಅವರ ಮಕ್ಕಳು ರಂಗೋಲಿ ಸ್ಪರ್ಧೆಯಲ್ಲೋ, ಡ್ರಾಯಿಂಗ್ ಸ್ಪರ್ಧೆಯಲ್ಲೋ ಬಹುಮಾನ ಗಿಟ್ಟಿಸಿಕೊಂಡದ್ದನ್ನು ಕನ್ನಡದ ದೊಡ್ಡ ಪತ್ರಿಕೆಗಳು ರಾಜ್ಯಮಟ್ಟದ ಸುದ್ದಿಯಾಗಿಸುತ್ತವೆ. ಇನ್ನೂ ಪ್ರಕಟಗೊಳ್ಳದ ಅವರ ಪುಸ್ತಕಗಳ ವಿಮರ್ಶೆಗೆಂದೇ ಸಾಪ್ತಾಹಿಕದ ಸಾಹಿತ್ಯಿಕ ಪುರವಣಿಗಳಲ್ಲಿ ಸ್ಥಳ ಕಾದಿರಿಸಲಾಗುತ್ತದೆ. ಪತ್ರಿಕೆಗಳ ಸಾಪ್ತಾಹಿಕ ವಿಭಾಗದ ಸಂಪಾದಕರಿಗೆ ದುಬಾರಿ ಬೆಲೆಯ ಕಾಣಿಕೆ ಕಳಿಸಿ 'ಚೆನ್ನಾಗಿ' ನೋಡಿಕೊಳ್ಳುವ ವಿದ್ವಾಂಸರ ಈಚಿನ ಕೃತಿಗಳ ಮೇಲೆ ಪುಟಗಟ್ಟಲೇ ಪದಗಳ ಖರ್ಚುಮಾಡಿ ಹಾಡಿ ಕೊಂಡಾಡಲಾಗುತ್ತದೆ. ನನ್ನ ತಲೆಮಾರಿನ ಕೆಲವು



ಯುವಬರಹಗಾರರು ಇಂಥ 'ವಿದ್ವಾಂಸರು ಬಸ್ಸಿಳಿದ ಕೂಡಲೇ ಅವರ ಟ್ರಂಕು ಎತ್ತಿ ಹೆಗಲಿಗೇರಿಸಿಕೊಳ್ಳುವ, ಅವರೊಂದಿಗೆ ಫೋಟೋ ತೆಗೆಸಿಕೊಳ್ಳಲು, ಅವರ ಆಟೋಗ್ರಾಫ್‌ಗಾಗಿ, ಮುನ್ನುಡಿ-ಬೆನ್ನುಡಿಗಳಿಗಾಗಿ ವಿಶ್ವವಿದ್ಯಾಲಯದ ವಿದ್ವಾಂಸರಿಂದ ಶಿಫಾರಸು ಪತ್ರ ಹಿಡಿದು ನಿಂತಿರುವ ದೃಶ್ಯಗಳು ಎಲ್ಲ ಸಾಹಿತ್ಯ ಸಮಾರಂಭಗಳಲ್ಲಿ ಕಾಣಸಿಗುತ್ತವೆ. ಇಂಥ ವಿದ್ವಾಂಸರ ಉತ್ಸವದ ಪಲ್ಲಕ್ಕಿಗೆ ಹೆಗಲು ಕೊಡಲು, ಇವರು ಕರೆಯುವ ಮುನ್ನವೇ ಕಾಲು ಒತ್ತಲು ಸಿದ್ಧವಿರುವ



ಯುವ ಪತ್ರಕರ್ತರ ದೊಡ್ಡದಂಡೇ ಬಹುಶಃ ಕನ್ನಡದ ಎಲ್ಲ ಪತ್ರಿಕೆಗಳಲ್ಲೂ ಇದೆ.

ನಾನು ಆಕಸ್ಮಿಕವಾಗಿ ಮೆಚ್ಚುವ ದಿನೇಶ್ ಅಮೀನ್‌ಮಟ್ಟು ಈಚೆಗೆ ಮಾತಿಗೆ ಸಿಕ್ಕಿದ್ದರು. ಅವರು ಅದೇ ಆಗಷ್ಟೆ ಮುಂಬೈನಲ್ಲಿ ನಡೆದ ಹದಿಮೂರನೆಯ ಗೋರೆಗಾಂವ್ ವಿಚಾರ ಭಾರತಿ ಸಮ್ಮೇಳನದಲ್ಲಿ ಭಾಗವಹಿಸಿ ಬಂದಿದ್ದರು. ಭ್ರಷ್ಟಾಚಾರ, ಕೋಮುವಾದ, ಪ್ರಾಕೃತಿಕ ಸಂಪತ್ತಿನ ಲೂಟಿ, ಕನ್ನಡ ಭಾಷೆ, ನೆಲ-ಜಲಕ್ಕೆ ಆಗುತ್ತಿರುವ ಅನ್ಯಾಯದ ಪ್ರಶ್ನೆಯನ್ನೆತ್ತಿಕೊಂಡು ಯಾಕೆ ಯಾವಾಗಲೂ ಅದೇ ದೇವನೂರ ಮಹಾದೇವ, ಅದೇ ಅನಂತಮೂರ್ತಿ, ಚಂಪಾ, ಬರಗೂರು, ಜಿ.ರಾಜಶೇಖರರು ಮಾತ್ರ ಕಾಣಿಸಿಕೊಳ್ಳುತ್ತಾರೆ? ಈ ಹೊಸ ತಲೆಮಾರಿನ ಹುಡುಗರಿಗೇನಾಗಿದೆ? ಪತ್ರಿಕೆಗಳಲ್ಲಿ ಪ್ರಕಟವಾಗುವ ಟಾಪ್‌ಟೆನ್ ಕೃತಿಗಳ ಲೇಖಕರ ಪಟ್ಟಿಯಲ್ಲಿ ಕಾಣಿಸಿಕೊಳ್ಳುವ ಯಾರೊಬ್ಬರೂ ಯಾಕೆ ಯಾವ ಹೋರಾಟಗಳಲ್ಲೂ ಕಣ್ಣಿಗೆ ಬೀಳುವುದಿಲ್ಲ? ಇಂಥವೇ ಮೊದಲಾದ ಪ್ರಶ್ನೆಗಳನ್ನು ನನ್ನೆದುರಿಗಿಟ್ಟರು. ಅವರ ಸಾತ್ವಿಕ ಪ್ರಶ್ನೆಗಳನ್ನ ಈ ಕಾಲದಲ್ಲಿ ಬರವಣಿಗೆ ಮಾಡುತ್ತಿರುವ ಎಲ್ಲರೂ ಕೇಳಿಕೊಳ್ಳಬೇಕಾದ ತುರ್ತಿದೆ.

ಅವರ ಪ್ರಶ್ನೆಗಳನ್ನು ಕೇಳಿ ಮೌನವಾದ ನನ್ನನ್ನು ಕಂಡು ಅಮೀನ್‌ಮಟ್ಟು ಅವರು, 'ಸ್ವಂತದ ರಾಜಕೀಯ ಮತ್ತು ಸಾಮಾಜಿಕ ನಿಲುವುಗಳೇ ಇಲ್ಲದ, ವ್ಯವಸ್ಥೆಯ ವಿರುದ್ಧ ದನಿ ಎತ್ತದ, ಅನ್ಯಾಯವನ್ನು ಪ್ರಶ್ನಿಸದೆ ನಾಜೂಕಾಗಿ ಜಾರಿಕೊಳ್ಳುವ ಲೇಖಕರ ಹೊಸ ಪೀಳಿಗೆ ಇದು. ಇವರ ನಡೆ-ನುಡಿಗಳೆಲ್ಲ 'ಯಶಸ್ಸಿಗೆ ನೂರು ಸೂತ್ರಗಳು,' 'ಗೆಳೆಯರನ್ನು ಸಂಪಾದಿಸುವುದು ಹೇಗೆ?' ಇತ್ಯಾದಿ ಪುಸ್ತಕಗಳನ್ನು ಓದಿ ಅರಗಿಸಿಕೊಂಡವರ ಹಾಗೆ ಇರುತ್ತದೆ. ಇವರು ಸಾರ್ವಜನಿಕವಾಗಿ ಕಾಣಿಸಿಕೊಂಡು ತೋಳೇರಿಸಿ ಚರ್ಚೆ-ವಾಗ್ವಾದಕ್ಕೆ ಇಳಿಯುವುದಿಲ್ಲ. ಒಂದು ರೀತಿಯ ಹಿಟ್ ಆಂಡ್ ರನ್ ತಂತ್ರ. ಇವರ ಒಂದಷ್ಟು ಚಂದದ ಪುಸ್ತಕಗಳು ಕಾಲಕಾಲಕ್ಕೆ ಪ್ರಕಟವಾಗುತ್ತದೆ. ಪುಸ್ತಕ ಪ್ರಕಾಶನ ಕೂಡಾ ದೊಡ್ಡ ಹಗರಣವಾಗಿರುವ ಕಾರಣ ಒಬ್ಬ ಲೇಖಕನ ಪುಸ್ತಕದ ಒಂದು ಸಾವಿರ ಪ್ರತಿ ಮಾರಾಟ ಕನ್ನಡದಲ್ಲಿ ದೊಡ್ಡ ಸಮಸ್ಯೆ ಅಲ್ಲ. ವೆಬ್-ಬ್ಲಾಗ್‌ಗಳಲ್ಲಿ ಪ್ರಚಾರ, ಪತ್ರಿಕೆಗಳಲ್ಲಿ ಒಳ್ಳೆಯ ವಿಮರ್ಶೆ ಹೀಗೆ ಕಮರ್ಷಿಯಲ್ ಸಿನೆಮಾಗಳ ಪ್ರಚಾರದ ರೀತಿಯಲ್ಲಿ ಪುಸ್ತಕಗಳ ಮಾರ್ಕೆಟಿಂಗ್ ನಡೆಯುತ್ತಿರುತ್ತದೆ' ಎಂದರು.

ಈ ಎಲ್ಲದರ ಹಿನ್ನೆಲೆಯಲ್ಲಿ:

ಕೋಮುವಾದಿಗಳು, ಬಲಪಂಥೀಯರು ಆತಂಕ, ಸಂಭ್ರಮಗಳಲ್ಲಿ ಒಂದಾಗುತ್ತಾ ವಿಷ ತಯಾರು ಮಾಡುವ ಉತ್ಸಾಹಕ್ಕೆ ಕೊಂಚವೂ ಪೆಟ್ಟುಬೀಳದಂತೆ ನೋಡಿಕೊಳ್ಳುತ್ತಾರೆ. ಆದರೆ ದಲಿತ, ಶೂದ್ರ, ಅಲ್ಪಸಂಖ್ಯಾತರು ಆತಂಕದಲ್ಲಿ ಮಾತ್ರ ಒಂದಾಗುತ್ತಿದ್ದಾರೆಯೇ?

ಸಂಪೂರ್ಣ ಕಿವುಡಾಗಿರುವ ಪ್ರಭುತ್ವದ ಮುಂದಿಗೆ ಯಾವ ಭಂಗಿಯಲ್ಲಿ ನಿಂತು ಪ್ರತಿಭಟಿಸಿದರೆ ಅವರ ಕಿವಿಗೆ ತಾಗೀತು?

ಹೋರಾಟದ ಪ್ರಖರ ಮಾದರಿ ಹುಟ್ಟುಹಾಕಿದ ದಲಿತ ಚಳವಳಿಯನ್ನು ನುಂಗಿಹಾಕಿದ್ದು ಶಕ್ತಿ ರಾಜಕಾರಣದ ಮೊಗಸಾಲೆಯೋ ಅಥವಾ ಎನ್ಜಿಓಗಳ ದುಡ್ಡೋ?

ಪತ್ರಿಕೆಗಳಲ್ಲಿ ಪ್ರಕಟವಾಗುವ ಟಾಪ್‌ಟೆನ್ ಕೃತಿಗಳ ಲೇಖಕರು, ದೇಶಕಾಲದ ಇಪ್ಪತ್ತೊಂದನೇ ಶತಮಾನದ ಪಟ್ಟಿಯಲ್ಲಿ ಕಾಣಿಸಿಕೊಂಡ ಯಾರೊಬ್ಬರೂ ಯಾಕೆ ಯಾವ ಹೋರಾಟಗಳಲ್ಲೂ ಕಣ್ಣಿಗೆ ಬೀಳುವುದಿಲ್ಲ?

ಈ ಕಾಲದ ತಲ್ಲಣಗಳು ತಲ್ಲಣಗಳಾಗಿ ನನ್ನ ತಲೆಮಾರಿನ ಲೇಖಕರ ಕಣ್ಣಿಗೆ ಯಾಕೆ ಕಾಣಿಸುತ್ತಿಲ್ಲ? ಬಹುಶಃ ಈ ಪ್ರಶ್ನೆಗಳ ತೀವ್ರತೆ ನನ್ನ ತಲೆಮಾರಿನವರಿಗೆ ತಟ್ಟಿದ್ದರೆ ನಾವು ವರ್ತಮಾನದ ಎಚ್ಚರದ ಬಗೆಗಿನ... ಕಳೆದುಕೊಂಡಿದ್ದೇವೆಂದೇ ಅರ್ಥ.

ನನ್ನ ನನ್ನ ತಲ್ಲಣಗಳ ಇಲ್ಲಿ ಎತ್ತಿ... ಚರ್ಚೆಗೆ...

ಲಂಕೇಶ್ 76

ಹೊಸ ತಲೆಮಾರಿನ ತಲ್ಲಣಗಳು

ತೂತು ಬಿದ್ದ ಹಡಗು



ಕಬ್ಬಿಣದ ಅದಿರಿಗಾಗಿ ಮಣ್ಣುಗುಡ್ಡಗಳನ್ನೇ ಅಗೆದು, ಬರಿದುಮಾಡಿ, ಊರುಕೇರಿಗಳನ್ನೆಲ್ಲ ಕೆಂಧೂಳಿನಲ್ಲಿ ಮುಳುಗಿ ತಾವು ಮಾತ್ರ ಹೆಲಿಕಾಪ್ಟರಿನಲ್ಲಿ ತಿರುಗುವ ಗಣಿಕುಳಗಳ ಬಗೆಗೆ, ಅವರ ಕುಟಿಲ ರಾಜಕೀಯದ ಬಗೆಗೆ ವಾಕ ಬರುವಷ್ಟು ಓದುತ್ತಿದ್ದೇವೆ. ರಾಜ್ಯದ ಒಡಲಲ್ಲೇ ಕಬ್ಬಿಣದ ಅದಿರಿನ ಇಷ್ಟು ಗಣಿ ಸಂಪತ್ತಿದ್ದರೂ ಈಗಲೋ ಆಗಲ ಮುಳುಗುವ ಹಡಗಿನಂತೆ ಜೀವ ಹಿಡಿದುಕೊಂಡಿರುವ ಒಂದಾನೊಂದು ಕಾಲದ ಪ್ರತಿಷ್ಠಿತ ಕಂಪನಿ 'ವಿಐಎಸ್‌ಎ ಈಗ ಎಲ್ಲರ ಮರೆವಿಗೆ ಸರಿಯುತ್ತಿದೆ.

ರಾಜ್ಯ ಮಟ್ಟದಲ್ಲಿ ಇದು ಸುದ್ದಿಯಾಗಲಿಲ್ಲ. ಜನವರಿ 11ರಂದು ಪೈಮರಿ ಮಿಲ್ಸ್ ಸೆಕ್ಷನ್‌ನಲ್ಲಿ ಕೆಲಸ ಮಾಡುತ್ತಿದ್ದ ರಾಮಚಂದ್ರ ಎಂಬ ತರುಣ ಕಾರ್ಮಿಕನೊಬ್ಬ ಅಪಘಾತಕ್ಕೀಡಾಗಿ ಮೃತಪಟ್ಟ. ದಪ್ಪ ಕಬ್ಬಿಣದ ತೊಲೆಗಳು ಪ್ರೈಮರಿ ಮಿಲ್ಸ್ ಎಂಬ ಗಾಣದಂತಹ ರಚನೆಯೊಂದರಲ್ಲಿ ಹೊಕ್ಕು ಹೊರಬರುವಾಗ ತಮ್ಮ ಆಕಾರ, ಸೈಜು ಬದಲಿಸಿಕೊಂಡು ಹೊರಬರುತ್ತವೆ. ಅದನ್ನು ಅಲ್ಲಿ ಯಂತ್ರದ ಬಾಯಿಗೆ ಕೊಡುವಾಗ ಅಕಸ್ಮಾತ್ ಕೈಜಾರಿಬಿದ್ದ ರಾಮಚಂದ್ರನ ದೇಹ ಆಚೆಯಿಂದ ಈಚೆ ಬರುವುದರಲ್ಲಿ ಗಾಣಕ್ಕೆ ಸಿಕ್ಕ ಕಬ್ಬಿನಂತೆ ಅಕ್ಷರಶಃ ಪುಡಿಪುಡಿಯಾಗಿತ್ತು. ಭೀಭತ್ಸವೆಂದರೆ ಇದೇ. ಕ್ಷಣಾರ್ಧದ ಮೈಮರೆವಿಗೆ ಜೀವಬಲಿ.

ಇಂತಹ ದುರ್ಮರಣಗಳ ನೆನಪಿನಲ್ಲೇ ಭದ್ರಾವತಿಯ ವಿಶ್ವೇಶ್ವರಯ್ಯ ಕಬ್ಬಿಣ ಮತ್ತು ಉಕ್ಕು ಕಾರ್ಖಾನೆ(ವಿಐಎಸ್‌ಎಲ್) ನೋಡಹೋದಾಗ 'ಬ್ಲಾಸ್ಟ್ ಫರ್ನೇಸ್' ಎಂಬ ಕಬ್ಬಿಣವನ್ನೂ ನೀರಾಗಿ ಕರಗಿಸಿ ಹರಿಸಿಬಿಡಬಲ್ಲ ಭಯಂಕರ ಶಾಖದ ಕುಲುಮೆಯೆದುರು ಬೇಯುತ್ತಾ ನಿಂತ ಕೆಲಸಗಾರರನ್ನು ನೋಡಿ ಅವರ ಕೆಲಸದ ಅಪಾಯವನ್ನು ಊಹಿಸಿಯೇ ಭಯವಾಯಿತು. ಕರಗಿ ಹರಿವ ಕಬ್ಬಿಣವನ್ನು ನೋಡಲು ತನ್ನ ರಕ್ಷಣಾ ಕನ್ನಡಕವನ್ನು ತೆಗೆದುಕೊಟ್ಟ ಕೆಲಸಗಾರನೊಬ್ಬ ಹೀಗೆ ಹೇಳಿದ:

'ಇಲ್ಲಿ ಮಾಡೋನಿಗೆ ಮೂರಾಣೆ, ನೋಡೋನಿಗೆ ಹತ್ತಾಣೆ ಬೆಲೆ ಕಣಮ್ಮಾ..'

ಭೋರ್ಗರೆಯುವ ಬಿಸಿಗಾಳಿಯ ಶಬ್ದದ ನಡುವೆ ಕಿವಿಯಲ್ಲಿ ಪಿಸುಗುಟ್ಟಿದಂತೆ ಕೇಳಿದ ಆ ಮಾತು ಮತ್ತು ಆತನ ಚಹರೆ ಶ್ರಮದ ಬೆಲೆ ಎಷ್ಟೆಂಬುದನ್ನು ಅರ್ಥಮಾಡಿಕೊಟ್ಟವು. ಕಣ್ಣುಕೋರೈಸುವ ದ್ರವ ಕಬ್ಬಿಣದ ಎದುರು ಕಪ್ಪು ಧೂಳು ತುಂಬಿ ಸುಟ್ಟು ಹೋದ ಮುಖದಲ್ಲೂ ಜ್ವಾಜಲ್ಯಮಾನವಾದ ಕಣ್ಣುಗಳು ಕುಲುಮೆಯ ಬೆಂಕಿಯನ್ನು ಪ್ರತಿಫಲಿಸುತ್ತಿದ್ದವು.

* * * * *

1923ರಲ್ಲಿ ಭದ್ರಾವತಿಯಲ್ಲಿ ಶುರುವಾದ ವಿಐಎಸ್‌ಎಲ್ ನಾಲ್ವಡಿ ಕೃಷ್ಣರಾಜ ಒಡೆಯರ್ ಹಾಗೂ ಅವರ ದಿವಾನರಾಗಿದ್ದ ಸರ್ ಎಂ. ವಿಶ್ವೇಶ್ವರಯ್ಯನವರ ಮಹತ್ವಾಕಾಂಕ್ಷೆಯ ಯೋಜನೆ. 1923ರಲ್ಲಿ ಈ ಕಾರ್ಖಾನೆ ಶುರುವಾದಾಗ ಶಿವಮೊಗ್ಗ ಹತ್ತಿರದ ಕುಂಸಿ-ಚಟ್ನಳ್ಳಿಯಿಂದ ಕಬ್ಬಿಣದ ಅದಿರು ಪೂರೈಕೆಯಾಗುತ್ತಿತ್ತು. ಅದಿರು ಕಾಯಿಸುವ ಇಂಧನವಾಗಿ ಇದ್ದಿಲು ಬಳಕೆಯಾಗುತ್ತಿದ್ದು ಮಲೆನಾಡಿನ ಕಾಡುಗಳ ದಪ್ಪ ಮರಗಳನ್ನು ಕಡಿದು ಸಾಗಿಸಲು 1939ರಲ್ಲಿ ಶಿವಮೊಗ್ಗ-ತಾಳಗುಪ್ಪ ರೈಲುಮಾರ್ಗ ಶುರುವಾಯಿತು. ನಂತರ 1952ರಲ್ಲಿ ವಿದ್ಯುಚ್ಚಾಲಿತ ಯಂತ್ರೋಪಕರಣಗಳು ಬಂದನಂತರ ಕೋಕ್ ಅನ್ನು ಇಂಧನವನ್ನಾಗಿ ಬಳಸಲಾಗುತ್ತಿದೆ. ಕಲ್ಲಿದ್ದಲಿನ ಉಪಉತ್ಪನ್ನವಾದ ಕೋಕ್ ಅತಿಶಾಖ ಬಿಡುಗಡೆ ಮಾಡಿ ಆಕ್ಸಿಜನ್ ನೆರವಿನಿಂದ ಬೂದಿ ಉಳಿಸದೇ ಉರಿಯಬಲ್ಲದು.

ದಿನಕ್ಕೆ 650-700 ಟನ್ ಕಬ್ಬಿಣ ಉತ್ಪಾದಿಸಬಲ್ಲ ಒಂದು ಊದುಕುಲುಮೆ ಭದ್ರಾವತಿಯ ಕಾರ್ಖಾನೆಯಲ್ಲಿದೆ. 750 ವಿವಿಧ ಗ್ರೇಡ್‌ಗಳ ಕಬ್ಬಿಣವನ್ನು ತಯಾರಿಸಲಾಗುತ್ತದೆ. ರೇಲ್ವೆ ಆಕ್ಸೆಲ್‌ಗಳು, ಫಿರಂಗಿಗಳಿಗೆ ಬಳಸುವ ಕ್ಯಾನನ್‌ಗಳು, ಕಬ್ಬಿಣದ ತೊಲೆಗಳಿಂದ ಹಿಡಿದು 20 ಎಮ್‌ಎಮ್ ಅಳತೆಯ ಕಬ್ಬಿಣದ ಸರಳುಗಳು, ಅಚ್ಚುಗಳು - ಹೀಗೇ ಕೇಳುವವರ ಬೇಡಿಕೆಗೆ ತಕ್ಕಂತೆ ಕಬ್ಬಿಣವನ್ನು ತಯಾರಿಸುತ್ತಾರೆ. ಕಬ್ಬಿಣದಂತಹ ಗಟ್ಟಿ ಲೋಹವೂ ನಿಗಿನಿಗಿ ಕಾದಾಗ ಮಾನವ ಹಸ್ತದಲ್ಲಿ ಬಾಗಿ ಬಳುಕಿ ವಿವಿಧ ರೂಪು, ಆಕಾರ ಪಡೆಯುವುದನ್ನು ನೋಡುವುದು ನಿಜಕ್ಕೂ ಸೋಜಿಗ.

ಅಭಿವೃದ್ಧಿಯ ಮೂಲ ಸರಕೇ ಕಬ್ಬಿಣ. ಅದಿಲ್ಲದೇ ಯಾವ ಅಭಿವೃದ್ಧಿಯನ್ನೂ ಊಹಿಸಲಾರೆವು. ಕಾರ್ಖಾನೆ, ಕಟ್ಟಡ, ಸೇತುವೆ, ವಿಮಾನ, ರೈಲು, ವಾಹನಗಳು, ಶಸ್ತ್ರಾಸ್ತ್ರಗಳು - ಎಲ್ಲದಕ್ಕೂ ಕಬ್ಬಿಣ ಬೇಕೇಬೇಕು. ಈ ಕಾರ್ಖಾನೆಯನ್ನು ಒಮ್ಮೆ ಹೊಕ್ಕರೆ ಹೊರಬರುವಾಗ 'ಬಾಗಿಲೊಳು ಕೈ ಮುಗಿದು' ಬರಬೇಕೆನಿಸುತ್ತದೆ. ಆ ಕೆಲಸಕ್ಕೂ, ಅಲ್ಲಿನ ಬದುಕಿಗೂ, ಉಳಿದವರಿಗೂ ಇರುವ ಅಂತರ ತಟ್ಟನೆ ಹೊಳೆಯುತ್ತದೆ. ಕಿವಿಗಡಚಿಕ್ಕುವ ಸದ್ದಿನಲ್ಲಿ, ಅತಿ ಉಷ್ಣತೆಯ ವಾತಾವರಣದಲ್ಲಿ, ಹೊಗೆ, ಧೂಳಿನ ಪರಿಸರದಲ್ಲಿ, ಕಣ್ಣುಕುಕ್ಕುವ ಬೆಳಕಿನ ನಡುವೆ ಒಂದೇ ಸಮ ದುಡಿವ ಕೆಲಸಗಾರನ ದುಡಿಮೆಯು ಉಳಿದವರ ದುಡಿಮೆಗಿಂತ ಎಷ್ಟು ಭಿನ್ನ, ಅಪಾಯಕಾರಿ ಮತ್ತು ಕಷ್ಟದ್ದು ಎಂಬ ಅರಿವಾಗುತ್ತದೆ.

ಕಬ್ಬಿಣದ ಅದಿರಿಗಾಗಿ ಮಣ್ಣುಗುಡ್ಡಗಳನ್ನೇ ಅಗೆದು, ಬರಿದುಮಾಡಿ, ಊರುಕೇರಿಗಳನ್ನೆಲ್ಲ ಕೆಂಧೂಳಿನಲ್ಲಿ ಮುಳುಗಿಸಿ, ತಾವು ಮಾತ್ರ ಹೆಲಿಕಾಪ್ಟರಿನಲ್ಲಿ ತಿರುಗುವ ಗಣಿಕುಳಗಳ ಬಗೆಗೆ, ಅವರ ಕುಟಿಲ ರಾಜಕೀಯದ ಬಗೆಗೆ ವಾಕರಿಕೆ ಬರುವಷ್ಟು ಓದುತ್ತಿದ್ದೇವೆ. ರಾಜ್ಯದ ಒಡಲಲ್ಲೇ ಕಬ್ಬಿಣದ ಅದಿರಿನ ಇಷ್ಟು ಗಣಿ ಸಂಪತ್ತಿದ್ದರೂ ಈಗಲೋ ಆಗಲೋ ಮುಳುಗುವ ಹಡಗಿನಂತೆ ಜೀವ ಹಿಡಿದುಕೊಂಡಿರುವ ಒಂದಾನೊಂದು ಕಾಲದ ಪ್ರತಿಷ್ಠಿತ ಕಂಪನಿ ವಿಐಎಸ್‌ಎಲ್ ಈಗ ಎಲ್ಲರ ಮರೆವಿಗೆ ಸರಿಯುತ್ತಿದೆ. 12-14 ಸಾವಿರ ಕಾರ್ಮಿಕರಿಗೆ ಉದ್ಯೋಗ ನೀಡಿದ್ದ 'ಆಯುಧ ಪೂಜೆಗೆ ಲೋಡುಗಟ್ಟಲೇ ಲಾರಿಗಳಲ್ಲಿ ಮಂಡಕ್ಕಿ ತರಿಸುತ್ತಿದ್ದ' ಭದ್ರಾವತಿ ಎಂಬ ಊರನ್ನು ತನ್ನ ಕಪ್ಪು ಧೂಳಿನ ಸೆರಗಿನಲ್ಲಿ ಮುಚ್ಚಿಟ್ಟುಕೊಂಡ, ಸೈರನ್ನಿನ ಕೂಗಿನಿಂದ ಜಾಗೃತವಾಗಿಟ್ಟಿದ್ದ ವಿಐಎಸ್‌ಎಲ್ ಇಂದು ನಷ್ಟದಲ್ಲಿ ಮುಚ್ಚುವ ಸ್ಥಿತಿಗೆ ಬಂದಿದ್ದರೆ ಅದಕ್ಕೆ ಕಾರಣ ಅಗತ್ಯಕ್ಕಿಂತ ಹೆಚ್ಚು ಕೆಲಸಗಾರರಿದ್ದುದು ಹಾಗೂ ಯೂನಿಯನ್ ರಾಜಕೀಯವೋ? ಅಕಾಲಿಕ ಬಡತನವೋ? ಅಥವಾ ಇದು ನೈಸರ್ಗಿಕ ವೃದ್ಧಾಪ್ಯವೋ?



• ಡಾ.ಎಚ್.ಎಸ್.ಅನುಪಮಾ

* * * * *

'ನನ್ ಹೆಣ್ತಿ ಬೈತಾಳೆ, ನಿಮಗೇನ್ ಕೆಪ್ಪೇನ್ರಿ? ಎಷ್ಟು ಸಲ ಹೇಳಿದ್ರೂ ಆಂ?ಆಂ? ಅಂತೀರಾ. ಮಾತಿನ ಮೇಲೆ ಗಮನವೇ ಇಲ್ಲ ಅಂತ. ಇಲ್ಲಿ ಕೆಲಸ ಮಾಡ್ತಾ ಇಡೀ ದಿನ ಭರೋ ಎಂಬ ಶಬ್ದ ಕಿವೀಲಿ ಹ್ಯಾಗ್ ತುಂಬಿಬಿಡುತ್ತೆ ಅಂದ್ರೆ ಸಣ್ಣ ಮಾತುಗಳು ಕಿವಿ ಮೇಲೆ ಬಿದ್ರೂ ತಲೆ ಒಳಗೇ ಹೋಗಿರಲ್ಲ, ಕಿವಿ ಸೂಕ್ಷ್ಮತೆ ಕಳಕಂಡ್ ಬಿಟ್ಟಿವೆ.'

'ಈ ಧೂಳ್ನಲ್ಲಿ ಕಾಪಿ ಕುಡಿದು, ಕೂತು, ಎದ್ದು ನಂಗೆ ತುಂಬ ಕ್ಲೀನಾಗಿರೋ ಕಡೆ ಹೋದ್ರೆ ನಾನೇ ಅಲ್ಲೆಲ್ಲ ಕೊಳೆ ಮಾಡ್ತಿದೀನೇನೋ ಅನ್ಸಿ ಗಂಟಲ್ಲಿ ಏನೂ ಇಳಿಯದೇ ಇಲ್ಲ ಹಂಗಾಗಿಬಿಟ್ಟದೆ.'

'ರಾತ್ರಿ ಹಗಲು ಏನಿಲ್ಲ ಬಿಡಮ್ಮ, ಎಷ್ಟೊತ್ತಿಗೆ ಮಲಗಿದ್ರೂ ಗೊರಕೆನೇ ನಂಗೆ. ರಾತ್ರಿ ಶಿಫ್ಟ್ ಮುಗ್ಸಿ ಹೋದವ ಊಟ ಮಾಡಿ ಮಲಗ್ಬಿಟ್ರೆ ಮತ್ತೆ ಸಂಜೆನೇ ಎದ್ದು ಸ್ನಾನ ಮಾಡದು. ಅಂಥಾ ನಿದ್ದೆ...'

'ಮನುಷ್ಯರ ಹೆಣದ ವಾಸನೆ ಅಷ್ಟು ಕೆಟ್ಟದಾಗಿರುತ್ತೆ ಅಂತ ಅವತ್ತೇ ಗೊತ್ತಾಗಿದ್ದು. ಈಗೊಂದೈದಾರು ವರ್ಷದ ಕೆಳಗೆ ಒಂದು ರಾತ್ರಿ ಸ್ಟೀಲ್ ಮೆಲ್ಟಿಂಗ್ ಸೆಕ್ಷನ್‌ನಲ್ಲಿ ಒಂದು ಬ್ಲಾಸ್ಟ್ ಆಗಿ 7 ಜನ ಸತ್ತೋದ್ರು. ಒಬ್ಬನಂತೂ ಪೂರಾ ಸುಟ್ಟು ಬೆಂದು ಹೋಗಿದ್ದ. ಅವನ್ನ ಆಂಬುಲೆನ್ಸ್‌ನಲ್ಲಿ ತಗೊಂಡು ಆಸ್ಪತ್ರೆಗೆ ಹೋಗದ್ರಲ್ಲಿ ಸತ್ತೋದ. ಆದ್ರೆ ಅವನ ಮೈಯಿಂದ ಬರ್ತಿದ್ದ ಸುಟ್ಟ ವಾಸನೆ ನೆನಪಾದ್ರೆ ಎಷ್ಟೋ ದಿನದ ತಂಕ ಹೊಟ್ಟೆ ತೊಳೆಸೋದು. ಅಯ್ಯಯ್ಯೋ, ಭಾರೀ ಕೆಟ್ಟ ಸಾವು.'

ನೌಕರರ ಈ ಮಾತುಗಳಲ್ಲಿಯೇ ಅವರ ಜೀವನಶೈಲಿ, ಕೆಲಸದ ಅಪಾಯವನ್ನು ತಿಳಿದುಬಿಡಬಹುದು. ಅಪಾಯದ ನಡುವೆ ಕೆಲಸ ಮಾಡುತ್ತಿರುವುದರಿಂದಲೋ ಏನೋ, ಎಲ್ಲರೂ ದೈವಭಕ್ತರು. ಎಲ್ಲ ಯುನಿಟ್‌ಗಳಲ್ಲೂ ಹೂವು, ಕುಂಕುಮ, ಮೋಂಬತ್ತಿಯ ಬೆಳಕಿನೊಂದಿಗೆ ಹಲವು ದೇವಾನುದೇವತೆಗಳ ಫೋಟೋಗಳು ಇದ್ದವು. ವಿಶೇಷವೆಂದರೆ ದೇವರುಗಳ ಜೊತೆ ವಿಶ್ವೇಶ್ವರಯ್ಯ ಕೂಡಾ ಇದ್ದಾರೆ. ನಾಲ್ವಡಿ ಒಡೆಯರ ಒಂದೂ ಫೋಟೋ ಕಾಣಲಿಲ್ಲ. ನೌಕರರ ಪ್ರಕಾರ ವಿಶ್ವೇಶ್ವರಯ್ಯ ಎಂಬ ಹೆಸರಿಲ್ಲದಿದ್ದರೆ ಕಾರ್ಖಾನೆ ಎಂದೋ ಮುಚ್ಚಿರುತ್ತಿತ್ತಂತೆ. ಅವರೇ ಶುರು ಮಾಡಿದ್ದು ಅವರ ಹೆಸರು ಹೊತ್ತದ್ದು ಎಂದೇ ಇದು ಇಷ್ಟು ದಿನ ನಡೆಯುತ್ತಿದೆಯಂತೆ. 'ಹೋಗುವಾಗ ಅವರ ಮ್ಯೂಸಿಯಂ ನೋಡಿ ಹೋಗಿ' ಎಂದು ಹೇಳಲು ಅವರು ಮರೆಯಲಿಲ್ಲ.

* * * * *

ಮೈಸೂರರಸರ ಕಾಲದಲ್ಲಿ ಶುರುವಾದ ಕಾರ್ಖಾನೆಯು 1962ರಲ್ಲಿ ಸರ್ಕಾರೀ ಸ್ವಾಮ್ಯದ ಎಮ್‌ಐಎಸ್‌ಎಲ್ ಎಂದಾಯಿತು. 1975ರಲ್ಲಿ ಅದರ ಸಂಸ್ಥಾಪಕರಾದ ವಿಶ್ವೇಶ್ವರಯ್ಯನವರ ಹೆಸರನ್ನಿಡಲಾಯಿತು. 1989ರಲ್ಲಿ ಉಕ್ಕು ಪ್ರಾಧಿಕಾರದ ಒಂದು ಘಟಕವಾಗಿದ್ದಿದ್ದು 98ರಲ್ಲಿ ಉಕ್ಕು ಪ್ರಾಧಿಕಾರದಲ್ಲಿ ವಿಲೀನವಾಯಿತು. ಇದಕ್ಕೆ ಅದಿರಿನ ಲಭ್ಯತೆ ಒಂದು ಸಮಸ್ಯೆಯಾಯಿತು. ಮೊದಲು ಕುಂಸಿ ಬಳಿ, ನಂತರ ಕೆಮ್ಮಣ್ಣುಗುಂಡಿಯಿಂದ ಹಾಗೂ ಕುದುರೆಮುಖದಿಂದ ಅದಿರು ಸರಬರಾಜಾಗುತ್ತಿತ್ತು, ಈ ಎಲ್ಲವೂ ಪರಿಸರ ರಕ್ಷಣೆಗಾಗಿ ನಿಂತ ಮೇಲೆ ದೂರದ ಛತ್ತೀಸ್‌ಗಡದಿಂದ ಅದಿರು ಬರಬೇಕು. ಇಲ್ಲೇ ಇರುವ ಬಳ್ಳಾರಿಯ ಕಬ್ಬಿಣದ ಅದಿರು ಎಷ್ಟು ತುಟ್ಟಿಯೆಂದರೆ ಅದನ್ನು ಖಾಸಗಿ ಗಣಿ ಮಾಲೀಕರಿಂದ ಕೊಂಡು ತಂದು, ಕಬ್ಬಿಣ ತಯಾರಿಸಿದರೆ ದುಪ್ಪಟ್ಟು ನಷ್ಟವಂತೆ. ಎಂತಹ ವಿಪರ್ಯಾಸ! ಕವಡೆ ಕಿಮ್ಮತ್ತಿಗೆ ತನ್ನ ನೆಲದ ಗಣಿಗಳನ್ನು ಖಾಸಗೀ ಗಣಿ ಕಂಪನಿಗಳಿಗೆ ಕೊಟ್ಟು ಬಿಲಿಯನಾಧಿಪತಿಗಳನ್ನು ಸೃಷ್ಟಿಸುವ ಸರ್ಕಾರ, ತಾನೇ ಆ ಗಣಿಗಳನ್ನು ನಡೆಸಿದ್ದರೆ ಅದನ್ನು ನಂಬಿದ ಕಾರ್ಖಾನೆಗಳನ್ನು, ಅದನ್ನು ನೆಚ್ಚಿದ ಸಾವಿರಾರು ಕಾರ್ಮಿಕ ಕುಟುಂಬಗಳನ್ನೂ ಬೀದಿಪಾಲು ಮಾಡುವುದು ತಪ್ಪುತ್ತಿತ್ತು! ಈ ಸೂಕ್ಷ್ಮಗಳು ಫೈಲುಗಳ ಅಂಕಿಸಂಖ್ಯೆಗಳಲ್ಲಿ ಕರಗಿಹೋದ ಲಾಭನಷ್ಟದ ಲೆಕ್ಕಾಚಾರಕ್ಕೆ, ಭ್ರಷ್ಟ ವ್ಯವಸ್ಥೆಗೆ ಹೊಳೆಯುವುದೆ?

ಇಲ್ಲಿಯ ನೌಕರರು ಹೇಳುವಂತೆ: ಕರ್ನಾಟಕದ ರಾಜಕಾರಣಿಗಳ ಇಚ್ಛಾಶಕ್ತಿಯ ಕೊರತೆಯೂ ಇದಕ್ಕೆ ಇನ್ನೊಂದು ಕಾರಣ. ಕಾಲಕಾಲಕ್ಕೆ ಹೊಸ ಟೆಕ್ನಾಲಜಿ ತರಬೇಕು. ಅದಾಗುತ್ತಿಲ್ಲ. ಮೂರೂವರೆ ಸಾವಿರ ಕೋಟಿ ರೂಪಾಯಿಯಲ್ಲಿ ಇಡೀ ಪ್ಲಾಂಟ್ ರಿವೈವ್ ಮಾಡುವ ಅವಕಾಶವಿತ್ತು, ಆಗಲಿಲ್ಲ. ಯಲಹಂಕದಲ್ಲಿ ರೇಲ್ವೆಯವರ ಅಚ್ಚುಗಾಲಿ ಕಾರ್ಖಾನೆ ಶುರುವಾದಾಗ ಇಲ್ಲಿಗೆ ಬರುತ್ತದೆ ಎಂದರು, ಅದೂ ಆಗಲಿಲ್ಲ. ಪಶ್ಚಿಮ ಬಂಗಾಳ, ಯುಪಿ, ಛತ್ತೀಸ್‌ಗಡ ನೋಡಿ. ಒಂದೊಂದು ಪ್ಲಾಂಟ್‌ಗೂ ಸಾವಿರಾರು ಕೋಟಿ ಅನುದಾನ ಸ್ಯಾಂಕ್ಷನ್ ಮಾಡಿಸಿಕೊಂಡು ಬರುವ ಎಮ್‌ಪಿಗಳು ಕಾರ್ಖಾನೆಗಳು ಮುಚ್ಚದ ಹಾಗೆ, ಸಾಯದ ಹಾಗೆ ನೋಡಿಕೊಂಡಿದ್ದಾರೆ. ಆದರೆ ನಮ್ಮಲ್ಲಿ ಕೆಲಸ ಮಾಡಿ ಹೋದ ಅಧಿಕಾರಿಗಳೇ ಇಂದು ಕರ್ನಾಟಕದ ಪ್ರತಿಷ್ಠಿತ ಖಾಸಗಿ ಕಂಪನಿಗಳಿಗೆ ಅದಿರು ಪೂರೈಕೆಯ ವಹಿವಾಟು ನಡೆಸುತ್ತಿ

ದೇವೇಗೌಡರು ಪ್ರಧಾನಮಂತ್ರಿ ಆದಾಗ ಒಂದು ಅವಕಾಶ ಸಮಗೆ

ಆದರೆ ಅವರೇ ಹೆಚ್ಚು ದಿನ ಉಳಿಯಲಿಲ್ಲ. ನವೀಕರಣ ಯೋಜನೆಗ

ಬಹು ಪಾಲು ನನೆಗುದಿಗೆ ಬಿದ್ದವು. ಈಗ ಒಂದು ಹೊಸ ಪ್ಲಾಂಟ್ ಹಾಕಲು

ಆ ಬ್ಲೂಮ್ಸ್ ಕ್ಯಾಸ್ಟಿಂಗ್ ಪ್ಲಾಂಟ್ ನಮಗೆ ಅನ್ನ ಕೊಡುತ್ತಿದೆ ಎನ್ನಬಹು

ನಮ್ಮ ಕಾರ್ಖಾನೆ ಈಗ ಉಕ್ಕು ಪ್ರಾಧಿಕಾರದ ಕರುಣೆಯ ಹಂಗಿನಲ್ಲಿ ಅದು

ಕೆಲಸ ಮಾಡಿಕೊಂಡು ಬದುಕುತ್ತಿದೆ ಅಷ್ಟೇ.'

ಇದು ಮರುಹುಟ್ಟು ಪಡೆಯಲು ಏಕೆ ಸಾಧ್ಯವಾಗುತ್ತಿಲ್ಲ? ಒಬ್ಬ

ಹೇಳಿದ, 'ಒಡೆದ ಹಡಗು ಹ್ಯಾಗೆ ಗೊತ್ತಾ ಮೇಡಂ? ಒಂದು ತೂತು ಗು

ಮುಚ್ಚುವುದರಲ್ಲಿ ಮತ್ತೆ ನಾಕು ಪತ್ತೆಯಾಗ್ತಾವೆ. ಅದ್ನ ಮುಚ್ಚೋ ಕೆಲಸ

ಹಡಗು ನಡೆಸಕ್ಕೇ ಪುರುಸೊತ್ತಿಲ್ಲದೆ ಮುಳುಗೋಗುತ್ತೆ ಅಷ್ಟೇ. ಈಗ

ಒಡೆದ ಹಡಗು, ಯಾರಿಗೂ ಬೇಡ.'

ವಿಐಎಸ್‌ಎಲ್ ಅಷ್ಟೇ ಅಲ್ಲ, ನಮ್ಮ ಊರು ಪಟ್ಟಣಗಳಲ್ಲಿ ಹೀಗೆ ನಲು

ಕಣ್ಮುಚ್ಚುತ್ತಿರುವ ಹಲವು ಕಾರ್ಖಾನೆಗಳನ್ನು ನೋಡಬಹುದು. ಹೆಂಚಿನ ಕಾರ್ಖಾ

ಗ್ಲಾಸ್ ಮತ್ತು ಐಸ್ ಪ್ಲಾಂಟ್‌ಗಳು, ಸಣ್ಣ ಔಷಧ ತಯಾರಿಕಾ ಘಟಕಗ

ರೇಷ್ಮೆ ನೂಲಿನ ಗಿರಣಿಗಳು - ಹೀಗೇ ಇಂಥವೆಷ್ಟೋ ಭರಿಸಲಾಗದ

ನಷ್ಟದಲ್ಲಿ ಮುಳುಗಿವೆ. ಆದರೆ ನಗರದ ಸಂದುಗೊಂದುಗಳ ಮ

ಭಟ್ಟಿಗಳಾಗಲೀ, ಎಣ್ಣೆ ಭತ್ತದ ಗಿರಣಿಗಳಾಗಲೀ, ಬೀಡಿ ಕಟ್ಟುವ, ಊದು

ಹೊಸೆಯುವ ಮನೆಗಳಲ್ಲಾಗಲೀ ಎಳ್ಳಷ್ಟೂ ಬದಲಾವಣೆಯಿಲ್ಲ. ಹೋ

ಚಕ್ಕುಲಿ ಖಾರವನ್ನು ಬೇಕರಿಗೆ ಮಾರುವ, ಮೆಣಸಿನ ಪುಡಿ ಸಾಂಬಾರು ಪ

ಘಾಟನಲ್ಲಿ ಏಗುವ, ಗಾಡಿಯಲ್ಲಿ ತರಕಾರಿ ನೂಕುವ, ಗ್ಯಾರೇಜುಗಳಲ್ಲಿ ವಾಹ

ಕೆಳಗೆ ಮಲಗಿ ಮಸಿ ಹಿಡಿಸಿಕೊಂಡಿರುವ, ರಾಶಿ ಬಟ್ಟೆಗಳ ನಡುವೆ ಹೊಲಿಯ

ಜೀವ ಮುಳುಗಿ ಹೋಗಿರುವ ತಾಣಗಳು ಮುಂಚೆ ಹೇಗಿದ್ದವೋ ಈಗ

ಹಾಗೆಯೇ ಇವೆ. ಅವರ ಶ್ರಮಕ್ಕೆ ಸಿಗಬಹುದಾದ ಪ್ರತಿಫಲದ ಬಗ್ಗೆ ಅವ

ನಿಶ್ಚಿಂತರು. ಅಷ್ಟು ನಿಶ್ಚಿಂತೆಯೂ ವಿಐಎಸ್‌ಎಲ್ ಉದ್ಯೋಗಿಗಳಿ

ಹೀಗೇಕಾಯಿತು? ವೈಯಕ್ತಿಕ ಶ್ರಮಕ್ಕೆ ಬರುವ ಪ್ರತಿಫಲ, ಸಾಂಸ್ಥಿಕವಾದ

ವಿಫಲವಾಗುತ್ತಿದೆ ಏಕೆ? ರಾಶಿಗಟ್ಟಲೇ ಉತ್ಪಾದಿಸುವಲ್ಲಿ ಯಂತ್ರಗಳೂ,

ಬೇಕಾದಲ್ಲಿ ಮನುಷ್ಯರೂ ಯಾಕೆ ಗೆಲ್ಲುತ್ತಿದ್ದಾರೆ? ಗೆಲುವಿನ ಸೂತ್ರ ಯಾವುದ

ಬಹುಶಃ ಮಾನವ ಶಕ್ತಿಯ ಅನಿವಾರ್ಯತೆಯಿಂದ ನಡೆಯುವ ಉದ್ಯಮ

ಸಣ್ಣ ಪ್ರಮಾಣದಲ್ಲಿ ನಡೆದಾಗ ಯಶಸ್ವಿಯಾಗುತ್ತವೆ. ಯಂತ್ರದಿಂದ ಸಾಧ್ಯವಿದಾ

ಮನುಷ್ಯನನ್ನೇ ನೆಚ್ಚಿದ ಉದ್ಯಮಗಳು ನೆಲ ಕಚ್ಚಿವೆ. ಇಷ್ಟಂತೂ ನಿಜ, ನಾ

ಹಿಂದಿರುಗಲಾರದಷ್ಟು ಮುಂದೆ ಬಂದಿದ್ದೇವೆ. ಅದು ಗಾಂಧಿಯ ಹಿಂ

ಸ್ವರಾಜ್ ಕಾಲಕ್ಕಷ್ಟೇ ಅಲ್ಲ, ನೆಹರೂ ಯುಗಕ್ಕೂ ಹಿಂತಿರುಗಲಾರದಷ್ಟು.

ಮನಮೋಹನ್ ಯುಗ. ಈಗ ವಿಐಎಸ್‌ಎಲ್, ಎಚ್‌ಎಮ್‌ಟಿ, ಐಟಿ

ಇವೆಲ್ಲವೂ ನೆಹರೂ ಯುಗದ ಪಳೆಯುಳಿಕೆಗಳಾಗಿ ಅವಸಾನಗೊಳ್ಳುತ್ತಿರುವಾಗ

ವಿಶ್ವದ ಮೂಲೆಮೂಲೆಯಲ್ಲಿದ್ದ ದೊಡ್ಡ ದೊಡ್ಡ ಕಂಪನಿಗಳು ನಮ್ಮ ಹಳ್ಳಿಗ

ಬೀಡಾ ಅಂಗಡಿಗೂ ಬಂದು ತಲುಪುವಷ್ಟು ಸರಕನ್ನು ಬೃಹತ್ ಪ್ರಮಾಣದ

ಉತ್ಪಾದಿಸಿ ಎಲ್ಲ ಬ್ರಾಂಡೆಡ್ ಆಗಿರುವಾಗ - ಶ್ರಮವೂ ಬ್ರಾಂಡೆಡ್ ಆಗಿ

ಲಾಭ ತಂದೀತು, ಇಲ್ಲದಿದ್ದರೆ ಇಲ್ಲ, ಅಷ್ಟೇ.



ಒಳ್ಳೇ ಕಾಲ ಬರುತ್ತೆ, ಆದರೆ ಸುಲಭದಲ್ಲಿ ಬರೋಲ್ಲ

ಪಿ.ಕೈಲಾಸಂ ಅವರ 'ಟೊಳ್ಳುಗಟ್ಟಿ' 'ಮಕ್ಕಳಿಸ್ಕೂಲ್ ಮನೇಲಲ್ವೇ' ನಾಟಕ ...ತವೊಂದು ಹೀಗೆ ಹೇಳುತ್ತದೆ: ...ಲ್ಲಿ ಮಕ್ಳಿಗ್ ಸ್ವಲ್ಪ ಬುದ್ಧಿ ಬಂದು ...ತುಗಗಳ್ನಾಡೋ ಹೊತ್ಗಲ್ಲಾ ಮನೇಲಿ ...ಸ್ಕೊಂಡವ್ರು ಪಂಚಾಕ್ಷರೀ ಮಂತ್ರ ಶುರು ...ತೆ. 'ಮುಂ... ದ... ಕ್ಕ... ರ್ಬೇ... ಕು', ...ಕರ್ಬೇಕೂ' ಅಂತ". ಓದಿ ಓದಿ ...ಂತನಾದವನು ಯಾವುದಕ್ಕೂ ...ನಕ್ಕೆ ಬರದಂತಾಗುವುದು, ಓದು ತಲೆಗೆ ...ತ್ತೊಬ್ಬನು ನಾಲ್ಕು ಜನಕ್ಕೆ ಉಪಕಾರಿ ...ಬಾಳುವುದನ್ನು ಕೈಲಾಸಂ ಅವರ ...ಹಾಸ್ಯ ಶೈಲಿಯಲ್ಲಿ ಈ ನಾಟಕ ...ತ್ತದೆ.

...ಟಿಗೆ ಬಂದ ಹಿಂದಿ ಸಿನಿಮಾ '3 ...ಟ್ಸ್'ನಲ್ಲಿ ಇದನ್ನು ಹೋಲುವ ...ವೊಂದು ಬರುತ್ತದೆ. ರಾಂಚೋ ...ಖಾನ್)ನ ಸ್ನೇಹಿತರಾದ ರಾಜು (ಷರ್ಮಾನ್ ಜೋಷಿ) ಮತ್ತು ಫರ್ಹಾನ್ ...ನ್) ಇಬ್ಬರೂ ಹುಟ್ಟಿದ ಕೆಲವೇ ...ಲ್ಲಿ ಮನೆಯವರು 'ಬೇಟಾ, ತೂ ...ರ್ ಬನೇಗಾ' ಎಂದು ಹೇಳಿರುತ್ತಾರೆ. ...ಹುಡುಗನಾದರೆ ಇಂಜಿನಿಯರ್, ಲಡ್ಕೀ ...ಆದರೆ ಡಾಕ್ಟರ್' ಎಂದು ಇನ್ನೂ ಹೊಟ್ಟೆ ...ನಿರ್ಧರಿಸಿಬಿಡುವುದನ್ನು ಸಿನಿಮಾ ...ಮಾಡುತ್ತದೆ.

...ಎರಡೂ ಚಿತ್ರಗಳು ಮಧ್ಯಮ ವರ್ಗದ ...ಜೀವನ ದೃಷ್ಟಿಕೋನದ ಚಿತ್ರಣವನ್ನು ... ಆದರೂ ಈ ಉದಾಹರಣೆಗಳು ...ಮುಖ್ಯ. ಏಕೆಂದರೆ ನಾವು ಇವತ್ತಿನ ...ತಲೆಮಾರು ಯಾವ ರೀತಿ ಆಲೋಚಿಸು...ತ್ತದೆ ಎನ್ನೋ ಪ್ರಶ್ನೆಯನ್ನು ಹಾಕಿಕೊಂಡರೆ, ಆ ...ತಲೆಮಾರಿನ ಚೌಕಟ್ಟಿನಲ್ಲಿ ನಮ್ಮ ಕಣ್ಣಿಗೆ ...ಬರುವುದು ಕಾಲೇಜು ಓದುತ್ತಿರುವ ...ಹೈಸ್ಕೂಲೋ, ಕಾಲೇಜೋ ಓದಿ...ರುವ ಯುವ ಸಮೂಹವೇ. ಈ ...ನ ದೊಡ್ಡ ಸಂಖ್ಯೆಯ ಜನ ಒಂದೋ ... ವರ್ಗದಿಂದ ಬಂದವರಾಗಿರುತ್ತಾರೆ ...ಇನ್ನೂ ದುರ್ಬಲ ವರ್ಗದ ಹಿನ್ನೆಲೆ...ಯಿಂದ ಬಂದಿದ್ದರೂ - ಮಧ್ಯಮ ವರ್ಗದ ...ತಿ ಧೋರಣೆಗಳನ್ನು ಮೈಗೂಡಿಸಿ...ಕೊಂಡಿರುತ್ತಾರೆ.

...ನ ಒಟ್ಟು ಸಮಾಜದಲ್ಲಿ ಈ ವರ್ಗದ ಶೇಕಡಾ ...ಪ್ರಮಾಣ ಮತ್ತು ಸಂಖ್ಯೆಯಲ್ಲಿ ಆಗಿರುವ ಅಗಾಧ ...ಕಾರಣಕ್ಕೆ ಇದೊಂದು ಬೃಹತ್ ಸಮೂಹ. ... ಅವರು ಸೂಚಿಸುತ್ತಿದ್ದದ್ದು ಪ್ರಧಾನವಾಗಿ ...ಮ ಅದರಲ್ಲೂ ಮಧ್ಯಮ ವರ್ಗದ ಬ್ರಾಹ್ಮಣ ...ದ ಜೀವನ ದೃಷ್ಟಿಯನ್ನು. ಹಾಗಾಗಿ '3 ...ಟ್ಸ್' ಹೊತ್ತಿನ ಹೈಸ್ಕೂಲ್, ಕಾಲೇಜು ಶಿಕ್ಷಿತರ...ನ್ನು ನಾವು ಹೊಸ ತಲೆಮಾರು ಎಂದು ಸಲೀಸಾಗಿ ...ಬಹುದು.

...ಆದರೆ ಕೈಲಾಸಂ ಕಾಲಕ್ಕೂ, ಅಮೀರ್ ಖಾನ್ ...ಬಂದಿರುವ ವ್ಯತ್ಯಾಸ, ಸ್ಕೂಲಿಗೆ ಕಳಿಸಿದ ಮೇಲೆ ...ಹೇಳುತ್ತಿದ್ದ ಪಂಚಾಕ್ಷರಿ ಮಂತ್ರ, ಭ್ರೂಣವಾಗಿ...ರುವಾಗಲೇ ಶುರುವಾಗುತ್ತದೆ ಎಂಬುದಷ್ಟೇನಾ? ...ಇವತ್ತಿನ ಹೊಸ ತಲೆಮಾರು ಕೆಟ್ಟು...ಹೋಗಿದೆಯಾ? ಕುಟುಂಬದೊಳಗೆ ಮತ್ತು ...ಳಗೆ ಪ್ರತೀ ಹೊಸ ತಲೆಮಾರಿನ ಕುರಿತು ...ಂದು ರೀತಿಯ ಗೊಣಗಾಟ ಮತ್ತು ...'ನ್ನು ಈಗ ... ಹೋಗಿ ...ಎಂಬ ಹಳ...ಬಾಸ್ಕ ಅದಕ್ಕೆ ಭಿನ್ನವಾಗಿ ... ಇಬ್ಬರು 90ರ ವಯಸ್ಸಿನ ... ಅಭಿಪ್ರಾಯಗಳನ್ನು ಇಲ್ಲಿ ... ಒಬ್ಬರು ಎ.ಎನ್.ಮೂರ್ತಿ...ರಾಯರು. ...ಮ್ಮ 'ದೇವರು' ಪುಸ್ತಕದಲ್ಲೂ ಅವರು ಅದನ್ನು ... ಈಗಿನ ಕಾಲ ಕೆಟ್ಟು ಹೋಗಿದೆ ಎನ್ನುವುದು ...ವಾಸ್ತವದಲ್ಲಿ ಹೆಚ್ಚು ಹೆಚ್ಚು ಜನ ಇಂದು ...ಸುಶಿಕ್ಷಿತರಾಗಿದ್ದಾರೆ ಅಂತ ಅವರ ಅನಿಸಿಕೆ.

...ರೀತಿ, ಇವತ್ತೂ ತಮ್ಮೊಳಗಿನ ಬೆಂಕಿಯನ್ನು ...ಉಳಿಸಿಕೊಂಡಿರುವ ಶ್ರೀರಂಗಪಟ್ಟಣದ ಡಾ.ಸಿ. ...ರು. ಅವರ ವಯಸ್ಸಿನ ಹಲವರ ಹತ್ತಿರ "ಇವತ್ತಿನ ...ಬಗ್ಗೆ ನಿಮಗೇನನ್ನಿಸುತ್ತೆ?" ಅಂದರೆ ದೂರುಗಳ ...ದೊಡ್ಡ ಪಟ್ಟಿಯನ್ನೇ ಕೊಟ್ಟಾರು. ಆದರೆ ಹಿರಿಯ ...ಹೋರಾಟಗಾರರೂ, ಸ್ವಾತಂತ್ರ್ಯೋತ್ತರ ಕಾಲದ ...ದಶಕಗಳ ಕಾಲ ಸಕ್ರಿಯ ರಾಜಕಾರಣದಲ್ಲೂ ...ಗೌಡರು ಭಿನ್ನವಾಗಿ ನುಡಿಯುತ್ತಾರೆ. 'ಅವರ ...ನವಾ ರಾಜಕಾರಣದಲ್ಲಿ ಅತೀವ ಹೊಲಸು ತುಂಬಿದೆ. ಆದರೆ ಜನರು ಪ್ರಜ್ಞಾವಂತರಾಗಿದ್ದಾರೆ. ಅವರಲ್ಲಿ ಪ್ರಜಾತಂತ್ರದ ಪ್ರಜ್ಞೆ ಹೆಚ್ಚಾಗಿದೆ. ಹೆಚ್ಚಾಗುತ್ತಲಿದೆ. ಹಾಗಾಗಿ ಸರಿಯಾದ ನಾಯಕತ್ವ ದೃಢವಾಗಿ ಮತ್ತು ನಿರಂತರವಾಗಿ ಕೆಲಸ ಮಾಡಿದರೆ ಇನ್ನು ಹತ್ತು ವರ್ಷಗಳಲ್ಲಿ ಈ ಸಮಾಜದಲ್ಲಿ ಕ್ರಾಂತಿಕಾರಕ ಬೆಳವಣಿಗೆ ನಡೆದೇ ನಡೆಯುತ್ತದೆ.'

ಬಂದೀಗೌಡರ ಮಾತುಗಳು ಸರಿಯಾಗಿವೆ: ಒಳ್ಳೇ ಕಾಲ ಬಂದೇ ಬರುತ್ತದೆ. ಏಕೆಂದರೆ ಜನರಲ್ಲಿ ಪ್ರಜಾತಂತ್ರದ ಪ್ರಜ್ಞೆ ಹೆಚ್ಚಾಗಿದೆ. ತನಗೆ ಬೇಕು ಅನ್ನೋ ಚಿಂತನೆ ಮತ್ತು ಅದಕ್ಕಾಗಿ ನೂರೆಂಟು ರೀತಿಯಲ್ಲಿ, ನೂರೆಂಟು ರೂಪಗಳಲ್ಲಿ ಪ್ರಯತ್ನ ಇವತ್ತಿನ ಸಮಾಜದ ಒಂದು ಬಹುಮುಖ್ಯ ವಿದ್ಯಮಾನ. ಉದಾಹರಣೆಗೆ ಒಳಮೀಸಲಾತಿಯ ವಿಚಾರ. ಪ್ರತೀ ಸಮುದಾಯವೂ ತನ್ನ ಪಾಲೆಷ್ಟೋ ಅಷ್ಟು ತನಗೆ ಸಲ್ಲಬೇಕು ಎಂದು ಘಟ್ಟಿಸಿ ಕೇಳುತ್ತಿದೆ. ಇವತ್ತಿನ ಗ್ರಾಮ ಪಂಚಾಯತಿಯ ರಾಜಕಾರಣವನ್ನು ನೋಡಿದರೆ, ಓಟಿನ ಪ್ರಮಾಣಕ್ಕೆ ತಕ್ಕಂತೆ ತಮಗೆ ಪ್ರಾತಿನಿಧ್ಯ ಬೇಕು ಎಂದು ಹಠ ಹಿಡಿದು ಪಡೆದುಕೊಳ್ಳುವ ಗುಂಪುಗಳು ಎಲ್ಲಾ ಕಡೆ ಇವೆ. ಇದನ್ನು ಸಕಾರಾತ್ಮಕ ಬೆಳವಣಿಗೆ ಎಂದು ನಾವು ಭಾವಿಸಬಹುದೇ? ಹಾಗಾದರೆ ಓಟಿಗಾಗಿ ತಮಗೆ ಸಂದಾಯವಾಗಬೇಕಾದ ದುಡ್ಡನ್ನೂ ಇದೇರೀತಿ ಪಡೆದುಕೊಳ್ಳುತ್ತಿರುವ ವಿದ್ಯಮಾನವನ್ನೂ ನಾವು ಪ್ರಜಾತಂತ್ರದ ಪ್ರಜ್ಞೆ ಎಂದುಬಿಡಬಹುದೇ?



● ಡಾ. ವಾಸು ಎಚ್.ವಿ.

ಸಂಚಾಲಕ, ಕರ್ನಾಟಕ ಜನಶಕ್ತಿ


ಇದನ್ನೇ ಸರಿಯಾದ ಪ್ರಜಾತಂತ್ರದ ಪ್ರಜ್ಞೆ ಎಂದು ಹೇಳಲು ಸಾಧ್ಯವಿಲ್ಲವಾದರೂ, ಇದರಲ್ಲಿ ಪ್ರಜಾತಂತ್ರದ ಅಂಶ ಇದೆ ಎಂದಂತೂ ಖಂಡಿತ ಹೇಳಬಹುದು. ಆದರೆ ಈ ಪ್ರಜ್ಞೆ ಪರಿಣಾಮಕಾರಿ, ಪುರೋಗಾಮಿ ಸಾಮೂಹಿಕ ಕ್ರಿಯೆಯಾಗದೇ ವ್ಯಕ್ತಿಗತ ಅವಕಾಶಗಳಿಗಾಗಿ ನಡೆಯುತ್ತಿರುವ ಸ್ವಾರ್ಥಪೂರಿತ ನಡೆಗಳಿಗೆ ದಾರಿ ಮಾಡಿಕೊಟ್ಟಿರುವುದೂ ಅಷ್ಟೇ ನಿಜ. ಇದರದ್ದೇ ವಿಸ್ತರಣೆ ಮತ್ತು ಅತಿರೇಕದ ಅಭಿವ್ಯಕ್ತಿಯಾಗಿ ಹೊಟ್ಟೆಯಲ್ಲಿದ್ದಾಗಲೇ ಮಗು ಸಾಫ್ಟ್‌ವೇರ್ ಇಂಜಿನಿಯರ್ ಆಗಬೇಕೆಂದು ಬಯಸುವ ಪ್ರತೀ ಮಧ್ಯಮ ವರ್ಗದ ಕುಟುಂಬದ ಬಯಕೆಯನ್ನೂ ನಾವು ಕಾಣಬಹುದು. ಅದರಲ್ಲಿಯೂ ತಾವು ಮತ್ತು ತಮ್ಮ ಕುಟುಂಬ ಚೆನ್ನಾಗಿ ಆಗಬೇಕು ಎಂಬ ತೀರದ ಆಸೆ ಕೆಲಸ ಮಾಡುತ್ತದೆ ಎನ್ನುವುದು ನಿಜ. ಆದರೆ ಇಂತಹ ಕೋಟ್ಯಾಂತರ ವ್ಯಕ್ತಿಗತ ಬಯಕೆಗಳಲ್ಲಿ ಕೆಲವು ಸಾವಿರವಾದರೂ ಈಡೇರುವ ಸಾಧ್ಯತೆಯನ್ನು ಜಾಗತೀಕರಣವು ಹುಟ್ಟಿ ಹಾಕಿದೆ. ಇದೇ ಜಾಗತೀಕರಣವೇ ಬಯಕೆಗಳ ಪ್ರಮಾಣವನ್ನು ಹೆಚ್ಚಿಸಿಯೂ ಇದೆ.

● ಕಾಲಕೆಟ್ಟುಹೋಗಿಲ್ಲ. ಬಂದೀಗೌಡರ ಆಶಾವಾದ ಸುಳ್ಳಲ್ಲ, ಕೇವಲ ಆಶಾವಾದವೂ ಅಲ್ಲ. ಹಳೆಯದ್ದರ ಬಗ್ಗೆ ಭ್ರಮನಿರಸನ ಎಲ್ಲೆಲ್ಲೂ ಸ್ಪಷ್ಟವಾಗಿದೆ. ಅದು ವ್ಯಾಪಕ ಸಿನಿಕತೆಗೆ ದಾರಿ ಮಾಡಿಕೊಟ್ಟಿದೆ. ಈ ಭ್ರಮನಿರಸನ ಮತ್ತು ಸಿನಿಕತೆಯ ನಡುವೆ ನಮ್ಮ ಪರಿಣಾಮಕಾರಿ ಮಧ್ಯೆ ಪ್ರವೇಶ ಆಗಬೇಕಿದೆ. ವಿಸ್ತಾರವಾಗುತ್ತಿರುವ ಪ್ರಜಾತಾಂತ್ರಿಕ ಪ್ರಜ್ಞೆಯನ್ನು ಸೂಕ್ತ ಚಿಂತನೆ ಮತ್ತು ಕಾರ್ಯಾಚರಣೆಯೆಡೆಗೆ ಕೊಂಡೊಯ್ಯುವ ಸಾಧ್ಯತೆ ಖಂಡಿತ ಇದೆ. ●



ಕೆಲವು ಸಾವಿರ ಜನರು ಸಾಧಿಸಿಕೊಳ್ಳಲು ಸಾಧ್ಯವಾಗಿ, ಇನ್ನೂ ಕೋಟ್ಯಾಂತರ ಜನರಲ್ಲಿ ಆಸೆಯನ್ನು ಹುಟ್ಟಿಸಿ ವ್ಯಕ್ತಿಗತ ಸವಲತ್ತುಗಳ ಸಾಧನೆಯ ಹಿಂದೆಯೇ ಓಡುತ್ತಾ ಓಡುತ್ತಾ ಇದ್ದು ಬಿಡುವಂತೆ ಮಾಡಲು ಇವತ್ತು ವ್ಯವಸ್ಥೆಗೆ ಸಾಧ್ಯವಾಗಿದೆ. ಅದಕ್ಕಾಗಿ ಎಷ್ಟೊಂದು ಬಗೆಯ ನೌಕರಿಗಳು, ವಿದ್ಯೆಗಳು, ಮಾಧ್ಯಮಗಳು, ಫೆಲೋಷಿಪ್‌ಗಳು, ಆಫರ್‌ಗಳು, ಸ್ಪರ್ಧಾತ್ಮಕ ಪರೀಕ್ಷೆಗಳು, ಜಾಹೀರಾತುಗಳು ಇಂದು ವಿಶ್ವದ ಮೂಲೆಮೂಲೆಗಳಲ್ಲೂ ಹಬ್ಬಿಕೊಂಡಿವೆ ಎಂದರೆ ನೀವು ದಿನದ ಯಾವ ಸಂದರ್ಭದಲ್ಲೂ ಅವನ್ನು ಹಾದುಹೋಗದ ರಾತ್ರಿಯನ್ನು ಕಾಣಲಾರಿರಿ. ವಿವಿಧ ಬಗೆಯ ಸರಕುಗಳನ್ನು ಸೃಷ್ಟಿಸಿ, ಅವನ್ನು ಮಾರಾಟ ಮಾಡುವುದು ಹಾಗೂ ಕೊಳ್ಳುವುದೇ ಸಾಕಷ್ಟು ಜನರ ಬದುಕಿನ ನಿರಂತರವಾಗಿ ಆವರಿಸಿರುವ ಅನಿವಾರ್ಯ ಸನ್ನಿಯಾಗಿಬಿಟ್ಟಿದೆ. ಸರ್ವವ್ಯಾಪಿಯಾದ ಮೊಬೈಲ್ ಹ್ಯಾಂಡ್‌ಸೆಟ್‌ಗಳು, ಕಂಪೆನಿಗಳು ಮತ್ತು ಆಫರ್‌ಗಳ ಮಾಯಾಜಾಲದಂತೆ.

ಶಿಕ್ಷಿತ ಹೊಸ ತಲೆಮಾರಿನ ಪ್ರಜಾತಾಂತ್ರಿಕ ಪ್ರಜ್ಞೆ ಸಮಾಜವನ್ನು ಮುಂದಕ್ಕೊಯ್ಯುವ, ಮಾನವೀಯಗೊಳಿಸುವ ಮತ್ತು ಸಮತಾ ನತೆಯೆಡೆಗೆ ಕೊಂಡೊಯ್ಯುವ ಸಮೂಹ ಚಿಂತನೆ ಮತ್ತು ಕ್ರಿಯೆಯೆಡೆಗೆ ಹೋಗದೇ ಇರಲು ಇಂತಹ ಆಧುನಿಕ ಸಂಕೀರ್ಣ ಮಾಯಾಜಾಲವು ಒಂದು ಪ್ರಮುಖ ಅಡ್ಡಿಯಾಗಿದೆ.



ಹಾಗೆಂದು ಈ ಆಧುನಿಕತೆಯು ನಮ್ಮ ದೇಶದ ಹಳೆಯ ಜೀವವಿರೋಧಿ ಸಂಪ್ರದಾಯ ಗಳನ್ನಾದರೂ ಮುರಿದು ಹಾಕಿದ್ದರೆ, ಅದಕ್ಕೆ ಅಷ್ಟು ಮಟ್ಟಿಗಿನ ಪ್ರಗತಿಪರ ಪಾತ್ರವಾದರೂ ಇರುತ್ತಿತ್ತು. ಎಲ್ಲಿಯವರೆಗೆ ಇರುವ ಚೌಕಟ್ಟಿನೊಳಗೇ ತನ್ನ ಮಾರುಕಟ್ಟೆ ಹಿತಾಸಕ್ತಿಯನ್ನು ಸಾಧಿಸಿಕೊಳ್ಳುವ ಸಾಧ್ಯತೆಯಿರುತ್ತದೆಯೋ, ಅಲ್ಲಿಯವರೆಗೂ ಹಳೆಯದನ್ನು ಮುರಿಯುವ ಕೆಲಸವನ್ನು ಆಧುನಿಕ ಬಂಡವಾಳಶಾಹಿ ವ್ಯವಸ್ಥೆಯು ಮಾಡುವುದಿಲ್ಲ. ಆದ್ದರಿಂದಲೇ ಆಧುನಿಕತೆ ಮತ್ತು ಸಾಂಪ್ರದಾಯಿಕತೆಗಳೆರಡೂ ವಿಚಿತ್ರವಾಗಿ ಬೆಸೆದುಕೊಂಡಿರುವ ಭಾರತದಂತಹ ದೇಶಗಳಲ್ಲಿ ಅಂತಹ ಪಲ್ಲಟಗಳೇನೂ ಸಂಭವಿಸಿಲ್ಲ. ಇಲ್ಲಿ ಖೈರ್ಲಾಂಜಿಯೂ ಸಂಭವಿಸುತ್ತಿರುವ ಹೊತ್ತಿಗೇ ಅಂಬಾನಿಯೂ ಸಂಭ್ರಮಿಸುತ್ತಿರುತ್ತಾನೆ. ಇಂಡಿಯಾ ಶೈನ್ ಆಗುತ್ತಿದೆ ಎಂದು ಯುವಜನತೆಯನ್ನು ನಂಬಿಸಲೂ ಸಾಧ್ಯವಾಗುತ್ತದೆ. ಅಷ್ಟಕ್ಕೂ ಮೀರಿ ಉಂಟಾಗಬಹುದಾದ ಸಿಟ್ಟನ್ನು ನಿಯಂತ್ರಿಸಲು ಹಿಂದೂತ್ವದ ಅಫೀಮನ್ನೂ ಈ ದೇಶದಲ್ಲಿ ಸೃಷ್ಟಿಸಿ ಇಟ್ಟುಕೊಳ್ಳಲಾಗಿದೆ. ಹುಸಿ ಶತ್ರುಗಳನ್ನು ಸೃಷ್ಟಿಸಿ, ಶೋಷಿತರನ್ನೇ ಅಲ್ಪಸಂಖ್ಯಾತ ಸಮುದಾಯದ ಮೇಲೆ ಛೂಬಿಡುವ ಶಕ್ತಿಯನ್ನು ಅದು ಈಗಾಗಲೇ ಅಲ್ಲಲ್ಲಿ ಸಂಚಯಿಸಿಕೊಂಡಿದೆ.

ಉದ್ಯಮಶೀಲತೆಯನ್ನು ಹೊಂದಿರುವ ಹೊಸ ಯುವ ಪಡೆಯ ಒಂದು ವಿಭಾಗ ಆಯಾ ಹಳ್ಳಿ/ಪಟ್ಟಣಗಳಲ್ಲಿ ಬಡ್ಡಿ ವ್ಯಾಪಾರದಲ್ಲಿ ತಮ್ಮ ಶಕ್ತಿಗೆ ತಕ್ಕ ಫಲವನ್ನು ಕಂಡುಕೊಳ್ಳುತ್ತಿದ್ದಾರೆ. ದೊಡ್ಡ ವಿಭಾಗವು ಕೆಲವು ಕುಟುಂಬಗಳ ಖಾಸಗಿ ಆಸ್ತಿಗಳಾಗಿರುವ ಕಾಂಗ್ರೆಸ್, ಜನತಾದಳ, ಡಿಎಂಕೆ, ತೆಲುಗುದೇಶಂ, ಬಿಜೆಪಿ ಇತ್ಯಾದಿಗಳಲ್ಲಿ ಸೇರಿಕೊಂಡು ಸಣ್ಣ ಪಾಲನ್ನು ಗುಳುಂ ಮಾಡುವ ಅವಕಾಶಕ್ಕಾಗಿ ಅಸಹನೆಯಿಂದ ದುಡಿಯುತ್ತಾರೆ.


ಇದರಾಚೆಗಿನ ಗಮನಾರ್ಹ ಗುಂಪು ಕರ್ನಾಟಕ ರಕ್ಷಣಾ ವೇದಿಕೆಯ ಮುಂದು ಡೈನಾಮಿಸಂನಲ್ಲಿ ಕಳೆದುಹೋಗುತ್ತದೆ. ಎನ್‌ಜಿಓಗಳೆಂಬ ಪ್ರಗತಿಪರತೆಯನ್ನು ಗರ್ಭಪಾತ ಮಾಡಿಸುವ ಸಂಸ್ಥೆಗಳಲ್ಲಿ ಒಂದಷ್ಟು ಯುವಶಕ್ತಿ ಸೋರಿ ಹೋಗುತ್ತದೆ. ಇನ್ನು ಎಡಪಂಥೀಯರು ಮತ್ತು ಪ್ರಗತಿಪರರಲ್ಲಿ ಬಹುಪಾಲು ಜನ ಒಳಜಗಳ, ವಿಘಟನೆಗಳಲ್ಲಿ ಸಣ್ಣ ಸಣ್ಣ ಗುಂಪುಗಳಾಗಿ ಛಿದ್ರಗೊಂಡು ಬಡಬಡಿಸುತ್ತಾ ಇದ್ದೇವೆ.

ಆದ್ದರಿಂದಲೇ ಹಳ್ಳಿಗಳಿಂದ ಗುಳೇ ಎದ್ದು ಪಟ್ಟಣ ಸೇರಿಕೊಳ್ಳುತ್ತಿರುವ ದೊಡ್ಡ ಸಂಖ್ಯೆಯ ದುಡಿವ ಶಕ್ತಿಯುಳ್ಳ ಜನರು ಈಜಿಪ್ಟಿನಂತೆ ವಿಧಾನಸೌಧದೆದುರು ಸಂಚಯವಾಗುತ್ತಿಲ್ಲ. ತಮ್ಮ ತಮ್ಮ ಜಾತಿ–ಉಪಜಾತಿಗಳಿಗೆ ಮೀಸಲಾತಿ–ಬಡ್ತಿಗಳೆಲ್ಲವನ್ನೂ ಡಿಮ್ಯಾಂಡ್ ಮಾಡುವ ಪಡೆಗಳು, ವಿವಿಧ ರೂಪಗಳಲ್ಲಿ ಚೆಲ್ಲಾಡುತ್ತಿರುವ ಜಾತಿ ದೌರ್ಜನ್ಯಗಳನ್ನು ಮೂಲೋತ್ಪಾಟನೆ ಮಾಡಲು ಎಲ್ಲಾ ಶೋಷಿತರ ಐಕ್ಯತೆಗಾಗಿ ಮುಂದಾಗುತ್ತಿಲ್ಲ. ಸ್ವಸಹಾಯ ಸಂಘಗಳಲ್ಲಿ ಪೈಸಾಗಳನ್ನು, ಸಣ್ಣ ನೋಟುಗಳನ್ನು ಗುಡ್ಡೆ ಹಾಕಿ, ಆಗಾಗ ಓಂಶಕ್ತಿಯಾತ್ರೆ, ಗೋಬಿ ಮಂಚೂರಿ ವಾಕ್‌ಗಳನ್ನು ಮಾಡಲು ಯೋಜಿಸುವ ಮಹಿಳಾ ಗುಂಪುಗಳು ಮಹಿಳಾ ವಿಮೋಚನೆಯ ಘೋಷಣೆ ಹೊತ್ತು ಮೆರವಣಿಗೆ ಮಾಡುತ್ತಿಲ್ಲ. ಕದ್ದ ಹಸಿರು ಶಾಲನ್ನು ಹೊದ್ದು, ಹುಸಿ ಬಜೆಟ್ಟನ್ನು ಮಂಡಿಸುವ ಯಡಿಯೂರಪ್ಪನ ಮೆಟ್ರೆ ಹಿಸುಕುವ ಕೆಲಸವನ್ನು ರೈತಾಪಿ ಮಾಡಲಾಗುತ್ತಿಲ್ಲ.

ಹಾಗಂತ ಕಾಲಕೆಟ್ಟುಹೋಗಿಲ್ಲ. ಬಂದೀಗೌಡರ ಆಶಾವಾದ ಸುಳ್ಳಲ್ಲ, ಕೇವಲ ಆಶಾವಾದವೂ ಅಲ್ಲ. ಹಳೆಯದ್ದರ ಬಗ್ಗೆ ಭ್ರಮನಿರಸನ ಎಲ್ಲೆಲ್ಲೂ ಸ್ಪಷ್ಟವಾಗಿದೆ. ಅದು ವ್ಯಾಪಕ ಸಿನಿಕತೆಗೆ ದಾರಿ ಮಾಡಿಕೊಟ್ಟಿದೆ. ಈ ಭ್ರಮನಿರಸನ ಮತ್ತು ಸಿನಿಕತೆಯ ನಡುವೆ ನಮ್ಮ ಪರಿಣಾಮಕಾರಿ ಮಧ್ಯೆ ಪ್ರವೇಶ ಆಗಬೇಕಿದೆ. ವಿಸ್ತಾರವಾಗುತ್ತಿರುವ ಪ್ರಜಾತಾಂತ್ರಿಕ ಪ್ರಜ್ಞೆಯನ್ನು ಸೂಕ್ತ ಚಿಂತನೆ ಮತ್ತು ಕಾರ್ಯಾಚರಣೆಯೆಡೆಗೆ ಕೊಂಡೊಯ್ಯುವ ಸಾಧ್ಯತೆ ಖಂಡಿತ ಇದೆ.

'3 ಈಡಿಯಟ್ಸ್'ನಲ್ಲಿ ರಾಂಚೋ (ರಣಚೋಡ್‌ದಾಸ್) ಮತ್ತು ಆತನ ಸ್ನೇಹಿತರು ಬಾತ್‌ರೂಮಿನಲ್ಲಿ ಹಲ್ಲುಜ್ಜುತ್ತಾ ಬದುಕಿನ ಆದ್ಯತೆಗಳ ಬಗ್ಗೆ ಮಾತನಾಡುತ್ತಿರುತ್ತಾರೆ. ಆಗ ರಾಂಚೋ ತಮಾಷೆಯ ದನಿಯಲ್ಲಿ ಗಂಭೀರವಾದ ತಾತ್ವಿಕ ನುಡಿಯನ್ನು ಆಡುತ್ತಾನೆ 'ಯಾರೋ ಒಬ್ಬ ಮಹಾಪುರುಷ ಹೇಳಿದ್ದಾನೆ, ಯಶಸ್ಸು ಸಾಧಿಸಲು ಓದಬೇಡ; ಯೋಗ್ಯನಾಗಲು ಓದು ಅಂತ'. ಅದಕ್ಕೆ ಅವನ ಸ್ನೇಹಿತ ರಾಜು ಕೇಳುತ್ತಾನೆ, 'ಯಾವ ಮಹಾಪುರುಷ? ಬಾಬಾ ರಣಚೋಡ್‌ದಾಸನಾ?' ಅಂತ. ನಿಜವಾಗಿ ಅದು ರಾಂಚೋ ನದ್ದೇ ಆ ಕ್ಷಣದ ಸೃಷ್ಟಿಯಾಗಿರುತ್ತದೆ. ಹಾಗಾಗಿ ಇಂದು ನಾನೇನಾದರೂ, ಒಳ್ಳೆಯ ಕಾಲ ಬರುತ್ತಿದೆ, ಬಂದೇ ಬರುತ್ತದೆ ಎಂದು ಹೇಳಿದರೆ ಅದು ಈ ರೀತಿ ಜ್ಯೋತಿಷಿ ಮಹಾಪುರುಷ ಒಬ್ಬ ಹೇಳಿದ ಮಾತಿನಂತೆ ಕೇಳಿಬಡಬಹುದು. ಪರವಾಗಿಲ್ಲ, ನನ್ನ ಜೊತೆ ಡಾ. ಬಂದೀಗೌಡರೂ ಇದ್ದಾರೆ.

ಹೊಸ ಕನಸುಗಳನ್ನು ಬಿತ್ತರಗೊಳಿಸುವ, ಸ್ಥಾಪಿತ ಪಟ್ಟಭದ್ರರನ್ನು ತಲ್ಲಣಗೊಳಿಸುವ ಸ್ಫೋಟಕ ವಿದ್ಯಮಾನಗಳು ಆಗಿಂದಾಗ್ಗೆ ಇತಿಹಾಸದಲ್ಲಿ ಸಂಭವಿಸಿವೆ. ಅವು ನಿರಂತರವೂ, ಯಾವುದೇ ಬ್ರೇಕ್‌ಗಳಿಲ್ಲದೇ ಬರುವುದೂ ಆಗಿರುವುದಿಲ್ಲ. ಇಂದು ಮತ್ತೊಂದು ಸಂಕ್ರಮಣದ ಸ್ಥಿತಿ ಹರಳುಗಟ್ಟುತ್ತಿದೆ. ಆದರೆ ಈ ಬಾರಿ ಅದು ಅಷ್ಟು ಸುಲಭವಾಗಿ ಬರುವುದಿಲ್ಲ. ಮೇಲೆ ವಿವರವಾಗಿ ಹೇಳಿರುವ ಬಂಡವಾಳಶಾಹಿ ವ್ಯವಸ್ಥೆಯು ರೂಪಿಸುತ್ತಿರುವ ಮನೋಭೂಮಿಕೆಯನ್ನು ಒಡೆಯಬೇಕು. ಅದು ಪ್ರಜ್ಞಾಪೂರ್ವಕವೂ, ವಿವಿಧ ಆಯಾಮಗಳನ್ನುಳ್ಳ ಸಾಮೂಹಿಕ ಚಿಂತನೆ ಮತ್ತು ಕಾರ್ಯಾಚರಣೆಯೂ ಆಗಿರಬೇಕಾಗುತ್ತದೆ. ಆಗ ಒಳ್ಳೆಯ ಕಾಲ ಬರುತ್ತೆ ಆದರೆ ಸುಲಭದಲ್ಲಿ ಬರೋಲ್ಲ. ●



ತಲ್ಲಣಿಸದಿರು ಕಂಡ್ಯ ತಾಳು ಮನವೇ...

ಕಮ್ಯುನಿಸ್ಟ್ ನಾಯಕನು ಮತ್ತು ಚಿಂತಕನೂ ಆಗಿದ್ದ ಗ್ರಾಮ್‌ಷಿ ಮಾರ್ಕ್ಸ್‌ವಾದವ... ಮತ್ತೊಮ್ಮೆ ಅರ್ಥೈಸಲು ನೋಡಿದ. ಮುಸಲೋನಿ ಜೈಲಿನಲ್ಲಿ ಬಂಧಿತನಾದ ಸಂತ... ಈ ಫ್ಯಾಸಿಸ್ಟ್ ಆಡಳಿತ ಜಾರಿಗೆ ಬಂದ ವಿಧಾನವನ್ನು ಚಿಂತಿಸಿದ. ಉತ್ಪಾದನಾ ಸಂಬಂಧಗಳಲ್ಲಿ ಬದಲಾವಣೆಯಾದ ಮಾತ್ರಕ್ಕೆ ಜನರ ವಿಚಾರಗಳ... ಬದಲಾವಣೆಯಾಗುತ್ತದೆ ಎಂಬುದಕ್ಕೆ ಯಾವ ರೀತಿಯ ಗ್ಯಾರಂಟಿಯೂ ಇ... ಎಂಬುದನ್ನು ಕಂಡುಕೊಂಡ. ಏಕೆಂದರೆ, ಜನರು ನಂಬುವ ಮೌಲ್ಯಗಳಿಗೆ, ವಿಚಾರಗಳಿ... ಧರ್ಮಕ್ಕೆ ಒಂದು ಚರಿತ್ರೆ ಇರುತ್ತದೆ. ಅದನ್ನು ಬದಲಾಯಿಸಬೇಕಾದರೆ ದಿನದಿನ ವೈಚಾರಿ... ಕ್ರಾಂತಿ ಜರುಗಬೇಕಾಗುತ್ತದೆ.

ಅಂತೂ ಇಂತೂ ಭಾರತ ಎಂಬ ಟೈಟಾನಿಕ್ ಹಡಗು ಫ್ಯಾಸಿಸ್ಟ್ ನೀರ್ಗಲ್ಲಿಗೆ ಹೊಡೆದು ಚೂರಾಗುವ ಸ್ಥಿತಿಯಲ್ಲಿ ಇದೆ. ಆದರೆ ಟೈಟಾನಿಕ್‌ನಲ್ಲಿ ಕುಳಿತವರು ಅದರ ತೀವ್ರತೆಯನ್ನು ಅರಿಯದೆ ನಾವು ಸುರಕ್ಷಿತವಾಗಿ ಸಾಗರದಲ್ಲಿ ತೇಲುತ್ತಿದ್ದೇವೆ ಎಂಬ ಭ್ರಮೆಯಲ್ಲಿಯೇ ಇದ್ದೇವೆ. ಈ ಭ್ರಮೆ ಯನ್ನು ಹಡಗಿನ ಕ್ಯಾಪ್ಟನ್‌ಗಳು, ಸಂಗೀತಗಾರರು ಮೊದಲಾದವರು ಯಶಸ್ವಿಯಾಗಿ ಹುಟ್ಟುಹಾಕಿದ್ದಾರೆ. ಆದರೂ ಬಹುಸಂಖ್ಯಾತ ಜನ ಏನೇನೂ ಗೊತ್ತಿಲ್ಲದಂತೆ ಅಥವಾ ನೀರ್ಗಲ್ಲಿಗೆ ಟೈಟಾನಿಕ್ ಡಿಕ್ಕಿ ಹೊಡೆದು ಚೂರುಚೂರಾದರೂ ಹೊಸ ವ್ಯವಸ್ಥೆಯೊಂದು ಬರಬಹುದೆಂಬ ಭ್ರಮೆಯಲ್ಲಿ ದ್ದಾರೆ. ಹಡಗಿನಲ್ಲಿರುವ ಕೆಲವರಿಗೆ ಇದು ತಿಳಿದು ಗೊಂದಲ ಮತಿಭ್ರಮಣೆ ಉಂಟಾಗುವ ಸ್ಥಿತಿ ಇದೆ. ಸೂಕ್ಷ್ಮಮತಿಗಳು ಪ್ರಜಾಸತ್ತಾತ್ಮಕ ವ್ಯವಸ್ಥೆಯಲ್ಲಿ ನಂಬಿಕೆ ಇಟ್ಟಿರುವವರು ಆರೋಗ್ಯಕರ ಸಮಾಜವನ್ನು ಕಟ್ಟಲು ಬಯಸುವವರು ಇಂತಹ ಸ್ಥಿತಿಯನ್ನು ಅರ್ಥಮಾಡಿಕೊಳ್ಳುವ ಅವಶ್ಯಕತೆ ಇದೆ. ಇದನ್ನು ಅರ್ಥಮಾಡಿಕೊಳ್ಳಲು ಸದ್ಯಕ್ಕೆ ಸಮಕಾಲೀನ ಭಾರತದಲ್ಲಿ ನಡೆಯುತ್ತಿರುವ ವಿದ್ಯಮಾನಗಳನ್ನು ನೋಡಬಹುದು.

ಘಟನೆ 1

ನಾನು ದೆಹಲಿಯ ಜವಾಹರಲಾಲ್ ನೆಹರು ವಿಶ್ವವಿದ್ಯಾಲಯದಲ್ಲಿ ರೆಫ್ರೆಶರ್ ಕೋರ್ಸ್‌ಗೆ ಹೋಗಿದ್ದಾಗ ನಮ್ಮ ಜೊತೆ ಭಾಗವಹಿಸಿದ್ದ ಕ್ರಿಶ್ಚಿಯನ್ ಹುಡುಗಿಯೊಬ್ಬಳು ಆಗಾಗ ಬೆಚ್ಚಿಬೀಳುತ್ತಿದ್ದಳು. ತೀವ್ರವಾದ ಖಿನ್ನತೆಯಲ್ಲಿದ್ದಳು. ನಮಗೆ ಅವಳ ಬಗ್ಗೆ ಒಂದು ರೀತಿಯ ಅನುಕಂಪವಿತ್ತು. "ನೀನು ಏಕೆ ಹಾಗೆ ಬೆಚ್ಚಿ ಬೀಳುತ್ತೀಯಾ?" ಎಂದು ಕೇಳಿದ್ದಕ್ಕೆ "ನನಗೆ ಆಗಾಗ ಯಾರೋ ಬಂದು ನನ್ನ ಮೇಲೆ ಅತ್ಯಾಚಾರವೆಸಗುತ್ತಿದ್ದಾರೆ ಎಂದು ಭಯವಾಗುತ್ತದೆ ಅಥವಾ ಪಕ್ಕದಲ್ಲಿರುವ ಕಟ್ಟಡಕ್ಕೆ ಬೆಂಕಿ ಹಚ್ಚುತ್ತಿದ್ದಾರೆ ಎನಿಸುತ್ತದೆ. ಆ ರೀತಿಯ ದೃಶ್ಯಗಳು, ಶಬ್ದಗಳು ನನ್ನ ಕಣ್ಣು ಮತ್ತು ಕಿವಿಯ ಮೇಲೆ ಬಿದ್ದಾಗ ಭಯಗೊಂಡು ಕಿಟಾರನೆ ಕಿರುಚಿಕೊಳ್ಳುತ್ತೇನೆ" ಎಂದು ಹೇಳಿದಳು.



ಈ ಯುವತಿಯ ಗಾಬರಿಗೆ ಗುಜರಾತ್‌ನಲ್ಲಿ 2002ರಲ್ಲಿ ನರೇಂದ್ರ ಮೋದಿ ಎಂಬ ಹಂತಕನ ನೇತೃತ್ವದಲ್ಲಿ ನಡೆದ ಜನಾಂಗೀಯ ಹತ್ಯೆಯೇ ಕಾರಣವಾಗಿತ್ತು, ಜನಾಂಗೀಯ ಹತ್ಯೆಯನ್ನು ಯಶಸ್ವಿಯಾಗಿ ನಡೆಸಿದ ಭಾರತದ ಕುಖ್ಯಾತ ವ್ಯಕ್ತಿಗಳಲ್ಲಿ ಒಬ್ಬನಾಗಿರುವ ಮೋದಿಯನ್ನು ನಮ್ಮ ಉದ್ಯಮಿಗಳು ಭಾವಿ ಪ್ರಧಾನಿ ಎಂದು ಬಿಂಬಿಸುತ್ತಿದ್ದಾರೆ. ಮತ್ತು ಇಡೀ ಶಾಸಕಾಂಗ, ಕಾರ್ಯಾಂಗ ಮತ್ತು ನ್ಯಾಯಾಂಗ ಆಡಳಿತ ಯಂತ್ರವನ್ನೇ ಹತ್ಯೆಗೆ ಬಳಸಿಕೊಂಡ ಮುಖ್ಯಮಂತ್ರಿಯೊಬ್ಬನನ್ನು ಹೀಗೆ ಪ್ರಧಾನಮಂತ್ರಿ ಹುದ್ದೆಗೆ ಸೂಚಿಸುವಾಗ ಉದ್ಯಮಿಗಳಿಗೆ ಕಾರಣವಾದರೂ ಏನಿತ್ತು? ಕಾರಣ ಇಷ್ಟೇ ಸಾಮ್ರಾಜ್ಯಶಾಹಿ ಮತ್ತು ಬಂಡವಾಳಶಾಹಿಗಳಿಗೆ ಗುಜರಾತ್ ರಾಜ್ಯದ ಸಂಪತ್ತನ್ನು ಎಗ್ಗಿಲ್ಲದೆ ಲೂಟಿ ಹೊಡೆಯಲು ಅವಕಾಶ ಮಾಡಿಕೊಟ್ಟ.

ಉದ್ಯಮಿಗಳನ್ನು ರಕ್ಷಿಸಲು ಫ್ಯಾಸಿಸ್ಟ್ ಮತ್ತು ಬಂಡವಾಳಶಾಹಿ ಒಗ್ಗೂಡಿದ ಸಿದ್ಧಾಂತಕ್ಕೆ ಅಪಾರವಾದ ಅವಕಾಶವಿರುತ್ತದೆ. ಇವರಿಬ್ಬರೂ ಒಗ್ಗೂಡಿದರೆ ಪ್ರಗತಿಪರರನ್ನು, ಭಿನ್ನಮತೀಯರನ್ನು ಬಗ್ಗುಬಡಿಯುತ್ತಾರೆ. ಇವರ ಪ್ರಚಾರ ಮತ್ತು ಅಪಪ್ರಚಾರದ ಪ್ರವಾಹದಲ್ಲಿ ಮೋದಿಯಂತಹ ಕೊಲೆಗಡುಕರು ಐಕಾನ್‌ಗಳಾಗಿ ಬೆಳೆಯುತ್ತಾರೆ.

ಪ್ರತ್ಯಕ್ಷವಾಗಿ ಮೋದಿಯ ಆಡಳಿತವನ್ನು ಅನುಭವಿಸುತ್ತಿರುವ ಕೆಲವು ಕ್ರಿಶ್ಚಿಯನ್ ಪಾದ್ರಿಗಳ ಗುಂಪೊಂದು 'ಮಾತುಕತೆ' ಪತ್ರಿಕೆಯ ಜತೆ ಸಂವಾದ ನಡೆಸಲು ಬಂದಿತ್ತು. ಆಗ ನಾವು 2002ರ ಹತ್ಯಾಕಾಂಡಕ್ಕೆ ಸಾಕ್ಷಿಗಳಾಗಿದ್ದ ಅವರನ್ನು ಮೋದಿಯ ವ್ಯಕ್ತಿತ್ವ ಕುರಿತು ಅಭಿಪ್ರಾಯ ಕೇಳಿದೆವು. ಪಾದ್ರಿಗಳ ಗುಂಪು ಮೋದಿಯನ್ನು, ಮೋದಿಯ ಅಭಿವೃದ್ಧಿ ನೀತಿಯನ್ನು ಕೊಂಡಾಡಿತು. ಆ ಬಗೆಯ ಹತ್ಯಾಕಾಂಡಗಳು ಸಾಮಾನ್ಯವೆಂಬಂತೆ ಮಾತನಾಡಿದರು. ಸ್ವತಃ ಅಲ್ಪಸಂಖ್ಯಾತರಾಗಿ ಗುಜರಾತ್‌ನಲ್ಲಿ ಎರಡನೇ ದರ್ಜೆ ಪ್ರಜೆಗಳಂತೆ ಬಾಳುತ್ತಿರುವ ಇವರು ಮೋದಿಯ ಕೋಮುವಾದದಿಂದ ಸ್ವಲ್ಪವೂ ನೊಂದುಕೊಂಡವರಂತೆ ಕಾಣಲಿಲ್ಲ. ನಿಜವಾಗಿಯೂ ಇವರ ಅಭಿಪ್ರಾಯದಿಂದ ಆಘಾತಗೊಂಡ ನಾವು ಚರ್ಚೆಯನ್ನು ಮುಂದುವರೆಸುವ ಗೋಜಿಗೆ ಹೋಗಲಿಲ್ಲ.

ಘಟನೆ 2

ಕೋಮುವಾದಿಗಳ ಭೀಕರ ದಾಳಿಗೆ ತುತ್ತಾಗಿ ಬಾಬ್ರಿ ಮಸೀದಿ ನೆಲಸಮವಾಯಿತು. ಆಗ ಭಾರತದ ಪ್ರಧಾನಮಂತ್ರಿಯಾಗಿದ್ದ ಪಿ.ವಿ. ನರಸಿಂಹರಾಯರು ಎಲ್ಲಾ ಫೋನ್‌ಗಳನ್ನು ಕಟ್ ಮಾಡಿ ಕಂಪ್ಯೂಟರ್‌ನಲ್ಲಿ ಆಡುತ್ತಾ ಕುಳಿತಿದ್ದರೆಂಬ ಕತೆಯಿದೆ. ಹಾಗೆಯೇ ಕರಸೇವಕರೆಂದು ಕರೆಸಿಕೊಂಡ ಗೂಂಡಾಗಳು ಬಾಬ್ರಿ ಮಸೀದಿಯನ್ನು ನೆಲಸಮ ಮಾಡುವಾಗ ಸಶಸ್ತ್ರ ಸಜ್ಜಿತರಾಗಿದ್ದ ಪೊಲೀಸರು ಮತ್ತು ಸೈನಿಕರು ನೋಡುತ್ತಾ ನಿಂತಿದ್ದರು ಅಥವಾ ನೆಪಮಾತ್ರಕ್ಕೆ ತಮ್ಮ ಅಸ್ತಿತ್ವವನ್ನು ಸಾರಲು ಗುಂಪಿನ ಮೇಲೆ ಗುಂಡು ಹಾರಿಸುವಂತೆ, ಲಾಠಿ ಬೀಸುವಂತೆ ನಟಿಸುತ್ತಿದ್ದರು.

ಇದನ್ನು ಕುರಿತಂತೆ ಅಲಹಾಬಾದ್ ಉಚ್ಚನ್ಯಾಯಾಲಯದಲ್ಲಿ ವಿವಿಧ ಗುಂಪುಗಳು ಮೊಕದ್ದಮೆ ಹೂಡಿದವು. ಸೆಪ್ಟೆಂಬರ್ 30, 2010ರಂದು ತೀರ್ಪು ಹೊರಬಿತ್ತು. ತೀರ್ಪಿನಲ್ಲಿ ಒಂದು ಚಾರಿತ್ರಿಕ ಸ್ಮಾರಕವನ್ನು ನೆಲಸಮ ಮಾಡಿದವರಿಗೆ ಶಿಕ್ಷೆಯಾಗುವ ಬದಲು ನಂಬಿಕೆಯ ಆಧಾರದ ಮೇಲೆ ವಿವಾದಿತ ಸ್ಥಳವನ್ನು ಮೂರು ಭಾಗಗಳಾಗಿ ವಿಂಗಡಿಸಲಾಯಿತು. ದೇಶದಾದ್ಯಂತ ಜನರು ತುಂಬಾ ಸಂತೋಷದಿಂದ ಆ ತೀರ್ಪನ್ನು ಸ್ವಾಗತಿಸಿದ್ದಾರೆಂದು ಸಾರಲಾಯಿತು.

ಆಶೀಶ್ ನಂದಿಯಂತಹ ಸಾಮಾಜಿಕ ಮಾನವಶಾಸ್ತ್ರಜ್ಞರು ಈ ತೀರ್ಪನ್ನು ಸ್ವಾಗತಿಸಿದರು. ಅದಲ್ಲದೆ ಸೆಕ್ಯುಲರ್ ಮತ್ತು ಮಾರ್ಕ್ಸ್ ವಾದಿಗಳನ್ನು ಟೀಕಿಸಿ, ಈ ತೀರ್ಪನ್ನು ಒಪ್ಪಿಕೊಳ್ಳಬೇಕೆಂದು ಒತ್ತಾಯಿಸಿದರು ಕೂಡ. ಅಲ್ಪಸಂಖ್ಯಾತರು ಮತ್ತು ಬಹುಸಂಖ್ಯಾತರ ಮೌನವನ್ನು ಸಮ್ಮತಿಯೆಂದು ಹಬ್ಬಿಸಲಾಯಿತು. ಮಾಧ್ಯಮಗಳೂ ತೀರ್ಪನ್ನು ಹಾಡಿ ಕೊಂಡಾಡಿದವು. ಬಹುಸಂಖ್ಯಾತ ಜನರ ನಂಬಿಕೆ ಆಧಾರದ ಮೇಲೆ ನೀಡಿದ್ದ ಈ ತೀರ್ಪು ಭಾರತೀಯ ಸಂವಿಧಾನವನ್ನು ಅಣಕಿಸಿದಂತಿತ್ತು.

ಆದರೆ ಪ್ರಜಾಪ್ರಭುತ್ವವಾದಿ ಎಂದೂ, ಗಾಂಧಿಯ ಅಭಿಪ್ರಾಯಗಳನ್ನು ಮತ್ತಷ್ಟು ವಿಸ್ತರಿಸಿದವರೂ ಮತ್ತು ಭಾರತದ ಮಧ್ಯಮ ವರ್ಗ ಮತ್ತು ಗಣ್ಯವರ್ಗವನ್ನು ಕಟುವಾಗಿ ಟೀಕಿಸಿ ಪ್ರಸಿದ್ಧರಾದ ಆಶೀಶ್ ನಂದಿಯವರ ಅಭಿಪ್ರಾಯ ಮತ್ತು ತೀರ್ಪನ್ನು ಕುರಿತು ಬಹುಸಂಖ್ಯಾತ ಬುದ್ಧಿಜೀವಿಗಳ ದಿವ್ಯಮೌನ ನಿಜಕ್ಕೂ ಆತಂಕಕಾರಿಯಾಗಿತ್ತು. ಬಹುತೇಕ ಮುಸಲ್ಮಾನರಲ್ಲದ ಸಾಮಾನ್ಯ ಭಾರತೀಯರು ಈ ತೀರ್ಪನ್ನು ಆನಂದದಿಂದ ಸ್ವಾಗತಿಸಿದಂತೆ ತೋರುತ್ತಿತ್ತು.

ಘಟನೆ 3

ನನ್ನ ವಾರಿಗೆಯ ಅನೇಕ ಗೆಳೆಯರ ಜತೆ ಮಾತನಾಡುವಾಗ ಮುಂಬೈ ಸ್ಫೋಟದ ರೂವಾರಿಗಳಲ್ಲಿ ಒಬ್ಬನೆಂದು ಹೇಳಲಾದ ಕಸಬ್‌ನನ್ನು ಕೂಡಲೇ ಗುಂಡಿಟ್ಟುಕೊಲ್ಲಬೇಕೆಂದು ವಾದಿಸುತ್ತಾರೆ. ಒಂದು ಬುಲೆಟ್ ವೇಸ್ಟ್ ಮಾಡುವುದಕ್ಕೆ ನಮ್ಮ ಪೊಲೀಸರು ಇಷ್ಟೆಲ್ಲಾ ಹೆಣಗಬೇಕೇ? ಎಂಬ ಅಭಿಪ್ರಾಯ ಅವರದು. ಯಾರನ್ನು ಕೇಳಿದರೂ ಇದನ್ನು ನಿರ್ವಿವಾದ ತೀರ್ಪೇನೋ ಎಂಬಂತೆ ಮಂಡಿಸುತ್ತಾರೆ. ನಮ್ಮ ದೇಶದ ಪ್ರಜೆಯಾಗಲಿ, ಬೇರೆ ದೇಶದವನಾಗಲಿ ಎಂಥದ್ದೇ ಕೃತಿ ಎಸಗಿರಲಿ ಅದನ್ನು ಸಂವಿಧಾನಬದ್ಧವಾಗಿ ನ್ಯಾಯದಾನದ ಪ್ರಕ್ರಿಯೆಯ ಮೂಲಕ ಬಗೆಹರಿಸಬೇಕೆಂಬ ನಂಬಿಕೆ ಇದ್ದಂತಿಲ್ಲ.

ಮೊನ್ನೆ ಎಲ್ಲ ಶಾಲಾ ಕಾಲೇಜುಗಳು, ಪಾರ್ಕುಗಳು ಮತ್ತಿತರ ಸಾರ್ವಜನಿಕ ಸ್ಥಳಗಳಲ್ಲಿ ಹಿಂದೂ ಎಂದು ಕರೆಯಲಾಗುವ ದೇವಾಲಯಗಳನ್ನು ಕಟ್ಟಿದ್ದಾರೆ. ಮೂರ್ತಿಗಳನ್ನು ಪ್ರತಿಷ್ಠಾಪಿಸಿದ್ದಾರೆ. ಅದರ ಬಗೆಗೆ ಸರ್ವರ ಸಮ್ಮತಿಯೂ ಇದೆ. ಮೊನ್ನೆ ನಮ್ಮ ಮನೆಯ ಸಾರ್ವಜನಿಕ ಉದ್ಯಾನವನವೊಂದರಲ್ಲಿ ನಿರ್ಮಿಸಲಾಗಿದ್ದ ಬೃಹತ್ ದೇವಸ್ಥಾನವೊಂದರ ಉದ್ಘಾಟನೆಯಾಯಿತು. ಅಲ್ಲಿ ಯೋಗ, ಸಂಗೀತ ಜತೆಗೆ ಭಯೋತ್ಪಾದಕ ಸಂಸ್ಥೆ ಆರೆಸ್ಸೆಸ್ ಕಾರ್ಯಚಟುವಟಿಕೆಗಳನ್ನು ನಡೆಸಲಾಗುತ್ತದೆ. ಅಲ್ಲಿರುವ ಮಧ್ಯಮ ವರ್ಗದ ತಂದೆತಾಯಿಯರು ಆರೆಸ್ಸೆಸ್ ಈಗಾಗಲೇ ಗಾಂಧೀಜಿಯವರ ಹತ್ಯೆಯಲ್ಲಿ ಭಾಗಿಯಾಗಿರುವುದನ್ನು ಅರಿತಿದ್ದಾರೆ.



• ಡಾ. ಲಕ್ಷ್ಮೀಪತಿ ಸಿ.ಜಿ

ಆರೆಸ್ಸೆಸ್‌ನ ಅಂಗಸಂಸ್ಥೆಗಳು ಮಲೆಗಾಂವ್, ಅಜ್ಮೀರ್ ಮೊದಲಾದ ಸ್ಫೋಟಗಳಲ್ಲಿ ಭಾಗವಹಿಸಿರುವುದನ್ನು ಪತ್ರಿಕೆಗಳನ್ನು ಓದಿ ತಿಳಿದುಕೊಂಡಿದ್ದಾರೆ. ಆದರೂ ಕೂಡ ತಮ್ಮ ಮಕ್ಕಳು ಆರೆಸ್ಸೆಸ್‌ನ ಶಾಖೆಗಳಿಗೆ ಹೋಗಿ ಆಟವಾಡುವುದನ್ನು ತಡೆಗಟ್ಟುತ್ತಿಲ್ಲ. ಇವರ ಕೂಗಾಟ ಮತ್ತು ಮೈಕಿನಲ್ಲಿ ಹಾಕುವ ಆರೆಸ್ಸೆಸ್ ಭಕ್ತಿಗೀತೆಗಳು ಸುತ್ತಮುತ್ತಲಿನ ವಿದ್ಯಾರ್ಥಿಗಳಿಗೆ, ಅನಾರೋಗ್ಯದಿಂದಿರುವವರಿಗೆ ತೊಂದರೆಯನ್ನು ಉಂಟುಮಾಡುತ್ತಿದೆ. ಇದನ್ನು ಪೊಲೀಸರಿಗೆ ತಿಳಿಸಿದರೆ ಭಕ್ತಿಗೀತೆಯನ್ನು ಕೇಳಿ ಆರೋಗ್ಯ ಸುಧಾರಿಸುತ್ತದೆ ಮತ್ತು ವಿದ್ಯಾರ್ಥಿಗಳು ಪರೀಕ್ಷೆಯಲ್ಲಿ ಚೆನ್ನಾಗಿ ಬರೆಯಲು ಸಾಧ್ಯವಾಗುತ್ತದೆ ಎಂಬ ಉಚಿತ ಸಲಹೆಯನ್ನು ಕೊಡುತ್ತಾರೆ. ಅವರು ಇಂತಹ ಚಟುವಟಿಕೆಗಳಿಗೆ ಮೌನ ಸಮ್ಮತಿಯನ್ನು ಕೊಟ್ಟುಕೊಂಡು ಬಂದಿರುವುದನ್ನು ಎಲ್ಲ ಸಂದರ್ಭದಲ್ಲಿಯೂ ಗಮನಿಸಬಹುದು.

ಚರ್ಚ್‌ಗಳ ಮೇಲೆ ದಾಳಿ ನಡೆದಾಗ, ಮುಸ್ಲಿಮರ ಮೇಲೆ ಹಲ್ಲೆಯಾದಾಗ, ಕುಮ್ಮಕ್ಕು ಕೊಟ್ಟಿರುವುದು ನಡೆದೇ ಇದೆ. ಇದಕ್ಕೆ ನಮ್ಮ ನಾಗರಿಕ ಸಮಾಜ ತನ್ನ ಅನುಮತಿಯನ್ನು ನೀಡಿದೆ ಮತ್ತು ಸಹಜ ಎಂದು ಭಾವಿಸಿದೆ....

● ● ●

ಮೇಲಿನ ಈ ಮೂರು ವಿದ್ಯಮಾನಗಳನ್ನು ಗಮನಿ... ಒಂದು ಅಂಶ ಸ್ಪಷ್ಟವಾಗುತ್ತದೆ. ರಾಜ್ಯ ಪ್ರಭುತ್ವ, ಬಂಡ... ಶಾಹಿಗಳು, ಸೈನ್ಯ ನ್ಯಾಯಾಂಗ, ಜನಸಾಮಾನ್ಯರು ಭಾರ... ಬುದ್ಧಿಜೀವಿಗಳು, ಮಾಧ್ಯಮಗಳು ಪರಿಸುಮಾರು (ಕೆ... ಅಪವಾದಗಳನ್ನು ಹೊರತುಪಡಿಸಿ) ಎಲ್ಲರೂ ಪ್ರ... ವಾಗಿಯೂ, ಪರೋಕ್ಷವಾಗಿಯೂ ಬ್ರಾಹ್ಮಣ ಹಿಂ... ಕೋಮುವಾದವನ್ನು ಬೆಂಬಲಿಸುತ್ತಿದ್ದಾರೆ. ಈ ... ಗುಂಪುಗಳಲ್ಲಿಯೂ ಕೋಮುವಾದಿ ವಿಚಾರಧಾರೆ... ರಕ್ತದಂತೆ ಪ್ರವಹಿಸುತ್ತಿದೆ. ಪ್ರವಹಿಸುತ್ತಿರುವುದು ಮಾತ್ರ... ಅದು ಸಹಜ ಮತ್ತು ಸಾಮಾನ್ಯವಾದ ಜ್ಞಾನ ಅ... ಕಾಮನ್‌ಸೆನ್ಸ್ ಆಗಿ ರೂಪುಗೊಂಡಿದೆ.

ಈ ಕಾಮನ್‌ಸೆನ್ಸ್ ಬಹಳ ಅಪಾಯಕಾರಿಯಾದು... ಯಾಕೆಂದರೆ ಕ್ರಿಶ್ಚಿಯನ್ ಪಾದ್ರಿಗಳು ನರೇಂದ್ರ ಮೋದಿ... ಹತ್ಯಾಕಾಂಡವನ್ನು ನೋಡಿಯೂ ಆತನ ಅಭಿವೃದ್ಧಿ ... ಭ್ರಮಾತ್ಮಕ ಮಾದರಿಯನ್ನು ಮೆಚ್ಚಿಕೊಳ್ಳುತ್ತಿ... ಜನಸಾಮಾನ್ಯರು ನ್ಯಾಯಾಂಗ ಪ್ರಕ್ರಿಯೆ ಮೂಲಕ ಕಸ... ಶಿಕ್ಷೆಯಾಗಬೇಕು ಎಂಬುದಕ್ಕೆ ಬದಲಾಗಿ ಗುಂ... ಕೊಲ್ಲಬೇಕೆಂದು ವಾದಿಸುತ್ತಾರೆ. ಆಶೀಶ್ ನಂದಿಯ... ಬುದ್ಧಿಜೀವಿಗಳು ಅಯೋಧ್ಯೆಯ ತೀರ್ಪನ್ನು ನಂಬಿ... ಆಧಾರದ ಮೇಲೆ ಬೆಂಬಲಿಸುತ್ತಾರೆ. ಮಾಧ್ಯಮಗಳು ಎ... ಕೋಮುವಾದಿ ಕರಪತ್ರಗಳಾಗಿ ಮಾರ್ಪಟ್ಟಿವೆ. ಸ... ವೊಂದರಲ್ಲಿ ನೇರವಾದ ಫ್ಯಾಸಿಸ್ಟ್ ಆಡಳಿತ ಬರುವ... ನಾವು ಪ್ರಜಾಸತ್ತಾತ್ಮಕ ಸಮಾಜದಲ್ಲಿದ್ದೇವೆ ಎ... ನಂಬಿರುತ್ತೇವೆ. ಆದರೆ ಫ್ಯಾಸಿಸ್ಟ್ ಸಮಾಜಕ್ಕೆ ತಾರ್ಕಿ... ಜಾರಿಗೆ ಬಂದಿರುತ್ತದೆ.

ಈ ತಾತ್ವಿಕ ಒಪ್ಪಿಗೆಯೇ ಸಹಜ ಜ್ಞಾನವಾಗಿ... ಒಮ್ಮೆ ನಾಗರಿಕ ಸಮಾಜ ಫ್ಯಾಸಿಸ್ಟ್ ಸಿದ್ಧಾಂತವನ್ನು ... ಸಹಜ ಎಂದು ಭಾವಿಸಿ ಇದು ನಡೆಯಬೇಕಾದ್ದು ಹೀಗೆ... ಎಂದುಕೊಂಡು ಅದನ್ನು ಕಾಮನ್‌ಸೆನ್ಸ್ ಆಗಿಸಿಕೊ... ಅಪಾಯ ಕಟ್ಟಿಟ್ಟಬುತ್ತಿಯಾಗುತ್ತದೆ.

ಇದೇ ರೀತಿಯ ಘಟನಾವಳಿಗಳು 1916ರಿಂ... ಮುಸಲೋನಿಯ ಆಡಳಿತಕ್ಕೆ ಬರುವವರೆಗೂ ಇಟಲಿಯಲ್ಲಿ ಜರುಗಿದವು. ಇಟಲಿಯ ಕಮ್ಯುನಿಸ್ಟರ... ಕಾರ್ಮಿಕರನ್ನು ಸಂಘಟಿಸಿ ಫ್ಯಾಕ್ಟರಿ ಕೌನ್ಸಿಲ್‌ಗಳ ಚಳವಳಿಯನ್ನು ಪ್ರಾರಂಭಿಸಿದರು. ಮೇಲ್ನೋಟಕ್ಕೆ ... ಯಶಸ್ವಿಯಾದಂತೆಯೂ ತೋರತೊಡಗಿತ್ತು. ಇಟಲಿಯಾದ್ಯಂತ ಕಮ್ಯುನಿಸ್ಟ್ ಮತ್ತು ಸಮಾಜವಾದಿ ಸಿದ್ಧಾಂತಗಳು ಬಹಳ ಜನಪ್ರಿಯವಾಗಿದ್ದವು. ಆದರೆ ಮುಸಲೋನಿಯ ದುರಭಿಮಾ... ರಾಷ್ಟ್ರೀಯತೆ, ಫ್ಯಾಸಿಸ್ಟ್ ಪಾರ್ಟಿ ಮತ್ತು ವ್ಯಾಟಿಕನ್ ಚರ್ಚ್ ಜತೆಗಿನ ಅಪವಿತ್ರ ಮೈತ್ರಿ ಇಟಲಿಯಾದ್ಯಂತ ಕಮ್ಯುನಿಸ್ಟ್ ಸಿದ್ಧಾಂತಗಳನ್ನು ಮೀರಿ ಜನಪ್ರಿಯಗೊಂಡವು. ನೋಡುನೋಡುತ್ತಿದ್ದಂತೆಯೇ ಮುಸಲೋನಿ ಚುನಾವಣೆಯಲ್ಲಿ ಆಯ್ಕೆಯಾದ.

ಈ ಸಂದರ್ಭದಲ್ಲಿ ಕಮ್ಯುನಿಸ್ಟ್ ನಾಯಕ ... ಚಿಂತಕ ಆಗಿದ್ದ ಗ್ರಾಮ್‌ಷಿ ಮಾರ್ಕ್ಸ್‌ವಾದವನ್ನು ಮತ್ತೆ... ಅರ್ಥೈಸಲು ನೋಡಿದ. ಜೈಲಿನಲ್ಲಿ ಬಂಧಿತನಾದ ಸ... ಈ ಫ್ಯಾಸಿಸ್ಟ್ ಆಡಳಿತ ಜಾರಿಗೆ ಬಂದ ವಿಧಾನ... ಚಿಂತಿಸಿದ. ಉತ್ಪಾದನಾ ಸಂಬಂಧಗಳಲ್ಲಿ ಬದಲಾವಣೆ... ಮಾತ್ರಕ್ಕೆ ಜನರ ವಿಚಾರಗಳಲ್ಲಿ ಬದಲಾವಣೆಯಾಗು... ಎಂಬುದಕ್ಕೆ ಯಾವ ರೀತಿಯ ಗ್ಯಾರಂಟಿಯೂ ... ಎಂಬುದನ್ನು ಕಂಡುಕೊಂಡ. ಏಕೆಂದರೆ, ಜನರು ನಂ... ಮೌಲ್ಯಗಳಿಗೆ, ವಿಚಾರಗಳಿಗೆ, ಧರ್ಮಕ್ಕೆ ಒಂದು ಚ... ಇರುತ್ತದೆ. ಅದನ್ನು ಬದಲಾಯಿಸಬೇಕಾದರೆ ದಿನದಿ... ವೈಚಾರಿಕ ಕ್ರಾಂತಿ ಜರುಗಬೇಕಾಗುತ್ತದೆ. ಜೊತೆಗೆ ಬಂಡ... ಶಾಹಿಗಳು ಮತ್ತು ಆಳುವ ವರ್ಗ ನಿರಂತರವಾಗಿ ... ವಿಚಾರಗಳನ್ನು ಸ್ಪಷ್ಟವಾಗಿ ಆಳಿಸಿಕೊಳ್ಳುವ ವರ್ಗ ಅಧ... ಬಡವರ ಮೇಲೆ ಹೇರುತ್ತಿರುತ್ತದೆ. ಈ ವಿಚಾರಗ... ನಿರಂತರ ಹೇರುವಿಕೆಯಿಂದಾಗಿ ಬಡಜನತೆ ಒಪ್ಪಿಕೊಳ್ಳ...

ಕ್ಷಣ, ಚರ್ಚ್, ಪ್ರಭುತ್ವ, ಬಂಡವಾಳಶಾಹಿಗಳು ಮುದಿಯುತ್ತಾರೆ. ಶೋಷಕರ ಮೌಲ್ಯಗಳನ್ನು ತ ವನ ಶೋಷಕರಿಗಿಂತ ಹೆಚ್ಚಾಗಿ ಅದನ್ನು ತಮ್ಮಲ್ಲಿ ಡಿಸಿಕೊಂಡು ಪ್ರಚಾರ ಮಾಡುತ್ತಾರೆ. ಅದನ್ನು ಪ್ರಚಾರ ಮಾಡುತ್ತಾರೆ.

ಂದರೆ, ಅದೇ ಅವರ ಜ್ಞಾನವಾಗಿರುತ್ತದೆ. ಇಂತಹ ಬಹಳ ಅಪಾಯಕಾರಿಯಾದುದು. ಇದಕ್ಕೆ ಉದಾಹರಣೆಯೆಂದರೆ 2002ರ ಗುಜರಾತ್ ಂಡದಲ್ಲಿ ಭಾಗವಹಿಸಿದ್ದವರಲ್ಲಿ ಬಹುತೇಕ ್ರಗಳು, ಆದಿವಾಸಿಗಳು ಸೇರಿದ್ದರು. ತಮ್ಮ ಶತ್ರುವಾದ ತ್ವವಾದವನ್ನು ಹಿಂದೂತ್ವವಾದಿಗಳಿಗಿಂತ ಹೆಚ್ಚಾಗಿ ಮೆರೆದಿದ್ದರು. ಅದಕ್ಕಾಗಿಯೇ ಗ್ರಾಮ್‌ಷಿ ಫ್ಯಾಸಿಸ್ಟ್ ವಿರುದ್ಧ ಹೋರಾಡುವ ಯಾರಾದರೂ ಇಂತಹ ್ಯ ಜ್ಞಾನದ ವಿರುದ್ಧ ಹೋರಾಡಬೇಕೆಂದು ತನ್ನ ಟಿಪ್ಪಣಿಯಲ್ಲಿ ಬರೆಯುತ್ತಾನೆ. ಆತ ಸಾಮಾನ್ಯ ್ನ ಕಟುವಾಗಿ ಟೀಕಿಸುತ್ತಾನೆ.


ಂದರೆ ಶೋಷಿತ ವರ್ಗದ ಈ ಸಾಮಾನ್ಯ ಜ್ಞಾನವು ಪೂರಿತವೂ, ವೈರುಧ್ಯತೆಯಿಂದ ಕೂಡಿದ್ದು ಮತ್ತು ಳಶಾಹಿಗಳ ಮೌಲ್ಯವನ್ನು ಪೋಷಿಸುವಂಥದ್ದೂ ದೆ. ಜೊತೆಗೆ ಶೋಷಿತ ವರ್ಗಗಳ ಲೋಕದೃಷ್ಟಿಯಾಗಿ ನೆ ಹೊಂದಿ ಶೋಷಕ ವರ್ಗವನ್ನು ಹೊತ್ತು ುತ್ತದೆ. ಅದು ವಿಧಿವಾದವಾಗಿ ಪರಿವರ್ತನೆ ಹೊಂದಿ ಗಿ ಬಿಡುತ್ತದೆ. ಗ್ರಾಮ್‌ಷಿಯು ಈಗ ಇರುವ ಸಹಜವಾದದ್ದು ಎಂದು ನಂಬಿಸುವ ಇಂತಹ ಸೆನ್ಸ್ ಅನ್ನು ನಿಜವಾದ ಜನತೆಯ ಶತ್ರು ಎಂದು ತ್ತಾನೆ. ಈ ಬಗೆಯ ಕಾಮನ್‌ಸೆನ್ಸ್ ಜನರ ಮೇಲೆ ಾವರ್ತಿತವಾಗಿ ಬಂಡವಾಳಶಾಹಿಗಳ ಾನಿಕೆಯನ್ನು ಪುನರ್ ಸ್ಥಾಪಿಸುತ್ತದೆ.

ಸಂದರ್ಭದಲ್ಲಿ ಭಾರತದಲ್ಲಿ ಈಗಾಗಲೇ ುರುವ ಫ್ಯಾಸಿಸ್ಟ್ ಸಿದ್ಧಾಂತವನ್ನು ತಡೆಗಟ್ಟಬೇಕೆಂದರೆ ದಾಯವು ಮತ್ತು ಬುದ್ಧಿಜೀವಿಗಳು ತಮ್ಮ ಲ್ಲಿ ಅಡಗಿರುವ, ಸಾಮಾನ್ಯ ಜ್ಞಾನದ ಿರುವ ರಾಜಕೀಯ, ಸಾಮಾಜಿಕ, ಗುಲಾಮಗಿರಿಯಿಂದ ಸ್ವತಂತ್ರ ಕಾಗುತ್ತದೆ. ಏಕೆಂದರೆ, ತ ಸ್ವತಂತ್ರ ಹೊರತು ಪ್ರಜಾ ಸಮಾಜವನ್ನು ಟ್ಟದಲ್ಲಿ ರೂಪಿಸಲು ಸಾಧ್ಯ ಿಲ್ಲ. ಕೇವಲ ಆಡಳಿತದಲ್ಲಿನ ವಣೆ ವ್ಯಕ್ತಿಗಳನ್ನು ಬದಲು ುದೇ ಹೊರತು ಶೋಷಕ ವರ್ಗವು ವರ್ಗದ ಮೇಲೆ ಹೇರಿರುವ ಲೋಕದೃಷಿ ಾವೆಲ್ಲರೂ ಪ್ರಜಾಪ್ರಭುತ್ವದ ಮೌಲ್ಯಗಳು ನಮ್ಮ ಸಮಾಜದಲ್ಲಿವೆ ಎಂಬ ಭ್ರಮೆಯಲ್ಲಿ ಬದುಕುತ್ತಾ ಆಡಳಿತದ ವಿರುದ್ಧ ಕೇವಲ ಪ್ರತಿಕ್ರಿಯಿಸುತ್ತಾ ಳ್ಳಲಾಗದು. ಬದಲಾಗಿ ಪ್ರಜಾಸತ್ತಾತ್ಮಕ ವಾದಿಗಳು, ರು, ಬುದ್ಧಿಜೀವಿಗಳು ನಿರಂತರವಾಗಿ ಜನತೆಯ ಕೆಲಸ ಮಾಡುತ್ತಾ ಜನರ ಸಾಮಾನ್ಯ ಜ್ಞಾನದಲ್ಲಿ ತ್ತಿರುವ ಫ್ಯಾಸಿಸ್ಟ್ ಮೌಲ್ಯಗಳನ್ನು ಬದಲಾಯಿಸ ಅದಕ್ಕೆ ಪ್ರತಿಕ್ಷಣವೂ ಪ್ರತಿದಿನವೂ ಕ್ರಾಂತಿಯಲ್ಲಿ ಕಾಗುತ್ತದೆ. ಕ್ರಾಂತಿ ಎಂಬುದು ಎಂದೋ ವರ್ಗ ದ ಘಟಿಸಿ ಸಮಾಜವನ್ನು ಬದಲಾಯಿಸುವುದಲ್ಲ, ನಿರಂತರವಾದ ನಡಿಗೆ.

ಹಾಗುತ್ತಿದೆಯೆಲ್ಲಾ ಎಂದು ಹಳಹಳಿಸುತ್ತಾ ಳ್ಳುವ ಬದಲು ಜನತೆಯ ನಡುವೆ ಕೆಲಸ ್ತಾ ಪ್ರಜಾಸತ್ತಾತ್ಮಕ ಭಾಷೆಯೊಂದನ್ನು ಾಗುತ್ತದೆ. ಇಲ್ಲವಾದರೆ ಭಾರತವೆಂಬ ಸೆಕ್ಯುಲರ್ ಹಡಗು ಫ್ಯಾಸಿಸ್ಟ್ ನೀರ್ಗಲ್ಲಿಗೆ ಒಡೆದು ರಾಗಿ ಹೆಣಗಳ ರಾಶಿ ತೇಲುವ ದಿನಗಳು ●



ನಿಜದ ತಲ್ಲಣಗಳೋ? ತಲೆಕೆಟ್ಟವರ ತಲ್ಲಣಗಳೋ?



ತಲ್ಲಣ - 1

ಮೈಸೂರಿನಲ್ಲಿ ಇನ್ನೂ ಚಾಲ್ತಿಯಲ್ಲಿರುವ 'ಮಲ ಹೊರುವ ಪದ್ಧತಿ' ಬಗ್ಗೆ ಪ್ರಜಾವಾಣಿಯಲ್ಲಿ ಹಿರಿಯ ವರದಿಗಾರ ರವೀಂದ್ರ ಭಟ್ಟ ಅವರು ವರದಿ ಮಾಡಿದ್ದರು. ಇದನ್ನು ಆಧಾರವಾಗಿಟ್ಟುಕೊಂಡು ಆಗ ಪ್ರಕಟವಾಗುತ್ತಿದ್ದ ಸಾಗರದ ಪತ್ರಿಕೆಯ ನನ್ನ ಅಂಕಣದಲ್ಲಿ ನಾನು ಲೇಖನ ಬರೆದೆ. ಅದಕ್ಕೊಬ್ಬರು ಓದುಗರು ಪ್ರತಿಕ್ರಿಯೆ ಬರೆದು ನನ್ನ ನಿಲುವನ್ನು ಖಂಡಿಸಿ, ಅವರವರ ಕೆಲಸಗಳನ್ನು ಅವರವರು ಮಾಡುತ್ತಾ ಹೋಗುವಾಗ ಸಮಾಜ ಅಡೆತಡೆಯಿಲ್ಲದೆ ಚಲಿಸುತ್ತದೆ. ಇದನ್ನು ಯಾಕೆ ಪ್ರಶ್ನಿಸುತ್ತೀರಿ ಎಂದಿದ್ದರು. ಅಸ್ಪೃಶ್ಯತೆ ಆಚರಣೆಯ ಪರವಾದ ಇಂತಹ ಮನಸ್ಥಿತಿ ಇನ್ನೂ ಇರುವುದರ ಬಗ್ಗೆ ದುಗುಡವಾಯಿತು. ನನ್ನ ದುಗುಡವನ್ನು ಇನ್ನು ಹೆಚ್ಚಿಸಿದ್ದು ಈ ರೀತಿ ಪ್ರತಿಕ್ರಿಯೆ ತೋರಿದವರು ಹೆಗ್ಗೋಡಿನ ನೀನಾಸಂನಲ್ಲಿನ ರಂಗಕರ್ಮಿಯೊಬ್ಬರು ಎಂಬುದು. ಜಗತ್ತಿನ ಅಪರೂಪದ ಚಿಂತನೆಗಳೆಲ್ಲ ಚರ್ಚೆಯಾಗುವ ಇಂತಹ ಸ್ಥಳದಲ್ಲಿ ಇಂತಹ ಮನಸ್ಥಿತಿಯೊಂದು ಉಳಿದುಕೊಂಡಿರುವುದು ನನಗೆ ಅಚ್ಚರಿಯನ್ನು ತಂದಿತು. ಹೆಗ್ಗೋಡಿನ ಮುಖ್ಯಸ್ಥರೇ ಈಗ ಇದಕ್ಕೊಂದು ಮಡೆ ಸ್ನಾನದ ಹಿನ್ನೆಲೆಯಲ್ಲಿ ತಾರ್ಕಿಕ ಅಂತ್ಯವನ್ನು ನೀಡಿಬಿಟ್ಟಿದ್ದಾರೆ. ಸೂಕ್ಷ್ಮತೆಯೆಂಬ ಮೈವೆತ್ತ ಲೇಖಕಿ ಇದಕ್ಕೆ ತಮ್ಮ ಸಹಮತ ವನ್ನು ವ್ಯಕ್ತಪಡಿಸಿದ್ದಾರೆ.

ತಲ್ಲಣ- 2

ಆತ ವಿದ್ಯಾರ್ಥಿ ಚಳವಳಿಗಳಲ್ಲಿ ಮುಂದಿದ್ದವನು. ಆನಂತರದ ಹೋರಾಟಗಳಲ್ಲೂ ಸಕ್ರಿಯವಾಗಿದ್ದವನು. ಆತನೀಗ ದೊಡ್ಡ ಹುದ್ದೆಯಲ್ಲಿದ್ದಾನೆ. ಆ ಗೆಳೆಯ ತನ್ನ ವಿವಾಹ ಪತ್ರಿಕೆ ನೀಡಿದಾಗ ಬೆಚ್ಚಿಬಿದ್ದೆ. ದಿನಕ್ಕೆ 25 ಸಾವಿರ ಬಾಡಿಗೆ ತೆರಬೇಕಾಗಿರುವ ಬೃಹತ್ ಕಲ್ಯಾಣ ಮಂದಿರದಲ್ಲಿ ಸಂಪ್ರದಾಯಬದ್ಧವಾಗಿ ಮದುವೆಯಾಗುತ್ತಿದ್ದಾನೆ. ಕಡು ವೈಚಾರಿಕ ದೃಷ್ಟಿಕೋನ ಹೊಂದಿರುವ ಹೊಸತಲೆಮಾರಿನ ಸಹ ಲೇಖಕನೊಬ್ಬರ ಮದುವೆಯ ಫೋಟೋ ನೋಡಿ ಕೂಡ ಹೀಗೆ ಬೆಚ್ಚಿಬಿದ್ದೆ. ನಿನ್ನೆ ಶಿವಮೊಗ್ಗಕ್ಕೆ ಹಿರಿಯ ಸಾಹಿತಿ ಕಾಳೇಗೌಡ ನಾಗವಾರ ಅವರು ಬಂದಿದ್ದರು. ಪತ್ರಕರ್ತ ಸುದೇಶ ದೊಡ್ಡಪಾಳ್ಯ ಸಂಪಾದಿಸಿದ ಅಂತರಜಾತಿ, ಸರಳ ವಿವಾಹಗಳ ಕಥನಗಳ ಪುಸ್ತಕ 'ಒಲವು ನಮ್ಮ ಬದುಕು' ತಂದುಕೊಟ್ಟರು. ಸರಳವಿವಾಹದ ಬಗ್ಗೆ, ಮಂತ್ರ ಮಾಂಗಲ್ಯ ವಿವಾಹದ ಬಗ್ಗೆ ಇಪ್ಪತ್ತೈದರ ಯುವಕನಂತೆ ಅವರು ಮಾತನಾಡುತ್ತಿದ್ದರು. ನನಗೆ ಗೊಂದಲವಾಯಿತು. ಯಾರಿಗೆ ಮತಿಭ್ರಮಣೆಯಾಗಿದೆ? ಈ ನನ್ನ ಗೆಳೆಯರಿಗೋ ಅಥವಾ ನಾಗವಾರರಿಗೋ?

ತಲ್ಲಣ - 3

ಹೋರಾಟಗಾರರೊಬ್ಬರ ನಿರಂತರ ಪ್ರಯತ್ನದಿಂದ, ನೂರಾರು ಮೈಲಿ ಪಾದಯಾತ್ರೆಯ ಫಲದಿಂದ ಹಳ್ಳಿಗೊಂದು ಕಾಲೇಜು ಬಂತು. ಆದರೆ ಸದಾ ಉಪನ್ಯಾಸಕರ ಕೊರತೆ. ತುಂಬ ಸಮಯದಿಂದ ಖಾಲಿ ಇದ್ದ ಇಂಗ್ಲಿಷ್ ಉಪನ್ಯಾಸಕರ ಹುದ್ದೆಯ ಸ್ಥಾನಕ್ಕೆ,ಉಪನ್ಯಾಸಕಿಯೊಬ್ಬರು ಬಂದರು. ಬಂದ ಕೆಲದಿನಗಳಲ್ಲೇ ಬೆಂಗಳೂರಿಗೆ ವರ್ಗ ಮಾಡಿಸಿಕೊಳ್ಳಲು ಆರಂಭಿಸಿದರು. ಇನ್ನೊಬ್ಬರು ಈ ಹುದ್ದೆಗೆ ಬರುವವರೆಗೆ ಇವರನ್ನು ಬಿಡುಗಡೆಗೊಳಿಸಬಾರದೆಂದು ಆ ಹೋರಾಟಗಾರರು ಪಟ್ಟು ಹಿಡಿದರು. 'ನನ್ನ ಗಂಡ ಬೇರೆ ಊರಿನಲ್ಲಿ ನೌಕರಿಯಲ್ಲಿದ್ದಾರೆ. ಮಕ್ಕಳನ್ನು ನೋಡುವವರು ಯಾರೂ ಇಲ್ಲ' ಉಪನ್ಯಾಸಕಿಯವರ ಸಮಸ್ಯೆಗೆ ಹೋರಾಟಗಾರರು ಹೀಗೆ ಪ್ರತಿಕ್ರಿಯಿಸಿದರು... 'ನಿಮಗೆ ಇಬ್ಬರು ಮಕ್ಕಳಾದರೆ ನನಗೆ ಕಾಲೇಜಿನಲ್ಲಿರುವ ನೂರು ಜನ ವಿದ್ಯಾರ್ಥಿಗಳೂ ನನ್ನ ಮಕ್ಕಳೇ. ಇವರ ಭವಿಷ್ಯ ರೂಪಿಸುವವರು ಯಾರು? ನಿಮಗೆ 60-70 ಸಾವಿರ ಸಂಬಳವಿದೆ. ನಿಮ್ಮ ಗಂಡನಿಗೂ ಅಷ್ಟೇ ಸಂಬಳವಿರಬಹುದು: ಇಬ್ಬರಲ್ಲಿ ಒಬ್ಬರು ಕೆಲಸಕ್ಕೆ ರಾಜೀನಾಮೆ ಕೊಟ್ಟು ನಿಮ್ಮ ಮಕ್ಕಳನ್ನು ನೋಡಿಕೊಳ್ಳಿ.'

ತಲ್ಲಣ - 4

ಕೋಮುವಾದದ ವಿರುದ್ಧ ತನ್ನ ಉದ್ಯೋಗವನ್ನೇ ಒತ್ತೆ ಇಟ್ಟು, ಜೀವವನ್ನೇ ಪಣಕ್ಕೊಡ್ಡಿ ಸೆಣಸಿದ ನಮ್ಮೆಲ್ಲರ ಹೋರಾಟದ ಐಖಾನ್ ಆದ ಲೇಖಕರು ಮದುವೆಯಾಗುತ್ತಾರೆ. ಮದುವೆಯ ಹಿಂದಿನ ರಾತ್ರಿ ಭರ್ಜರಿ ಹೋಮ ಹವನಗಳು ಜರುಗುತ್ತವೆ. ತುಪ್ಪ-ಬಟ್ಟೆ-ಬರೆಗಳು ಹೋಮದ ಬೆಂಕಿಯಲ್ಲಿ ಸುಟ್ಟು ಕರಕಲಾಗುತ್ತವೆ. ಇವೆಲ್ಲ ಕನ್ನಡದ ಸಾಕ್ಷಿಪ್ರಜ್ಞೆ ಎನ್ನಿಸಿಕೊಂಡ ನಮ್ಮ ನೆಚ್ಚಿನ ಚೇತನಗಳ ಮುಂದೆಯೇ ನಡೆಯುತ್ತವೆ.



• ಸರ್ಜಾಶಂಕರ ಹರಳಿಮಠ

ತಲ್ಲಣ - 5

ಮತೀಯ ಹಿಂಸೆಗೆ ಇಂಬು ಕೊಡುವ ಪತ್ರಿಕೆಗಳು, ಭಾಷೆಯ ಹೆಸರಿನಲ್ಲಿ ಗೂಂಡಾಗಿರಿ ಮಾಡುವ ಸಂಘಟನೆಗಳು ನುಣುಪಾದ ಬಣ್ಣಬಣ್ಣದ ತಮ್ಮ ಪತ್ರಿಕೆಯ ವಿಶೇಷಾಂಕಗಳಿಗೆ ಸಾಹಿತ್ಯ ಸ್ಪರ್ಧೆ ಇಟ್ಟು 10-20-25 ಸಾವಿರ ರೂಪಾಯಿ ಬಹುಮಾನ ಘೋಷಿಸುತ್ತಾರೆ. ಹಳೆ ಮತ್ತು ಹೊಸ ತಲೆಮಾರಿನ ರಾಜಕೀಯ ಪ್ರಜ್ಞೆ ಇರುವರೆಂದು ಭಾವಿಸಲಾದ ಲೇಖಕರೆಲ್ಲ ಅದರಲ್ಲಿ ಪೈಪೋಟಿಯಿಂದ ಭಾಗವಹಿಸುತ್ತಾರೆ.

ತಲ್ಲಣ - 6

ಹಳ್ಳಿಯ ಜನರಿಗೆ ಕೆಲಸ ಕೊಡದೆ ಉದ್ಯೋಗ ಖಾತ್ರಿ ಯೋಜನೆಯ ಕಾರ್ಡಿಗೆ ಸಹಿ ಪಡೆದು ಚಿಲ್ಲರೆ ಕಾಸು ನೀಡುವುದು. ಆತನನ್ನು ಭ್ರಷ್ಟಗೊಳಿಸುವುದು, ಆತನ ನೈತಿಕತೆಯನ್ನು ನಾಶಮಾಡುವುದು, ಆತನ ಭ್ರಷ್ಟಾಚಾರದ ವಿರುದ್ಧದ ಕೆಚ್ಚಿನ ಜಾಗದಲ್ಲಿ ಪಾಪಪ್ರಜ್ಞೆಯನ್ನು ತುಂಬುತ್ತಿರುವುದು, ವಿಶ್ವವಿದ್ಯಾನಿಲಯದ ಕುಲಪತಿಗಳು ಹರಾಜಿಗಿರುವುದು, ವಿಶ್ವವಿದ್ಯಾನಿಲಯದ ಬುದ್ಧಿಜೀವಿಗಳು ಯು.ಜಿ.ಸಿ.ಯ ಪ್ರಾಜೆಕ್ಟ್‌ಗಳಲ್ಲಿ ಲಕ್ಷ ಲಕ್ಷ ದೋಚುತ್ತಿರುವುದು.

ತಲ್ಲಣ - 7

ಈ ವರ್ಷ ನಮ್ಮ ಊರಲ್ಲಿ ಗಣಪತಿ ಹಬ್ಬದಲ್ಲಿ ನಾಟಕ, ಮಕ್ಕಳ ನೃತ್ಯ ಇತ್ಯಾದಿ ಇರಲಿಲ್ಲ, ಈಗಿನ ಎಲ್ಲಾ ಹಳ್ಳಿಗಳಲ್ಲಿ ಎಲ್ಲರೂ ಕೂಡಿ ಆಚರಿಸುವ ಇಂತಹ ಗಣಪತಿ ಹಬ್ಬಗಳು ಬರ್ಖಾಸ್ತಾಗುತ್ತಿವೆ.

ಆದರೆ ನಾನಿರುವ ನಗರದಲ್ಲಿ ಎಷ್ಟೊಂದು ಗಣಪತಿಗಳು. ಅವರ ಮೆರವಣಿಗೆಗಳು, ಸಮರ ಸಾರುವ, ಭಯ ಹುಟ್ಟಿಸುವ ಗಣಪತಿಗಳು.

ತಲ್ಲಣ - 8

ನಾವೆಲ್ಲಾ, ಸಕಲೆಂಟು ಜಾತಿಯ ಮಕ್ಕಳೆಲ್ಲಾ ಒಟ್ಟಿಗೆ ಓದಿದ ಹಳ್ಳಿಯ ಸರ್ಕಾರಿ ಶಾಲೆ ಈಗ ವಿದ್ಯಾರ್ಥಿಗಳಿಲ್ಲದೆ ಮುಚ್ಚುತ್ತಿರುವುದು. ಪೇಟೆಯಲ್ಲಿ ಒಂದೊಂದು ಜಾತಿಗೂ ಒಂದೊಂದು ಧರ್ಮಕ್ಕೂ ಒಂದೊಂದು ಶಾಲೆ ಹುಟ್ಟಿಕೊಂಡಿರುವುದು.

ತಲ್ಲಣದೊಳಗಣ ತಳಮಳ

ಬದುಕಿನ ಇಕ್ಕಟ್ಟು ಬಿಕ್ಕಟ್ಟು ಒಬ್ಬೊಬ್ಬರಿಗೆ ಒಂದೊಂದು ಬಗೆ. ಎಲ್ಲರೂ ಒಂದಿಷ್ಟು ರಾಜಿ ಮಾಡಿಕೊಳ್ಳುವವರೆ. ಇದನ್ನು ನಾವು ಮಾನವೀಯವಾಗಿ ಯೋಚಿಸಬೇಕು ಎಂದು ನಾನೂ ಹೇಳುವವನೆ. ಆದರೆ ಈ ರಾಜಿ ಯಾವ ವಿಚಾರದಲ್ಲಿ, ಮತ್ತು ಎಷ್ಟರಮಟ್ಟಿಗೆ ಎನ್ನುವುದು ಮುಖ್ಯವಲ್ಲವೇ? ಮೇಲಿನ ನನ್ನ ತಲ್ಲಣಗಳನ್ನು ಮುಕ್ತವಾಗಿ ವ್ಯಕ್ತಪಡಿಸಲ್ಲಾಗದಂತಹ ತಲ್ಲಣವೂ ನನ್ನಂತಹ ಎಷ್ಟೋ ಜನರಿಗಿದೆ.

ರಾಜ್ಯದ ಊರು, ಪಟ್ಟಣಗಳಲ್ಲಿ ದಿನನಿತ್ಯ ನೂರಾರು ಕಮ್ಮಟಗಳೂ, ನಾಟಕಗಳೂ ನಡೆಯುತ್ತವೆ. ಸಾವಿರಾರು ಪುಸ್ತಕಗಳೂ ಬಿಡುಗಡೆಗೊಳ್ಳುತ್ತವೆ. ಈ ಎಲ್ಲಾ ಕ್ರಿಯೆಗಳೂ ಬಹುಶಃ ಮನರಂಜನೆಯಂತೆ ನಡೆಯುತ್ತವೆ. ಇಲ್ಲದಿದ್ದರೆ ಕರಾವಳಿ ಸೇರಿದಂತೆ ನಾಡಿನೆಲ್ಲೆಡೆ ಸಮಾಜವನ್ನು ಒಡೆಯುತ್ತಿರುವ ಮತೀಯ ಹಿಂಸೆ, ಗಾಳಿಯಂತೆ ಸರ್ವವ್ಯಾಪಿಯಾಗಿರುವ ಭ್ರಷ್ಟಾಚಾರ ಸರ್ಕಾರಿ ಪ್ರಾಯೋಜಿತ ಎಸ್‌ಇಜೆಡ್ ಹೆಸರಿನ ಭೂ ಕಬಳಿಕೆಗೆ ಕಿಂಚಿತ್ತಾದರೂ ತಡೆ ಉಂಟಾಗಬಹುದಿತ್ತು, ನನ್ನ ಈ ಬರಹವೂ ಸೇರಿದಂತೆ ಈ ವಿಚಾರಗಳು ನಮ್ಮ ಕತೆ-ಕವನ-ಅಂಕಣಗಳಾಗಿ ಬರುತ್ತಿವೆ ಎಂದು ನಾವು ನಮ್ಮಷ್ಟಕ್ಕೆ ಹೆಮ್ಮೆ ಪಡುತ್ತಿದ್ದೇವೆ. ಈ ಅಸಹಾಯಕತೆ ಉಂಟುಮಾಡಿರುವ ಈ ದೈನೇಸಿ ಸ್ಥಿತಿಯೇ ಈ ಕ್ಷಣದ ಬಹುದೊಡ್ಡ ತಲ್ಲಣ.

ಇನ್ನೊಂದು ಅನುಮಾನವೂ ನನಗಿದೆ.

ಇವೆಲ್ಲಾ ನಿಜದ ತಲ್ಲಣಗಳೋ ಅಥವಾ ನನ್ನಂತಹ ತಲೆಕೆಟ್ಟವರ ತಲ್ಲಣಗಳೋ? ●

ಅಭೋಧವಾಗಲು

ಮತ್ತೂಯು ಬಲಭಾಗದಲ್ಲಿ
[illegible]
[illegible] ಮೇಲ್ಭಾಗದಲ್ಲಿ ಗದ್ದೆ
[illegible] ಗದ್ದೆಗಳ ಗುಚ್ಛ
[illegible] ಬಿಸ್ತ ಮೂಳೆಯೊಳಗೆ
[illegible]
[illegible] ಮೂಲದರೂ
[illegible]
[illegible] ತಲುಪಿಸುವುದು

ಆದರೆ ಅದರೊಳಗಿನ ಅಹಂಕಾರ?
ಅದನ್ನೂ ಬೇರೆ ಅಂಗಗಳಂತೆ
ಕತ್ತರಿಸಿ ಎಸೆಯುವಂತಿದ್ದರೆ ಚೆನ್ನಾಗಿತ್ತು


2

ನೀರವ ಮೌನದ ನಡುಮನೆಯ
[illegible] ಮತ್ತು ಹಾಸಿ,
[illegible]
ಕೃತಕ ನಿಟ್ಟಿಗೆ ಮಲಗಿದವಳ
ಹೊಕ್ಕಳ ಮೇಲೆ ಸಗಣಿ ಉಂಡೆಯನಿಟ್ಟು
ಮಗುಚಿ ಅದರ ಮೇಲೆ ಕೋಟೆವನಿಟ್ಟು
ಅದರ ಮೇಲೊಂದು ಬೆಳಗುವ ಹಣತೆಯನಿಟ್ಟರು
ಜಾರಿದ ಹೊಕ್ಕಳ ಬಳ್ಳಿಯನೆಳೆದು ಎಳೆದು
ಬಿಗಿ ಮಾಡುವುದು ಸುಲಭದ ಮಾತೇನು?

ಅಹಂಕಾರದ ಭಟ್ಟಿ ಜಾರುವುದೆಂದರೆ ಹಾಗೆ
ಜೋಲಿದ ತಂತಿಯ ನೀವಿ ನೀವಿ
ನುಲಿದಾಗಲೆ ಹೊಕ್ಕುಳನದುರಿಸುವ
ನಾದ ಹೊಮ್ಮುವುದು
ಆ ಹೊಕ್ಕುಳ ಬಳ್ಳಿಯನಿಡಿದು
ಹೋಗಿ ಗರ್ಭಗುಡಿಯಲ್ಲಿ ಮಲಗಬೇಕೆನಿಸಿದೆ
ಒಂದರಗಳಿಗೆ ಅಬೋಧವಾಗಲು
ಉರಿವ ಹಣತೆಯಡಿಯ ಕತ್ತಲ
ಗೋರಿಯನ್ನು ಹುಡುಕಬೇಕಿದೆ. ●




• ಜ.ನಾ.ತೇಜಶ್ರೀ



ಲಂಕೇಶ್ 76 ವಿಕ್ನೆಸ್‌ಪ್ಲಾಂಕ್
ಹೊಸ ತಲೆಮಾರಿನ ತಲ್ಲಣಗಳು

ಕಾರ್ಬೆಟ್‌ನ ಕಾಡಿನಲ್ಲಿ



1. ಪ್ರವೇಶ

ಕಾಡೆಂದರೆ ಮೈ ಜುಮ್ಮೆನ್ನುವ ನಿಗೂಢತೆ ಅಂತ ಅನ್ನಿಸುವ ಮಂದಿಯಲ್ಲಿ ನೀವೂ ಒಬ್ಬರಾದಲ್ಲಿ ಜಿಮ್ ಕಾರ್ಬೆಟ್ ನೀವು ಮಿಸ್ ಮಾಡದೆ ಓದಬೇಕಾದ ವ್ಯಕ್ತಿ.

ಕಾರ್ಬೆಟ್ ಬರೆದ ಪುಸ್ತಕಗಳು ಕಾಡಿನ ರೀತಿ-ರಿವಾಜುಗಳ, ಪ್ರಾಣಿ ಪಕ್ಷಿಗಳ, ಸಾಹಸಗಳ ರೋಚಕ ಕಥೆಗಳ ಸರಮಾಲೆ. ಕಾಡಿನ ವೈಜ್ಞಾನಿಕ ಅಧ್ಯಯನ ಮಾಡಲು ಆಸಕ್ತಿ ಉಳ್ಳವರಿಗೆ ಕೈಪಿಡಿಯೂ ಹೌದು. ಒಮ್ಮೊಮ್ಮೆ ಕಾಡಿನ ಬಗ್ಗೆ ಪರಿಸರವಾದಿಗಳಿಗೆ ಗೊತ್ತಿರುವುದಕ್ಕಿಂತ ಹೆಚ್ಚು ಬೇಟೆಗಾರರಿಗೆ ತಿಳಿದಿರುತ್ತದೆ! ಬೇಟೆಗಾರನಾಗಿ ಬಹಳಷ್ಟು ಹುಲಿಗಳನ್ನು ಕೊಂದ ಕಾರ್ಬೆಟ್ ತನ್ನ ಜೀವನದ ಉತ್ತರಾರ್ಧದಲ್ಲಿ ಪರಿಸರವಾದಿಯಾಗಿ ಮತಾಂತರಗೊಂಡವನು. ಹಾಗಾಗಿ ಕಾಡನ್ನು ಅನೇಕ ಕಣ್ಣುಗಳಲ್ಲಿ ಕಂಡವನು. ಈಗ ಉತ್ತರಾಖಂಡದಲ್ಲಿರುವ ಕುಮಾವ್ ಅರಣ್ಯಗಳಲ್ಲಿ ನರ ಭಕ್ಷಕ ಹುಲಿ ಚಿರತೆಗಳ ಜಾಡು ಹಿಡಿದು ಹೊಡೆದು ಹಾಕುವುದರಲ್ಲಿ ಕಾರ್ಬೆಟ್ ನಿಷ್ಣಾತನಾಗಿದ್ದ. ಹೀಗೆ ಕಾಡಿನ ಜೊತೆಗೆ ನಿರಂತರ ಒಡನಾಡುತ್ತಾ ಇದ್ದ ಕಾರ್ಬೆಟ್‌ಗೆ ಕಾಡು ಮತ್ತು ಅಲ್ಲಿನ ಪ್ರಾಣಿಗಳು ದಿನೇದಿನೇ ಗಾಬರಿ ಹುಟ್ಟಿಸುವ ಪ್ರಮಾಣದಲ್ಲಿ ಕ್ಷೀಣಿಸುತ್ತಾ ಹೋಗುತ್ತಿದ್ದುದು ಕಾಣದೆ ಇರಲಿಕ್ಕೆ ಸಾಧ್ಯ ಇರಲಿಲ್ಲ. ತೀರ ಹತ್ತಿರದಿಂದ ಕಂಡ ಈ ಸತ್ಯವೇ ಇವನನ್ನು ಪರಿಸರವಾದಿಯನ್ನಾಗಿ ಪರಿವರ್ತಿಸಿತ್ತು.

ಕಾರ್ಬೆಟ್ ಕಾಲದ ಪರಿಸ್ಥಿತಿ ಮತ್ತು ಮಾನದಂಡಗಳೇ ಬೇರೆ. ಅದು ಬ್ರಿಟಿಷರ ಆಳ್ವಿಕೆಯ ಕಾಲ. ಕಾಡಿನ ಸಂಪತ್ತಿನ, ವಿಶೇಷವಾಗಿ ಮರಗಳ, ಬಲು ದೊಡ್ಡ ಲೂಟಿಗಾರರ ವಸಾಹತು ಸರ್ಕಾರ. ಸಾವಿರಾರು ಮಂದಿ ಕೆಲಸಗಾರರನ್ನು ನೇಮಿಸಿ ಮರಗಳನ್ನು ಇಂಗ್ಲಿಷ್ ಸರ್ಕಾರ ಹಿಗ್ಗಾಮುಗ್ಗಾ ಕಡಿಸುತ್ತಿತ್ತು. ಕೋಸಿ ಮತ್ತು ರಾಮಗಂಗಾ ನದಿಗಳಲ್ಲಿ ಕಡಿದ ಮರದ ದಿಮ್ಮಿಗಳನ್ನು ಹರಿಬಿಟ್ಟು ಕೆಳಗಿನ ತಪ್ಪಲು ಪ್ರದೇಶಕ್ಕೆ ಇವುಗಳನ್ನು ತರಲಾಗುತ್ತಿತ್ತು. ಈ ನಿರಂತರ ಮತ್ತು ನಿರ್ಲಜ್ಜ ಲೂಟಿ ಕಾಡು ಮತ್ತು ಅಲ್ಲಿನ ಪ್ರಾಣಿಗಳ ಪ್ರಪಂಚವನ್ನು ಅಲ್ಲೋಲಕಲ್ಲೋಲ ಮಾಡಿತು ಅನ್ನುವುದು ನಿಸ್ಸಂದೇಹ. ಹೀಗೆ ತಮ್ಮ ತಾಣವನ್ನು ಕಳೆದುಕೊಂಡ ಕಾಡುಪ್ರಾಣಿಗಳು ಆಹಾರ ಹುಡುಕುತ್ತಾ ಮನುಷ್ಯ ಪ್ರಪಂಚದ ಇನ್ನಷ್ಟು, ಮತ್ತಷ್ಟು ಹತ್ತಿರ ಸುಳಿಯ ಲಾರಂಭಿಸಿದವು. ಇದು ಪ್ರಾಣಿ-ಮನುಷ್ಯ ಸಂಘರ್ಷಗಳಿಗೆ ನಾಂದಿ ಹಾಡಿತು.

ಅಷ್ಟೇಅಲ್ಲದೆ ಆಗಿನ ಕಾಲದ ಕೋವಿ ಹಿಡಿದು ಠೀವಿಯಿಂದ ಓಡಾಡುವ ಪ್ರತಿಯೊಬ್ಬ ಬಿಳಿ ತೊಗಲಿನ ಶಿಕಾರಿಗೂ ಹುಲಿಯನ್ನೋ ಚಿರತೆಯನ್ನೋ ಹೊಡೆದು ಅದರ ಚರ್ಮವನ್ನೋ, ಚರ್ಮದೊಳಗೆ ಹುಲ್ಲು ತುಂಬಿ ಮಾಡಿದ ಗೊಂಬೆಯನ್ನೋ ತಮ್ಮ ಸಂಗ್ರಹಕ್ಕೆ ಸೇರಿಸಿಕೊಳ್ಳುವುದು ಮಹಾ ಹೆಮ್ಮೆಯ ವಿಚಾರ. ಕಲ್ಕತ್ತಾದಲ್ಲಿದ್ದ ಬ್ರಿಟನ್ನಿನ ಬಂದೂಕು ತಯಾರಿಕಾ ಕಂಪನಿಯೊಂದು ಭಾರತದ ಬೆಟ್ಟ ಪ್ರದೇಶಗಳಲ್ಲಿ ಮಾಡುವ ಶಿಕಾರಿಗಳಿಗೆ ಅನುಕೂಲಕರವಾಗಲೆಂದೇ ವಿಶೇಷ ಬಂದೂಕನ್ನು ತಯಾರಿಸುತ್ತಿತ್ತು ಎಂದು ಕಾರ್ಬೆಟ್ ಒಂದು ಲೇಖನದಲ್ಲಿ ಉಲ್ಲೇಖಿಸುತ್ತಾನೆ. ಇಂಥ ಶಿಕಾರಿಗಳು ಎಷ್ಟು ಮಂದಿ ಇದ್ದಿರಬಹುದು ಅನ್ನುವುದಕ್ಕೆ ಇದೊಂದು ಮಾಪನವನ್ನು ಒದಗಿಸುತ್ತದೆ.

ಇಷ್ಟೊಂದು ಜನ ಶಿಕಾರಿಗಳಲ್ಲಿ ಕೆಟ್ಟ ಶಿಕಾರಿಗಳಿಗೇನೂ ಬರ ಇರಲಿಲ್ಲ. ಇವರೆಲ್ಲಾ ಸರಿಯಾಗಿ ಗುರಿ ಇಡಲಾರದೆ ಹುಲಿಯನ್ನು ಸಾಯಿಸಲಾರದೆ ಬರಿ ಗಾಯ ಮಾಡಿಬಿಡುವ ಯೋಗ್ಯತೆ ಮಾತ್ರ ಇದ್ದವರು. ಹೀಗೆ ಮಾಂಸಾಹಾರಿ ಪ್ರಾಣಿಯನ್ನು ಅರ್ಧಂಬರ್ಧ ಸಾಯಿಸಿ, ದೊಡ್ಡ ಗಾಯ ಮಾಡಿ ಬಿಟ್ಟುಬಿಡುವುದು ಅಪಾಯವನ್ನು ಆಹ್ವಾನಿಸಿದಂತೆಯೇ ಸರಿ. ತಾನು ಕೊಂದ ಬಹಳಷ್ಟು ನರಭಕ್ಷಕ ಹುಲಿಗಳಲ್ಲಿ ಹೀಗೆ ಯಾವುದೋ ಕೆಟ್ಟ ಶಿಕಾರಿಯಿಂದ ಘಾಸಿಗೊಂಡವೋ ಅಥವಾ ಮುಳ್ಳುಹಂದಿಯ ಮುಳ್ಳಿನ ಪ್ರಹಾರ ಎದುರಿಸಿದವೋ ಆಗಿದ್ದವು ಅನ್ನುವ ಮಾತನ್ನು ಕಾರ್ಬೆಟ್ ಬರೆಯುತ್ತಾನೆ.



ಕಾರ್ಬೆಟ್ ವನ್ಯಪ್ರಾಣಿ ರಕ್ಷಣೆಯ ಬಗ್ಗೆ ಮಾತನಾಡಿ ಒಂದು ಶತಮಾನ ಕಳೆದಿದೆ. ಈಗ ಇವನ ಹೆಸರಿನ ಜಿಮ್ ಕಾರ್ಬೆಟ್ ರಾಷ್ಟ್ರೀಯ ಅರಣ್ಯ ಧಾಮದಲ್ಲಿ 100 ಚದರ ಕಿಲೋ ಮೀಟರುಗಳಿಗೆ ಸರಾಸರಿ 20 ಹುಲಿಗಳು ಉಳಿದಿವೆ. ಅಸ್ಸಾಮಿನ ಕಾಸಿರಂಗಾ ಅರಣ್ಯಧಾಮ ಮತ್ತು ಇದು ನಮ್ಮ ದೇಶದಲ್ಲಿ ಅತಿ ಹೆಚ್ಚು ಹುಲಿಗಳು ಉಳಿದಿರುವ ಪ್ರದೇಶಗಳು. ಆದರೆ ಈ ಧಾಮದ ಈಗಿನ ಒಟ್ಟು ವಿಸ್ತೀರ್ಣ ಕಾರ್ಬೆಟ್ ಆ ಕಾಲದಲ್ಲಿ ಓಡಾಡಿದ ದಟ್ಟ, ನಿಗೂಢ ಕಾಡಿನ ವಿಸ್ತೀರ್ಣದ ಒಂದು ಅತಿ ಸಣ್ಣ ಭಾಗ ಮಾತ್ರ. ಹೀಗಾಗಿ ಕಾರ್ಬೆಟ್‌ನ ಜಾಡು ಹಿಡಿದು ಹೊರಡುವುದೆಂದರೆ ಅವನ ಭವ್ಯ ಭಯಾನಕ ಪಯಣದ ಒಂದು ಸಣ್ಣ ಭಾಗವನ್ನು ಕ್ರಮಿಸುವ ಪ್ರಯತ್ನವಷ್ಟೇ ಆಗಲಿಕ್ಕೆ ಸಾಧ್ಯ. ಆದರೂ...

2. ಹೆಜ್ಜೆ ಗುರುತು...

ಹುಲಿಯೊಂದರ ಹೆಜ್ಜೆ ಗುರುತಿನ ಜಾಡು ಹಿಡಿದು ನಾವು ಹೊರಟಿದ್ದೇವೆ.

ಪಕ್ಕದ ಭೆಲ್ಗಟ್ಟಿ ಗ್ರಾಮದ ವ್ಯಕ್ತಿಯೊಬ್ಬ ಹಳ್ಳಿ ಮುಗಿದು ಕಾಡು ಆರಂಭವಾಗುವ ದಿಕ್ಕಿಗೆ ಬೆರಳು ಮಾಡಿ ತೋರಿಸಿ "ಊರಿನ ಕೆಲವು ಜನ ಬೆಳಗ್ಗೆ ಕಾಡಿನ ಕಡೆಗೆ ಹೊರಟಾಗ ಹುಲಿ ಅಲ್ಲೇ ಮಲಗಿತ್ತು ಸಾಬ್. ಇಲ್ಲೇ ಎಲ್ಲೋ ಇರಬೇಕು, ಹುಷಾರು" ಅಂತ ಹೇಳಿದ. ನಮ್ಮೊಟ್ಟಿಗೆ ಬರ್ತಿಯಾ ಅಂತ ಕೇಳಿದೆ. "ಇಲ್ಲ ಸಾಬ್. ಎಮ್ಮೆ ಹೊಡೆದುಕೊಂಡು ಹೋಗಬೇಕು" ಅಂದ.

ಹಾಗಂತ ನಮಗೆ ಜೊತೆಗಾರರಿಗೇನು ಕಡಿಮೆ ಇರಲಿಲ್ಲ. ಗುಲಾಂ ನಬಿ ಅನ್ನುವ 18 ವರ್ಷದ ಹುಡುಗ ಮತ್ತು ಅವರಮ್ಮ ಸಕೀನ ಬೀಬೀ ನಮ್ಮ ಜೊತೆ ಬಂದರು. ಹಿಂದಿನ ದಿನವಷ್ಟೇ ಇವರ ಎರಡು ಎಮ್ಮೆಗಳನ್ನು ಹುಲಿ ಕೊಂದು ಹಾಕಿತ್ತು. ಕಾರ್ಬೆಟ್ ಫೌಂಡೇಶನ್ ಸಂಸ್ಥೆಗೆ ಸೇರಿದ ಇದ್ರಿಸ್ ಮತ್ತು ಜೋಷಿ ಅನ್ನುವ ಮತ್ತಿಬ್ಬರು ನಮ್ಮ ಜೊತೆ ಇದ್ದರು. ಅರಣ್ಯ ಧಾಮದ ಸುತ್ತಲಿನ 'ಬಫರ್ ಜೋನ್'ನಲ್ಲಿ ಹುಲಿ ಚಿರತೆಗಳಿಂದ ಸತ್ತ ಜಾನುವಾರುಗಳ ಲೆಕ್ಕ ಇಡುವುದೇ ಈ ಇಬ್ಬರ ಕೆಲಸ. ಈ ಕೆಲಸ ಸುಲಭದ್ದಲ್ಲ ಅನ್ನುವುದರಲ್ಲಿ ಅನುಮಾನವೇ ಇಲ್ಲ. ಹುಲಿಯೋ, ಚಿರತೆಯೋ ಕೊಂದು ಅರ್ಧ ತಿಂದು ಬಿಟ್ಟು ಹೋದ ಪ್ರಾಣಿಯ ಚಿತ್ರ ತೆಗೆದು, ಅದನ್ನು ತಿಂದದ್ದು ಹುಲಿಯೇ ಅನ್ನುವುದಕ್ಕೆ ಒಂದಷ್ಟು ಪುರಾವೆ ಒಟ್ಟು ಮಾಡಿ ತಕ್ಷಣ ಜಾನುವಾರು ಕಳೆದುಕೊಂಡ ಕುಟುಂಬಕ್ಕೆ ಪರಿಹಾರ ದೊರಕಿಸಿಕೊಡುವುದು ಇವರ ಪಾಲಿನ ಕೆಲಸ.

ಜೀಪನ್ನು ಸುಮಾರು ಕಾಡಿನ ಅಂಚಿನವರೆಗೆ ತೆಗೆದುಕೊಂಡು ಹೋದೆವು. ಅದಕ್ಕಿಂತ ಮುಂದೆ ಹೋಗುವುದು ಸಾಧ್ಯ ಇರಲಿಲ್ಲ. ಉಳಿದ ಹುಡುಕಾಟ – ಅಂದರೆ ನಿಜವಾದ ಹುಡುಕಾಟ – ಕಾಲ್ನಡಿಗೆಯಲ್ಲಿ ಮಾತ್ರ ಸಾಧ್ಯ. ಜೀಪಿನ ಒಳಗೆ ಸುರಕ್ಷಿತವಾಗಿ ಕೂತು ಬೈನಾಕ್ಯುಲರ್ ಕಣ್ಣಿಗೆ ಅಂಟಿಸಿಕೊಂಡು ಹುಲಿಯನ್ನು ಹುಡುಕುವುದು ಯಾವಾಗಲೂ ಒಳ್ಳೆ ಮಜಾ ಕೊಡುವ ಅನುಭವ. ಆದರೆ ಲಾಂಟಾನ ಗಿಡಗಳ ದಟ್ಟ ಪೊದೆಗಳಿಂದ ತುಂಬಿ ಹೋದ, ಮರದ ಅತಿ ಕೆಳಗಿನ ರೆಂಬೆ ನೆಲದಿಂದ ಕನಿಷ್ಠ 12 ಅಡಿ ಮೇಲೆ ಇರುವಂತ ಕಾಡಿನಲ್ಲಿ ನಡೆದುಕೊಂಡು ಹೊರಟಾಗ ನಾವು ಆತ್ಮಹತ್ಯೆ ಮಾಡಿಕೊಳ್ಳಲಿಕ್ಕೆ ಹೊರಟಿದ್ದೇವಾ ಅನ್ನುವ ಅನುಮಾನ ಖಂಡಿತ ಕಾಡದೆ ಬಿಡಲಾರದು!

ಲಾಂಟಾನ ಪೊದೆಗಳು ಹುಲಿಗೆ ಒಳ್ಳೆಯ ಅಡಗುವ ಅವಕಾಶಗಳನ್ನು ಒದಗಿಸುತ್ತದೆ. ಹಾಗೆಯೇ ನಮ್ಮ ಮುಂದಿನ ಕಾಡಿನ ಚರ್ಯೆಯನ್ನು ಸಂಪೂರ್ಣ ಮಸುಕುಗೊಳಿಸುತ್ತವೆ. ಅದೂಅಲ್ಲದೆ ಈ ಹುಲಿ ಅರ್ಧ ಎಮ್ಮೆಯನ್ನು ತಿಂದು ಉಳಿದರ್ಧ ಊಟವನ್ನು ಇನ್ಯಾವುದೋ ಪ್ರಾಣಿ ಕದ್ದಿತೆಂದು ಕಣ್ಣಿಗೆ ಎಣ್ಣೆ ಬಿಟ್ಟುಕೊಂಡು ಕಾಯುತ್ತಾ ಇರಬೇಕು ಅನ್ನುವುದೇ ಎಲ್ಲರ ಅನುಮಾನವಾಗಿತ್ತು. ಹುಲಿಯ ದೃಷ್ಟಿಯಲ್ಲಿ ನಾವೂ ಅದರ ಊಟ ಕಸಿಯಲು ಬಂದ ಪ್ರಾಣಿಗಳೇ. ನಮ್ಮ ಪರಿಸ್ಥಿತಿ ಒಟ್ಟಾರೆ ಹುಲಿಯ ಬಾಯಿಗೆ ಹೋಗುವ ಪುಣ್ಯಕೋಟಿಯಂದದಲ್ಲಿ ಇತ್ತು.

ಆದರೆ ಪ್ರಯಾಣ ಮುಂದುವರಿಸದೆ ಬೇರೆ ದಾರಿ ಇರಲಿಲ್ಲ. ಇದ್ರಿಸ್ ಮತ್ತು ಜೋಷಿಗೆ ಪುರಾವೆಗಳನ್ನು ಕಲೆಹಾಕುವುದು, ಹಲ್ಲು ಮತ್ತು ಉಗುರಿನ ಗುರುತುಗಳನ್ನು ಪರಿಶೀಲಿಸುವುದು, ಗುಲಾಂ ನಬಿಯ ಕೈಯ್ಯಲ್ಲಿ ಒಂದು ಅವನ ಹೆಸರು ಬರೆದ ಸ್ಲೇಟ್ ಹಿಡಿಸಿ ಕಳ್ಳಕಾಕರನ್ನು ಪೊಲೀಸರು ನಿಲ್ಲಿಸುವಂತೆ ಸತ್ತ ಎಮ್ಮೆಯ ಪಕ್ಕ ನಿಲ್ಲಿಸಿ ಫೋಟೋ ತೆಗೆಯುವುದು ಅನಿವಾರ್ಯ ಕರ್ಮ. ನಮ್ಮ ಪ್ರಯಾಣಕ್ಕೆ ಈ ರೀತಿಯ ಕೆಲಸದ ತುರ್ತಿರಲಿಲ್ಲದಿದ್ದರೂ ಒಂದು ರೀತಿಯ ಹುಚ್ಚು ತೆವಲಿನ ತುರ್ತಂತೂ ಇತ್ತು.

ಇದ್ರಿಸ್ ಮತ್ತು ಜೋಶಿಗೆ ಎಷ್ಟೇ ಅನುಭವ ಇದ್ದರೂ, ಈ ಕೇಸಿನಲ್ಲಿ ಸ್ವಲ್ಪ ಕಂಗಾಲಾದವರಂತೆ, ದಿಕ್ಕುತೋಚದವರಂತೆಯೇ ನಮ್ಮ ಕಣ್ಣಿಗಂತೂ ಕಾಣುತ್ತಿದ್ದರು. ಅವರ ಹೃದಯದ ಬಡಿತ ನನಗೆ ಕೇಳುತ್ತಿದೆ ಅಂತ ನನಗೆ ಅನ್ನಿಸುತ್ತಿತ್ತು, ಅವರಿಗೂ ಅಷ್ಟೇ ಸ್ಪಷ್ಟವಾಗಿ ನನ್ನ ಹೃದಯದ ಬಡಿತ ಕೇಳುತ್ತಿದ್ದೀತು.

ಕಾಡಿನೊಳಗೆ ಸ್ವಲ್ಪ ದೂರ ಕ್ರಮಿಸುವಷ್ಟರಲ್ಲಿಯೇ ನಮ್ಮ ಮುಂದೆ ಒಂದಷ್ಟು ಜಾಗದಲ್ಲಿ ಹುಲ್ಲು ಇದ್ದಕ್ಕಿದ್ದಂತೆ ಬಾಗಿರುವುದು ಕಾಣಿಸಿತು. ಬಾಗಿದ ಭಾಗವನ್ನು ಹತ್ತಿರದಿಂದ ನೋಡಿದ ಯಾರಿಗಾದರು ಅದು ಈಗಷ್ಟೇ ಹುಲಿ ಮಲಗಿ ಎದ್ದು ಹೋಗಿರುವ ಜಾಗ ಅಂತ ಗೊತ್ತಾಗುವುದು ಕಷ್ಟ ಇರಲಿಲ್ಲ. ಬೆಳಗ್ಗೆಯ ಊಟ ಮುಗಿಸಿ ಹಾಗೆ ಇಲ್ಲಿ ಸ್ವಲ್ಪ ಹೊತ್ತು ಒರಗಿ ಹುಲಿ ಎದ್ದು ಹೋಗಿರಬೇಕು. ಮನೆಯ ಬೆಕ್ಕು ಹೊಟ್ಟೆ ತುಂಬಿಸಿಕೊಂಡು ಸೋಮಾರಿತನದಿಂದ ಮೈ ಮುರಿದು ಬಿಸಿಲಲ್ಲಿ ಮಲಗುವ ಹಾಗೆಯೇ ಹುಲಿ ಮಲಗಿ ತನ್ನ ಮುಂದಿನ ದೃಶ್ಯವನ್ನು ಅರ್ಧನಿಮೀಲಿತ ನಯನಗಳಿಂದ ನೋಡುತ್ತಾ ಇರುವ ಚಿತ್ರ ನನ್ನ ತಲೆಯಲ್ಲಿ ಓಡುತ್ತಿತ್ತು. ಅಲ್ಲಿಂದ ಹೊರಟ ಹುಲಿಯ ಹೆಜ್ಜೆ ಗುರುತುಗಳು ಲಾಂಟಾನ ಪೊದೆಯ ಪಕ್ಕದವರೆಗೂ ಇತ್ತು.

ಅದಕ್ಕೂ ಸ್ವಲ್ಪ ಮುಂದೆ ಕಾಳಗ ನಡೆದ ಕುರುಹುಗಳಿದ್ದವು. ಸುಮಾರು ಐದು ಮೀಟರಿನಷ್ಟು ಸುತ್ತಳತೆಯ ಜಾಗದಲ್ಲಿ ಹುಲ್ಲು, ಲಂಟಾನ ಪೊದೆ ಎಲ್ಲಾ ಹರಿದು ಚೆಲ್ಲಾಪಿಲ್ಲಿ ಆಗಿತ್ತು. ಬಡಪಾಯಿ ಎಮ್ಮೆ ತಪ್ಪಿಸಿಕೊಳ್ಳಲು ಪ್ರಯತ್ನಿಸುತ್ತಾ ದಿಕ್ಕಾಪಾಲಾಗಿ ಓಡಿದ್ದು ಸ್ಪಷ್ಟವಾಗಿ ಗೊತ್ತಾಗುತ್ತಿತ್ತು. ಎಮ್ಮೆಗಳು ಗೋಧೂಳಿಯ ಸಮಯಕ್ಕೆ ಹಳ್ಳಿಗೆ ಹಿಂದಿರುಗುವ ಹೊತ್ತಿಗೆ ಹುಲಿ ಅಡ್ಡ ಹಾಕಿದ್ದೀತು. ಮಳೆ ಬಂದಿದ್ದರಿಂದ ಕಾಲುದಾರಿಗಳು ಅಳಿಸಿಹೋದಂತೆ ಆಗಿತ್ತು.


ಒಂದು ಹುಲಿ ಎರಡು ಎಮ್ಮೆಗಳನ್ನು ಒಂದೇ ಬಾರಿಗೆ ಹಿಡಿದುಕೊಂಡಿರಲಿಕ್ಕೆ ಸಾಧ್ಯವೇ ಅನ್ನುವ ಅನುಮಾನ ನನ್ನನ್ನು ಕಾಡುತ್ತಿತ್ತು. ಅದರಲ್ಲಿಯೂ ಈ ಘಟನೆ ನಡೆದ ಹಿಂದಿನ ದಿನವಷ್ಟೇ ಇನ್ನೊಂದು ಎಮ್ಮೆಯನ್ನು ಬೇಟೆಯಾಡಿ, ತಿ... ಪೊದೆಯಲ್ಲಿ ಊರಿನ ದಕ್ಷಿಣ ಸರಹದ್ದಿನ ಹತ್ತಿರ ಅ... ಇಟ್ಟಿದ್ದನ್ನು ಹಳ್ಳಿಗರು ಪತ್ತೆ ಹಚ್ಚಿದ್ದರು.

ಸ್ವಲ್ಪ ಮುಂದೆ ಹುಲಿ ಹಿಕ್ಕೆ ಹಾಕಿತ್ತು. ಹಿಂದೆಯೂ ನಾನು ಹುಲಿಯ ಹಿಕ್ಕೆಯನ್ನು ನೋಡಿದ್ದುಂಟು. ಆದರೆ ಇಷ್ಟು ಭಾರಿ ಪ್ರಮಾಣದ ಅಥವಾ ಇಷ್ಟು ಫ್ರೆಶ್ ಆದದ್ದನ್ನು ಖಂಡಿತಾ ಕಂಡಿಲ್ಲ! ಕಳೆದ ಒಂದೂವರೆ ದಿನಗಳಲ್ಲಿ ಹುಲಿರಾಯ ಭರ್ಜರಿ ಭೋಜನವನ್ನೇ ಮಾಡಿರುವುದು ಸ್ಪಷ್ಟವಾಗಿ ಕಾಣುತ್ತಿತ್ತು. ಇನ್ನು ಸ್ವಲ್ಪ ಮುಂದೆ ನೆಲವನ್ನು ತನ್ನ ಉಗುರುಗಳಿಂದ ಕೆರೆದು ಹೊಂಡಮಾಡಿ ಮಹಾಶಯ ಉಚ್ಚೆ ಹುಯ್ದಿದ್ದ. ಇನ್ನೂ ಒದ್ದೆ ಇದ್ದ ಈ ಉಚ್ಚೆ ನಮ್ಮ... ಉಚ್ಚೆ ಹೊಯ್ದುಕೊಳ್ಳುವ ಮನಸ್ಥಿತಿಯನ್ನೇ ಸೃಷ್ಟಿಸಿತ್ತು. ಸ... ಬರುತ್ತಿರುವ ಸದ್ದು ಕೇಳಿ ಹುಲಿ ಈಗಷ್ಟೇ ಜಾಗ ಬ... ಮಾಡಿರಬಹುದು.



ಸ್ವಲ್ಪ ಮುಂದೆ ಹುಲಿ ಹಿಕ್ಕೆ ಹಾಕಿತ್ತು. ಹಿಂದೆಯೂ ನಾನು ಹುಲಿಯ ಹಿಕ್ಕೆಯನ್ನು ನೋಡಿದ್ದುಂಟು. ಆದರೆ ಇಷ್ಟು ಭಾರಿ ಪ್ರಮಾಣದ ಅಥವಾ ಇಷ್ಟು ಫ್ರೆಶ್ ಆದದ್ದನ್ನು ಖಂಡಿತಾ ಕಂಡಿಲ್ಲ! ಕಳೆದ ಒಂದೂವರೆ ದಿನಗಳಲ್ಲಿ ಹುಲಿರಾಯ ಭರ್ಜರಿ ಭೋಜನವನ್ನೇ ಮಾಡಿರುವುದು ಸ್ಪಷ್ಟವಾಗಿ ಕಾಣುತ್ತಿತ್ತು. ಇನ್ನು ಸ್ವಲ್ಪ ಮುಂದೆ ನೆಲವನ್ನು ತನ್ನ ಉಗುರುಗಳಿಂದ ಕೆರೆದು ಹೊಂಡಮಾಡಿ ಮಹಾಶಯ ಉಚ್ಚೆ ಹುಯ್ದಿದ್ದ. ಇನ್ನೂ ಒದ್ದೆ ಇದ್ದ ಈ ಉಚ್ಚೆ ನಮ್ಮಲ್ಲೂ ಉಚ್ಚೆ ಹೊಯ್ದುಕೊಳ್ಳುವ ಮನಸ್ಥಿತಿಯನ್ನೇ ಸೃಷ್ಟಿಸಿತ್ತು.





ತ್ರದಲ್ಲಿ ನಮ್ಮ ಜೊತೆಗಿದ್ದ ಅಮ್ಮ ಮಗನ ಜೋಡಿ ಭಾಷೆಯಲ್ಲಿ ಏನೋ ಮಾತಾಡಿಕೊಳ್ಳಲಿಕ್ಕೆ ಶುರು ರು. ಗುಲಾಂ ಬಾಯಿಯ ಸುತ್ತ ವೃತ್ತಾಕಾರದಲ್ಲಿ ನ್ನು ಇಟ್ಟುಕೊಂಡು ಕಂಠ ಬಿರಿಯುವಷ್ಟು ಗಿ ಒದರಲು ಪ್ರಾರಂಭಿಸಿದ. ಅಮ್ಮನೂ ಅವನ ುಗಲ್ಬಂದಿ ಶುರು ಮಾಡಿದಳು.

ಲಿ ಹತ್ತಿರದಲ್ಲಿಯೇ ಇರುವುದು ಎಲ್ಲರಿಗಿಂತ ಅವರಿಗೆ ಗೊತ್ತಾಗಿತ್ತು. ಅದನ್ನು ಓಡಿಸುವ ವಲ್ಲಿ ಗುಲಾಮ್ ತೊಡಗಿದ್ದ. ಈ ಇಬ್ಬರು ನವರು ಸೇರಿ ಮಾಡುತ್ತಿದ್ದ ಗಲಾಟೆ ಯಾವುದೇ ರಿ ಸೈನ್ಯ ಯುದ್ಧ ಮಾಡುವಾಗ ಎಬ್ಬಿಸುವ ಂತ ಸ್ವಲ್ಪವೂ ಕಡಿಮೆ ಇರಲಿಲ್ಲ. ಹುಲಿಯನ್ನು ಕಂಡೇವೆಂಬ ಆಸೆ ಅಲ್ಲಿಗೆ ಮುಕ್ತಾಯವಾಯಿತು. ಮ್ಮಮಗನ ಗಲಾಟೆ ಸೈನ್ಯವನ್ನು ಎದುರಿಸಿಯೂ ಬೇಟೆಯಾಡಿದ ಎಮ್ಮೆಯನ್ನು ಕಾಯ್ದುಕೊಳ್ಳುವ ಹುಲಿಗೆ ಇದ್ದ ಪಕ್ಷದಲ್ಲಿ ಕತೆಯೇ ಬೇರೆ!

ಗುರುತುಗಳು ದಕ್ಷಿಣದ ದಿಕ್ಕಿಗೆ ಮುಂದು ತ್ತಿದ್ದವು. ಗುಲಾಂನ ಕಣ್ಣು ಮಾತ್ರ ಪೂರ್ವ ದಿಕ್ಕಿಗೇ ಸತ್ತ ಎಮ್ಮೆಯ ಸುಳಿವಿರಲಿಲ್ಲ. ಇನ್ನೊಂದೆರಡು ಲಾಂಟಾನ ಪೊದೆಗಳ ಮಧ್ಯೆ ನಡೆಯುವಷ್ಟರಲ್ಲಿ ಮೂಗು ಎಮ್ಮೆಯ ಕಳೇಬರ ಎಲ್ಲಿರಬಹುದು ನಮಗೆ ಹೇಳತೊಡಗಿತು. ತಗ್ಗಿ ಬಗ್ಗಿ ಅತ್ತ ಇತ್ತ ನಿಮಿಷ ಹುಡುಕುವಷ್ಟರಲ್ಲಿ ಒಂದು ಎಮ್ಮೆ . ಹುಲಿ ಸುಮಾರಷ್ಟು ತಿಂದು ಮುಗಿಸಿತ್ತಾದರೂ ುತ್ತೆ ಬಂದು ತಿನ್ನುವುದಕ್ಕೆ ಪ್ರೇರೇಪಿಸುವಷ್ಟು ನ್ನು ಉಳಿದಿತ್ತು. ಸ್ವಲ್ಪ ಮುಂದೆ ಎರಡನೆಯ ತ್ರದ) ಎಮ್ಮೆಯ ಕಾಲು ಮಾತ್ರ ಬದ್ದಿತ್ತು.

ುದಿಂದ ಒಂದು ಥರದ ಭ್ರಮೆಗೆ ಎಲ್ಲರೂ ದ್ದರಿಂದಲೋ ಏನೋ, ವನ್ಯ ಮೃಗಗಳ ಬಗ್ಗೆ ಇದ್ದ ಇದ್ರಿಸ್ ಮತ್ತು ಜೋಪಿ ಮತ್ತೆ ಮತ್ತೆ ನ್ನು "ಉಳಿದ ಎಮ್ಮೆ ಏನಾಯ್ತು?! ಉಳಿದ ಲ್ಲಿ?!" ಅಂತ ಕೇಳಲಿಕ್ಕೆ ಶುರು ಮಾಡಿದರು. ಅತಿ ವಿನಯದ ಧಾಟಿಯಲ್ಲಿ "ಈ ಪ್ರಶ್ನೆಯನ್ನು ೀವು ಹುಲಿಯನ್ನೇ ಕೇಳಬೇಕಾದೀತು ಸಾಬ್!" ನಗುವ ಸಂದರ್ಭ ಅದಲ್ಲದಿದ್ದರೂ ನಗು ಕೂ ಹೌದು.

ಏ ಹುಲಿ ಒಂದೂವರೆ ದಿನದಲ್ಲಿ ಎರಡು ನ್ನು ತಿಂದು ಮುಗಿಸುವ ಸಾಧ್ಯತೆ ಇರಲಿಲ್ಲ. ಈ ಗ್ಗೆ ನಾವು ಗಹನವಾಗಿ ಚರ್ಚೆ ಪ್ರಾರಂಭಿಸಿದಾಗ ಇದೇನು ಮಹಾ ಪ್ರಶ್ನೆ ಅನ್ನುವ ಧಾಟಿಯಲ್ಲಿ ಎರಡು ಹುಲಿಗಳಿದ್ದಾವೆ ಸಾಬ್. ನಮ್ಮಪ್ಪ ಮರದ ಇವತ್ತು ಬೆಳಗ್ಗೆ ನೋಡಿದನಂತೆ. ಅವನು ಪ್ರಯತ್ನ ಮಾಡಿದರೂ ಓಡಿಹೋಗುವುದಿರಲಿ ದಿಂದ ಅಲ್ಲಾಡಲಿಲ್ಲವಂತೆ" ಅಂದ.

ಟೋ ಸೆಶನ್ ಇತ್ಯಾದಿಗಳನ್ನು ಮುಗಿಸಿಕೊಂಡು ಂದಿರುಗುತ್ತಾ ಇರುವಾಗ ನಾನು ಗುಲಾಂನನ್ನು ಗಳಲ್ಲಿ ಹುಲಿಗಳನ್ನು ಸುಮಾರು ಎಷ್ಟು ಸಲ ಅಂತ ಕೇಳ್ದಿದೆ. ಏನೋ ಅವನ ಪಕ್ಕದ ಮನೆಯ ಏ ಬಗ್ಗೆ ವಿಚಾರಿಸುತ್ತಿದ್ದೀನೇನೋ ಅನ್ನುವ "ದಿನಾ ಸಾಬ್" ಅಂದ.

ಬೆಳಗ್ಗೆ ತಾನೇ ಈ ಅರಣ್ಯಧಾಮಕ್ಕೆ ಾಗಿ ಬರುವ ಪ್ರವಾಸಿಗರಲ್ಲೊಬ್ಬ "ಅಯ್ಯೋ ಾಣಲಿಲ್ಲ, ಕಂಡದ್ದು ಬರೀ ಒಂದಷ್ಟು ಜಿಂಕೆ" ಾಗಿಕೊಳ್ಳುತ್ತಾ ಇದ್ದದ್ದನ್ನು ಕೇಳಿದ್ದೆ. ಈ ಹುಲಿ ೈಗೆ ಕಾಣತ್ತೆ ಯಾರಿಗೆ ಕಾಣಲ್ಲ, ಯಾರಿಗೆ ೀರುತ್ತೆ ಎನ್ನುವುದೆಲ್ಲ ಎಂತಾ ಮಾಯೆ ಅಲ್ಲವಾ ಗುಲಾಂನಂತ ನೂರಾರು ಜನರ ಜೀವನಾಧಾರವನ್ನೇ ುವ ಈ ಹುಲಿ ರಾಮನಗರ ಮತ್ತು ಧಿಕುಲಿಯ ತ್ತ ಜೀವಕ್ಕೆ ಆಧಾರ. ಯಾಕೆಂದರೆ ಈ ಇಡೀ ಆರ್ಥಿಕತೆಯೇ ಹುಲಿ-ಕೇಂದ್ರಿತ ್ಯಮವನ್ನು ಆಧರಿಸಿದೆ.

ರು ತೊಂಭತ್ತರ ದಶಕದವರೆಗೆ ಈ ಹಳ್ಳಿಗಳ ತಿಯ ಘಟನೆ ನಡೆದಾಗ ಎಮ್ಮೆಯ ಮೇಲೆ ವಿಷ ಸಿಂಪಡಿಸಿ ಹುಲಿಯನ್ನು ಸಾಯಿಸಿಬಿಡು ಗಿನ ಹೊಸ ಸ್ಕೀಮುಗಳ ಪ್ರಭಾವದಿಂದಾಗಿ ಹ ಜನ ಈಗ ಮುಂಚಿನ ವಿಧಾನಗಳನ್ನು

ಅರಣ್ಯದ ಸುತ್ತಮುತ್ತಲ 'ಬಫರ್ ಜೋನ್' ಲ್ಲಿ 2009-10 ಸಾಲಿನಲ್ಲಿ 1,300 ಳನ್ನು ಹುಲಿಗಳು ಬೇಟೆಯಾಡಿವೆ ಎಂದು ಾರಿಗಳು ಲೆಕ್ಕ ಕೊಡುತ್ತಾರೆ. ಅಂದರೆ ದಿನಕ್ಕೆ ರು! ಒಂದು ಕಾಲದಲ್ಲಿ ನರಭಕ್ಷಕ ಹುಲಿಗಳ ಈ ಕಾಡು ಈಗ ಜಾನುವಾರು ಭಕ್ಷಕ ಹುಲಿಗಳ

(ಮುಂದುವರೆಯುವುದು)



ಉತ್ತರ ಕನ್ನಡ ಮೀಸಲಾತಿ ವಂಚಿತ ಹಾಲಕ್ಕಿಗಳ ಹಾಡು-ಪಾಡು!

ಇವನ ಮನೆಯೊಳಗಿಲ್ಲ ಸಾಕಷ್ಟು ಅಕ್ಕಿ
ಆದರೂ ಈತನಿಗೆ ಹೆಸರು ಹಾಲಕ್ಕಿ
ಹಾಲು ಅಕ್ಕಿಗಳೆರಡೂ ಹೆಸರೊಳಗೆ ಮಾತ್ರ
ಹಸಿವೆಯೆಂಬುದು ಇವನ ಹಣೆಯ ಕುಲಗೋತ್ರ.

ಇದು ನಾಲ್ಕು ದಶಕದ ಹಿಂದೆಯೇ ಕವಿ-ಕರ್ಮಯೋಗಿ ದಿನಕರ ದೇಸಾಯಿ ಉತ್ತರ ಕನ್ನಡದ ಬುಡಕಟ್ಟು ಜನಾಂಗವಾದ ಹಾಲಕ್ಕಿ ಒಕ್ಕಲಿಗರ ಬದುಕು-ಬವಣೆ ಬಿಂಬಿಸಿ ಬರೆದ ಚೌಪದಿ. ಈ ಶೋಷಿತ ಕಾಡಿನ ಮಕ್ಕಳ ಬದುಕು ಇವತ್ತಿಗೂ ಬದಲಾಗಿಲ್ಲ, ಸ್ವಾತಂತ್ರ್ಯ ಬಂದು ದಶಕಗಳು ಆರು ಉರುಳಿದರೂ ಹಾಲಕ್ಕಿಗಳು ಮಾತ್ರ ಕಾಡಲ್ಲೇ ಬದುಕು ಕಳೆಯುತ್ತಿದ್ದಾರೆ! ಈ ಮುಗ್ಧ ಜನಾಂಗದ ಬದುಕು-ಬವಣೆ, ಉಡುಗೆ, ತೊಡುಗೆ, ರೀತಿ-ರಿವಾಜು, ಕುಂಬ್ರಿ ಕೃಷಿ-ಕೂಲಿ ಮತ್ತು ಹೆಂಗಸರ ಕುತ್ತಿಗೆಯಲ್ಲಿರುವ ರಾಶಿ-ರಾಶಿ ಮಣಿಸರ, ಕಟ್ಟುವ 'ಗೆಟಕಿ' (ರವಿಕೆಯಿಲ್ಲದೆ ವಿಶಿಷ್ಟವಾಗಿ ಸೀರೆ ಉಡುವುದು)-ಇದೊಂದು ಪಕ್ಕಾ ಆದಿವಾಸಿ ಬುಡಕಟ್ಟು ಜನಾಂಗವೆಂಬುದನ್ನು ಸಾರಿ-ಸಾರಿ ಹೇಳುತ್ತಿದೆ. ದುರಂತವೆಂದರೆ, ಆಳುವ ಖೂಳರಿಗೆ-ಅಧಿಕಾರಶಾಹಿಗೆ ಇದು ಅರ್ಥವಾಗಿಲ್ಲ!!

ಉತ್ತರ ಕನ್ನಡದಲ್ಲಿ ಸುಮಾರು ಒಂದೂವರೆ ಲಕ್ಷದಷ್ಟು ಒಕ್ಕಲಿಗರಿದ್ದಾರೆ. ಈ ಅಮಾಯಕ ಜನಸಮುದಾಯವನ್ನು ರಾಜಕಾರಣಿಗಳು ಓಟ್ ಬ್ಯಾಂಕಾಗಿ ಪರಿಗಣಿಸಿ-ನಿಭಾಯಿಸಿ ಪೀಠಕ್ಕೇರಿ ಮೆರೆದಾಡಿದರೇ ಹೊರತು ಜೀವವಿರುವ ಜನಾಂಗವೆಂದು ಎಂದೂ ಪರಿಗಣಿಸಲಿಲ್ಲ. ಕಾರವಾರದ ಕಾಳಿ ನದಿಯಿಂದ ಹೊನ್ನಾವರದ ಶರಾವತಿ ನದಿವರೆಗಿನ 169 ಹಳ್ಳಿಗಳ ಕಾಡುಮೇಡಿನ ಕೊಪ್ಪಗಳಲ್ಲಿ ಒಕ್ಕಲಿಗರು ವಾಸಿಸುತ್ತಿದ್ದಾರೆ. ಈ ಒಕ್ಕಲಿಗರು ಮಾಜಿ ಪ್ರಧಾನಿ ದೇವೇಗೌಡರ ಅಥವಾ ಬಿಜೆಪಿ ಮಾಜಿ ರಾಜ್ಯಾಧ್ಯಕ್ಷ ಸದಾನಂದ ಗೌಡ 'ಒಕ್ಕಲಿಗ'ರಂತೆ ಜಬರ್‌ದಸ್ತ್ ಜನಾಂಗವಲ್ಲ, ಇವರು ಶುದ್ಧ ಗಿರಿಜನರು, ಬಾಯ್ಬಲ ಇಲ್ಲದವರು. ನಾಗರಿಕ ಸಮಾಜದ ನಡುಗಡ್ಡೆಗಳಂತೆ ಕಾಣಿಸುವ ಈ ಜನಾಂಗ ಪ್ಯಾಂಟು-ಜುಬ್ಬ, ಸೀರೆ-ಚೂಡಿದಾರದ 'ನಾಗರಿಕ' ಪ್ರಪಂಚದ ದೌರ್ಜನ್ಯ-ಗುಲಾಮಗಿರಿ-ತಾತ್ಸಾರ-ತಿರಸ್ಕಾರಕ್ಕೆ ಲಾಗಾಯ್ತಿನಿಂದ ತುತ್ತಾಗುತ್ತಲೇಯಿದೆ!

ಈಗಿತ್ತ ಅರೆ ಆದಿವಾಸಿಗಳಂತೆ ಕಾಣಿಸುವ ಈ ಕಚ್ಚೆ ಗಂಡಸರ-ಗೆಟಕಿ ಹೆಂಗಸರ ಹಾಲಕ್ಕಿ ಪರಿವಾರ ಕಂಪ್ಯೂಟರ್ ಯುಗದಲ್ಲೂ ಶತ-ಶತಮಾನಗಳಷ್ಟು ಹಿಂದುಳಿದಿದೆ; ಶ್ರೇಣೀಕೃತ ಸಾಮಾಜಿಕ ವ್ಯವಸ್ಥೆಯಲ್ಲಿ ಅನ್ಯಾಯ-ಮೋಸ-ವಂಚನೆಗೆ ಈಡಾಗಿ ನಿಕೃಷ್ಟ ಬಾಳು ಸಾಗಿಸುತ್ತಿದೆ.

ಬುಡಕಟ್ಟು ಜನಾಂಗ

ಉತ್ತರ ಕನ್ನಡದ ಹಾಲಕ್ಕಿಗಳದು ಅಪ್ಪಟ ಬೆವರಿನ ಸಂಸ್ಕೃತಿ. ಒಂದು ಕಾಲದಲ್ಲಿ ಭೂಮಾಲೀಕರ ಊಳಿಗ ಮಾನ್ಯದ ದರ್ಪಕ್ಕೆ ಈ ಸಮಾಜ ಹೈರಾಣಾಗಿ ಹೋಗಿತ್ತು! ಈ ಸರ್ಕಾರ ಪುಢಾರಿಗಳ-ಪ್ರಭೃತಿಗಳ ದಬ್ಬಾಳಿಕೆಗೆ ಸಿಲುಕಿ ಒದ್ದಾಡುತ್ತಿದೆ!! ಹಾಲಕ್ಕಿಗಳನ್ನು ಅಧಿಕೃತವಾಗಿ ಆದಿವಾಸಿಗಳೆಂದು ಸರ್ಕಾರ ವರ್ಗೀಕರಿಸಿಲ್ಲ, ಹಾಗಂತ ಆದಿವಾಸಿ ಗಿರಿಜನರ ಬವಣೆಗಿಂತ ಭಿನ್ನವಾಗೇನೂ ಈ ಹಾಲಕ್ಕಿಗಳ ಜೀವ-ಜೀವನವಿಲ್ಲ!

ಹಾಲಕ್ಕಿ ಜಾತಿ-ಜನಾಂಗ ಅಸ್ಪೃಶ್ಯವಲ್ಲ; ಆದರೆ ಸಾಮಾಜಿಕ-ರಾಜಕೀಯ-ಶೈಕ್ಷಣಿಕವಾಗಿ ಮುಟ್ಟಿಸಿಕೊಳ್ಳದ ಸಮುದಾಯಕ್ಕಿಂತ ತೀರಾ ದಯನೀಯ ಸ್ಥಿತಿ-ಗತಿಯಲ್ಲಿದೆ. ದಕ್ಷತೆ-ಪ್ರಾಮಾಣಿಕತೆ ಕಷ್ಟ ಸಹಿಷ್ಣುತೆಯ ಈ ಜನರು ಕೆಲಸ-ಕಾರ್ಯದಲ್ಲಿ ಬಲು ಗಟ್ಟಿಗರು. ಆದರೆ ಆರ್ಥಿಕವಾಗಿ ತುಂಬ ದುರ್ಬಲರು. ಸದಾ ಆರ್ಥಿಕ ಒತ್ತಡದಲ್ಲಿ ಜೀವನ ಸಾಗಿಸುವ ಈ ಮಂದಿಯ ಬದುಕು-ಬವಣೆ, ಆಹಾರ-ವಿಹಾರ, ಮೈ-ಚಹರೆ, ಉಡುಪು ಬಡತನವನ್ನು ಢಾಳಾಗಿ ಬಿಂಬಿಸುತ್ತದೆ. ಸರ್ಕಾರದ ಹುಚ್ಚು ಅರಣ್ಯ ನೀತಿಯಿಂದ ಕಾಡಿನ ಉತ್ಪನ್ನ ಹಾಲಕ್ಕಿಗಳ ಕೈಗೆಟುಕುತ್ತಿಲ್ಲ. ಬಡತನ-ಸಾಮಾಜಿಕ ಸಂಕಷ್ಟ-ನಷ್ಟಗಳಿಗೆ ಬೇಸತ್ತ ಮನಃಸ್ಥಿತಿಯ ಹಾಲಕ್ಕಿಗಳು ಈಗೀಗ ಸಾರಾಯಿ ಕುಡಿತದಂಥ ವ್ಯಸನಕ್ಕೆ ಬಲಿ ಬೀಳುತ್ತಿದ್ದಾರೆ.

ಹಾಲಕ್ಕಿಗಳ ಜೀವನ ಶೈಲಿ, ಸಂಪ್ರದಾಯಗಳು-ಇದೊಂದು ಆದಿವಾಸಿ ಗಿರಿಜನ ಸಮುದಾಯ ಎಂಬುದಕ್ಕೆ ಸಾಕಷ್ಟು ಸಾಕ್ಷ್ಯಾಧಾರ ಒದಗಿಸುತ್ತದೆ. ಆದರೆ ಹಾಲಕ್ಕಿಗಳ 'ಕುಂಬ್ರಿ ಕೃಷಿ' ಪದ್ಧತಿಯಿದೆಯಲ್ಲ ಅದು, ಈ ಜನ ಸಮುದಾಯ ಮೂಲತಃ ಅರಣ್ಯ ಭಾಗದಲ್ಲೇ ವಾಸಿಸುತ್ತಿದ್ದ ಆದಿವಾಸಿ ಜನಾಂಗಗಳಲ್ಲಿ ಒಂದೆಂಬುದನ್ನು ಬಲವಾಗಿ ಸಮರ್ಥಿಸುವಂತಿದೆ. ರಾಗಿ ಅಂಬಲಿ ಹಾಲಕ್ಕಿಗಳ ತಲತಲಾಂತರದ ಆಹಾರ. ಬೆಳಗ್ಗೆ ನಾಲ್ಕುವರೆಗೇ ಎದ್ದು ರಾಗಿ ಅಂಬಲಿ ಕುಡಿಸಿ, ಅದನ್ನು ಮಡಕೆಯಲ್ಲಿ ತುಂಬಿ ತಲೆ ಸಿಂಬೆಯ ಮೇಲಿಟ್ಟುಕೊಂಡು ನಸುಕಿನಲ್ಲೇ ಸಾಲು-ಸಾಲಾಗಿ 'ಬೆಟ್ಟದ ಗದ್ದೆ'ಗೆ ಹೋಗುತ್ತಾರೆ. ಈ ಬೆಟ್ಟದ ಗದ್ದೆಗೆ



ಹೋಗುವ ಪದ್ಧತಿ ಇವತ್ತಿಗೂ ಇದೆ. ಆ ಗದ್ದೆಯಲ್ಲಿ ಪುಟ್ಟ ಹುಟ್ಟಿ (ಗುಡಿಸಲು) ಅಥವಾ 'ಮಾಳ' ಹಾಕಿಕೊಂಡು ಬೆಳೆದ ಫಸಲಿನ ಕಾವಲು ಮಾಡುತ್ತಾರೆ. ಇದು ಮೂಲತಃ ಕುಂಬ್ರಿ ಬೇಸಾಯ.

ಗುಡ್ಡದ ಸಮತಟ್ಟಾದ ಇಳಿಜಾರು ಪ್ರದೇಶದ ಗಿಡ-ಗಂಟೆ ತೆಗೆದು ಹಾಲಕ್ಕಿಗಳು ಆ ಜಾಗದಲ್ಲಿ ರಾಗಿ ಬೆಳೆಯುತ್ತ ಬಂದಿದ್ದಾರೆ. ಅದೇ 'ಕುಂಬ್ರಾ ಬೇಸಾಯ.' ಹೀಗೆ ಈ ಜನಾಂಗ ಯಾವುದನ್ನು ಮುಖ್ಯವಾಗಿ ಬೆಳೆದರೋ ಅದೇ (ರಾಗಿ) ಅಂಬಲಿ. ಅವರ ನಿತ್ಯದ ಆಹಾರವೂ ಆಯಿತು. ಅದೇ ಹೊತ್ತಿಗೆ ಈ ಜನ ಬೆಟ್ಟದ ತೀರಾ ಕೆಳಗಿನ ಪ್ರದೇಶವನ್ನು ಕಡಿದು ಭತ್ತದ ಗದ್ದೆಗಳನ್ನಾಗಿ ರೂಪಿಸಿಕೊಂಡರು. ಈ 'ಬೆಟ್ಟದ ಗದ್ದೆ', 'ಕುಂಬ್ರಾ ಕೃಷಿ' ಹಾಲಕ್ಕಿಗಳು ಮೂಲತಃ ಅರಣ್ಯವಾಸಿಗಳಾಗಿದ್ದರು ಎಂಬುದನ್ನು ಧ್ವನಿಸುತ್ತದೆ.

ಅಪಾರ ಜನಪದ ಶ್ರೀಮಂತಿಕೆಯ ಕಲೆ-ಸಂಸ್ಕೃತಿ ಹಾಲಕ್ಕಿಗಳದು. ಹಳೆ ತಲೆಮಾರಿನ ಹೆಂಗಸರ ಹಾಡುಗಳಲ್ಲಿ ದಟ್ಟ ಜೀವನಾನುಭವ ತುಂಬಿದೆ. ಗಂಡಸರ ಸುಗ್ಗಿಯ ಸೊಬಗೇ ವಿಶಿಷ್ಟ-ವಿಭಿನ್ನ. ಈ ಕಾಡಿನ ಮಕ್ಕಳಿಗೆ ದೇಶಕ್ಕೆ ಸ್ವಾತಂತ್ರ್ಯ ಬಂದಾಗ ಶಿಕ್ಷಣದ ಗಂಧ-ಗಾಳಿಯೇ ಇರಲಿಲ್ಲ. ಎನ್.ಎಚ್. ಗೌಡ ಮತ್ತವರ ಓರಗೆಯ ಒಂದೆರಡು ಮಂದಿಯಷ್ಟೇ ಶಾಲೆ ಕಲಿತಿದ್ದರು. ಮಾಸ್ತರರಾಗಿದ್ದ ಎನ್.ಎಚ್. ಗೌಡ 1985 ರಲ್ಲಿ ಜನತಾ ದಳದ ಶಾಸಕರಾಗಿದ್ದರು. ರಾಮಕೃಷ್ಣ ಹೆಗಡೆಜೀಯ ಸ್ವಜಾತಿ ಹೈಗರ ಗ್ಯಾಂಗಿನ ಅಂಕುಶದಿಂದ ಆತನಿಗೆ ಸ್ವತಂತ್ರವಾಗಿ ಕೆಲಸ ಮಾಡಲಾಗಲಿಲ್ಲ. ಹೀಗಾಗಿ ಮಾಸ್ತರ್ ಗೌಡರು ಎಮ್ಮೆಲ್ಲೆ ಗೌಡರಾದರೂ ಹಾಲಕ್ಕಿ ಒಕ್ಕಲಿಗರಿಗೆ ಪ್ರಯೋಜನವೇನೂ ಆಗಲಿಲ್ಲ. ಅದಿರಲಿ, ಸ್ವಾತಂತ್ರ್ಯದ ಹೊಸದರಲ್ಲಿ ಅತೀ ಕೀಳಾವಸ್ಥೆಯಲ್ಲಿದ್ದ 'ಮಹಾರ್' ಎಂಬ ದಲಿತ ಜನಾಂಗದಲ್ಲೂ ಸಾವಿರಕ್ಕೆ 53 ಮಂದಿ ಶಿಕ್ಷಣ ಪಡೆದಿದ್ದರು. ಆದರೆ ಉತ್ತರ ಕನ್ನಡದ ಹಾಲಕ್ಕಿಗಳಲ್ಲಿ ಶಿಕ್ಷಣ ಜ್ಞಾನವಿದ್ದದ್ದು ಸಾವಿರಕ್ಕೆ ಬರೀ ನಾಲ್ಕೇ ನಾಲ್ಕು ಜನರಿಗೆ!!



● ವಿವೇಕಾನಂದ ತಾಂಡೇಲ

ಕಾಡಿನಲ್ಲಿ ಬದುಕುತ್ತಿದ್ದ ಆದಿವಾಸಿಗಳಾದ ಠಾಣಾ ಜಿಲ್ಲೆಯ ವರ್ಲಿ, ಸೂರತ್ ಜಿಲ್ಲೆಯ ದೋಂಡಿಯಾ-ದುಬ್ಲಾ-ಮತ್ತು ಚೋದ್ರಾ ಜನಾಂಗಗಳಿಗಿಂತಲೂ ಹಾಲಕ್ಕಿಗಳು ಶೈಕ್ಷಣಿಕವಾಗಿ ನಿಕೃಷ್ಟ ಅವಸ್ಥೆಯಲ್ಲಿದ್ದರು. ಆನಂತರ ನಿಧಾನಕ್ಕೆ ಈ ಜನಾಂಗದಲ್ಲಿ ಶೈಕ್ಷಣಿಕ ಪ್ರಜ್ಞೆ ಮೂಡಿತು. ಹಾಲಕ್ಕಿಗಳಲ್ಲಿ ಈ ಶಿಕ್ಷಣದ ಆಸಕ್ತಿ ಮೂಡಿಸಿದ್ದು ಅಂದು ಜಿಲ್ಲೆಯ ಪ್ರಖ್ಯಾತ ಸಾಂಸ್ಕೃತಿಕ-ರಾಜಕೀಯ ನೇತಾರರಾಗಿದ್ದ ದಿನಕರ ದೇಸಾಯಿ ಮತ್ತವರ ಸಮಾಜವಾದಿ ಸಂಗಾತಿಗಳಾದ ದಯಾನಂದ ನಾಡಕರ್ಣಿ ಹಾಗು ಗಿರಿಪಿಕಳೆಯ ಕ್ರಾಂತಿಕಾರಿ ಪಡೆ! ಈ ತ್ರಿಮೂರ್ತಿಗಳು ಹುಟ್ಟಾ ಮೇಲ್ವರ್ಗದವರಾದರೂ ತಮ್ಮ ಬೆವರಿನ ವರ್ಗದ ಪರ ನೀತಿ-ನಿಲುವಿನಿಂದಾಗಿ ಅಂದು ಶ್ರಮಿಕ ಶೂದ್ರ ಸಮುದಾಯದ ರೈತರ ಪ್ರಖ್ಯಾತೀತ-ಅಕ್ಕರೆಯ ನಾಯಕಾಗ್ರೇಸರಾಗಿದ್ದರು!

ದೇಸಾಯಿ ಧ್ವನಿ

ಮೊಟ್ಟಮೊದಲು ಹಾಲಕ್ಕಿಗಳ ಇರುವಿಕೆ-ಅಸ್ತಿತ್ವ ದೇಶದ ಗಮನಕ್ಕೆ ತಂದಿದ್ದು ದಿನಕರ ದೇಸಾಯಿ. ಹಿಂದಿನ ವಿಶಾಲ ಮುಂಬೈ ಪ್ರಾಂತ್ಯದ ಪಂಚಮಹಲ್ಸ್ ಜಿಲ್ಲೆಯ ಮಿರಖೇಡಿ ಎಂಬಲ್ಲಿ ನಡೆದ ಆದಿವಾಸಿ ಶ್ರಮಜೀವಿಗಳ (Aboriginal workers) ರಾಷ್ಟ್ರೀಯ ಸಮ್ಮೇಳನದಲ್ಲಿ ದಿನಕರ ದೇಸಾಯಿ The Vakkals of North Kanara ಎಂಬ ವಿಷಯದ ಮೇಲೆ ಪ್ರಬಂಧ ಮಂಡಿಸಿದ್ದರು. ಇದೆಷ್ಟು ಪ್ರಖರ ಪರಿಣಾಮ ಬೀರಿತೆಂದರೆ, ಹಾಲಕ್ಕಿಗಳ ಮೂಲ-ನೆಲೆ-ಬದುಕು-ಕೃಷಿ-ಶಿಕ್ಷಣ-ಸಂಪ್ರದಾಯ-ದಯನೀಯ ಜೀವನಶೈಲಿ ಕುರಿತಂತೆ ಮಾನವ ಶಾಸ್ತ್ರಜ್ಞರನ್ನು ಹಾಲಕ್ಕಿಗಳ ಬಗ್ಗೆ ಚಿಂತಿಸುವಂತೆ ಮಾಡಿತು!

ಆ ನಂತರ ಐದಾರು ದಶಕದಲ್ಲಿ ಹಾಲಕ್ಕಿ ಒಕ್ಕಲಿಗರ ಬಗ್ಗೆ ನೂರಾರು ಅಧ್ಯಯನ-ಸಮ್ಮೇಳನ-ಸಮಾವೇಶ-ಪ್ರತಿಭಟನೆ-ಹೋರಾಟಗಳೆಲ್ಲ ಆಗಿವೆ. ಆಗುತ್ತಲೂ ಇವೆ. ಹಾಲಕ್ಕಿಗಳನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸಬೇಕೆಂಬ ಕೂಗೂ ಕೇಳಿಬಂತು. ಹಾಲಕ್ಕಿ ಒಕ್ಕಲಿಗರನ್ನು ಪರಿಶಿಷ್ಟ ಪಂಗಡಕ್ಕೆ ಸೇರ್ಪಡೆಗೊಳಿಸುವಂತೆ ಆಗ್ರಹಿಸಿ ಬೇರೆ-ಬೇರೆ ರೂಪದಲ್ಲಿ ಹೋರಾಟಗಳು ಹಲವು ದಶಕದಿಂದ ನಡೆಯುತ್ತಲೇ ಬಂದಿದೆ. ಇಚ್ಛಾಶಕ್ತಿಯಿಲ್ಲದ ಜಿಲ್ಲೆಯ ಹೇತ್ಲಾಂಡಿ ನಾಯಕರಿಂದಾಗಿ ಹಾಲಕ್ಕಿಗಳ ನ್ಯಾಯೋಚಿತ ಬೇಡಿಕೆಗೆ ಬೆಂಗಳೂರು-ದಿಲ್ಲಿಗಳಲ್ಲಿ ಸರಿಯಾದ ಸ್ಪಂದನ ಸಿಗುತ್ತಿಲ್ಲ. ಜಿಲ್ಲಾ ಮಂತ್ರಿ ಕಾಗೇರಿಗೆ ಉತ್ತರ ಕನ್ನಡದಲ್ಲೊಂದು ಹಾಲಕ್ಕಿ ಒಕ್ಕಲಿಗರೆಂದು ಬುಡಕಟ್ಟು ಜನಾಂಗದವರಿದ್ದಾರೆಂಬ ಅರಿವಿರುವುದೇ ಅನುಮಾನ. ಉತ್ತರ ಕನ್ನಡದ ಸ್ವಯಂಘೋಷಿತ ಸೊಸೆ-ಮಾಜಿ ಸಂಸದೆ ಮ್ಯಾಗಿ ಅದ್ವಾಕೋ ಹಾಲಕ್ಕಿಗಳನ್ನು ಎಸ್‌ಟಿ ಮಾಡಲು ದಿಲ್ಲಿಯಲ್ಲಿ ತನಗಿರುವ ಪ್ರಭಾವವನ್ನು ಮನಸಾರೆ ಪ್ರಯೋಗಿಸುತ್ತಿಲ್ಲ. ಉತ್ತರ ಕನ್ನಡ ಸಿದ್ದಿ (ನೀಗ್ರೋ ಮೂಲ)ಗಳನ್ನು ಬಿಷಪ್ -ಫಾದರ್‌ಗಳ ಒತ್ತಾಸೆಯಂತೆ 'ತರಾತುರಿ'ಯಲ್ಲಿ ಪರಿಶಿಷ್ಟ ಪಂಗಡಕ್ಕೆ ಸೇರ್ಪಡೆಯಾಗುವಂತೆ 'ಜಾದೂ' ಮಾಡಿದ್ದ ಮ್ಯಾಗಿ ಹಾಲಕ್ಕಿ ಬಗ್ಗೆ ಅಷ್ಟು ಕಾಳಜಿ-ಆಸಕ್ತಿ ತೋರಿಸುತ್ತಿಲ್ಲ. ಇನ್ನುಳಿದ ದೇಶಪಾಂಡೆ, ಚಿಡ್ಡಿ ಸಂಸದ ಅನಂತ್ಮಾಣಿ ವಗೈರೆಗಳು ಶೂದ್ರರ ಪಾಲಿಗೆ ಇದ್ದೂ ಸಂತಂತಾಗಿದ್ದಾರೆ.

ಕಾಡಿನ ಮಕ್ಕಳು

ಪ್ರಭುತ್ವ ಮತ್ತು ಅಧಿಕಾರಶಾಹಿಗೆ ಹಾಲಕ್ಕಿಗಳ ಬೇಡಿಕೆ-ಬವಣೆ ಕೇಳಿಸುತ್ತಿಲ್ಲ, ಕಾಣಿಸುತ್ತಲೂ ಇಲ್ಲ. ಆಳುವ ವರ್ಗದ ಈ ತಾತ್ಸಾರ-ದ್ರೋಹದ ನಡುವೆಯೇ ಒಕ್ಕಲಿಗರ ಸಮುದಾಯದಲ್ಲಿ ಶಿಕ್ಷಣ ಪಡೆದವರ ಸಂಖ್ಯೆ ಹೆಚ್ಚಿದೆ. ದಿನಕರ ದೇಸಾಯಿಯವರ ಶೈಕ್ಷಣಿಕ ಕ್ರಾಂತಿ ಮತ್ತು ಆ ಬಳಿಕ ಹಳ್ಳಿಗಾಡಿನಲ್ಲಿ ಶಿಕ್ಷಣ ಸಂಸ್ಥೆಗಳು ಹುಟ್ಟಿಕೊಂಡಿದ್ದು ಹಾಲಕ್ಕಿಗಳ ಶೈಕ್ಷಣಿಕ ಮಟ್ಟ ಸುಧಾರಿಸಿತು. ಇಷ್ಟಾದರೂ ಬಹುಸಂಖ್ಯಾತ ಹಾಲಕ್ಕಿಗಳಿಗೆ ಕಾಡೇ ಜೀವನಾಧಾರ. ಮುಳ್ಳು-ಜಿಗ್ಗು-ಸೊಪ್ಪು-ಸದೆಗಾಗಿ ಅರಣ್ಯವನ್ನೇ ಈ ಜನಾಂಗ ಅವಲಂಬಿಸಿದೆ.

ಹಾಲಕ್ಕಿಗಳ ಪ್ರಮುಖ ಆದಾಯ ಕೃಷಿ ಮತ್ತು ಅರಣ್ಯ ಉತ್ಪನ್ನ. ಕಾಡಿನಲ್ಲಿ ಮುರಿದು ಬಿದ್ದ ಒಣ ಕಟ್ಟಿಗೆ ಉರುವಲಕ್ಕೆಂದು ಮಾರಿ ಹೊಟ್ಟೆ ಹೊರೆಯುತ್ತಾರೆ. ಈ ಜನರ ಜೀವನ ಶೈಲಿಯಂತೆಯೇ ಬೇಸಾಯ ಪದ್ಧತಿ ಕೂಡ ಇವರು ಕಾಡಿನ ಮಕ್ಕಳೆಂಬು ದನ್ನೇ ಸಾಬೀತುಪಡಿಸುತ್ತದೆ. ಹಿಂದೆ ಹಾಲಕ್ಕಿಗಳು ಆದಿವಾಸಿಗಳಂತೆ ನಿತ್ಯ ಬೇಟೆಯಾಡುತ್ತಿದ್ದರು. ಕಾಡಿನ ಮೂಲದ ದೇವರುಗಳಾದ ಹುಲಿದೇವರು, ಬೇಟೆ ದೇವರು, ಕಾನ ದೇವರು, ಕಾನಬೀರ ದೇವರು, ಬೀರ ದೇವರುಗಳನ್ನು ಪೂಜಿಸುತ್ತಿದ್ದರು.

ಹಗಲಿಡೀ ರಾಗಿ ಅಂಬಲಿ ಕುಡಿದ ಹಾಲಕ್ಕಿಗಳು ರಾತ್ರಿಯಷ್ಟೇ ಕುಚಲಕ್ಕಿ (boiled rice) ಅನ್ನ ಉಣ್ಣುತ್ತಾರೆ ದುಡ್ಡಿದ್ದರೆ ಮಾತ್ರ ಮೀನು ಸಾರು ಹಾಲಕ್ಕಿಗಳಿಗೆ. ಉದ್ದನೆಯ ನದಿ ಇಲ್ಲವೆ ಸಮುದ್ರದ ನೀರಿರುವುದೇ ಮೀನು ಆಹಾರ

▶▶ 22

ಲಂಕೇಶ್ 76 ವಿಶೇಷಾಂಕ

ಹೊಸ ತಲೆಮಾರಿನ ತಲ್ಲಣಗಳು

'ಮುಂಬೇನೇ ಕಣ್ ಕಾಣುದ್ ನನ್ ಮಗ್ಳು ಸಾಮಂತಿಗೆ ಆಣಾದ್ ಸಕ್ಕರೆ ಕಾಯಿಲೆ ದೆಸಿಂದ ಡಾಕ್ಟ್ರು ಕಾಲ್ ತಗೀಲೇ ಬೇಕಂದೌರೆ' ಎಂದು ಅವಳ ತಾಯಿ ಹುಚ್ಚನುಮಿಯು ಊರೂರಿಗೆ ಜಾತ್ರೆಗೆ ಸಾರುವ ಧಂಗೂರದಂತೆ ಸಾರುತ್ತಿದ್ದರೆ, ಸಾಮಂತಿಗೆ ಅಣ್ಣನಾಗಿದ್ದ ಸಣ್‌ರಾಮ ಮಾತ್ರ ತನ್ನ ಊರಿಗೆ ನೀರು ಬಿಡುವ ಕಾಯಕ ಮಾಡುವಾಗ ಯಾರದೋ ಉಸಾಬರಿಗೆ ತಗುಲಿಕೊಂಡು, ಕಣ್ಣಿಗೆ ಖಾರದಪುಡಿ ಎರಚಿಸಿಕೊಂಡು, ಥೇಟ್ ದಪ್ಪ ಕೆಂಪುಮೆಣಸಿನ ಕಾಯಿಯಂಥಾ ಕಣ್ಣುಗಳೊಂದಿಗೆ ತನ್ನ ತಾಯಿ ಹುಚ್ಚನುಮಿಯ ಮುಂದೆ ನಿಂತ. ಮಗನ ಅವತಾರ ಕಂಡ ಹುಚ್ಚನುಮಿಗೆ ಇಡೀ ಜಗತ್ತೇ ತನ್ನನ್ನು ತನ್ನ ಮಕ್ಕಳು ಮರಿಗಳನ್ನು ಮುಗಿಸಲು ಹೊಂಚು ಹಾಕಿದೆಯೇನೋ ಎಂಬ ಸಂಶಯ ಮೂಡಿದ್ದೇ, ಊರಿನಲ್ಲಿ ಗೌಡನಾಗಿದ್ದ ಕೃಷ್ಣೇಗೌಡನ ಮನೆಯ ಕಡೆಗೆ ಹೊರಟುನಿಂತಳು. ಅಷ್ಟರಲ್ಲಿ ಅಲ್ಲೇ ನಿಂತು ಇವರ ಗೋಳನ್ನು ನೋಡುತ್ತ ಲೊಚಗುಟ್ಟುತ್ತಿದ್ದ ವ್ಯಕ್ತಿಯು 'ಗೌಡರು ಸೇಟ್‌ಕೇಕ್ ಆಟ ಆಡಕ್ಕೆ ಮೈದಾನಕ್ಕೆ ಹೋಗೌರೆ' ಎಂದ. ಇಷ್ಟೊತ್ತೂ ಮನೆಯ ಒಳಗಿದ್ದು ಕನ್ನಡಕದ ಮೂಲಕ ಜಗವ ನೋಡುತ್ತಿದ್ದ ಪದವೀಧರ ವ್ಯಕ್ತಿಯು, ಅವನ ಇಂಗ್ಲಿಷ್‌ಗೆ ಜೋರಾಗಿ ನಗುತ್ತಾ ಹೊರಬಂದು, 'ಸೇಟ್‌ಕೇಕ್ ಆಟ ಅಲ್ಲವೋ, ಅದು ಶಟಲ್‌ಕಾಕ್' ಎನ್ನಲು ಖಾರಧಪುಡಿ ಮೆತ್ತಿಸಿಕೊಂಡಿದ್ದ ಸಣ್‌ರಾಮ 'ಕುಯ್, ಕುಯ್' ಎನ್ನುವುದಕ್ಕೂ ಬಿಸಿಲ ಝಳ ಏರುವುದಕ್ಕೂ ಸಮನಾಗಿ, ಹುಚ್ಚನುಮಿ ಸಣ್‌ರಾಮನ ಕೈ ಹಿಡಿದಿದ್ದ ತನ್ನ ಕೈ ಪಟ್ಟನ್ನು ಇನ್ನೂ ಬಿಗಿಗೊಳಿಸಿ ಮಗನಿಗೆ ಕಣ್ಣು ಬಿಡಲಾರ ಎನ್ನುವುದನ್ನೂ ಲೆಕ್ಕಿಸದೇ ಮೈದಾನ ಇರುವ ಉತ್ತರ ದಿಕ್ಕಿಗೆ ಬಿರಬಿರನೆ ಹೊರಟಳು. 'ಏನಾಯ್ತೋ ಸಣ್ಣ, ಏನದು ಕಣ್ಣು?...' ಎನ್ನುತ್ತಿದ್ದ ಪದವೀಧರ ವ್ಯಕ್ತಿಯ ಕೂಗು ಕ್ರಮೇಣ ಸಣ್‌ರಾಮನಿಗೆ ಕ್ಷೀಣವಾಗಿ ಕೇಳಿಸುತ್ತಾ ಹೋಗಿ ಕೊನೆಗೆ ಇಲ್ಲವಾಯ್ತು.

ಕಣ್ಣು ಮುಚ್ಚಿಕೊಂಡೇ ಇದ್ದರೂ ಜಲಪಾತದಂತೆ ತೊಟ್ಟಿಕ್ಕುತ್ತಿದ್ದ ನೀರು ಅವನ ಬಾಯಿಗೂ ಇಳಿದಾಗ, ಆ ಖಾರದ ತೀವ್ರತೆ ಬಾಯಿಗೂ ಗೊತ್ತಾಗಿ, ಹೊರಗಿನ ಗಾಳಿಯನ್ನು ಒಳಗೆಳೆದುಕೊಳ್ಳಲು 'ಹಾ, ಹ್ಹಾ' ಎಂದುಕೊಂಡೇ, ಗೌಡ ಮತ್ತು ಅವನ ಸುತ್ತಾ ಯಾವಾಗಲೂ ಜೇನುನೊಣದಂತೆ ಇರುತ್ತಿದ್ದ ಪರಿವಾರ ಆಡುತ್ತಿದ್ದ ಮೈದಾನದ ಹಾದಿ ಸವೆಸುತ್ತಿದ್ದ ಸಣ್‌ರಾಮನ ಕಣ್ಣಿನಉರಿ ಬೆಳಗಿನ ತೀಕ್ಷ್ಣ ಬಿಸಿಲಿಗೆ ಕಣ್ಣಿನಲ್ಲಿ ಕಾದ ಸೀಸ ಹೊಯ್ದಂತೆ ಅನ್ನಿಸಿತ್ತು. ಆದಕ್ಕೆ ಪೂರಕವಾಗಿ 'ಕುಯ್' ಗುಟ್ಟುವುದು ಮಾತ್ರ ಮುಂದುವರೆಸಿದ್ದ ಮಗನ ಅವಸ್ಥೆ ಕಂಡ ತಾಯಿ ಹುಚ್ಚನು ಮಿಯ ಹೊಟ್ಟೆಗೂ ಆ ಖಾರ ಇಳಿದಂತಾಗಿ, ತನ್ನ ಸೀರೆ ಸೆರಗನ್ನು ಹಿಡಿಯಾಗಿ ಹಿಡಿದು ತನ್ನ ಬಾಯಿಯಿಂದ ಗಾಳಿ ಊದಿ ಅವನ ಕಣ್ಣಿಗೆ ಒತ್ತಿ ಕಾವು ಕೊಟ್ಟಳು. ತಕ್ಕಮಟ್ಟಿಗೆ ಕಮ್ಮಿಯಾಗಿ ಕಣ್ಣನ್ನು ಬಿಟ್ಟೂಬಿಡದವನಂತೆ ಬಿಟ್ಟು ಮತ್ತೆ ಮುಚ್ಚಿಕೊಳ್ಳುತ್ತಿದ್ದ. 'ಕುಯ್' ಗುಟ್ಟುವುದು ಸಾಲದೇ ಅದರ ಜೊತೆಗೆ 'ದೋ, ಯಮ್ಮಾ, ಯಮ್ಮಾ ದೋ' ಎಂದು ದಾರಿಯುದ್ದಕ್ಕೂ ಅಳುತ್ತಲೇ ಇದ್ದ. ಅವನ ಅಳುವಿನಲ್ಲೂ ಹುಚ್ಚನುಮಿಗೆ ಗಂಡ ಬಂದೂಕ್‌ಮುನಿಯು ರಾತ್ರಿಯೆಲ್ಲ ತೋಟದ ಕಾವಲು ಕಾಯ್ದು, ಬೆಳಿಗ್ಗೆ ಮೊಲ, ಕಾಡುಬೆಕ್ಕು, ಗೊರವಾಂಕ –ಇವೇ ಮೊದಲಾದ ಯಾವುದಾದ ರೊಂದು ಬೇಟೆಯನ್ನು ದಿನವೂ ತರು ತ್ತಿದ್ದುದು, ಹಾಗೇ ತಂದವನು ಆಗತಾನೇ ಹುಟ್ಟಿದ್ದ ಸಾಮಂತಿಯ ಕಣ್ಣಿಗೆ ದಿನವೂ ಟಾರ್ಚ್ ಬಿಟ್ಟು 'ನೋಡ್ ಮಗ್ಳೆ ಎಂಗದೆ ನನ್ ಬ್ಯಾಟೆ' ಎಂದು ಮಗಳ ಕೆಣ್ಣು ಕಳೆದದ್ದು, ಆ ನಂತರದ ಕೆಲವರ್ಷಗಳಲ್ಲೇ ಅವನೂ ಯಾವುದೋ ದೆವ್ವವೂ ಪಿಶಾ ಚಿಯೋ ಬಡಿದು ತಿಂಗಳುಗಟ್ಟಲೇ 'ದೇವರು-ದಿಂಡಿರು' ಎಂದು ಅಲೆದು, ಅಲೆದು ಸಾಕಾಗಿ, ಕೊನೆಗೆ ಕೈಬಿಟ್ಟ ಕೆಲವೇ ದಿನಕ್ಕೆ ತೀರಿಕೊಂಡಿದ್ದು, ಅದರ ಹಿಂದೆಯೇ ಮಗಳು ಸಾಮಂತಿ ಋತುಮತಿಯಾದರೂ ಅವಳ ದೃಷ್ಟಿಹೀನತೆಗೆ ಹೆದರಿ ಯಾರೊಬ್ಬ ಗಂಡೂ ಒಪ್ಪದೇ ಮುಟ್ಟುನಿಂತ ವರ್ಷಕ್ಕೇ, ಸಕ್ಕರೆ ಕಾಯಿಲೆ ಹತ್ತಿ ಹೆಣಗುತ್ತಿದ್ದದ್ದು, ತಿಂಗಳ ಹಿಂದೆ ದಾರಿಯಲ್ಲಿ ಬಿದ್ದಿದ್ದ ಮೊಳೆ ತುಳಿದು ಕೀವುತುಂಬಿದ್ದೇ ನೆಪ ಮೊನ್ನೆ ಡಾಕ್ಟರ್ 'ಹೀಗೆ ಬಿಟ್ರೆ ಇನ್‌ಫೆಕ್ಷನ್ ಇಡೀ ದೇಹಕ್ಕೇ ಹಬ್ಬಿ ಪ್ರಾಣಾನೇ ತೆಗೆದು ಬಿಡುತ್ತೇ! ಆದ್ರಿಂದ ಆದಷ್ಟು ಬೇಗ ಕಾಲು ತೆಗೆದರೇನೆ ಒಳ್ಳೇದು' ಎಂದಿದ್ದು, ಆಪರೇಷನ್‌ಗೆ ಹಣ ಹೊಂದಿಸುವುದಕ್ಕೆ ಅಂತ ಟಿಸ್ಸೆಯ ಜಮೀನು ಕೊಂಡು ಕೊಂಡಿದ್ದ ದಲಿತ ಸಂಸದನ ಮನೆಯ ಹತ್ತಿರ ಹೋದದ್ದು, 'ಸಂಸದರು ಲೋಕಸಭೆ ಎಲೆಕ್ಷನ್‌ನಲ್ಲಿ ಬಿಸಿ ಇದ್ದಾರೆ ಇನ್ನೊಂದು ತಿಂಗಳು ಅವರನ್ನು ನೋಡೋಕೆ ಸಾಧ್ಯವೇ ಇಲ್ಲ' ಎಂದು ಸೆಕ್ಯುರಿಟಿ ಗಾರ್ಡ್ ಗದರಿ ಕಳುಹಿಸಿದ್ದು – ಹೀಗೆ ಒಂದೊಂದೂ ತನ್ನ ನಾಶಕ್ಕೆ ಹೊಂಚು ಹಾಕಿದ್ದಂಥ ಬಿಡಿಚಿತ್ರಗಳು ಅವಳ ಕಣ್ಣೀರಿನೊಂದಿಗೆ ಉದುರುತ್ತಿದ್ದರೂ, ಅವೇ ಚಿತ್ರಗಳು ಹೊಸ ಬಣ್ಣ ಲೇಪಿಸಿಕೊಂಡು ಹೊಸದಾಗಿ ಹುಟ್ಟಿದಂತೆ, ಒರೆಸಿಕೊಂಡರೆ ಮತ್ತೆ ಮತ್ತೆ ಕಣ್ಣೀರಿನ ರೂಪದಲ್ಲೇ ಮೂಡಿಬರುತ್ತಿದ್ದವು.


ಊರಿನ ಕೆರೆಯ ಪಕ್ಕದಲ್ಲಿದ್ದ ಆ ಮೈದಾನ ಕೇವಲ ಐದಾರು ವರ್ಷಗಳಿಂದ ಅಭಿವೃದ್ಧಿ ಕಂಡು ಬಡಾವಣೆಯಾಗಿ ರೂಪುಗೊಂಡಿತ್ತು, ಇನ್ನೂರುಮುನ್ನೂರು ನಿವೇಶನಗಳಿದ್ದರೂ, ಅಲ್ಲಲ್ಲಿ ಹೇರಳವಾಗಿದ್ದ ಮನೆಗಳಿಂದಾಗಿ ದಪ್ಪನಾದ ಡುಬ್ಬುಹೊಟ್ಟೆಯ, ರೋಗಗಳ ಅಂಟಿಸಿಕೊಂಡಿದ್ದ ಮತ್ತು ಶೋಕಿ ಜೀವಗಳ ಮುಂಜಾನೆ ಮತ್ತು ಸಂಜೆಯ ಜಾಗಿಂಗ್‌ಗಾಗಿ ರೂಪುಗೊಂಡ ಜಾಗಿಂಗ್ ಟ್ರಾಕ್‌ನಂತೆ ಬದಲಾಗಿತ್ತು. ಎಲ್ಲೋ ಕೆಲವರು ಮಾತ್ರವೇ ಜಾಗಿಂಗ್ ಮತ್ತು ವಾಕಿಂಗ್‌ಗಳಿಗೆ ಬಳಸಿದರೆ, ಊರಿನ ಕೆಲ ಪುಢಾರಿಗಳು ಮಾತ್ರ ಸಂಜೆಯಾಗುತ್ತಿದ್ದಂತೆ ಪುಂಢರ ಜೊತೆಗೆ ಸೇರಿಕೊಂಡು ಕುಡಿತ, ಹಾದರಕ್ಕೆ ಬಳಸಿಕೊಳ್ಳುತ್ತಿದ್ದುದು ಗೌಡನ ಕಿವಿಗೆ ಬೀಳುತ್ತಿದ್ದುದು ಸಾಮಾನ್ಯವಾಗಿದ್ದರೂ ನೆಪಕ್ಕೆ ಮಾತ್ರ ಆ ಪುಂಢರನ್ನು ಕರೆಸಿ, 'ನನ್ ಕಿವೀಗ್ ಬೀಳ್‌ದಂಗೆ ಮಾಡ್ಕೊಳ್ರೋ ಅಂತ ಎಷ್ಟ್ ಹೇಳಿದ್ರೂ ಕೇಳಲ್ವಲ್ರೋ ನೀವು' ಎಂದು ನೋವಿನಿಂದ ಮಾತಾಡಿ ಕಳುಹಿಸುತ್ತಿದ್ದ.


ಬೆಳಗ್ಗೆ ಒಂಭತ್ತಾದರೂ ಹತ್ತು-ಹದಿನೈದು ಜನರ ಪರಿವಾರದೊಂದಿಗೆ ಆಟವನ್ನು ಬಹಳ ಶ್ರದ್ಧೆಯಿಂದ ಮುಂದುವರೆಸಿದ್ದ ಗೌಡ, ಅಷ್ಟೇ ಬೆವರನ್ನೂ ಭೂಮಿಗೆ ತಪ್ಪದೇ ಬಸಿಯುತ್ತಿದ್ದ. ರೂಢಿಗತದಂತೆ ಆಗಾಗ ಟರ್ಕಿ ಟವೆಲ್‌ನಿಂದ ಮುಖವನ್ನು, ಕುತ್ತಿಗೆಯನ್ನು, ಕಂಕುಳಸಂಧಿಯನ್ನು ಒರೆಸಿಕೊಂಡು ಅಲ್ಲೇ ನಿಂತಿದ್ದ ಯಾವೊಬ್ಬ ಪರಿವಾರದವನ ಹೆಗಲಿಗೆ ಎಸೆದರೂ ಮರುಗಳಿಗೆಯಲ್ಲಿಯೇ ಮತ್ತೆ ಪಡೆದು ಮತ್ತೊಮ್ಮೆ ಒರೆಸಿಕೊಳ್ಳಲು ತೊಡಗುತ್ತಿದ್ದುದನ್ನು ದೂರದಿಂದಲೇ ನೋಡುತ್ತ ಅವರು ಆಡುತ್ತಿದ್ದ ಮೈದಾನದ ಬಳಿ ಬಂದು, ಅಲ್ಲೇ ಸೀಗೆಮರದ ಬುಡದಲ್ಲಿ ಕುಳಿತ ಹುಚ್ಚನುಮಿಯ ಕರುಳು ಚುರುಕ್ ಎನಿಸಿ 'ಪಾಪ ಗೌಡ್‌ರಿಗೆ ಜಾಸ್ತಿ ವಯಸ್ಸಾಯ್ತು ಅಲ್ವೇನ್ಲ ಸಣ್ಣ' ಎಂದು ಕೇಳಿದಾಗ ಸಣ್‌ರಾಮ 'ಇಲ್ಲ ದೋ, ಗೌಡ್‌ರು ನಂ ಊರ್ ಏಳ್ಗೆ ಮಾಡಕ್ಕೆ ಬಾದಿಬಿದ್ದು ಸುಸ್ತಾಗೌರೆ ಅಷ್ಟೆ' ಎಂದಾಗ ಹುಚ್ಚನುಮಿಗೂ ಆ ಮಾತು ಸರಿ ಎನಿಸಿತು. ಆದರೂ ಅದೇ ಲಹರಿಯಲ್ಲಿ 'ಅದೇನ್ಲ ಅದು ಕೋಳಿ ಪುಕ್ಕನ ಅತ್ಲಿಂದ್ ಇತ್ತ ಇತ್ಲಿಂದ್ ಇತ್ತ ಸುಮ್ನೆ ವಡೀತಾವ್‌ರಲ್ಲಲ ಇದೆಂಥ ಆಟನೋ' ಎಂದು ಹುಚ್ಚನುಮಿ ನಗುವುದಕ್ಕೂ, ಆ ನಗುವಿಗೆ ಇವನೂ ಮುಸಿನಕ್ಕರೂ ಗೌಡ ಆ ಕಡೆಯಿಂದ ಇವರ ನಗುವ ನೋಡುವುದನ್ನು ತನ್ನ ಖಾರದಪುಡಿಯ ಕಣ್ಣಿನಿಂದಲೇ ಕಂಡ ಸಣ್‌ರಾಮ 'ಸುಮ್ಕಿರ್ ದೋ ಗೌಡ್‌ರು ನೋಡ್ತಾವ್‌ರೆ' ಎಂದು ತಾನೂ ಸುಮ್ಮನಾಗಿ ತನ್ನ ತಾಯಿಯನ್ನೂ ಸುಮ್ಮನಾಗಿಸಿದ. ಇದೇನೂ ತಿಳಿಯದೆ ಸುಸ್ತಾಗಿದ್ದ ಗೌಡ ತನ್ನ ಟವೆಲ್‌ಗೆ ಹೆಗಲು ಕೊಡುತ್ತಿದ್ದ ಮುನಿಆಂಜನಿಯ ಕೈಗೆ ರಾಕೆಟ್‌ಅನ್ನೂ ನೀಡಿ, ಅಲ್ಲಿಂದ ಹತ್ತು ಹೆಜ್ಜೆ ದೂರದಲ್ಲಿದ್ದ ಮಾವಿನ ಮರದ ಕೆಳಕ್ಕೆ ಕುರ್ಚಿ ಹಾಕಲು ಹೇಳಿ, ಆ ಕಡೆ ಹೊರಟು ನಿಂತ. ಗೌಡ ಹೊರಟದ್ದ ಕಂಡ ಪರಿವಾರ ಭಳಿ ಬಿಟ್ಟವರಂತೆ ಆಟ ಮುಂದುವರೆದಂತೆ ಅವರ ಗದ್ದಲದ ಜೊತೆಗೆ ಬೆರೆಯಲು ಯತ್ನಿಸುತ್ತಿದ್ದ ತಾಯಿ-ಮಗನ ಪಿಸುಮಾತುಗಳು ನಿಧಾನಕ್ಕೆ ಆ ಗದ್ದಲದೊಂದಿಗೆ ಲೀನವಾಗಿ ಕೇಳಿಸದಾದವು.

> 'ಬಸ್ಟಾಂಡ್ ಅತ್ರ ಇರೋ ವಾಲ್ ಪೈಪು ವಡದೋಗಿತ್ತು. ಆದ್ರು ರಿಪೇರಿ ಮಾಡ್ತಿದ್ದೆ. ಅಲ್ಲೇ ಮಂಜಣ್ಣನ ಅಂಗ್ಡಿ ಅತ್ರ ಯಾರೋ ಕೂಗಾಡಾಂಗೆ ಕೇಳುಸ್ತು. ಯಾರಪ್ಪ ಅದು ಅಂತ ವೋಗಿ ನೋಡುದ್ರೆ, 'ಅದೇ ಆ ಬಡ್ಡಿ ವೆಂಕುಟ್‌ಲಷ್ಮಿ ಇಲ್ವ ಅವ್ವ ಮಂಜಣ್ಣುನ್ ಕೊಳ್‌ಪಟ್ಟಿ ಇಡ್‌ದು ಉಗೀತಿದ್ಲು, ಬಿಡ್ಸನಾ ಅಂತ ನಾನೋದ್ರೆ ನಂಕೂ 'ನಿನ್ ಮಕ್ ನನ್ ಆಟು' ಅಂತ ಉಗ್ಯದಾ. ರೇಗ್‌ತು ನೋಡು, ನಾನೂ ಮುಂದಲೆ ಇಡ್ಕಂಡ್ ಎಲ್ಡ್ ಇಕ್ಕಿ, 'ಶ್ಯಾಟ-ಸಿಂಗ್ರಿ' ಅಂತ ಸರ್ಯಾಗ್ ಉಗ್ದೆ.

ಮರದ ಕೆಳಗೆ ಕುಳಿತ ಗೌಡ ಕೈಸನ್ನೆಯಲ್ಲಿಯೇ ತಾಯಿ-ಮಗನನ್ನು ಹತ್ತಿರಕ್ಕೆ ಕರೆದು 'ಏನಮ್ಮೋ ಅನುಮಕ್ಕ ಏನ್ ಸಮಾಚಾರ' ಎಂದ. 'ಅದೇ ಕಣ್ ಗೌಡೋ ನಮ್ ಸಾಮಂತೀನ ಆಸ್ಪಟ್ರುಗೆ ಹಾಕಿಲ್ವ. ದೇವ್ರೇ, ಸಿವ್‌ನೇ ಅಂತಾ ಗೋಳಾಡ್ತಿದ್ರೆ, ನಂ ಸಣ್ಣುನ್ ಕಣ್‌ಗೆ ಯಾವಳೋ ನನ್ ಸವ್‌ತಿ ಏನೂ ತಿಳಿದ್ ನನ್ ಮಗುನ್ ಕಣ್ಗೆ ಖಾರುದ್ ಪುಡಿ ಎರ್ಚಿ ಚಚ್ಚಿ ಕಳ್ಸವ್ಳೆ ನಾವೇನ್ ಈ ಊರಾಗ್ ಬಾಳಂಗೇ ಇಲ್ವ, ಇಲ್ಲ ಅಂಥ ತಪ್ಪೇನ್ ಮಾಡಿರದು ನಾನು ನನ್ ನನ್ ಮಕ್ಳು? ನೀನೇ ಕಂಡಂಗ್ ಈ ಮಕ್ಳು ಸಾಕಕ್ಕೆ ಎಷ್ಟ್ ಬಾದಿ ಬದ್ದಿದ್ದೀನಿ' ಎಂದು ಕಣ್ಣಿನ ತುಂಬಾ ನೀರು ತುಂಬಿಕೊಂಡು, ಆ ನೀರನ್ನು ಸೆರಗಿನಿಂದ ಒರೆಸಿಕೊಂಡು, ಗೌಡನ ಬಾಯನ್ನೂ, ಅವನು ಗಳಿಗೆ ಗೊಮ್ಮೆ ತನ್ನ ಚೂಪು ನಾಲಿಗೆಯ ಹೊರಚಾಚಿ ತುಟಿಸವರಿಕೊಳ್ಳುತ್ತಿದ್ದುದನ್ನು ನೋಡುತ್ತ ಅಲ್ಲೇ ಕುಕ್ಕರಗಾಲಲ್ಲಿ ಕುಳಿತು, ಸರಿಯಾಗಿ ಕೂರಲಾಗದೆ ಚಕ್ಕಳಮಕ್ಕಳ ಹಾಕಿ ಕೂತುಬಿಟ್ಟಳು. ಬಿಸ್ಲೆರಿ ನೀರನ್ನು ಮುಖಕ್ಕೆ ಹಾಕಿಕೊಂಡ ಗೌಡ, ಎರಡು ಗುಟುಕು ಕುಡಿದು ಸಣ್‌ರಾಮನ ಕಡೆ ನೋಡಿದ್ದೇ ರೇಗುವವನ ದನಿಯಲ್ಲಿ 'ಯಾರೋ ಅದು' ಎಂದ. ಸಣ್‌ರಾಮನೂ ಮೈಮೇಲೆ ದೇವರು ಬಂದತೆ ಒಂದೇ ಉಸಿರಿಗೆ 'ಬಸ್ಟಾಂಡ್ ಅತ್ರ ಇರೋ ವಾಲ್ ಪೈಪು ವಡದೋಗಿತ್ತು, ಅದ್ರು ರಿಪೇರಿ ಮಾಡ್ತಿದ್ದೆ. ಅಲ್ಲೇ ಮಂಜಣ್ಣನ ಅಂಗ್ಡಿ ಅತ್ರ ಯಾರೋ ಕೂಗಾಡಾಂಗೆ ಕೇಳುಸ್ತು. ಯಾರಪ್ಪ ಅದು ಅಂತ ವೋಗಿ ನೋಡುದ್ರೆ, ಅದೇ ಆ ಬಡ್ಡಿ ವೆಂಕುಟ್‌ಲಷ್ಮಿ ಇಲ್ವ ಅವ್ವ ಮಂಜಣ್ಣುನ್ ಕೊಳ್‌ಪಟ್ಟಿ ಇಡ್‌ದು ಉಗೀತಿದ್ಲು, ಬಿಡ್ಸನಾ ಅಂತ ನಾನೋದ್ರೆ, ನಂಕೂ 'ನಿನ್ ಮಕ್ ನನ್ ಆಟು' ಅಂತ ಉಗ್ಯದಾ. ರೇಗ್‌ತು ನೋಡು, ನಾನೂ ಮುಂದಲೆ ಇಡ್ಕಂಡ್ ಎಲ್ಡ್ ಇಕ್ಕಿ 'ಶ್ಯಾಟ-ಸಿಂಗ್ರಿ' ಅಂತ ಸರ್ಯಾಗ್ ಉಗ್ದೆ. ಅಷ್ಟೊತ್ಗೆ ಜನಾ ಸೇರಿ ಬಿಡ್ಸುದ್ರು. ಅದ್ಯಾವ್ ಮಾಯ್‌ದಲ್ಲಿ ಮನೆಗೋದ್ಲೋ ಕಳ್‌ಮುಂಡೆ ಖಾರುದ್‌ಪುಡಿ ತಂದು ನಂ ಕಡೆ ಮಕ್ ಹಾಕ್‌ಬಿಟ್ಳು, ಮಂಜಣ್ಣ ತಪ್ಪುಸ್ಗಂಡ ನಾನೇ ಸಿಕ್ಯಾಕಂಡಿತ್ತು, ಖಾರುದ್‌ಪುಡಿ ಬಿದ್ ತಕ್ಷ ತಲೆ ಗಿರ್ ಅಂದೋಯ್ತು. ಆಮೇಲ್ ಏನಾಯ್ತೋ ಗೊತ್ತಾಗ್ಲಿಲ್ಲ' ಎಂದು ಸಣ್‌ರಾಮ ದುಃಖ ತಾಳ ಲಾರದೆ ಗೋಳೋ ಎಂದು ಅತ್ತದ್ದು ಕಣ್ಣಿಗೆ ತಂಪೆನಿಸಿ ಈಗ ಕಣ್ಣನ್ನು ಚೆನ್ನಾಗಿ ಬಿಟ್ಟ. ಆದಕ್ಕೆ ಪೂರಕವಾಗಿ ಮಾವಿನ ನೆರಳ ಗಾಳಿಯೂ ಕೂಡ ಅವನ ಕಣ್ಣುಗುಡ್ಡೆಗೆ ಬಿದ್ದು ತಣ್ಣಗಾಗಿಸಿತು. 'ಅವ್ರು ಗಲಾಟೆ ಯಾಕಾಡ್ತಿದ್ರು?' ಎಂದು ಗೌಡ ಅಂದದ್ದಕ್ಕೆ, 'ಗೊತ್ತಿಲ್ಲ ಗೌಡೋ, ಕಿತ್ತಾಡ್‌ತಿದ್ರಲ್ಲ ಅಂತ ಬಿಡ್ಸಕೊಗಿತ್ತೇ ತಪ್ಪಾ?' ಎಂದು ಗೌಡನಿಗೇ ಮರುಪ್ರಶ್ನೆ ಎಸೆದ. ಇದಕ್ಕೆ ಗೌಡ ಸ್ವಲ್ಪ ಗಲಿಬಿಲಿಗೊಂಡು ಅಂಗಡಿ ಮಂಜುನಾಥನಿಗೆ ಫೋನ್ ಕರೆ ಮಾಡಲೆಂದು ತನ್ನ ಮೊಬೈಲನ್ನು ತೆಗೆದು ನೋಡಿದರೆ ಆ ಮಂಜುನಾಥನದೇ ಎಂಟತ್ತು ಮಿಸ್ಡ್‌ಕಾಲ್‌ಗಳಿದ್ದವು. ಆ ಮಿಸ್ಸೆಡ್‌ಕಾಲ್‌ಗೇ ರೀಕಾಲ್ ಮಾಡಿದ ಗೌಡ ಮೊಬೈಲನ್ನು ಕಿವಿಗಿಟ್ಟುಕೊಂಡ. ಕೆಲ ಸೆಕೆಂಡ್‌ಗಳ ನಂತರ 'ಏ! ಏನೋ ಅದು!' ಎಂದಾಗ ಕಿವಿನಿಮಿರಿಸಿಕೊಂಡ ಸಣ್‌ರಾಮ ಗೌಡನ ಪಕ್ಕಕ್ಕೆ ಬಂದು ಕಿವಿಯ ಹತ್ತಿರಕ್ಕೆ ಕಿವಿ ಇಡಲು ಹೋದಾಗ ಗೌಡ '...' ಮೌನದಲ್ಲೆ ಉರಿದಂತೆ ಹುಚ್ಚನುಮಿಯ ಕಣ್ಣಿಗೆ ಕಾಣಿಸ ತೊಡಗಿದ. ತಕ್ಷಣವೇ ಸಣ್ ರಾಮನನ್ನು ಗದರಿ ಪಕ್ಕಕ್ಕೆ ಸರಿಯಲು ಹೇಳಿದಳು. 'ಹೌದಾ! ಲಾಸ್ಟ್ ಎಲೆಕ್ಷನ್ ಟೈಮಲ್ಲಿ ಆಗಿದ್ದು ಸಾಕಾಗಿಲ್ವಂತ' ಎಂದು ಮತ್ತೆ ಅದೇ ಉರಿಯಲ್ಲೇ ಉಸಿರಾಡುತ್ತಾ ಕೆಲಕ್ಷಣ ಮೌನದಲ್ಲಿದ್ದು 'ಇವಗಾ ಸಣ್ರಾಮುನ್ನೂ, ಅವರಮ್ಮುನ್ನು ಕಳುಸ್ತೀನಿ. ಆಮೇಲ್ ನಾನೇ ಸ್ಟೇಷನ್ ಎಸ್‌ಐಗೆ ಕಾಲ್ ಮಾಡ್‌ತೀನಿ. ನೀನು ನಮ್‌ಕಡೆ ಹುಡುಗ್ರುನ್ ಒಂದಷ್ಟು, ಅಟ್ಟಿಯೌರ್ನ ಒಂದಷ್ಟು ಜೊತೆ ಹಾಕ್ಕಂಡ್ ಹೋಗು. ನೀನ್ ಸುಮ್‌ನೆ ಕಾರ್‍ನ ಅಷ್ಟೆ. ಸಣ್‌ರಾಮುನ್ನ ತೋರ್‍ಸಿ 'ಜಾತಿನಿಂದನೆ ಆಗಿದೆ' ಅಂತ 'ಅಟ್ರಾಸಿಟಿ' ಕೇಸ್ ಬುಕ್ ಮಾಡ್ಸಿ, ಆ ಎಸ್‌ಐ ಹೆಂಗ್ಸು, ನಂ ಪಕ್ಷಾನೇ ಅಂತೆ... ಸರಿ ನೀನಿಗ ಎಲ್ಲನ್ನೂ ಜೊತೆ ಮಾಡ್‌ಕೊ' ಎಂದದ್ದೇ ಫೋನ್ ಕಾಲ್ ಕಟ್ ಮಾಡಿದ. ಸ್ಟೇಷನ್ ಅಂದದ್ದೇ ಹುಚ್ಚನುಮಿಗೆ ಕೈಕಾಲೆಲ್ಲಾ ನಡುಕ ಹೆಚ್ಚಿ ಮೈ ರೋಮಗಳೂ ನಿಂತು ಚಳಿಯಾದ ಹಾಗೆ ಅನುಭವವಾಯ್ತು. ಅಷ್ಟರಲ್ಲಿ 'ಹಲೋ ನಾನು ಕೃಷ್ಣೇಗೌಡ ಮಾತಾಡ್‌ತಿರೋದು. ಮೇಡಂ ಇಲ್ವ.... ಹ್ಲಾಂ. ಕೊಡಿ. ಕೊಡಿ... ಹಲೋ ಮೇಡಂ ಅವ್ರೆ ಚೆನ್ನಾಗಿದ್ದೀರ?'... 'ಏನಿಲ್ಲ ನಿಮ್ಮಿಂದ ಒಂದ್ ಸಹಾಯ ಆಗ್‌ಬೇಕಿತ್ತು. ಕಡೇವ್ರು ಬರ್‍ತವ್ರೆ ಅವ್ರದೊಂದು ಕೇಸಿತ್ತು. ಯಾರ್ ತರ್ಲೆಮುಂಡೆ ನಮ್‌ಕಡೇಯವನಿಗೆ ಖಾರದ್‌ಪುಡಿ ಎರ್‍ಚಿ ಕಳ್ಸವ್‌ಳೆ, ಅದಕ್ಕೆ ಅಟ್ರಾಸಿಟಿ ಕೇಸ್ ಅಂತ ಸ್ವಲ್ಪ ನಂ ಕಡೇ ಬರೋ ಹಾಗೆ ಎಫ್‌ಐಆರ್ ರೆಡಿಮಾಡಿ ಸಹಾಯ ಮಾಡಿ ಪ್ಲೀಸ್. ಸಂಜೆ ಚೇಂಬರ್‌ಗೆ ಬರ್‍ತೀನಿ' .... 'ಆಯ್ತು ಮೇಡಂ ಹಾಗೇ ಮಾಡಿ, ಹಾಗೇ ಒಂದಿನಾ ನಮ್ ಮನೇ ಕಡೆ ಬಂದಿದ್ರೆ ಚೆನ್ನಾಗಿತ್ತು' ಎಂದು ಮೊಬೈಲ್‌ಅನ್ನ ಜೇಬಿಗಿಳಿಸಿಕೊಂಡ ಗೌಡ 'ನೀವಿಬ್ರು ಈಗ್ಲೆ ಸ್ಟೇಷನ್‌ಗೋಗಿ ಜಾತಿ ಬಗ್ಗೆ ಅವ್ಮಾನ ಮಾಡಿದಳು ಅಂತ ಕೇಸ್ ಹಾಕಿ ಮಿಕ್ಕಿದ್ ನಾನ್ ನೋಡ್ಕಂತೀನಿ, ಮುಖ ತೊಳೀಬೇಡ ಹಂಗೇ ಇರ್‍ಲಿ' ಎಂದು ನಿಟ್ಟುಸಿರು ಬಿಟ್ಟ. ಆ ನಿಟ್ಟುಸಿರು ಆರುವ ಮೊದಲೇ ಹುಚ್ಚನುಮಿ 'ಯಾಕ್ ಗೌಡ್ರೋ ನೀನಿರ್‍ವಾಗ ಟೇಸನ್ ಗೀಸನ್' ಎಂದು ಗುಟ್ಟು ಹೇಳುವ... ಆಶ್ಚರ್ಯ ಸೂಚಕ ಕಣ್ಣುಗಳನ್ನು ಬಿಡುತ್ತಾ ಹೇಳಿದಳು. ಆ ಗೌಡನೂ ಅದೇ ಗುಟ್ಟಿನ ದನಿಯಲ್ಲಿ ಆದರೆ ನಿರ್ಭಾವುಕನಾಗಿ 'ನಿಂಗೇನ್ ಗೊತ್ತು? ಈ ಊರಲ್ಲಿ ಇರೋದು ಇವಾಗ ಎರ್‍ಡ್ ಪಾರ್ಟಿ, ಇಂಥ ಕೇಸ್‌ನೆಲ್ಲಾ ಪೋಲೀಸ್ನೋರ ಕೈಗೊದ್ರೇನೆ ಸರಿ. ಇಲ್ದಿದ್ರೆ ಈ ಕಳ್‌ಜಾತಿ ನನ್‌ಮಕ್ಳು ಮಾತ್ ಕೇಳಲ್ಲ, ಎಲ್ ಗೂಟ ಜಡೀಬೇಕೋ ಅಲ್ಲಿ ಜಡುದ್ರೆ ಸರಿ' ಎಂದು ಎದ್ದು ತನ್ನ ಕಾರ್ ಹತ್ತಿದ. ಕಾರಿನ ಹೊಗೆ ಆರುವ ಮೊದಲೇ ಅಲ್ಲಿಂದ ಮಾಯವಾಗುವವನ ದಾಟಿಯ ವೇಗದಲ್ಲಿ ಚಲಿಸಿಬಿಟ್ಟ ಗೌಡ. ಆ ವೇಳೆಗೆ ಸರಿಯಾಗಿ ಅವನ ಪರಿವಾರವೂ ನೆಟ್ ಬಿಚ್ಚುತ್ತಿತ್ತು.

ಅಲ್ಲಿಂದ ಹಿಂಜರಿಕೆಯಲ್ಲಿಯೇ ಹೊರಟ ತಾಯಿ-ಮಗ ಆಟೋರಿಕ್ಷಾದಲ್ಲಿ ಸ್ಟೇಷನ್ ಹತ್ತಿರ ಇಳಿದಾಗ ಯಾವುದೋ ಸಂಘಟನೆ ಎಸ್‌ಐ ವಿರುದ್ಧ ಘೋಷಣೆ ಕೂಗುತ್ತಾ ಪ್ರತಿಭಟನೆ ನಡೆಸುತ್ತಿತ್ತು, ಇತ್ತ ಹುಚ್ಚನುಮಿಗೆ ಎಲ್ಲಿಲ್ಲದ ನಡುಕ ಶುರುವಾಯಿತು. 'ಪೊಲಿಸ್‌ನೋರ್‌ಗೆ ಧಿಕ್ಕಾರ ಅಂದ್ರೆ ಸುಮ್‌ನೇನಾ! ಇದಕ್ ವರ್ಸದ







• ವಿ.ಆರ್.ಕಾರ್ಪೆಂಟರ್

ಕೆಳ್ಗೆ ಗೌಡ್ರು ತಮ್ಮನ್ನೇ ಎತ್ತಾಕ್ಂಡ್ ವೋಗಿ ಚಚ್ತಿದ್ರಲ್ಲ ಬಾರ್‍ಲಾ ಸಣ್ಣ ವೋಗನಾ' ಎಂದರೆ 'ಇರ್ ದೋ ಏನ್ ಆಗಲ್ಲ ನಮ್ ಗೌಡ್ರೇನ್ ತಮಾಸೆನಾ, ಅವ್ರ್ ಮಾತ್ ಅಂದ್ರೆ ಮಾತ್' ಎಂದು ಖಾರದ ತೀಕ್ಷ್ಣತೆಯನ್ನ ಸಂಪೂರ್ಣವಾಗಿ ಇಳಿಸಿಕೊಂಡಿದ್ದ ಸಣ್ ರಾಮ ಉತ್ಸಾಹ ಮತ್ತು ಖಚಿತತೆಯ ದನಿಯಲ್ಲಿ ಹೇಳಿದಾಗ ಅವನ ತಾಯಿಗೂ ಅದು ಸರಿ ಎನಿಸಿದರೂ ಯಾವಾಗ ಏನೂ ಬೇಕಾದರೂ ಆಗಬಹುದು ಎಂಬ ಭಯದಲ್ಲೇ ಹಿಂದೆ ಉಳಿಯಲು ಪ್ರಯತ್ನಿಸುತ್ತಿದ್ದಳು. ಆ ಪ್ರತಿಭಟನೆ ನಡೆಸುತ್ತಿದ್ದವರಲ್ಲಿ ಯಾರೋ ಅದು ಸ್ಟೇಷನ್‌ನ ಒಳಗೆ ಹೋಗಿ ನೀರು ಕುಡಿದು ಹೊರಬಂದದ್ದನ್ನು ಕಂಡ ಸಣ್‌ರಾಮ 'ಏನಣ್ಣಾ ಅದು' ಎಂದು ಕೇಳಿಯೇ ಬಿಟ್ಟಾಗ ಹುಚ್ಚನುಮಿಯು ಅವನ ಕೈ ಜಿಗುಟ 'ಅಂಗೆಲ್ಲಾ ಕೇಳ್‌ಬಾರ್‍ದು' ಎಂದಳು. ಇವಳ ಮಾತು ಕೇಳಿ ದೊಡ್ಡದಾಗಿ ಆಕಳಿಸುವ ರೀತಿಯಲ್ಲಿ ನಕ್ಕ ಆ ವ್ಯಕ್ತಿಯು ಟಿವಿ ಚಾನೆಲ್ ಬಂದು ಕೇಳುತ್ತಿದೆಯೇನೋ ಎಂಬ ಆತುರದಲ್ಲಿ ಮೈಕ್ ಇಲ್ಲದಿದ್ದರೂ ಕೈಯನ್ನು ಮೇಲಿನಿಂದ ಕೆಳಕ್ಕೆ, ಕೆಳಗಿನಿಂದ ಮೇಲಕ್ಕೆ ಆಡಿಸುತ್ತಲೇ 'ನಮ್ಮೂರ್ ದೇವಸ್ಥಾನುಕ್ಕೆ, ಬಸ್‌ಸ್ಟಾಂಡ್ ಜಗ್ಲಿಕಟ್ಟೆಗೆ ನಮ್ ಜನ ಹತ್ತಂಗಿಲ್ಲ; ಅಂಗಂತಾ ನಾವೇನ್ ವೋಗ್‌ತಿರ್‍ಲಿಲ್ಲ ಅನ್ನಿ ಅಂತದರಲ್ಲಿ ನಮ್ ಅಟ್ಟಿ ನಾಯಿ ಹೋಗಿ ಕಟ್ಟೆ ಮೇಲೆ ಮಲಗಿದ್ದೇ ನೆಪ, ಮೇಲ್ಜಾತಿ ಜನಾ ನಮ್ ಅಟ್ಟಿಗ್ ನುಗ್ಗಿ ಸಿಕ್‌ದೋರ್‌ಗೆಲ್ಲ ಹಿಗ್ಗಾ-ಮುಗ್ಗ ಬಾರ್‍ಸವ್‌ವ್ರೆ, ಇಬ್ರು ಮೂವರಿಗೆ ಜಾಸ್ತಿ ಏಟ್ ಬಿದ್ದು ಆಸ್ಪಟ್ರಲ್ಲಿ ಅವ್ರೆ, ಕಂಪ್ಲೇಂಟ್ ಕೊಡೋಣ ಅಂತ ಬಂದ್ರೆ ಇವ್‌ಲ್ಯಾಕೋ ಕಂಪ್ಲೇಂಟ್ ತಗಂತಿಲ್ಲ!' ಎಂದು ತಾನೂ ಗೇಟಿನ ಹೊರಗೆ ಧಿಕ್ಕಾರ ಕೂಗುತ್ತಿದ್ದವರ ದನಿಗೆ 'ಧಿಕ್ಕಾರ! ಧಿಕ್ಕಾರ' ಎನ್ನುತ್ತಾ ಆ ದನಿಗಳ ಕಡೆ ಹೆಜ್ಜೆಯಿಟ್ಟ. ಹೊರಗಿನ ಬಿಸಿಲು ಒಳಗೂ ಸೇರಿ ಆ ಬಿಸಿಲನ್ನೇ ಎಸ್‌ಐ ಉಸಿರಾಡುತ್ತಿದ್ದಾಳೇನೋ ಅನಿಸಿ, ಒಳಗೆ ಹೋಗಲು ಆಗದೆ, ಅಲ್ಲೇ ನಿಂತ ಆಟೋವನ್ನೂ ಹತ್ತಲಾಗದೇ ಅವರು ಇನ್ನೂ ಅಲ್ಲೇ ನಿಂತಿದ್ದರು.


ಜೀತದಾಳು ಒಬ್ಬನ ಮನೆಯಲ್ಲಿ ರಾತ್ರಿ ಒಂದು ಮಗು ಹುಟ್ಟಿತಂತೆ. ಆತ ಬೆಳಗ್ಗಿಯೇ ಎದ್ದು ವಡೇರರ ಮನೆ ಅಂಗಳದಲ್ಲಿ ನಿಂತಿದ್ದನಂತೆ. ವಡೆಯರು ಮಂತ್ರ ಮೈಲಿಗೆಯಲ್ಲಿ ತುಳಸಿ ಗಿಡಕ್ಕೆ ಪೂಜೆ ಮಾಡುತ್ತಾ ಮಂತ್ರ ಹೇಳುತ್ತಾ ಸುತ್ತುತ್ತಿದ್ದರಂತೆ. ಪೂಜೆ ಮಧ್ಯದಲ್ಲೇ ತಮ್ಮ ಆಳನ್ನು ಕಂಡು ತುಳುವಿನಲ್ಲಿ "ದಾಯೆ ಬತ್ತ?" (ಯಾಕೆ ಬಂದೆ) ಎಂದರಂತೆ. ಅದಕ್ಕೆ ಆಳು "ಎಂಕುಲ್ಲೆನ ಇಲ್ಲದಾಲು ಪೆದ್ದುದೊಲು. ಪುದಾರ್ರು?" (ಮಗು ಹುಟ್ಟಿತು. ಹೆಸರನ್ನು ಏನಂತ ಇಡುವುದು) ಎಂದು ಕೇಳಿದನಂತೆ. ಅದಕ್ಕೆ ವಡೇಯರು "ಪಂಜಿ ಅಂದು ದೀಲಾ" (ಹಂದಿ ಅಂತ ಇಡು) ಅಂದರಂತೆ.



ಮಂಗನ ಬ್ಯಾಟೆ



7



• ಕಲ್ಕುಳಿ ವಿಠ್ಠಲ ಹೆಗ್ಡೆ

...ನ್ನೆ ತಂತಿಯನ್ನು ಗೋವಿಂದನ ಕೈಗಿಟ್ಟು "ಆಮೇಲೆ ...ೀ" ಎಂದು ಹೋದ ಸಿದ್ದ ಸೀದಾ ಮಿಲ್ಟ್ರಿ ...ಲ್‌ಗೆ ಹೋಗಿ ಊಟದ ಪಾರ್ಸಲ್ ಕಟ್ಟಿಸಿಕೊಂಡು, ...ಂ ಅಂಗಡಿಯಿಂದ ಒಂದು ಕ್ವಾಟ್ರು ಖರೀದಿಸಿ ...ಕಡೆ ಹೋಗುವ ಬದಲಾಗಿ ತನ್ನ ಮನೆಯ ಕಡೆಗೆ ...ಟ. ಬೋನಿನಲ್ಲಿಟ್ಟಿದ್ದ ತರಕಾರಿ ಮತ್ತು ...ಣ್ಣುಗಳನ್ನು ತೆಗೆದುಕೊಂಡು ಹೋಗುತ್ತಿದ್ದ ...ಳನ್ನು ಹೆಚ್ಚಿನ ಸಂಖ್ಯೆ ಯಲ್ಲಿ ಹಿಡಿಯುವುದು ...ಎಂಬ ಚಿಂತೆಯಲ್ಲಿದ್ದ ಸಿದ್ದ ತಾನು ಮಠಕ್ಕೆ ವಾಪಸ್ ...ಬೇಕೆಂಬುದನ್ನೇ ಮರೆತಿದ್ದ.

...ತ್ತ ಬೋನಿನಲ್ಲಿ ಸಿಕ್ಕಿಕೊಂಡಿದ್ದ ಗೋವಿಂದ ಅದೆಷ್ಟು ...ಬಂದ ಸಿದ್ದನಿಗಾಗಿ ಕಾಯುತ್ತಿದ್ದನೋ ಅಷ್ಟೇ ...ವಿಂದ ಮನೆಯಲ್ಲಿ ಸಿದ್ದನ ಹೆಂಡತಿ ಕೆಳ ...ಯೂ ಕಾಯುತ್ತಿದ್ದಳು. ಸಿದ್ದ ಹೊಸ ಬಟ್ಟೆ ...ಂಡು ಕೈಯಲ್ಲಿ ಪ್ಲಾಸ್ಟಿಕ್ ಚೀಲ ಹಿಡಿದುಕೊಂಡು ...ರೂ ಅವನ ಬಗ್ಗೆ ಮುನಿಸಿಕೊಂಡಿದ್ದ ಪ್ಯಾಟಿ ...ದರತ್ತಲೂ ಗಮನ ಕೊಡದೆ "ಇಷ್ಟೊತ್ತಿಗೆ ಬಂದ್ರ ...? ನಾಳೆ ಅದ್ಯಾರಿಗೋ ಹುಲಿಯುಗುರು ...ಂತ ಹೇಳಿ ಬಂದೀನಿ" ಎಂದು ರೇಗಿದಳು.

...ೃ ಅವತ್ತು ಆಗಿದ್ದನ್ನೆಲ್ಲ ಆಕೆಗೆ ಹೇಳಲು ಯತ್ನಿಸಿದ. ...ಕಾಟಕೊಡ್ತಿದ್ದ ಆ ಗಾರ್ಡನ್ನ ನೋಡಬೇಕಿತ್ತು ...ಕುರಿ, ಕುರಿ ತರ ನನ್ನ ಮುಂದೆ ನಿಂತಿದ್ದ. ...ದೊಡ್ಡ ಆಫೀಸರ್‌ಗಳೆಲ್ಲ ನನ್ನ ಮಾತ ಕೇಳಿದ್ರು. ...ಎಲಿಟಿಯೋರು ನಂಗೆ ಹಾರ ಹಾಕಿದ್ರು. ವಡೇರೂ ...ರವ ಕೊಟ್ಟು ನನ್ನುಪಕಾರ ಮರೆಯದಿಲ್ಲ ಅಂದ್ರು" ...ಹೇಳಿದ. ಆದರೆ ಪ್ಯಾಟಿಯೊಂದಿಗೆ ಸಿದ್ದ ಅರ್ಧ ...ಭಾಷೆಯಲ್ಲಿ ಇನ್ನರ್ಧ ತನ್ನ ಭಾಷೆಯಲ್ಲಿ ಮಾತಾಡು ...ಕ ಆಕೆಗೆ ಆತ ಹೇಳಿದ್ದು ಏನೇನೂ ಅರ್ಥವಾಗಲಿಲ್ಲ. ...ಬಲಾಗಿ ಆಕೆ ವ್ಯಾಪಾರಕ್ಕೆಂದು ಅಗ್ರಹಾರದ ಕಡೆ ...ನ್ನಾಗ ಭಟ್ಟರ ಹೆಂಡತಿ ಹೇಳಿದ್ದ ವಿಷಯ ಆಕೆಗೆ ...: "ಸ್ವಾಮಿಗಳನ್ನ ಮಂಗ ಕಚ್ಚಿತಂತೆ" ಅಂದಳು. ...ಕ್ಕೆ ಸಿದ್ದ "ಯಾರಿಗೆ ಏನಾದ್ರೂ ನನಗೇನು? ...ಊ ಫ್ಯಾಯ್ದೆ ಆತು" ಅಂದ.

...ಏನ್ ಮಾತು ಅಂತ ಆಡ್ತೀರಿ. ದೇವರಿಗೆ ಮಂಗ ...ಸಾಮಾನ್ಯಾನಾ? ಊರಿಗೇ ಕೇಡಾಗುತ್ತೆ" ಅಂದಳು.

...ಮಂಗಗಳನ್ನು ಹಿಡಿಯೋದನ್ನ ...ಸಾರೆ. ನಾ ಕೇಳಿದಷ್ಟು ದುಡ್ಡು ...ಅಂದಾರೆ" ಅಂದ ಸಿದ್ದ.

...ನೇಬೇಕೇನು ಮಂಗ ಹಿಡಿ ...ಪೊಲೀಸೋರತ್ರ ಬೇಕಾ ...ಕೋವಿ ಅವೆ. ಪೊಲೀ ...ಗೋವಿಂದಯ್ಯನೋರಿಗೂ ...ಎಲ್ಲ ಮಂಗಗಳನ್ನು ಸುಟ್ಟು ...ಅಂದಳು ಪ್ಯಾಟಿ.

...ಪ್ರು ಕಾಡಿನ ಮಂಗಗಳಾ ಬ್ಯಾಟಿ ...ಅವು ಮಠದ ಮಂಗಗಳು. ...ಓಲ್ಲೋಹಂಗಿಲ್ಲ. ಅದ್ಕೆ ನನ್ನ ... ಎಂದ ಸಿದ್ದ.

...ನ್ನ ಮೆಚ್ಚಿಸಲು ಸಿದ್ದ ಹೀಗೆ ಪಟಾಕಿ ಬಿಡುತ್ತಿದ್ದಾನೆ ...ಟಿಗೆ ಅನುಮಾನ ಬಂತು. ಆದರೂ "ಆ ಮಂಗ ...ಮ್ಯಾಲೆ ಸಣ್ಣ ಮರಿ ಕೂರಿಸ್ಕೊಂಡು ಮಂಡಕ್ಕಿ ...ಸ್ಕೊಂಡು ತಿಂತಿತ್ತಂತೆ. ಆಗ ಅದಕ್ಕೆ ಏನನ್ನುಸ್ತೋ..." ...ಪ್ಯಾಟಿ ಮುಂದುವರೆಸಿದಾಗ ಸಿದ್ದನಿಗೆ ಐಡಿಯಾ ...ಅವಳನ್ನು ಹಿಡಿದುಕೊಂಡು ಕುಣಿಯಲಾರಂಭಿಸಿದ. ...ಗೇನು ಹುಚ್ಚುಗಿಚ್ಚು ಹಿಡಿದಿದೆಯೇನು?" ಎಂದು ...ಚ್ಚರಿಗೊಂಡಳು.

...ಗ್ಗೆ ಹುಟ್ಟಿರೋ ಮಂಗಗಳು ಪೇಟೆ ಸೇರಿ ಅದೇನು ...ಲ್ತವೆ ನೋಡು. ಬೋನಿನೊಳಗೆ ತರಕಾರಿ, ...ನ್ನ ಇಟ್ರೆ ಅದನ್ನ ಹೊರಗೆ ತಗಂಡೋಗ್ತವೆ. ನಾಳೆ ...ಳ್ದಂಗೆ ಮಾಡ್ತಿನಿ. ಬೋನಿನಲ್ಲಿ ಮಂಡಕ್ಕಿ ಪುರಿ ...ಅದನ್ನು ಬಾಚಕಳ್ಳಕ್ಕೆ ಮಂಗಗಳಿಗೆ ಬರೋದಿಲ್ಲ. ...ಗೆ ಮುಷ್ಟಿ ಕಟ್ಟಿದ್ರೆ ಬಿಚ್ಚಕ್ಕೆ ಬರಲ್ಲ. ಹೆಬ್ಬೆರಳು ...ಡಿಯಕ್ಕೆ ಬರಲ್ಲ, ನಾಳೆ ಅವಕ್ಕೆ ಮಾಡ್ತೀನಿ ನೋಡು" ...ದ್ದ ಸಂತೋಷಗೊಂಡ.

* * * * * *

... ಹೊಸ ಹೆಂಡತಿ ಕೆಳ ಪ್ಯಾಟಿ ಹಕ್ಕಿ ಪಿಕ್ಕಿ ...ರುದವಳು. ಕಾಡನ್ನೇ ನಂಬಿ ಬದುಕಿದ್ದ ಈ ...ಕ್ಕಿ ಅರಣ್ಯ ಕಾನೂನುಗಳು ಬಂದಮೇಲೆ ಊರು, ...ವುದೂ ಇಲ್ಲದಂತಾಯಿತು. ಆಮೇಲೆ ಅವರು ...ರಿಗೆ ಪ್ರಯಾಣ ಮಾಡುತ್ತಾ ಬದುಕುವಂತಾದದ್ದು ...ಾಸ.

...ಕ್ಕಿಯವರಲ್ಲಿ ಹೆಂಗಸರದ್ದೇ ಕಾರುಬಾರು. ತಮ್ಮ ... ಮಹಾ ಬೇಜವಾಬ್ದಾರಿಗಳು, ಕುಡುಕರು, ...ಗಳು, ವ್ಯಾಪಾರದಲ್ಲಿ ಹೆಂಗಸರಷ್ಟು ಚುರುಕಲ್ಲ ...ಆ ಹೆಂಗಸರ ಪಾಡ. ಅದಕ್ಕೇ ಇರಬೇಕು ಆ ...ಬದಲ್ಲಿ ಎಲ್ಲದರಲ್ಲೂ ಹೆಂಗಸರು ಮುಂದೆ, ...ಅವರ ಸಹಚರರಂತೆ ಸ್ವಲ್ಪ ಹಿಂದೆ.

...ಕ್ಕಿಯವರದ್ದು ದಿನಕ್ಕೊಂದು ಊರು. ಆದ್ದರಿಂದ ...ರುಗಳೇ ಇರುವ ಊರು, ರಾಜ್ಯ ಇಲ್ಲವೆಂದೇ ಹೇಳಬಹುದು.

ಊರಿನಿಂದ ಊರಿಗೆ ತಮ್ಮ ಕ್ಯಾಂಪನ್ನು ಬದಲಾಯಿಸು ತ್ತಲೇ ಅವರು ತಮ್ಮ ಮದುವೆ, ಸಂಬಂಧ, ಸಂಸಾರ ಎಲ್ಲವನ್ನೂ ಸಾಗಿಸುತ್ತಾರೆ. ಅಂದ ಹಾಗೆ ಅವರ ಈ ಸಂಚಾರಿ ಬದುಕು ಅವರ ಹೆಸರುಗಳಲ್ಲೂ ವ್ಯಕ್ತವಾಗುತ್ತದೆ. ಪ್ಯಾಟಿಯ ತಾಯಿಯ ಹೆಸರು ಲಿಂಗನಮಕ್ಕಿ. ಯಾಕೆಂದರೆ ಅವಳು ಲಿಂಗನಮಕ್ಕಿ ಡ್ಯಾಂ ಹತ್ತಿರ ಹುಟ್ಟಿದ್ದಳಂತೆ. ಹಾಗೆಯೇ ಪ್ಯಾಟಿಯ ಅಣ್ಣನ ಹೆಸರು ಎಂ.ಜಿ.ಆರ್. ಅದಕ್ಕೆ ಕಾರಣ ತಮಿಳು ನಾಡಿನಲ್ಲಿ ಇವರು ಕ್ಯಾಂಪ್ ಹೂಡಿದ್ದಾಗ ಎಂ.ಜಿ.ಆರ್ ಸಮ್ಮೇಳನ ನಡೆಯುತ್ತಿದ್ದ ಜಾಗದ ಪಕ್ಕದ ಬಿಡಾರದಲ್ಲಿ ಆತ ಜನಿಸಿದ್ದು. ಅವಳ ಮಾವನ ಹೆಸರು ಬಸ್‌ಸ್ಟ್ಯಾಂಡ್. ಆತ ಒಂದು ಬಸ್ ಸ್ಟ್ಯಾಂಡಿನಲ್ಲಿ ಹುಟ್ಟಿದ್ದ. ಪ್ಯಾಟಿಯ ಮೊದಲನೆ ಗಂಡನ ಹೆಸರು ಲಾಯರ್. ಅವನು ಯಾವುದೋ ನಗರದ ಕೋರ್ಟ್ ಹತ್ತಿರ ಹುಟ್ಟಿದ್ದನಂತೆ. ಹೀಗೆ ಇವರಲ್ಲಿ ಒಬ್ಬೊಬ್ಬರದ್ದೂ ಒಂದೊಂದು ಹೆಸರು.

ಈ ಹೆಸರಿಡುವ ಮರ್ಮವನ್ನು ನೋಡಿ. ಬ್ರಾಹ್ಮಣರು ಒಬ್ಬೊಬ್ಬರಿಗೆ ಮೂರು ಮೂರು ಹೆಸರುಗಳನ್ನು ಇಟ್ಟುಕೊಳ್ಳುತ್ತಾರೆ. ಆದರೆ ಬೇರೆಯವರು ಒಂದು ಹೆಸರನ್ನು ಮಾತ್ರ ಇಟ್ಟುಕೊಳ್ಳಬೇಕೆಂದು ಬಯಸುತ್ತಾರೆ. ಅಕಸ್ಮಾತ್ ಇತರರು ಎರಡೆರಡು ಹೆಸರು ಗಳನ್ನು ಇಟ್ಟುಕೊಂಡರೆ ಅದನ್ನು ಮುರಿದು ಒಂದೇ ಹೆಸರನ್ನು ಉಪಯೋಗಿಸಿ ತುಚ್ಛವಾಗಿ ಕಾಣುತ್ತಾರೆ. ಬ್ರಾಹ್ಮಣರಂತೆ ಒಂದಕ್ಕಿಂತ ಹೆಚ್ಚು ಹೆಸರನ್ನು ಇಟ್ಟುಕೊಳ್ಳುವ ವಿಶ್ವಕರ್ಮರನ್ನು ಕಂಡರೆ ಬ್ರಾಹ್ಮಣರಿಗೆ ಆಗುವುದಿಲ್ಲ. ಅದಕ್ಕೇ ನಮ್ಮ ರಾಘವೇಂದ್ರ ಆಚಾರ್ಯರನ್ನು 'ರಾಘು' ಎಂದು ಮಾತ್ರ ಕರೆದು ಅವಮಾನಿಸುತ್ತಿದ್ದರು. ಅವರು ಆಚಾರ್ಯನನ್ನು 'ರಾಘು' ಎಂದು ಕರೆದಾಗಲೆಲ್ಲ ಅವರಿಗೆ ಸುತ್ತಿಗೇಲಿ ಕುಟ್ಟಬೇಕು ಎಂದು ಆಚಾರ್ಯನಿಗೆ ಅನ್ನಿಸುತ್ತಿತ್ತು.

* * * * * *

ಭಾಷೆ ಕಲಿತ ಮನುಷ್ಯ ತನ್ನವರನ್ನು, ವಿವಿಧ ವಸ್ತುಗಳನ್ನು ಭಾಷೆಯ ಮೂಲಕ ಗುರುತಿಸುತ್ತಾನೆ. ಅದರಲ್ಲೂ ತನ್ನವರಿಗೆ ಇಡುವ ಹೆಸರು 'ಶ್ರೇಷ್ಠ'ರಾದ ಬ್ರಾಹ್ಮಣರ ಬಾಯಿಂದ ಬಂದರೆ ಉತ್ತಮ ಎಂದು ಕೆಲ ಕುಲೀನ ಜನ ಭಾವಿಸುತ್ತಾರೆ. ಹಾಗಾಗಿ ತಮಗೆ ಮಗು ಹುಟ್ಟಿದ ಗಳಿಗೆಯನ್ನು ಬ್ರಾಹ್ಮಣರಿಗೆ ಹೇಳಿ ಅವರಿಂದ ಮಗುವಿನ ನಕ್ಷತ್ರವನ್ನು ಗುರುತಿಸಿ ಅದನ್ನಾಧರಿಸಿಯೇ ಅವರು ಸೂಚಿಸಿದ ಹೆಸರನ್ನೇ ತಮ್ಮ ಮಕ್ಕಳಿಗೆ ಇಟ್ಟು, ಬ್ರಾಹ್ಮಣರಿಂದ ತಮ್ಮ ಮಕ್ಕಳ ಜಾತಕವನ್ನೂ ಬರೆಸುತ್ತಾರೆ. ಅಕಸ್ಮಾತ್ ಅವರಿಗೆ ಬ್ರಾಹ್ಮಣನು ಸೂಚಿಸಿದ ಹೆಸರು ಇಷ್ಟವಾಗದಿದ್ದರೆ ತಮಗೆ ಬೇಕಾದ ಹೆಸರನ್ನಿಟ್ಟು ಅದನ್ನು 'ಕರೆಯೋ ಹೆಸರು' ಎಂದು ಭಾವಿಸುತ್ತಾರೆ.

ಆದರೆ ಹಲವು ಅವಿದ್ಯಾವಂತ ಮತ್ತು ಮೂಢರು ಬ್ರಾಹ್ಮಣರು ಹೇಳಿದ ಹೆಸರೇ ಪವಿತ್ರ ಎಂದು ನಂಬಿರುತ್ತಾರೆ. ನಮ್ಮೂರಿನ ಘಟ್ಟದ ಕೆಳಗೆ ದಕ್ಷಿಣ ಕನ್ನಡ ಜಿಲ್ಲೆಯಿಂದ ಬಂದ ಕಾರಜಿ ಎಂಬ ತುಳು ಮಾತನಾಡುವ ಬುಡಕಟ್ಟಿನವರು ಇದ್ದಾರೆ. ಅವರ ಹೆಸರುಗಳೆಲ್ಲ ವಿಚಿತ್ರ ಮತ್ತು ಅವಮಾನಕರ. ಇದ್ಯಾಕೆ ಹೀಗೆ ಎಂದು ಅವರನ್ನು ಕೇಳಿದಾಗ ಗೊತ್ತಾಗಿದ್ದೇನೆಂದರೆ ಅವರೆಲ್ಲ ಬ್ರಾಹ್ಮಣರ ಜೀತದಾಳುಗಳಾಗಿದ್ದರು. ಅವರ ಮನೆಗಳಲ್ಲಿ ಯಾರಾದರೂ ಹೆತ್ತರೆ ಕೂಡಲೇ ವಡೆಯರಿಗೆ ಹೇಳಬೇಕು. ವಡೇಯರು ಸೂಚಿಸಿದ ಹೆಸರನ್ನೇ ತಮ್ಮ ಮಕ್ಕಳಿಗೆ ಇಡಬೇಕು. ಏಕೆಂದರೆ ಅವರು ಹಡೆದ ಮಕ್ಕಳೂ ವಡೇರರ ಜೀತದಾಳುಗಳಾಗುವವರು.

ಒಮ್ಮೆ ಹೀಗಾಯಿತಂತೆ: ಜೀತದಾಳು ಒಬ್ಬನ ಮನೆಯಲ್ಲಿ ರಾತ್ರಿ ಒಂದು ಮಗು ಹುಟ್ಟಿತಂತೆ. ಆತ ಬೆಳಗ್ಗೆಯೇ ಎದ್ದು ವಡೇರರ ಮನೆ ಅಂಗಳದಲ್ಲಿ ನಿಂತಿದ್ದನಂತೆ. ವಡೆಯರು ಮಂತ್ರ ಮೈಲಿಗೆಯಲ್ಲಿ ತುಳಸಿ ಗಿಡಕ್ಕೆ ಪೂಜೆ ಮಾಡುತ್ತಾ ಮಂತ್ರ ಹೇಳುತ್ತಾ ಸುತ್ತುತ್ತಿದ್ದರಂತೆ. ಪೂಜೆ ಮಧ್ಯದಲ್ಲೇ ತಮ್ಮ ಆಳನ್ನು ಕಂಡು ತುಳುವಿನಲ್ಲಿ "ದಾಯೆ ಬತ್ತ?" (ಯಾಕೆ ಬಂದೆ) ಎಂದರಂತೆ. ಅದಕ್ಕೆ ಆಳು "ಎಂಕುಲ್ಲೆನ ಇಲ್ಲದಾಲು ಪೆದ್ದುದೊಲು. ಪುದಾರ್ರು?" (ಮಗು ಹುಟ್ಟಿತು. ಹೆಸರನ್ನು ಏನಂತ ಇಡುವುದು) ಎಂದು ಕೇಳಿದನಂತೆ. ಅದಕ್ಕೆ ವಡೇಯರು "ಪಂಜಿ ಅಂದು ದೀಲಾ" (ಹಂದಿ ಅಂತ ಇಡು) ಅಂದರಂತೆ.

ನಾನು ಕಂಡಂತೆ ಘಟ್ಟದ ಕೆಳಗಿನ ಆ ಕಾರಾಜಿಯವರ ಹೆಸರುಗಳು ಗುಲಾಮ, ಹಂದಿ, ನಾಯಿ, ಬೇವರ್ಸಿ ಇತ್ಯಾದಿ ಆಗಿದ್ದವು. ಬ್ರಾಹ್ಮಣರು ಸೂಚಿಸಿದ್ದ ಹೆಸರನ್ನೇ ಇವರು ತಮ್ಮ ಮಕ್ಕಳಿಗೆ ಇಡುತ್ತಿದ್ದರಿಂದ ಅವರಲ್ಲಿ ಬೈಗುಳದ, ಕೆಳ ದರ್ಜೆಯ ಹೆಸರುಗಳಿಗೆ ಕೊರತೆಯೇ ಇರಲಿಲ್ಲ. ಅಂದಹಾಗೆ, ಇವರಲ್ಲಿ ಯಾರಿಗೂ ರಾಜರಂತೆ ಇಮ್ಮಡಿ, ಮುಮ್ಮಡಿ, ನಾಲ್ಮಡಿ ತರಹದ ಸೀರಿಯಲ್ ಹೆಸರುಗಳ ಅಗತ್ಯವೇ ಇಲ್ಲ.

****

ಸಿದ್ದನ ಎರಡನೇ ಹೆಂಡತಿಯ ಹೆಸರು ಕೆಳ ಪ್ಯಾಟಿ ಆದರೂ ಆತ ಅವಳನ್ನು ಪ್ಯಾಟಿ ಎಂದೆ ಕರೆಯುತ್ತಿದ್ದ. ಪ್ಯಾಟಿ ಕಸ್ತೂರಿ ಮಾತ್ರೆ, ಕಸ್ತೂರಿ ಗುರೋಜು, ಹುಲಿ ಉಗುರು, ನರಿ ಕೊಂಬು, ನಾಗಮಣಿ, ನವಿಲೆಣ್ಣೆ, ಪುಣೆಗಿನ ಬೆಕ್ಕಿನ ಬೊಟ್ಟು... ಇಂತಹ ಅಮೂಲ್ಯವೂ, ಅಪರೂಪವೂ ಆದ ವಸ್ತುಗಳನ್ನು ಮಾರಾಟ ಮಾಡುತ್ತಿದ್ದಳು. ಇವಳ ಬಳಿ ಇದ್ದ ಸರಕುಗಳು ಒಂದೋ ಸೌಂದರ್ಯ ವರ್ಧಕಗಳು ಅಥವಾ ನವ ಯೌವನದೊಂದಿಗೆ ಸಂಪತ್ತು ಸಮೃದ್ಧಿ ಮತ್ತು ಸುಂದರಿಯರನ್ನು ಒಲಿಸಿಕೊಳ್ಳುವ ಅಮೂಲ್ಯ ಸಾಮಗ್ರಿಗಳಾಗಿದ್ದವು.

ಪ್ಯಾಟಿ ಮಾರುತ್ತಿದ್ದ ಕಸ್ತೂರಿ ಮಾತ್ರೆಯ ಕತೆಯಂತೂ ರೋಚಕವಾಗಿದೆ. ಹಿಮಾಲಯ ಪರ್ವತದಲ್ಲಿ ಕಸ್ತೂರಿ ಎಂಬ ಒಂದು ಪ್ರಾಣಿ ಇದೆಯಂತೆ. ಅದನ್ನು ಓಡಿಸಿಕೊಂಡು ಹೋದರೆ ಅದರ ಬೆವರಹನಿ ಮಾತ್ರೆಯಾಗಿ ಉದುರುತ್ತದಂತೆ. ಆ ಪ್ರಾಣಿ ಯನ್ನು ಹಿಡಿದರೆ ಅದರ ಮೈಮೇಲೆಲ್ಲ ಕಸ್ತೂರಿ ದೊರೆ ಯುತ್ತದಂತೆ. ಅದರ ಬೀಜ ಪುಣೆಗಿನ ಬೆಕ್ಕಿನ ಬೊಟ್ಟು (ಬೀಜ) ತರಹವೇ ಇದ್ದು ಅದನ್ನು ಕೊಯ್ದು ಒಣಗಿಸಿ ಮಾರುತ್ತಾರೆ.

ನರಿ ಕೊಂಬಿನ ಕತೆಯೂ ಕುತೂಹಲಕರವಾಗಿದೆ. ನಾಯಿ ಜಾತಿಗೆ ಸೇರಿದ ನರಿಗೆ ಕೊಂಬು ಇರುವುದಿಲ್ಲ. ಆದರೆ ಅದ್ಯಾವುದೋ ಬೆಳದಿಂಗಳಲ್ಲಿ ನರಿಗಳ ಗುಂಪಿನಲ್ಲಿರುವ ಒಂದು ಗಂಡು ನರಿಗೆ ಕೊಂಬು ಮೂಡಿ ಅದಕ್ಕೆ ಹುಚ್ಚು ಹಿಡಿಯುತ್ತದಂತೆ. ಆಗ ಅದು ಗುಂಪಿನಿಂದ ತಪ್ಪಿಸಿಕೊಂಡು ಹುಚ್ಚಾಪಟ್ಟೆ ಕೂಗುತ್ತಾ ಓಡುತ್ತದಂತೆ. ಆಗ ಹಕ್ಕಿಪಿಕ್ಕಿಯವರು ಅದನ್ನು ಹಿಡಿದು ಸಾಯಿಸಿ ಕ್ಷಣಾರ್ಧದಲ್ಲೇ ಕಿತ್ತರೆ ನರಿ ಕೊಂಬು ಸಿಗುತ್ತದಂತೆ.

ನಾಗಮಣಿಯದ್ದೂ ಒಂದು ಕತೆ ಇದೆ. ನಾಗರಹಾವಿನಲ್ಲಿ ದೇವನಾಗರ ಅಂತ ಒಂದು ಹಾವಿರುತ್ತದಂತೆ. ಆ ಹಾವು ಹಗಲು ಹೊತ್ತು ಯಾರ ಕಣ್ಣಿಗೂ ಬೀಳುವುದಿಲ್ಲವಂತೆ. ಯಾವುದೋ ಒಂದು ಅಮಾವಾಸ್ಯೆಯ ರಾತ್ರಿ ಹೊಳೆಯುವ ಮಣಿಯೊಂದಿಗೆ ಅದು ಹೊರಗೆ ಬರುತ್ತಂತೆ. ಆ ನಾಗ ಮಣಿಯನ್ನು ಒಂದು ಕಡೆ ಇಟ್ಟುಕೊಂಡು ಅದರ ಪ್ರಜ್ವಲ ಬೆಳಕಿನಲ್ಲಿ ಆಹಾರಕ್ಕಾಗಿ ಹುಡುಕುತ್ತಂತೆ. ಆಗ ಇವರು ಹೋಗಿ ಆ ಮಣಿಯನ್ನು ಎತ್ತಿಕೊಂಡು ಬರುತ್ತಾರಂತೆ. ಈ ನಾಗಮಣಿ ಅತ್ಯಂತ ಬೆಲೆಬಾಳುವ, ಅಪರೂಪದ, ದುಬಾರಿ ವಸ್ತು ಎಂದು ಹಕ್ಕಿಪಿಕ್ಕಿಯವರು ಹೇಳುತ್ತಾರೆ.

ಹೊಟ್ಟೆಪಾಡಿಗಾಗಿ ಕಾಡು ಬಿಟ್ಟು ನಾಡು ಸೇರಿದ ಹಕ್ಕಿಪಿಕ್ಕಿಯವರು ಅದೆಂತಹದ್ದೋ ಸಾಮಗ್ರಿಗಳನ್ನು ಉಪಯೋಗಿಸಿ ಕೃತಕವಾಗಿ ಆದರೆ ಅಷ್ಟೇ ನಾಜೂಕಾಗಿ ವಿವಿಧ ವಸ್ತುಗಳನ್ನು ತಯಾರಿಸಿ, ಅವುಗಳೊಂದಿಗೆ ರೋಚಕ ಕತೆಗಳನ್ನು ಹೆಣೆದು, ತಮ್ಮ ಈ ವಸ್ತುಗಳು ಅಮೋಘ, ಅದ್ಭುತ ಎಂದೆಲ್ಲ ಹೇಳಿ ದುರಾಶೆಯ ಪೇಟೆಯ ಬುದ್ಧಿವಂತರಿಗೆ ಮಾರುವುದರಲ್ಲಿ ಎತ್ತಿದ ಕೈಗಳಾಗಿದ್ದಾರೆ.

* * * * * *

ಹಕ್ಕಿಪಿಕ್ಕಿಯವರು ಮಾರುತ್ತಿದ್ದ ಇನ್ನೊಂದು ಮುಖ್ಯ ವಸ್ತು ಶಾರ್ದೂಲ ಚೌರಿ. ಅದಕ್ಕೂ ಒಂದು ಕತೆ ಕಟ್ಟಿದ್ದಾರೆ. ಹಿಮಾಲಯದಲ್ಲಿ ಶಾರ್ದೂಲ ಅಂತ ಮೈತುಂಬ ಜೋಲಾಡುವ, ನೆಲದವರೆಗೆ ನೇತಾಡುವ ಕೂದಲಿನ ಪ್ರಾಣಿಯೊಂದು ಇದೆಯಂತೆ. ಅದನ್ನು ಹಿಡಿದರೆ ಕಡಿಮೆಯೆಂದರೂ ಐವತ್ತು ಚೌಲಿಗಳಿಗಾಗುವಷ್ಟು ಕೂದಲು ಸಿಗುತ್ತದಂತೆ.

ಕಳೆದ ಅರವತ್ತನೆ ದಶಕ ಉದ್ದ ಜಡೆಯ 'ನಾಗವೇಣಿ'ಯರ ಮತ್ತು ಬಿ.ವಿ.ರಾಧಾ ತರಹದ ಹೀರೋಯಿನ್‌ರಂತೆ ದೊಡ್ಡದೊಡ್ಡ ತುರುಬನ್ನು ಇಷ್ಟಪಡುತ್ತಿದ್ದ ಮಹಿಳೆಯರ ಕಾಲವಾಗಿತ್ತು. ಈಗಿನಂತೆ ಮಹಿಳೆಯರು ಭಂಡಾರಿಗಳ ಸಲೂನಿಗೆ ಹೋಗುವ ಪರಿಪಾಠ ಆಗಿರಲಿಲ್ಲ. ಆಗ ಮೋಟು ಜಡೆ, ಗಿಡ್ಡ ಅಥವಾ ಕಡಿಮೆ ಕೂದಲು ಹೊಂದಿದ್ದ ಮಹಿಳೆಯರು ತುಂಬಾ ಕಷ್ಟ ಅನುಭವಿಸುತ್ತಿದ್ದರು. ಆದ್ದರಿಂದ ಬಹಳಷ್ಟು ಮಹಿಳೆ ಯರು ಸೀರೆ, ರವಿಕೆಗಳಲ್ಲದೆ ಒಂದೆರಡು ಚೌಲಿಗಳನ್ನೂ ಕಡ್ಡಾಯವಾಗಿ ಇಟ್ಟುಕೊಂಡಿರುತ್ತಿದ್ದರು. ಅವರು ಈ ಚೌಲಿಗಳನ್ನು ಹಕ್ಕಿಪಿಕ್ಕಿಯವರಿಂದ ಕೊಂಡುಕೊಳ್ಳುತ್ತಿದ್ದರು.

ಈಗ ಕಾಲ ಬದಲಾಗಿದ್ದು ಉದ್ದ ಜಡೆಯ, ಉದ್ದ ಕೂದಲಿನವರ ಕಾಲವಲ್ಲ ಇದು. ಈಗ ಚೌಲಿಗಳನ್ನು ಕೃತಕವಾಗಿ ತಯಾರಿಸುತ್ತಿದ್ದರೂ ಅವುಗಳಿಗೆ ಬೇಡಿಕೆಯೇ ಇಲ್ಲದಂತಾಗಿದೆ.

ನನ್ನ ಅಮ್ಮನ ಕಾಲದಲ್ಲಿ ಹಕ್ಕಿ ಪಿಕ್ಕಿಯವರು ಮಾರುತ್ತಿದ್ದ ವಸ್ತುಗಳನ್ನೆಲ್ಲ ಈಗಿನಂತೆ ಕೃತಕವಾಗಿ ತಯಾರಿಸುತ್ತಿರಲಿಲ್ಲ. ಒಮ್ಮೆ ಐದಾರು ಚೌಲಿ ತಂದ ಹೆಂಗಸೊಬ್ಬಳ ಬಳಿ ನಿಜವಾದ ಕೂದಲಿನ ಚೌಲಿ ಯೊಂದಿತ್ತು. ಅದು ಹೇಗೆ ಬಂತೆಂದು ನನ್ನಮ್ಮ ವಿಚಾರಿಸಿದರು.

ಆಗಿನ ಕಾಲದಲ್ಲಿ ಬ್ರಾಹ್ಮಣ ಪುರುಷನೊಬ್ಬ ತೀರಿಕೊಂಡರೆ ಆತನ ಹೆಂಡತಿಯ ತಲೆ ಬೋಳಿಸುತ್ತಿದ್ದರು. ಅಕಸ್ಮಾತ್ ಬ್ರಾಹ್ಮಣ ವಿಧವೆ ತನ್ನ ತಲೆ ಬೋಳಿಸಿಕೊಳ್ಳದೆ ಕೂದಲಿಟ್ಟುಕೊಂಡಿದ್ದರೆ ಅವಳನ್ನು 'ಸಕೇಶಿ' ಎಂದು ಮೂದಲಿಸುತ್ತಿದ್ದರು. ಇಂತಹ ಸಕೇಶಿಯರಿಗೆ ಜಗದ್ಗುರುಗಳು ತೀರ್ಥ ಕೊಡುತ್ತಿರಲಿಲ್ಲ. ಊಟದ ಮನೆಯಲ್ಲಿ (ಮದುವೆ, ಉಪನಯನ, ಇತ್ಯಾದಿ ಸಮಾರಂಭಗಳಲ್ಲಿ) ಇವರಿಗೆ ಅಡ್ಡ ಪಂಕ್ತಿ ಹಾಕಿ ಅವಮಾನ ಮಾಡುತ್ತಿದ್ದರು. ಅಂತಹವರ ಮುಖ ನೋಡಲು ಸುಮಂಗಳೆಯರು ಯಾರೂ ಬಯಸುತ್ತಿರಲಿಲ್ಲ. ಇಂತಹ ಸಾಮಾಜಿಕ ಮತ್ತು ಮಾನಸಿಕ ಒತ್ತಡಗಳನ್ನು ತಡೆಯಲಾಗದೆ ಸಕೇಶಿಯರು ಮನಸ್ಸಿಲ್ಲದಿದ್ದರೂ ಭಂಡಾರಿಯನ್ನು ಕರೆದು ತಲೆ ಬೋಳಿಸಿಕೊಳ್ಳುತ್ತಿದ್ದರು. ಭಂಡಾರಿಯು ಬೋಳಿಸಿದ ಆ ಉದ್ದ ಕೂದಲನ್ನು ಸಂಭಾವನೆಯೆಂದು ತನ್ನೊಂದಿಗೆ ಇಟ್ಟುಕೊಂಡು ಅದನ್ನು ಹಕ್ಕಿಪಿಕ್ಕಿಯವರಿಗೆ ಮಾರುತ್ತಿದ್ದರು. ಆ ಕೂದಲಿಂದ ಹಕ್ಕಿಪಿಕ್ಕಿಯವರು ಚೌಲಿಯನ್ನು ತಯಾರಿಸಿ ಮೋಟು ಜಡೆಯ ಶ್ರೀಮಂತ ಮಹಿಳೆಯರಿಗೆ ಮಾರು ತ್ತಿದ್ದರು.


ಆಗ ನಮ್ಮೂರಲ್ಲಿ ಉದ್ದ ಕೂದಲಿನ ಸುಂದರ ಯುವ ಬ್ರಾಹ್ಮಣ ಸೊಸೆಯೊಬ್ಬಳು ತನ್ನ ಗಂಡನನ್ನು ಕಳೆದುಕೊಂಡಿದ್ದಳು. ಹಕ್ಕಿಪಿಕ್ಕಿ ಹೆಂಗಸರ ಬಳಿ ಇದ್ದ ನಿಜವಾದ ಉದ್ದ ಕೂದಲಿನ ಚೌಲಿ ಆ ಬ್ರಾಹ್ಮಣರ ಸೊಸೆಯ ಕೂದಲಿನದ್ದು ಎಂದು ನನ್ನಮ್ಮ ಮತ್ತು ಅತ್ತಿಗೆಯರು ಮಾತನಾಡಿಕೊಂಡಿದ್ದು ನನಗಿನ್ನೂ ನೆನಪಿದೆ...

(ಮುಂದುವರೆಯುವುದು)

ಕಾಸು ಕೊಟ್ಟು ಪೊರಕೇಲಿ ಹೊಡೆಸಿಕೊಂಡ

ಯಾವುದಕ್ಕೂ ಕಾಲ ಕೂಡಿ ಬರಬೇಕು. ಅತ್ತೆಗೆ ಒಂದು ಕಾಲ ಆದರೆ ಸೊಸೆಗೂ ಒಂದು ಕಾಲ ಬಂದೇ ಬರುತ್ತದೆ ಎಂಬ ನಂಬಿಕೆ ಇರಬೇಕು. ಸೂಕ್ತ ಸಮಯಕ್ಕಾಗಿ ಕಾಯುವ ವ್ಯವಧಾನ ಇರಬೇಕು. ಆತುರ ಬೀಳಬಾರದು. ಆತುರಗಾರ ಅಳಿಯ ಅತ್ತೆ ಹಿಡಿದುಕೊಂಡ ಅನ್ನುವ ಆಭಾಸ ಆಗಬಾರದು. ಸಮಚಿತ್ತದಿಂದ ಕಾಯುವುದೇ ಬದುಕುವ ಕಲೆಯ ಪ್ರಥಮ ಪಾಠ, ಅದನ್ನು ಸಿದ್ಧಿಸಿಕೊಂಡ ಮಹಾಶಯರ ಪುಣ್ಯ ಚರಿತ್ರೆಯ ಅಧ್ಯಾಯವೊಂದರ ತುಣಕನ್ನು ವಾಚಕ ಮಹಾಶಯರ ಪುಣ್ಯಚರಿತ್ರೆಯ ಅಧ್ಯಾಯವೊಂದರ ತುಣಕನ್ನು ವಾಚಕ ಮಹಾಶಯರಿಗೆ ಪರಿಚಯಿಸುವುದೇ ಈ ಲೇಖನದ ಉದ್ದೇಶ.

ಪಾರಂಪರಿಕ ಮೌಲ್ಯಗಳಿಗೆ ಉದ್ದೀಪನ ನೀಡುವುದೇ ತನ್ನ ಪರಮ ಪವಿತ್ರ ಕರ್ತವ್ಯವೆಂದು ನಂಬಿರುವ ಆಡಳಿತಗಾರರೇ ವಿಜೃಂಭಿಸುತ್ತಿರುವ, ರಾಜ್ಯದ ಶಿಕ್ಷಣ ನೀತಿಯನ್ನು ತಮ್ಮ ಧ್ಯೇಯಾದರ್ಶಗಳಿಗೆ ಅನುಗುಣವಾಗಿ ಕಾಲಕಾಲಕ್ಕೆ ರೂಪಿಸಲಾಗುತ್ತಿದ್ದ ಕರ್ನಾಟಕ ಎಂಬ ರಾಜ್ಯದಲ್ಲಿ ರಾಷ್ಟ್ರೀಯತೆ, ಮಾನವೀಯತೆ, ನೈತಿಕತೆ ಮುಂತಾದವುಗಳನ್ನು ಕುರಿತಂತೆ ಬೃಹತ್ ಸಮಾವೇಶಗಳು, ಅದ್ಧೂರಿ ಭಾಷಣಗಳು ಕಾಲಕಾಲಕ್ಕೆ ಚುರುಕುಗೊಳ್ಳುತ್ತಿದ್ದವಷ್ಟೆ. ಇವುಗಳ ನಡುವೆಯೂ ರಾಷ್ಟ್ರೀಯತೆಯನ್ನು ಮೈದುಂಬಿಸಿಕೊಂಡ ಯುವ ಜನತೆಯಲ್ಲಿ ನೈತಿಕತೆ ದಿವಾಳಿ ಎದ್ದಿದೆ ಎಂಬ ಸಂಶಯ ಮಾನ್ಯ ಮಂತ್ರಿವರ್ಯ



ರನ್ನು ಕಾಡಲು ಪ್ರಾರಂಭಿಸಿತು. ಅದರ ಮರುಗಳಿಗೆಗೇ ರಾಷ್ಟ್ರೀಯತೆಗೂ ನೈತಿಕತೆಗೂ ಸಂಬಂಧ ಇದೆಯೆ? ತಮ್ಮ ಪಕ್ಷದ ಘನ ಅಧ್ಯಕ್ಷರು ಘೋಷಿಸಿರುವಂತೆ ಅದು ಕಾನೂನಿಗಿಂತ ಭಿನ್ನ ನೆಲೆಯಲ್ಲಿ ನಿಂತಿದ್ದು ರಾಷ್ಟ್ರೀಯತೆಯಿಂದಲೂ ದೂರವೇ ನಿಂತಿದೆಯೆ? ಅದು ಯಾವುದಕ್ಕೂ ಬೇಡದ ಕೂಸೆ? ಯುವ ಜನತೆ ರಾಷ್ಟ್ರೀಯತೆ ಮೈಗೂಡಿಸಿಕೊಂಡಿದೆ ನೈತಿಕತೆಯನ್ನಲ್ಲ ಎನ್ನಬಹುದೆ? ಎಂಬ ಮೊದಲಾದ ವಿಚಾರಗಳು ಬಹಳವಾಗಿ ಕಾಡಿದವು.

ಯುವ ಜನತೆಯ ಭವಿಷ್ಯವನ್ನೇ ಸದಾ ಚಿಂತಿಸುತ್ತಿದ್ದ ಮಾನ್ಯರು ಈ ಎಲ್ಲ ಸಮಸ್ಯೆಗಳಿಗೂ ಪರಿಹಾರ ಹುಡುಕಲು ಬಯಸಿದರು. ಇಂತಹ ಸಂದೇಹಗಳ ನಿವಾರಣೆಗೆ ಸೂಕ್ತ ಸಲಹೆಗಳನ್ನು ನೀಡುತ್ತಿದ್ದ, ಒಂದು ರೀತಿಯಲ್ಲಿ ಆಸ್ಥಾನ ಪಂಡಿತರಂತೆಯೇ ಇದ್ದ, ಬದುಕುವ ಕಲೆಯನ್ನು ಅರೆದು ಕುಡಿದಿರುವ ಬಿಳಿಬಟ್ಟೆಯ ಗುರೂಜಿಯವರ ಬಳಿ ತೆರಳಿದರು. ಇವರ ಆಗಮನದಿಂದ ಗುರೂಜಿಯವರೂ ಸಂತೃಪ್ತರಾದರು. ತಮ್ಮ ಹೃದಯವನ್ನು ಕೊರೆಯುತ್ತಿರುವ ವಿಷಯವನ್ನು ಗುರೂಜಿ ಅವರಲ್ಲಿ ಪ್ರಸ್ತಾಪಿಸಿದಾಗ... ದೀರ್ಘ ಉಚ್ಛ್ವಾಸವನ್ನು ಪಡೆದು ಒಂದೆರಡು ನಿಮಿಷ ಮೌನ ತಾಳಿ ಹೇಳಿದ್ದೇನು ಅಂದರೆ.....

ಮಾನವನಿಗೆ ಅತಿಮುಖ್ಯವಾದವು ಎಂದರೆ ದೇಹ, ಮನಸ್ಸು ಮತ್ತು ಆತ್ಮ. ಇವುಗಳಲ್ಲಿ ಸಮನ್ವಯ ಇರಬೇಕು. ಅದಕ್ಕೆ ಇವುಗಳ ಆರೋಗ್ಯ ಕಾಪಾಡುವುದು ಅತಿ ಮುಖ್ಯ ಎಂಬುದಾಗಿತ್ತು.

ಮಂತ್ರಿವರ್ಯರೂ ವೈದ್ಯರೆ. ಅದನ್ನು ಅಲಂಕಾರ ಮಾಡಿಕೊಂಡಿರುವ ಪದವಿಯೇ ಸಾರುತ್ತಿತ್ತು. ದೇಹ ಅವರ ಹೆಸರನ್ನು, ಮನಸ್ಸಿನ ಆರೋಗ್ಯ ಹಾಗೂ ಅನಾರೋಗ್ಯಗಳ ಬಗ್ಗೆ ಅವರಿಗೆ ಓದುವಾಗ ತಿಳಿಸಲಾಗಿತ್ತು, ಆದರೆ 'ಆತ್ಮ'ದ ಅನಾರೋಗ್ಯ ಕುರಿತಂತಾಗಲಿ, ಆರೋಗ್ಯ ಕುರಿತಂತಾಗಲಿ ಏನನ್ನೂ ಪ್ರಸ್ತಾಪಿಸಿರಲಿಲ್ಲ. ಆತ್ಮ ಅವಿನಾಶಿ ಎಂದು ಹೇಳಲಾಗುತ್ತದೆ. ಅದಕ್ಕೂ ರೋಗ ಬರುವ ಸಾಧ್ಯತೆಗಳು ಇದೆಯೆ? ದೇಹ ಮಾತ್ರ ನಾಶವಾಗುತ್ತದೆ, ಆತ್ಮ ಒಂದು ದೇಹದಿಂದ ಮತ್ತೊಂದು ದೇಹಕ್ಕೆ ಹೋಗುತ್ತದೆ ಎನ್ನುತ್ತಾರೆ. ರೋಗಗ್ರಸ್ತವಾದ ಅದೇ ಅವಸ್ಥೆಯಲ್ಲೇ ಬೇರೊಂದು ದೇಹವನ್ನು ಪ್ರವೇಶಿಸುವುದೆ? ಅದನ್ನು ರೋಗ ಮುಕ್ತ ಮಾಡಿ ಬೇರೊಂದು ದೇಹಕ್ಕೆ ತಲುಪಿಸುವುದು ಹೇಗೆ? ಇನ್ನೂ ಮುಂತಾದ ಸಂದೇಹಗಳು ಅವರನ್ನು ಮುತ್ತಿದವು.

ತಮ್ಮ ಸಂದೇಹಗಳನ್ನು ಗುರೂಜಿಯವರಲ್ಲಿ ಭಿನ್ನವಿಸಿದರು. ಗುರೂಜಿ ಎಷ್ಟೇ ಆಗಲಿ ಅಂತರರಾಷ್ಟ್ರೀಯ ಮನ್ನಣೆ ಪಡೆದಿದ್ದವರು. ವಿಶ್ವ ಆರೋಗ್ಯ ಸಂಸ್ಥೆಯನ್ನು ತಮ್ಮ ವಾದಕ್ಕೆ ಪೂರಕವಾಗಿ ಬಳಸಿಕೊಂಡರು. ಅದೇ ಶಿಕ್ಷಣ ಸಂಸ್ಥೆಗಳಲ್ಲಿ ದೇಹ, ಮನಸ್ಸು ಮತ್ತು ಆತ್ಮವನ್ನು ಆರೋಗ್ಯಕರವಾಗಿಡುವಂತಹ ಶಿಕ್ಷಣ ನೀಡಬೇಕು ಎಂದು ತಿಳಿಸಿದೆ ಎಂದರು. ವಿಶ್ವಸಂಸ್ಥೆಯೇ ಹೇಳಿದೆ ಎಂದಮೇಲೆ ಆತ್ಮಕ್ಕೂ ರೋಗ ಬರುತ್ತದೆ ಎಂಬುದಕ್ಕೆ ಪುರಾವೆ ಸಿಕ್ಕಿದಂತಾಯಿತು.

ಈಗ ಇನ್ನೊಂದು ಪ್ರಶ್ನೆ ಮಂತ್ರಿವರ್ಯರಿಗೆ ಎದುರಾಯಿತು. ಯುವ ಜನತೆಯಲ್ಲಿ ದೇಹ, ಮನಸ್ಸು ಮತ್ತು ಆತ್ಮದ ಆರೋಗ್ಯವನ್ನು ಉದ್ದೀಪನಗೊಳಿಸುವುದು ಹೇಗೆ ಎಂಬುದೇ ಆ ಸಮಸ್ಯೆಯಾಗಿತ್ತು. ಗುರೂಜಿ ಅವರ ಹತ್ತಿರ ಅದಕ್ಕೂ ಸೂಕ್ತ ಪರಿಹಾರ ಇತ್ತು, ಯೋಗದಿಂದ ಸರ್ವ ಸಮಸ್ಯೆಗಳಿಗೂ ಪರಿಹಾರ ಸಿಗುತ್ತದೆ ಎಂಬುದನ್ನು ಅರಿತಿದ್ದರು. ಇದರ ಜೊತೆಗೆ ಬದುಕುವ ಕಲೆಯ ವಿವಿಧ ಆಯಾಮಗಳನ್ನೂ ಮೈಗೂಡಿಸಿಕೊಂಡರೆ ಸರ್ವತೋಮುಖ ಅಭಿವೃದ್ಧಿ ಸಾಧ್ಯ ಎಂಬುದನ್ನು ಬಲ್ಲವರಾಗಿದ್ದರು. ಇದೆಲ್ಲದರ ತಿರುಳನ್ನೂ ಒಳಗೊಂಡಂತಹ ಒಂದು ಪ್ಯಾಕೇಜ್ ಅನ್ನು ಗುರೂಜಿ ಸಿದ್ಧಪಡಿಸಿದ್ದರು. ಪ್ಯಾಕೇಜೇ ಯಾಕೆ ಎಂದರೆ ಇದು ಪ್ಯಾಕೇಜ್ ಯುಗ. ಮದುವೆಮನೆ ಅಲಂಕಾರ ಮಾಡಬೇಕು ಎಂದಿಟ್ಟುಕೊಳ್ಳಿ, ಮುಂಭಾಗ ಶೃಂಗರಿಸಲು ಇಷ್ಟು, ಮದುವೆಮಂಟಪಕ್ಕಿಷ್ಟು, ಅದಕ್ಕಿಷ್ಟು ಇದಕ್ಕಿಷ್ಟು ಎಂದು ಹಿಂದೆ ಮಾಡಿಸಿರಬಹುದು. ಈಗ ಹಾಗಿಲ್ಲ, ವಧುವರರಿಗೆ ಹಾಕುವ ಹಾರದಿಂದ ಹಿಡಿದು ಎಲ್ಲ ಹೂವಿನ ಅಲಂಕಾರಗಳಿಗೂ ಇಷ್ಟೆಂದು ಪ್ಯಾಕೇಜ್ ಡೀಲ್ ಮಾಡಬೇಕು. ಇದರಲ್ಲೂ ತರಹೇವಾರಿ ಪ್ಯಾಕೇಜ್‌ಗಳು ಇವೆ. ಅದ್ಧೂರಿಯಾಗಿರಬೇಕು ಅಂದರೆ ಅದ್ಧೂರಿ ಪ್ಯಾಕೇಜು, ಸಾಧಾರಣವಾಗಿರಲಿ ಎಂದರೆ ಸಾಧಾರಣ ಪ್ಯಾಕೇಜು. ಕಾಸಿಗೆ ತಕ್ಕಂತಹ ಕಜ್ಜಾಯ ದೊರೆಯುತ್ತದೆ. ಅದರಂತೆಯೇ ಗುರೂಜಿ 'ಮಾನವತೆ' ಪ್ಯಾಕೇಜ್ ರೂಪಿಸಿದ್ದರು. ಇದನ್ನು ಈಗಾಗಲೇ ಗುಜರಾತು, ರಾಜಸ್ಥಾನ ಮುಂತಾದ ರಾಜ್ಯಗಳ ವಿದ್ಯಾರ್ಥಿಗಳ ಮೇಲೆ ಪ್ರಯೋಗಿಸಿಯೂ ನೋಡಲಾಗಿದೆಯಂತೆ. ಅಲ್ಲೆಲ್ಲ ಅದು ಅಭೂತಪೂರ್ವ ಯಶಸ್ಸನ್ನು ಕಂಡಿದೆಯಂತೆ. ಅಲ್ಲಿನ ಯುವ ಜನರು ಮಾನವತೆಯ ಸಾಕಾರಮೂರ್ತಿಗಳಾಗಿದ್ದರೂ ಇರಬಹುದು! ಈ ವಿವರಗಳನ್ನೆಲ್ಲ ಮಂತ್ರಿಗಳಿಗೆ ತಿಳಿಹೇಳಿದರು ಗುರೂಜಿ. ಮಂತ್ರಿವರ್ಯರಿಗೆ ಆಶಾಜ್ಯೋತಿಯೊಂದು ಕಾಣಿಸಿತು. ಇಂತಹ ಪ್ಯಾಕೇಜ್ ಅವಶ್ಯಕತೆ ಮನಗಂಡರು. ಇದನ್ನು ಕೂಡಲೆ ಜಾರಿಗೊಳಿಸಬೇಕು ಎಂದು ನಿರ್ಧರಿಸಿದರು. ಮಾರ್ಗದರ್ಶನ ನೀಡಲು ಬದುಕುವ ಕಲೆ ಅರಿತ ತಂಡ ತುದಿಗಾಲಲ್ಲಿ ನಿಂತಿತ್ತು ಎಂಬುದನ್ನು ಪ್ರತ್ಯೇಕವಾಗಿ ವಿವರಿಸಬೇಕಿಲ್ಲವಷ್ಟೇ.

'ಮಾನವತೆ' ಯಾರಿಗಾಗಿ ಎಂಬುದು ಸಮಸ್ಯೆಯೇ ಆಗಿರಲಿಲ್ಲ, ಯುವ ಜನತೆಗಾಗಿ ಎಂಬುದು ಅಂಗೈ ಹುಣ್ಣಿನಷ್ಟೇ ನಿಶ್ಚಯ ಆಗಿತ್ತು. ಯಾವಾಗ ಕಾರ್ಯಾರಂಭವಾಗಬೇಕು ಎಂಬುದೂ ಪ್ರಶ್ನೆಯಾಗಿರಲಿಲ್ಲ. ತುರ್ತಾಗಿ ಎಂಬುದು ಸ್ಪಷ್ಟವಾಗಿತ್ತು. ಇಲ್ಲವಾದಲ್ಲಿ ಪದವಿ ಕಾಲೇಜುಗಳ ಕೆಲವು ವಿದ್ಯಾರ್ಥಿಗಳು ಈ ಸೌಭಾಗ್ಯದಿಂದ ವಂಚಿತರಾಗುವ ಸಂಭವ ಇತ್ತು. ಪರೀಕ್ಷೆ ಸಮಯ ಎಂಬ ಅರಿವು ಅವರಿಗಿತ್ತಾದ್ದರಿಂದ 'ಮೂವತ್ತು ದಿನಗಳಲ್ಲಿ ಹಿಂದಿ ಕಲಿಯಿರಿ', 'ಮೂರು ತಿಂಗಳಲ್ಲಿ ಇಂಗ್ಲಿಷ್ ಕಲಿಯಿರಿ' ಅಂತಹ ಪುಸ್ತಕಗಳನ್ನು ನೀವು ನೋಡಿರಬಹುದು. ಈ ಅವಧಿ ಬಹು ದೀರ್ಘ ಎಂದು ಬದುಕುವ ಕಲೆ ಕಲಿತಿರುವವರಿಗೆ ಅನ್ನಿಸಿರಬಹುದು. ಅದಕ್ಕೇ ಇಪ್ಪತ್ತನಾಲ್ಕು ಗಂಟೆಗಳ ಪ್ಯಾಕೇಜ್ ಸಿದ್ಧಪಡಿಸಿದರು. ದಿವಸಕ್ಕೆ ನಾಲ್ಕು ಗಂಟೆಗಳಂತೆ ಆರು ದಿವಸಗಳ ಕಾಲ 'ಮಾನವತೆ' ತರಗತಿಗಳಿಗೆ ಹಾಜರಾದರೆ... ಮಾನವತೆಯ ಸಾಕಾರಮೂರ್ತಿಗಳಾಗುವುದು ಶತಸ್ಸಿದ್ಧವಂತೆ!

ಶುಲ್ಕ? ಯಾವುದೂ ಇಲ್ಲ, 'ಸೇವೆ ಉಚಿತ ಮಾನವತೆ ಖಚಿತ' ಅವರ ಧೋರಣೆಯಂತೆ!

ಅದು ಯಾರಿಗೋ ಕರೆದು ಹೆಣ್ಣು ಕೊಟ್ಟರೆ ಮಲ್ಲೋರ ಬಂತಂತೆ. ಹಾಗಾಗಿದೆ ಕೆಲವರ ಸ್ಥಿತಿ. 'ಅಣ್ಣಾ ಬನ್ರಣ್ಣಾ ತಂಗೀರಾ ಬನ್ರವ್ವಾ ಮಾನವತೆ ತುಂಬ್ಕೊಳ್ರಿ' ಅಂದರೆ ಮುಖ ಸಿಂಡರಿಸಿಕೊಂಡೆ ಬರುತ್ತವೆ. ಅಳ್ತಾ ಹೋದ ಬದ್ದಿ ಆದು ಕಾಯ್ತಾಳಾ ಅಂದಂಗೆ ಹೀಗೆ ಮುಖ ಊದಿಸಿಕೊಂಡು ಬಂದವರ ತಲೆಯ ಒಳಗೆ ಏನಾದರೂ ಹೋ[...] ಸಾಧ್ಯವಿಲ್ಲ. ಹೀಗೆ ಬಲವಂತವಾಗಿ ಯಾಕೆ ಬರ[...] ಅಂದರೆ ಹಾಜರಾತಿ ಕಡ್ಡಾಯ ಅಂತೆ! [...] ಮಾರ್ಗದಲ್ಲಾದರೂ ಯುವ ಜನತೆಯ ಒಳಕ್ಕೆ 'ಮಾನ[...] ಇಳಿಯಲಿ ಎಂದು ಮಾಡಿರಬಹುದು ಅಂದರೆ [...] ಅಲ್ಲವಂತೆ. ಹಣ ದೋಚಲು ಈ ತಂತ್ರ ಅನ್ನು[...] 'ಅಯ್ಯೋ ರಾಮನೆ, ಇದರಲ್ಲಿ ಹಣ ಎಲ್ಲಿಂದ ಬಂ[...] ಎಲ್ಲಾ ಸೇವೆನೂ ಉಚಿತ ಅಲ್ವ' ಅಂದರೆ 'ಮಾನವತೆ' ಯೋಜನೆ'ಗೆ ಸರ್ಕಾರ ಪ್ರತಿ



ಎಚ್.ಎಲ್. ಕೇಶವಮೂರ್ತಿ

ಅಣಕ

ವಿದ್ಯಾರ್ಥಿಗೆ ಆರು ನೂರು ರೂಪಾಯಿಗಳಂತೆ ಕಲಿಸುವ[...] ನೀಡುತ್ತಂತೆ! ಅಳಿಯ ಅಲ್ಲ ಮಗಳ ಗಂಡ [...] ಹಾಗಾಯಿತು ಎನ್ನುತ್ತಾರೆ. ಒಬ್ಬರಿಗೇ ಇಷ್ಟಾದರೆ [...] ಎಷ್ಟಾಗುತ್ತೆ ಲೆಕ್ಕ ಹಾಕಿ ಎಂದು ನಮಗೇ ಲೆಕ್ಕಾಚಾ[...] ಹೊಣೆ ಹೊರಿಸುತ್ತಾರೆ. "ಇದೇ ಆರ್ಟ್ ಆಫ಼್ ಲಿವಿ[...] ಸಾರ್' ಅಂತ ಕೊಂಕು ಮಾತನಾಡುತ್ತವೆ ಬೇರೆ.

ಬುದ್ಧಿ ಬಲಿಯದೆ ಇರುವ ಮಂದಿಯ ಹತ್ತಿರ [...] ಮಾತು ಎಂದು ಅಧ್ಯಾಪಕರ ಹತ್ತಿರ ಈ ವಿಷ[...] ಪ್ರಸ್ತಾಪಿಸಿದೆ. 'ಹೆಂಗೋ ತಿಂದ್ಕೊಂಡು ಹಾಳಾಗ್ಲಿ, ಈ[...] ಇದನ್ನು ಇಟ್ಟುಕೊಳ್ಳೋದು. ನಾಲ್ಕು ಗಂಟೆ [...] ಕೊರೆಯಿಸಿಕೊಂಡ ಮೇಲೂ ನಮ್ಮ ತರಗತಿಗೆ ಯಾವ್ರು[...] ಬರ್ತಾರ್ರಿ. ಸುಡುಗಾಡು ಸೆಮಿಸ್ಟರ್ ಪದ್ಧತಿ ಬೇರೆ ಬಂ[...] ಪಾಠ ಮುಗಿಸಿದರೆ ಸಾಕಲ್ಲಾ ಎಂದು ನಾವು ಸಾಯುತ್ತಿ[...] ಇದನ್ನ ಬೇರೆ ಎಟ್ಟವ್ರೆ. ಮಾಡೋರು ಮಾಡಿದ್ರಲ್ಲಾ ಪ[...] ಸಮಯ ಬಿಟ್ಟು ಬೇರೆ ಸಮಯಾನೆ ಸಿಗಲಿಲ್ವ ಇವ[...] ಎಂದು ಬೇಸರದಿಂದ ನುಡಿದರು.

'ಬೇರೆ ಸಮಯದಲ್ಲಿ ಹೆಂಗೆ ಮಾಡ್ತಾರೆ ಸಾರ್. ಮಾ[...] ತಿಂಗಳು ಮುಗೀತಾ ಬಂದದೆ. ಬಜೆಟ್‌ನಲ್ಲಿರೋ ಹ[...] ಹೆಂಗಾದ್ರೂ ಮಾಡಿ ಖರ್ಚು ಮಾಡಬೇಕಲ್ಲ' ಎ[...] ಮತ್ತೊಬ್ಬರು ಕುಹಕ ಆಡಿದರು.

ತಲೆ ಕೆಟ್ಟು ಗೊಬ್ಬರ ಆಯಿತು. ಏನಿವರ ಮಾ[...] ಅರ್ಥ? ಶಿಕ್ಷಣಕ್ಕೆ ಮೀಸಲಿಟ್ಟ ಹಣ ಹೇಗೆ ಯ[...] ಯಾವುದೋ ಗುಟಾರ ಸೇರುತ್ತದೆ ಎಂಬುದು ಇರಬಹು[...] ಇದೇ ಚಿಂತೆಯಲ್ಲಿದ್ದೆ.

'ಹೊರಗಿನವರು ಮಾನವತೆ ಕಲಿಸಬೇಕು ಎಂ[...] ಏನು ಅರ್ಥ' ಅಂದರು ಒಬ್ಬರು.

ಏನು ಹೇಳಲಿ. ಮುಖ ಮುಖ ನೋಡಿದೆ.

'ಅಂದರೆ ನಮ್ಮ ಶಿಕ್ಷಣ ನೀತಿಯಲ್ಲೇ ಏನೋ ಕು[...] ಎಂದ ಹಾಗಾಯಿತು' ಎಂದು ಶರಾ ಬರೆದರು.

ಹೌದು ಇದು ನಿಜವೇ ಆಗಿದ್ದಲ್ಲಿ ಉನ್ನತ ಶಿ[...] ಸಚಿವರು ಕಾಸು ಕೊಟ್ಟು ಪೊರಕೇಲಿ ಹೊಡೆಯಿಸಿಕೊ[...] ಹಾಗೆ ಆಗುತ್ತದಲ್ಲಾ....

ಛೇ ಇರಲಾರದು....

ಹಾಲಕ್ಕಿಗಳ ಹಾಡು-ಪಾಡು!

▶▶ 19

ವಾಗಲು ಕಾರಣ. ಆಹಾರದಂತೆ ಉಡುಗೆ-ತೊಡುಗೆಯೂ ವಿಶಿಷ್ಟ. ಗಂಡಸರು ಕಚ್ಚೆ-ಹೆಗಲಲ್ಲೊಂದು ಕಂಬಳಿ ಹಾಕಿಕೊಂಡರೆ, ಹೆಂಗಸರು 'ಗೆಟಿಕಿ ಕಟ್ಟಿಸ' ಸೀರೆ ಉಡುತ್ತಾರೆ. ರವಿಕೆ ತೊಡದ ಈ ಹಳೆ ಕಾಲದ ಹೆಂಗಸರ ಕೊರಳು-ಮೈ ತುಂಬ ಮಣಿ ಸರಗಳ ರಾಶಿಯಿರುತ್ತದೆ. ಆಧುನಿಕತೆಯ ಸೆಳೆತದಿಂದ ಈಗಿತ್ತಲಾಗಿ ಉಡುಪಿನಲ್ಲಿ ಬದಲಾವಣೆಯಾಗಿದೆ. ಗೆಟಿಕಿ ಬಿಟ್ಟು ಕುಪ್ಪಸ ತೊಡತೊಡಗಿದ್ದಾರೆ. ಗಂಡಸರು ಲುಂಗಿ-ಪ್ಯಾಂಟ್-ಶರ್ಟ್ ಧರಿಸುತ್ತಿದ್ದಾರೆ. ಇಷ್ಟಾದರೂ ಈ ಹಾಲಕ್ಕಿ ಜನಾಂಗ ಬಡತನದ ಶಾಪ, ಸಾಮಾಜಿಕ ಸಂಕಷ್ಟದಿಂದ ವಿಮುಕ್ತವಾಗಿಲ್ಲ.

ಈ ಆದಿವಾಸಿ ಒಕ್ಕಲು ಸಮುದಾಯದಲ್ಲಿ ನಾಲ್ಕೈದು ಒಳಪಂಗಡಗಳಿವೆ. ಗಾಮೊಕ್ಕಲು, ಕೋಟೆ ಒಕ್ಕಲು, ಕರೆ ಒಕ್ಕಲು, ಕುಣಬಿಗಳೆಂದು ಈ ಪಂಗಡಗಳನ್ನು ಗುರುತಿಸಲಾಗುತ್ತಿದೆ. ಪರಸ್ಪರ ವೈವಾಹಿಕ ಸಂಬಂಧ ಸಹ ಈ ಪಂಗಡಗಳಲ್ಲಿ ಮೊದಲಿರಲಿಲ್ಲ. ಈಗಿತ್ತಲಾಗಿ ಈ ನಿರ್ಬಂಧ ಕಮ್ಮಿಯಾಗುತ್ತಿದೆ. ಜಿಲ್ಲೆಯ ಕರಾವಳಿಯಿಂದ ಮಲೆನಾಡಿನ ತಾಲ್ಲೂಕುಗಳಿಗೆ ವಲಸೆ ಹೋಗಿ ಅಲ್ಲಿನ ಅಡಿಕೆ ತೋಟಗಳಲ್ಲಿ ಅಡಿಕೆ ಗೊನೆಗಳಿಗೆ ಕೊಟ್ಟೆ ಕಟ್ಟುವ ಕೆಲಸ ಮಾಡುವವರನ್ನು ಕೋಟೆ ಒಕ್ಕಲು ಎನ್ನುತ್ತಾರೆ. ಮೈ ಬಣ್ಣ ಅನ್ವರ್ಥವಾಗಿರುವವರು ಕರೇ ಒಕ್ಕಲು; ಗ್ರಾಮೀಣ ಪರಿಸರದಲ್ಲೇ ಗಟ್ಟಿಯಾಗಿ ನಿಂತು ಬದುಕು ನಡೆಸುತ್ತಿರುವವರು ಗಾಮೊಕ್ಕಲುಗಳು.

ಎಸ್‌ಟಿ ಯಾಕಾಗಬೇಕು?

ಉತ್ತರ ಕನ್ನಡದ ಈ ಆದಿವಾಸಿ ಒಕ್ಕಲು ವರ್ಗ ಜಿಲ್ಲೆಯ ಅತಿದೊಡ್ಡ ಸಮುದಾಯಗಳಲ್ಲಿ ಒಂದು. ರಾಜಕಾರಣಿಗಳ ಹಣೆಬರಹ ಬರೆಯುವ ಅಥವಾ ಜಿಲ್ಲೆಯ ರಾಜಕೀಯ ಚಿತ್ರಣ ಬದಲಿಸುವ ತಾಕತ್ತು ಒಕ್ಕಲಿಗರಿಗಿದೆ. ಆದರೆ ರಾಜಕಾರಣಿಗಳ ಒಡೆದಾಳುವ ಧೂರ್ತತೆಯಿಂದಾಗಿ ಒಕ್ಕಲಿಗರು ಶಕ್ತಿಯಿದ್ದೂ ದುರ್ಬಲರಂತಾಗಿದ್ದಾರೆ. ಚುನಾವಣೆ ಹೊತ್ತಲ್ಲಂತೂ ಹಾಲಕ್ಕಿಗಳು ನಿರ್ಣಾಯಕ ಪಾತ್ರ ಆಡಿದ್ದೇ ಇಲ್ಲ. ಹೀಗಾಗಿ ಈ ಸಾತ್ವಿಕ ಸಮುದಾಯದ ಬೇಡಿಕೆ-ಕೂಗು ವಿಧಾನಸೌಧ-ಲೋಕಸಭೆಗೆ ತಲುಪುತ್ತಲೇ ಇಲ್ಲ!!



1967ರಿಂದ ತಮ್ಮನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸಿ ಎಂದು ಹಾಲಕ್ಕಿಗಳು 'ಮಾಗಣೆ' ಮಂಡಿಸುತ್ತಲೇ ಇದ್ದಾರೆ. ತಮ್ಮ ಕರುಣ ಕಥನ, ಗುಡ್ಡಗಾಡು ಮೂಲದ ಇತಿಹಾಸ-ಫೋಟೋ ಆಳುವವರಿಗೆ ತೋರಿಸಿ-ತಲುಪಿಸಿ ಸುಸ್ತಾಗಿ ಹೋಗಿದ್ದಾರೆ. ಪರಿಶಿಷ್ಟ ವರ್ಗಕ್ಕೆ ತಮ್ಮನ್ನು ಸೇರಿಸಿ ಎಂದು ಹಾಲಕ್ಕಿಗಳು 'ದೇಹಿ' ಎಂದು ಬೇಡುವಂತೆ ಮಾಡಿದ ಸರ್ಕಾರಕ್ಕಾಗಲಿ, ಸಮಾಜಕ್ಕಾಗಲಿ ಹಾಲಕ್ಕಿಗಳ ನ್ಯಾಯೋಚಿತ ಬೇಡಿಕೆಯ ಹಿಂದಿನ ಸರಳಸತ್ಯ ಅರ್ಥವಾಗಿದ್ದರೂ ಸುಮ್ಮನಿರುವುದು ಅಕ್ಷಮ್ಯ ಪಾತಕವೇ ಸರಿ! ಈ ಹಾಲಕ್ಕಿಗಳನ್ನು ಮುಖ್ಯ ವಾಹಿನಿಗೆ ತರುವ ಪ್ರಾಮಾಣಿಕ ಪ್ರಯತ್ನ ಸ್ವಾತಂತ್ರ್ಯೋತ್ತರದ ಆರು ದಶಕದಲ್ಲಿ ನಡೆದೇ ಇಲ್ಲ!

ಶಿಕ್ಷಣ ಹಾಲಕ್ಕಿಗರ ಅರಿವಿನ ಪರಿಧಿ ಹಿಗ್ಗಿಸಿರಬಹುದು. ಆದರೆ ಜೀವನದ ಮಟ್ಟವನ್ನು ಸುಧಾರಿಸಿಲ್ಲ. ಅಭಿವೃದ್ಧಿ-ಸಾಮಾಜಿಕ ನ್ಯಾಯ ಈ ಗುಡ್ಡಗಾಡು ಮಂದಿಗೆ ಸರ್ಕಾರ ಕಲ್ಪಿಸಿಲ್ಲ. ಸರ್ಕಾರಿ ನೌಕರಿ ಸಾಯಲಿ, ಹಾಲಕ್ಕಿ ಮಕ್ಕಳಿಗೆ ಸ್ವಯಂ ಉದ್ಯೋಗ-ದಂಧೆಗೆ ಪೂರಕ ವಾತಾವರಣ ಕೂಡ ಆಳುವ ಮಂದಿ ನಿರ್ಮಾಣ ಮಾಡಿಲ್ಲ. ಈಗ ಕೊಟ್ಟಿರುವ ಮೀಸಲಾತಿಯಿಂದ ಉಪಕಾರಕ್ಕಿಂತ ಉಪದ್ರವವೇ ಜಾಸ್ತಿಯಾಗಿದೆ. ತಮಗಿಂತ ಸಾಮಾಜಿಕ-ಆರ್ಥಿಕ- ರಾಜಕೀಯವಾಗಿ ನೂರು ವರ್ಷಗಳಷ್ಟು ಮುಂದಿರುವ ಇತರ ಹಿಂದುಳಿದ (ಪ್ರವರ್ಗ I) ವರ್ಗದವರೊಂದಿಗೆ ಹಾಲಕ್ಕಿಗಳು ಸೆಣಸಾಡಬೇಕಾಗಿದೆ.

ಸರ್ಕಾರದ ಭಂಡ ಧೋರಣೆ, ಸ್ಥಳೀಯ ಸೋ-ಕಾಲ್ಡ್ ಲೀಡರ್‌ಗಳ ದ್ರೋಹದಿಂದ ಹಾಲಕ್ಕಿಗಳು ಸಮಾಜದಲ್ಲಿ ಮನುಷ್ಯರಾಗಿ ತಲೆ ಎತ್ತಿ ನಿಲ್ಲಲು ಸಾಧ್ಯವಿಲ್ಲದಾಗಿದೆ. ಹಾಲಕ್ಕಿಗಳು ಪರಿಶಿಷ್ಟವಾದರೆ ತಮ್ಮ ಏಕಸ್ವಾಮ್ಯದ ಗಂಡಾಗುಂಡಿ ರಾಜಕಾರಣಕ್ಕೆ ಸಂಚಕಾರ ಬರುತ್ತದೆಂಬುದು ಜಿಲ್ಲೆಯ 'ಶಿಷ್ಟ' ರಾಜಕಾರಣದ ದೂ(ರು)ರಾಲೋಚನೆ. ಎಸ್‌ಟಿ ಮೀಸಲಾತಿಗೆ ಅಷ್ಟೂ ಅರ್ಹತೆಯಿರುವ ಹಾಲಕ್ಕಿಗಳಿಗೆ ತಕ್ಷಣ ಸಾಮಾಜಿಕ ನ್ಯಾಯ ನೀಡಬೇಕಿದೆ. ಸರ್ಕಾ[...] ವಿಳಂಬ ನೀತಿ-ಬುದ್ಧಿ ಪೂರ್ವಕ ನಿರ್ಲಕ್ಷ್ಯದಿಂದ ಹಾಲಕ್ಕಿ[...] ಈಗಾಗಲೇ ಘೋರ ಹಾದಿ ಅನುಭವಿಸಿದ್ದಾರೆ. ಹ[...] ನೋಡಿದರೆ ಇವರನ್ನು ಕನಿಷ್ಠ 50 ವರ್ಷದ ಹಿಂದೆಯೆ[...] ಎಸ್‌ಟಿ ಮೀಸಲಾತಿಗೆ ಒಳಪಡಿಸಬೇಕಿತ್ತು.

ಐದು ದಶಕದ ಹಿಂದೆಯೇ ಹಾಲಕ್ಕಿಗಳನ್ನು ಪರಿಶಿ[...] ಪಂಗಡಕ್ಕೆ ಸೇರಿಸಿದ್ದರೆ ಇವತ್ತು ಆ ಸಮಾಜದ ಸಮ[...] ಚಿತ್ರಣವೇ ಬದಲಾಗುತ್ತಿತ್ತು. ಅಲ್ಲಿಂದ ಇಲ್ಲಿಯವರೆಗೆ ಶಿಕ್ಷ[...] ಪಡೆದ ಹಾಲಕ್ಕಿ ಸಮುದಾಯದ ಸಾವಿರಾರು ಮಂದಿ[...] ಆ ಮೀಸಲಾತಿಯಿಂದ ಉದ್ಯೋಗ ಸಿಗುತ್ತಿತ್ತು. ಉದ್ಯೋ[...] ಪಡೆದವರ ಪ್ರಭಾವ ವಲಯದಲ್ಲಿ ಬೆಳೆದ ಸಾವಿರಾ[...] ಹುಡುಗ-ಹುಡುಗಿಯರು ಶಿಕ್ಷಣ-ಉದ್ಯೋಗ ಪಡೆ[...] ಕೊಳ್ಳುತ್ತಿದ್ದರು. ಆಗ ವ್ಯಸನ ಮುಕ್ತ, ಬಡತನ ಮು[...] ಹಾಲಕ್ಕಿ ಸಮಾಜ ನಿರ್ಮಾಣ ಆಗುತ್ತಿತ್ತು. ಈಗ ತುಂ[...] ತಡವಾಗಿದೆ. ಪರಿಶಿಷ್ಟ ಪಂಗಡಕ್ಕೆ ಈಗ ಸೇರಿಸಲ್ಪ[...] ಹಾಲಕ್ಕಿಗಳು ಮೀಸಲಾತಿ ಬಲದಿಂದ ಬಲಾಢ್ಯರಾ[...] ಈ ಎಸ್‌ಟಿ ಕೆಟಗರಿಯಲ್ಲಿರುವ ಅನೇಕ ಜನ-ಜಾ[...] ಗಳೊಂದಿಗೆ ಪೈಪೋಟಿ ನಡೆಸಬೇಕಾದ ಅನಿವಾರ್ಯ[...] ಇದೆ.

ಇಷ್ಟೆಲ್ಲ ನೋವು-ನಷ್ಟ ಹಾಲಕ್ಕಿಗಳಿಗೆ ಮಾಡಿ[...] ಸ್ಥಳೀಯ ನಾಯಕರು, ಮುಖಂಡರು, ಬೆಂಗಳೂರು-ದಿ[...] ದರ್ಬಾರಿನ ಅಧಿಕಾರಶಾಹಿಗಳು ಇನ್ನಾದರೂ ನ್ಯಾಯ[...] ಒದಗಿಸಿಯಾರಾ? ಹಾಲಕ್ಕಿಗಳನ್ನು ಎಸ್‌ಟಿಗೆ ಸೇರಿ[...] ಯಾರಾ? ಅಥವಾ ಹಾಲಕ್ಕಿ ಗಳು 'ಮುಜುಗರ' ಬಿಟ್ಟ[...] ಬೀದಿಗಿಳಿದು ಈ ಪ್ರಭುತ್ವಕ್ಕೆ ಪಾಠ ಕಲಿಸಬೇಕಾದೀತ[...]

...ನ ಹೆಸರು ಮಿಷ್ಕಿನ್; ಇತ್ತೀಚೆಗೆ ಗಮನ ...ರುವ ತಮಿಳು ಚಿತ್ರ ನಿರ್ದೇಶಕ. ರಾಜ ಎಂಬ ...ಈತ ತನ್ನ ಬದಲಿ ಹೆಸರನ್ನು ಹೆಕ್ಕಿಕೊಂಡಿದ್ದು ...ಭಾವಿ ಬರಹಗಾರ ಫ್ಯೋದರ್ ದಾಸ್ತೋವೆಸ್ಕಿಯ ...ದಂಬರಿ 'ದಿ ಈಡಿಯಟ್'ನಿಂದ. ಈ ಕಾದಂಬ...ುಖ್ಯಪಾತ್ರನಾದ ಮಿಷ್ಕಿನ್‌ನಿಂದ ಪ್ರಭಾವಿತನಾ... ಈತ ತನ್ನ ಹೆಸರನ್ನು ಮಿಷ್ಕಿನ್ ಎಂದು ...ಸಿಕೊಂಡಿದ್ದಕ್ಕೂ ಈತ ಇತ್ತೀಚೆಗೆ ರೂಢಿಸಿಕೊಂಡಿ... ಬೆರಗುಗೊಳಿಸುವ ಚಿತ್ರಶೈಲಿಗೂ ಸಂಬಂಧವಿ... ದಾಸ್ತೋವೆಸ್ಕಿಯ ತಲ್ಲಣಗೊಳಿಸುವ 'ದಿ ...ಟ್' ಕಾದಂಬರಿಯ ಚಿತ್ರಣಕ್ಕೂ; ಆತ ಆ ...ಯಲ್ಲಿ ರೂಪಿಸಿದ ಮಿಷ್ಕಿನ್‌ನ ಪಾತ್ರಕ್ಕೂ ಈ ...ರ್ದೇಶಕ ರೂಪಿಸಲು ಯತ್ನಿಸುತ್ತಿರುವ ಹೊಸ ...ವ್ಯಾಕರಣಕ್ಕೂ ಸಾಮ್ಯತೆಗಳಿವೆ; ಅದರೊಳಗೆ ... ಬದುಕಿಗೂ ಯಾವಾಗಲೂ ಅಂಟಿಕೊಂಡಿರುವ ...ಬಂಧಗಳಿವೆ.

...ತೀಯ ಸಿನಿಮಾರಂಗದ ಕುರಿತ ನಮ್ಮ ...ನಗಳೇ ಹಾಗೆ. ಇಲ್ಲಿ ಬಾಲಿವುಡ್‌ನ ಮಂದಿ ...ಗೆಯ ಚಿತ್ರವೊಂದನ್ನು ಮಾಡಿದಾಗ ಹುಟ್ಟುವ ...ಗಳಿಗೂ; ತಮಿಳಿನವರೋ ಕನ್ನಡದವರೋ ...ಹೊಸ ಸಿನಿಮಾಗಳಿಗೆ ಬರುವ ಪ್ರತಿಕ್ರಿಯೆಗಳಿಗೂ ...ತ್ಯಾಸಗಳಿವೆ. ಉದಾಹರಣೆಗೆ ಬಾಲಿವುಡ್‌ನಲ್ಲಿ ... ಅತಿಬೌದ್ಧಿಕ ನೆಲೆಯ 'ಧೋಬಿ ಘಾಟ್' ...ಮಾಡಿದರೆ ಅದರ ಸಾಮಾನ್ಯತೆಗೂ ಮೀರಿದ ...ಳು ಮುಂಖಾನುಮುಂಖವಾಗಿ ದೊರೆಯುತ್ತವೆ. ...ಮಿಷ್ಕಿನ್‌ನಂಥ ನಿರ್ದೇಶಕನೊಬ್ಬ ತಮಿಳಿನಲ್ಲಿ ...ಲಾ'ದಂತಹ ಹೊಚ್ಚ ಹೊಸದೆನ್ನಿಸುವ; 'ಯುದ್ಧಂ ...ಹ ಭಿನ್ನ ಥ್ರಿಲ್ಲರ್ ಶೈಲಿಯ ಸಿನಿಮಾ ಮಾಡಿದರೆ ...ಹೊಗಳಿಕೆ ಗಿಟ್ಟುವುದಿರಲಿ; ಎಲ್ಲೂ ಒಂದಿನಿತೂ ...ಗುವುದಿಲ್ಲ, ಸಿನಿಮಾ ಕುರಿತ ತೀವ್ರ ಶ್ರದ್ಧೆಯ ...ಾಗಿ ಮಾತ್ರ ಹುಟ್ಟುವ 'ನಂದಾಲಾಲಾ'ದಂತಹ

ನವೆಂಬರ್‌ನಲ್ಲಿ ತೆರೆ ಕಂಡ 'ನಂದಾಲಾಲಾ' ಚಿತ್ರದ ಕಥೆ ಸ್ವತಃ ಮಿಷ್ಕಿನ್‌ದೇನೂ ಅಲ್ಲ, ಅದು ಹನ್ನೊಂದು ವರ್ಷಗಳ ಹಿಂದೆಯೇ ಜಪಾನೀ ಭಾಷೆಯಲ್ಲಿ ತಯಾರಾಗಿದ್ದ 'ಕಿಕುರಿಝರೋ' (Kikujiro) ಚಿತ್ರದಿಂದ ಪ್ರೇರಣೆ ಪಡೆದದ್ದು. 'ಕಿಕುರಿಝರೋ'ದ ನಿರ್ದೇಶಕ ತಕೇಶಿ ಕಿಟಾನೋ; ಸ್ವತಃ ಆತ ಆ ಚಿತ್ರದ ಮುಖ್ಯಪಾತ್ರದಲ್ಲಿ ಅಭಿನಯಿಸಿದ್ದ. 'ನಂದಾಲಾಲಾ' ಚಿತ್ರವನ್ನು ನಾನು 'ಕಿಕುರಿಝರೋ'ದಿಂದ ಪ್ರೇರಣೆ ಪಡೆದಿದ್ದು ಎಂದು ಹೇಳಿದ್ದು ಯಾಕೆಂದರೆ ಮಿಷ್ಕಿನ್ 'ಕಿಕುರಿಝರೋ'ದ ಒಂದು ಎಳೆಯನ್ನು ಮಾತ್ರ ಹಿಡಿದುಕೊಂಡು 'ನಂದಾಲಾಲಾ'ವನ್ನು ತನ್ನ ವಾಸ್ತವಾಧಾರಿತ ಕಲ್ಪನೆಯ ಮೂಲಕ ಕಟ್ಟಿದ್ದ. 'ಕಿಕುರಿಝರೋ'ದಲ್ಲಿ ಇಲ್ಲದ ಬದುಕಿನ ಅನೇಕ ಆರ್ದ್ರಕ್ಷಣಗಳನ್ನು ಕಥೆಯಾಗಿ ಬೆಳೆಸಿದ್ದ; ಎಲ್ಲಕ್ಕಿಂತ ಹೆಚ್ಚಾಗಿ ಸಿನಿಮಾ ಎಂಬುದು ನಿಜವಾಗಿಯೂ ದೃಶ್ಯೀಕರಣದ ಪರಿಣಾಮಕಾರಿ ಸಾಧ್ಯತೆ ಎಂಬುದನ್ನು ತೋರಿಸಿದ್ದ.

ನಂದಾಲಾಲಾ: ಬದುಕಿನ ನಿಜಗಳ ದಾರಿ

'ನಂದಾಲಾಲಾ'ದ ಕಥೆಯನ್ನು ಹೀಗೆ ಸಂಕ್ಷಿಪ್ತಗೊಳಿಸಿ ಹೇಳಬಹುದು: ಎಂದೋ ಕಳೆದುಹೋಗಿರುವ ತನ್ನ ತಾಯಿಯನ್ನು ಹುಡುಕುವ ಶಾಲಾ ಬಾಲಕನೊಬ್ಬನಿಗೆ ಮಾನಸಿಕ ಅಸ್ವಸ್ಥನೊಬ್ಬ ಭೇಟಿಯಾಗಿ; ಅವರಿಬ್ಬರೂ ತಮ್ಮ ತಾಯಂದಿರನ್ನು ಹುಡುಕಿಕೊಂಡು ಹೊರಡುತ್ತಾರೆ. ಬಾಲ್ಯದಲ್ಲಿ ತನ್ನನ್ನು ಆಸ್ಪತ್ರೆಯಲ್ಲಿ ಬಿಟ್ಟುಹೋದ ತಾಯಿಯ ಮೇಲೆ ಮಾನಸಿಕ ರೋಗಿಗೆ ಬಹಳ ಸಿಟ್ಟು; ಆಕೆಯನ್ನು ಆತ ಮನಬಂದಂತೆ ಬೈಯುತ್ತಾನೆ. ಆದರೆ ಶಾಲಾ ಬಾಲಕನಿಗೆ ತನ್ನ ತಾಯಿಯ ಕುರಿತು ಇನ್ನಿಲ್ಲದಷ್ಟು ಅಕ್ಕರೆ; 'ತಾಯಿಯನ್ನು ಹಾಗೆಲ್ಲ ಬೈಯ್ಯಬಾರದು' ಎನ್ನುತ್ತಾನೆ. ಇಬ್ಬರೂ ತಾವು ಹೊರಟ ದಾರಿಯಲ್ಲಿ ಅನೇಕ ಮನುಷ್ಯರನ್ನು; ಮನುಷ್ಯ ಸಂಬಂಧಗಳನ್ನೂ, ಒಳ್ಳೆಯತನ, ಕೆಡುಕು, ವಿಕ್ಷಿಪ್ತತೆಯನ್ನೂ



ಕುಳಿತಿರುವ ಪ್ರೇಕ್ಷಕ ತಾನು ಕುಳಿತಲ್ಲಿಂದಲೇ ರಂಗಸ್ಥಳದಲ್ಲಿ ಬದಲಾಗುವ ದೃಶ್ಯಗಳನ್ನು ನೋಡುವಂತೆಯೇ ಇಲ್ಲಿಯೂ ಆಗುತ್ತದೆ. ಕ್ಯಾಮೆರಾ ತಾನು ಇರುವಲ್ಲಿಂದ ಕದಲದೆ ತೆರೆಯ ಮೇಲೆ ದೃಶ್ಯಗಳು ಬದಲಾಗುವುದನ್ನು ಕಾಣಿಸುತ್ತದೆ. ಬಹುಶಃ ನಾನು ಕಂಡುಕೊಂಡ ಹಾಗೆ ಮಿಷ್ಕಿನ್ ಉದ್ದೇಶ ಪೂರ್ವಕ ವಾಗಿ ರೂಪಿಸಿಕೊಂಡಿ ರುವ ಈ ನಿರೂಪಣಾ ಕ್ರಮವೇ ಆತನ ಶೈಲಿಯ ವಿಶಿಷ್ಟತೆ. ಈ ಶೈಲಿ ಆತನ ಹಿಂದಿನ 'ಅಂಜಾದೆ' ಚಿತ್ರ ದಲ್ಲಿಯೂ ಬಳಕೆಯಾಗಿತ್ತು.

ಲಂಕೇಶ್ 76

ವಿಶೇಷ ಶಂಕ


ಹೊಸ ತಲೆಮಾರಿನ ತಲ್ಲಣಗಳು

ಇದಿಷ್ಟೇ ಆಗಿದ್ದರೆ 'ನಂದಾಲಾಲಾ' ವಿಶಿಷ್ಟ ಚಿತ್ರವೆನ್ನಿಸುತ್ತಿರಲಿಲ್ಲ. ಅದು ಉದ್ದಕ್ಕೂ ತನ್ನೊಳಗೆ ಇಟ್ಟುಕೊಂಡಿರುವ ಗಾಢಮೌನದಿಂದಾಗಿ ವಿಶಿಷ್ಟವಾಗಿ ನಿಲ್ಲುತ್ತದೆ. ಇಡೀ ಚಿತ್ರದಲ್ಲಿ ಕೇಳಿಸಿಕೊಳ್ಳಬಹುದಾದ ಸಂಭಾಷಣೆಗಳು ಒಟ್ಟು ಇಪ್ಪತ್ತು ನಿಮಿಷಗಳಿಗಾಗುವಷ್ಟು ಮಾತ್ರ ಇರಬಹುದು! ನಮ್ಮ ಕನ್ನಡದಲ್ಲಿ ಬುದ್ಧಿಜೀವಿ ನಿರ್ದೇಶಕರಂತೆ ವರಸೆ ತೋರಿಸುವ ಯೋಗರಾಜ್ ಭಟ್, ಸೂರಿ, ಗುರುಪ್ರಸಾದ್‌ರ ಸಿನಿಮಾಗಳ ಸಂಭಾಷಣೆಗಳನ್ನು ಗಮನಿಸಿದರೆ ಮಿಷ್ಕಿನ್ ತನ್ನ ಸಿನಿಮಾಗಳಲ್ಲಿ ಇಟ್ಟುಕೊಂಡಿರುವ ಮೌನ ಎಷ್ಟು ಮುಖ್ಯ ಎಂಬುದು ಗೊತ್ತಾಗುತ್ತದೆ. ಆತ ಮಾತಿಲ್ಲದೆ; ಕೇವಲ ದೃಶ್ಯಗಳ ಮೂಲಕವೇ ಕಥೆಯನ್ನು ನೋಡುಗನಿಗೆ ದಾಟಿಸುತ್ತಾನೆ; ಆ ಮೂಲಕ ಸಿನಿಮಾ ಎನ್ನುವುದು ನಿಜವಾಗಿಯೂ ದೃಶ್ಯಮಾಧ್ಯಮ ಎಂಬುದನ್ನು ಸಾಬೀತುಪಡಿಸುತ್ತಾನೆ. ಆತನ ಸಿನಿಮಾದಲ್ಲಿ ನಾವು ಯಾವೊಂದು ದೃಶ್ಯವನ್ನೂ ನಮ್ಮ ಕಣ್ಣುಗಳಿಂದ 'ಮಿಸ್' ಮಾಡಿಕೊಳ್ಳುವಂತಿಲ್ಲ, ಅಷ್ಟರ ಮಟ್ಟಿಗೆ ಆತನ ದೃಶ್ಯ ಕಟ್ಟುವಿಕೆ ಬಿಗಿಯಾಗಿದೆ. ಅದು ನಮ್ಮ ದೇವನೂರ ಮಹಾದೇವ ಅವರ ಕಥೆಗಳಿಗೆ ಇರುವ ಗಟ್ಟಿತನದ ಹಾಗೆ; ಯಾವೊಂದು ಶಬ್ದವನ್ನೂ ಆಚೀಚೆ ಇಡುವಂತೆಯೇ ಇಲ್ಲ! ಆದರೆ ನಾವು ಯೋಗ ರಾಜ್ ಭಟ್, ಗುರುಪ್ರಸಾದ್‌ರ ಸಿನಿಮಾಗಳನ್ನು ನೋಡದೆಯೇ ಕೇವಲ ಕೇಳಿಸಿಕೊಂಡರೆ ಸಾಕು- ಹಿರಣ್ಣಯ್ಯ, ಧೀರೇಂದ್ರಗೋಪಾಲರ ನಾಟಕಗಳನ್ನು ಕ್ಯಾಸೆಟ್‌ಗಳಲ್ಲಿ ಕೇಳಿದಂತೆ. ಆದರೆ ಸಿನಿಮಾ ಕೇವಲ ಕೇಳುವುದಲ್ಲ; ಕಾಣಿಸುವುದು-ಇದು ಮಿಷ್ಕಿನ್‌ನಂಥವರಿಗೆ ಚೆನ್ನಾಗಿ ಗೊತ್ತಿದೆ.

ಅದನ್ನು ಮಿಷ್ಕಿನ್ ಅತಿ ಎಚ್ಚರಕ್ಕೆ ಕೊಂಡೊಯ್ದಿದ್ದಾನೆ. ಬಹುಶಃ ಹಾಲಿವುಡ್ ಸಿನಿಮಾಗಳ ನನ್ನ ವೀಕ್ಷಣೆಯ ಮಿತಿಯಲ್ಲಿ 'ಯುದ್ಧಂ ಸೆಯ್' ಹಾಲಿವುಡ್ ಮಟ್ಟಕ್ಕೆ ಮುಟ್ಟಬಹುದಾದ ಚಿತ್ರ. ಇಡೀ ಚಿತ್ರದಲ್ಲಿ ಎಲ್ಲಿಯೂ ಕೃತಕ ಸೆಟ್‌ಗಳಿಲ್ಲ; ಲೈಟಿಂಗ್ಸ್ ಇಲ್ಲ, ಇರುವ ಸಹಜ ಕತ್ತಲು-ಬೆಳಕಿನ ಹಿನ್ನೆಲೆಯಲ್ಲಿಯೇ ಮಿಷ್ಕಿನ್ ತನ್ನ ಸಿನಿಮಾವನ್ನು ತನ್ನಷ್ಟಕ್ಕೆ ತಾನು ಮೋಹಿಸಿದ ಕಲಾತ್ಮಕ ಕೃತಿಯ ಹಾಗೆ ಕಟೆದಿದ್ದಾನೆ. ಈ ಮೋಹದ ಹಿಂದೆ ಸಿನಿಮಾವೊಂದನ್ನು ವ್ಯಾಪಾರಿ ಚೌಕಟ್ಟಿನಿಂದ ಹೊರಗಿಟ್ಟು ನೋಡುವ ಹಟವಿರುವ ಹಾಗೆಯೇ ಸಿನಿಮಾದ ಹೊಸ ವ್ಯಾಕರಣವೊಂದರ ಹುಡುಕಾಟವೂ ಇದೆ.

ಇಷ್ಟೆಲ್ಲ ಹೇಳಿದ ಮೇಲೆ ಮಿಷ್ಕಿನ್ ಮಿತಿಗಳೇ ಇಲ್ಲದ ನಿರ್ದೇಶಕ ಎಂದು ನಾನು ಹೇಳಲಾರೆ. ಆತ ಕಂಡುಕೊಂಡಿರುವ ಹೊಸ ನಿರೂಪಣಾಕ್ರಮದಲ್ಲೇ ಕೊಂಚ ದೋಷ ಇರುವಂತಿದೆ. ತನ್ನ ಇಡೀ ಸಿನಿಮಾದ ದೃಶ್ಯಗಳನ್ನು ನೈಜತೆಯ ಗರಿಷ್ಠ ಮಟ್ಟಕ್ಕೆ ಎಳೆದು ತರುವ ಹಂಬಲವಿರುವ ಮಿಷ್ಕಿನ್‌ನ ದೃಷ್ಟಿಕೋನ ಕೆಲವೆಡೆ ನಾಟಕೀಯವೂ ಅನ್ನಿಸಿಬಿಡುತ್ತದೆ. 'ಅಂಜಾದೆ' ಸಿನಿಮಾದಲ್ಲಿ ಅದು ಅಷ್ಟಾಗಿ ಇರಲಿಲ್ಲ, ಆದರೆ ಇತ್ತೀಚಿನ 'ನಂದಾಲಾಲಾ' ಹಾಗೂ 'ಯುದ್ಧಂ ಸೆಯ್' ಚಿತ್ರಗಳಲ್ಲಿ ಅದು ಹೆಚ್ಚು ಬಳಕೆಯಾಗಿದೆ. ಉದಾಹರಣೆಗೆ 'ನಂದಾಲಾಲಾ' ಸಿನಿಮಾದಲ್ಲಿ ಶಾಲಾ ಬಾಲಕ ಮತ್ತು ಮಾನಸಿಕ ಅಸ್ವಸ್ಥ ಖಿನ್ನರಾದಾಗ, ದುಃಖಿತರಾದಾಗ ಅಪರಾಧಿಯಂತೆ ತಲೆ ತಗ್ಗಿಸಿ ನಿಲ್ಲುತ್ತಾರೆ. 'ಯುದ್ಧಂ ಸೆಯ್'ನ ನಾಯಕ ಕೂಡ ಅಂತಹ ಸನ್ನಿವೇಶದಲ್ಲಿ ತಲೆತಗ್ಗಿಸಿ ಕೂರುತ್ತಾನೆ. ಹಿನ್ನೆಲೆಯಲ್ಲಿ ಹರಿದ ಕಾಗದ, ಚೆಲ್ಲಿದ ಪುಸ್ತಕಗಳು ಬಿದ್ದುಕೊಂಡಿರುತ್ತವೆ. ಇಂತಹವುಗಳನ್ನು ದುರಂತ ನಾಟಕಗಳ ದೃಶ್ಯಗಳ ಹಾಗೆ ಕಾಣಿಸಲು ಹೋಗುವ ಮಿಷ್ಕಿನ್ ಕೃತಕತೆಯನ್ನು ತಂದುಬಿಡುತ್ತಾನೆ. ಹಾಗಾಗಿ ಪಾತ್ರಗಳು ಕ್ರಿಯಾಶೀಲವಾಗಿರುವಾಗ ಇರುವ ಸಹಜತೆ, ಮೌನಗೊಂಡ ಸನ್ನಿವೇಶಗಳಲ್ಲಿ ಇಲ್ಲವಾಗುತ್ತದೆ. ನಾನು ಗಮನಿಸಿದಂತೆ ಇದೊಂದು ಸಣ್ಣ ಕೊರತೆ.

ಇಂತಹ ಸೃಜನಶೀಲತೆಯನ್ನೂ ಮೀರಿ ಮಿಷ್ಕಿನ್ ನನಗೆ ಇಷ್ಟವಾಗಿದ್ದು ಆತ ತಾನು ಆರಿಸಿಕೊಳ್ಳುತ್ತಿರುವ ಸಬ್ಜೆಕ್ಟ್‌ಗಳಿಂದಾಗಿ. ತಮ್ಮ ಸಿನಿಮಾವೊಂದು ಹಿಟ್ ಎನ್ನಿಸಿಕೊಂಡಕೂಡಲೇ, ಅದಕ್ಕೆ ಪ್ರಶಂಸೆ ಸಿಕ್ಕ ಕೂಡಲೇ ಒಂದೇ ಶೈಲಿಗೆ ಪಕ್ಕಾಗಿಬಿಡುವ ನಿರ್ದೇಶಕರ ನಡುವೆ ಮಿಷ್ಕಿನ್ ಭಿನ್ನವಾಗಿ ನಿಲ್ಲುತ್ತಾನೆ. 'ಅಂಜಾದೆ'ಯಂತಹ ಥ್ರಿಲ್ಲರ್ ಚಿತ್ರ ಎಲ್ಲರ ಗಮನ ಸೆಳೆಯುತ್ತಲೇ ಆತ ಆ ಸಿನಿಮಾವನ್ನೇ ಮರೆತವನಂತೆ 'ನಂದಾಲಾಲಾ'ದಂತಹ ಭಾವನಾತ್ಮಕ




ಸಿನಿಮಾದಲ್ಲಿ ತೊಡಗಿಸಿಕೊಳ್ಳುತ್ತಾನೆ. 'ನಂದಾಲಾಲಾ'ವನ್ನು ನೋಡಿ ಎಲ್ಲರೂ ಬೆರಗುಗೊಳ್ಳುತ್ತಿರುವಾಗಲೇ 'ಯುದ್ಧಂ ಸೆಯ್'ನಂತ ಕುತೂಹಲಕಾರಿ ಸಬ್ಜೆಕ್ಟ್ ಅನ್ನು ಕೈಗೆತ್ತಿಕೊಳ್ಳುತ್ತಾನೆ. ಇದು ಎಲ್ಲಾ ಕ್ರಿಯಾಶಾಲಿ, ಸೃಜನಶೀಲ ನಿರ್ದೇಶಕನೂ ತನ್ನತನವನ್ನು ಉಳಿಸಿಕೊಳ್ಳುವ ಮಾದರಿ ಇರಬಹುದು; ಹಾಗಾಗಿಯೇ ಯಾವುದೇ ಕಲಾತ್ಮಕ, ಕಮರ್ಷಿಯಲ್‌ಗಳ ಹಂಗೂ ಇರದೆ ಮಿಷ್ಕಿನ್ ತನ್ನ ನೈಜ ಸಿನಿಮಾಗಳ ಮೂಲಕ ನನ್ನನ್ನು ಕಾಡುತ್ತಿದ್ದಾನೆ.

ಮಿಷ್ಕಿನ್ ಹೊಸ ಸಿನಿಮಾ ವ್ಯಾಕರಣದ ಹುಡುಕಾಟದಲ್ಲಿ...

...ಮ ಬಂದು ಮೂರು ...ಗಿದ್ದರೂ ಈ ಸಿನಿಮಾ ... ಎಲ್ಲಿಯೂ ...ವಂತಹ ಚರ್ಚೆಗಳೇ ... ಕಾರಣಕ್ಕೆ ಈ ಮಾತು ...ನೆ.

... ಈಗ ಮಿಷ್ಕಿನ್‌ನ ... ಚರ್ಚೆಗೆ ಬರುತ್ತೇನೆ.

... ಮಾಡಿದ ಮೊದಲ ...ಹೆಸರು 'ಚಿತ್ತಿರುಂ ಪೇಸು... ...ನೆಯ ಚಿತ್ರ 'ಅಂಜಾದೆ'. ... ಸಿನಿಮಾಕ್ಕೆ ಪ್ರೇಮಕಥೆ ...ದುಕೊಂಡಿದ್ದ ಮಿಷ್ಕಿನ್ ...ದು ಶೈಲಿಯಲ್ಲಿ ಕಥೆ ...ಣಕ್ಕೆ ಮೊದಲ ಸಿನಿಮಾ ... ಸೆಳೆದಿದ್ದ, ನಂತರ ಆತ ...ತಿದ್ದು 'ಅಂಜಾದೆ' ಎಂಬ ...ಸ್ಟೋರಿಯನ್ನು. ಬಹುಶಃ ...ಸಿದ ಹಾಗೆ 'ಅಂಜಾದೆ' ... ತಾನು ಸಿನಿಮಾ ... ಹೊಸ ಕ್ರಮವೊಂದರ ..., ತೊಡಗಿದ ಮಿಷ್ಕಿನ್ ... ಅಚ್ಚರಿ ಹುಟ್ಟಿಸುವ ...ಶ್ಯಗಳನ್ನು ತೆರೆಗೆ ಅಳವಡಿ... ...ರಂತಹ ನಿರ್ದೇಶಕರ ...ದೃಶ್ಯಗಳಿಗೆ ಮನಸೋತಿದ್ದ ...ಜಾದೆ'ಯಲ್ಲಿ ಮಿಷ್ಕಿನ್ ...ಕಣ್ಣೆದುರಿನ ನೈಜಚಿತ್ರಣ ...ಗಿ ಹೋಗಿದ್ದ; ಇಲ್ಲಿ ...ಮೆರಾಮೆನ್‌ನ ಪ್ರತಿಭೆ ...ರಲಿಲ್ಲ; ನಿರ್ದೇಶಕ ...ಹೊಸ ದೃಷ್ಟಿಕೋನವೂ ...ಕಲಕುವ ಭಾವನಾತ್ಮಕ ...ಸೂ ತಾಂತ್ರಿಕ ವಿವರಗಳ ...ಪ್ರಜ್ಞೆಯಿಂದಾಗಿ ಮಾತ್ರ ...ಂತಿದ್ದ, ಆ ಚಿತ್ರ ...ಮಿತಿಯನ್ನೂ ...ರಂತಿತ್ತು, ಆದರೆ ...ಲಾ' ಸಿನಿಮಾದ ...ಸೆಳೆದ, ಕಳೆದ ವರ್ಷ



ಈತನ ಹೆಸರು ಮಿಷ್ಕಿನ್; ಇತ್ತೀಚೆಗೆ ಗಮನ ಸೆಳೆಯುತ್ತಿರುವ ತಮಿಳು ಚಿತ್ರ ನಿರ್ದೇಶಕ. ದಾಸ್ತೋವೆಸ್ಕಿಯ ತಲ್ಲಣಗೊಳಿಸುವ 'ದಿ ಈಡಿಯಟ್' ಕಾದಂಬರಿಯ ಚಿತ್ರಣಕ್ಕೂ; ಆತ ಆ ಕಾದಂಬರಿಯಲ್ಲಿ ರೂಪಿಸಿದ ಮಿಷ್ಕಿನ್‌ನ ಪಾತ್ರಕ್ಕೂ ಈ ತಮಿಳು ನಿರ್ದೇಶಕ ರೂಪಿಸಲು ಯತ್ನಿಸುತ್ತಿರುವ ಹೊಸ ಸಿನಿಮಾ ವ್ಯಾಕರಣಕ್ಕೂ ಸಾಮ್ಯತೆಗಳಿವೆ; ಅದರೊಳಗೆ ಕಲಾಕೃತಿಗೂ ಬದುಕಿಗೂ ಯಾವಾಗಲೂ ಅಂಟಿಕೊಂಡಿರುವ ಸಹಜ ಸಂಬಂಧಗಳಿವೆ.

ಕಾಣುತ್ತಾ ಹೋಗುತ್ತಾರೆ. ಅವರಿಗೆ ಸಿಗುವ ಮನುಷ್ಯರೆಲ್ಲ ನಾವು ಉತ್ಕೃಷ್ಟ ಸಾಹಿತ್ಯ ಕೃತಿಯೊಂದರಲ್ಲಿ ಕಾಣಬಹುದಾದ ಸಹಜ ಪಾತ್ರಗಳು; ಅವರಲ್ಲಿ ಕಳ್ಳರು, ಸುಳ್ಳರು, ವೇಶ್ಯೆ ಒಳ್ಳೆಯ ವರು, ಒಳಗೆ ಒಳ್ಳೆಯತನವಿರುವ ಕೆಟ್ಟವರು-ಎಲ್ಲರೂ ಇದ್ದಾರೆ. ಹೀಗೆ ಉದ್ದಕ್ಕೂ ಬದುಕಿನ ಸಹಜ ಅವಘಡಗಳ ಮೂಲಕವೇ ನೋಡುಗನ ಮನಸ್ಸನ್ನು ಒದ್ದೆ ಮಾಡುತ್ತಾ ಹೋಗುವ ಕಥೆ ಕೊನೆಯಲ್ಲಿ ಕೊಂಚ ಮೆಲೋಡ್ರಾಮಾದೊಂದಿಗೆ ಮುಗಿಯುತ್ತದೆ; ತಾನು ಬೈಯುತ್ತಿದ್ದ ಮಾನಸಿಕ ರೋಗಿಯ ತಾಯಿ ಸ್ವತಃ ದಾರುಣಸ್ಥಿತಿಯ ಮಾನಸಿಕ ರೋಗಿಯಾಗಿಬಿಟ್ಟಿದ್ದಾಳೆ, ತಾನು ಅಕ್ಕರೆಯಿಂದ ಕಾಣುತ್ತಿದ್ದ ಶಾಲಾ ಬಾಲಕನ ತಾಯಿ ಇನ್ನೊಬ್ಬನನ್ನು ಮದುವೆಯಾಗಿಬಿಟ್ಟಿದ್ದಾಳೆ.


'ಕಿಕುರಿಝರೋ'ದ ನಿರ್ದೇಶಕನ ಹಾಗೆಯೇ 'ನಂದಾಲಾಲಾ'ದಲ್ಲೂ ಮಿಷ್ಕಿನ್ ಮುಖ್ಯಪಾತ್ರವನ್ನು ತಾನೇ ಮಾಡಿದ್ದಾನೆ. ಹಾಗಿದ್ದೂ ಇಲ್ಲಿ ಯಾರೂ ನಾಯಕರಲ್ಲ; ಖಳನಾಯಕರಲ್ಲ; ನಾಯಕಿಯರಿಲ್ಲ. ಕೇವಲ ಮನುಷ್ಯರಿದ್ದಾರೆ; ಮನುಷ್ಯ ಬದುಕಿನ ತಾಕಲಾಟಗಳಿವೆ.

ಈ ಕಥೆಯನ್ನು ಎರಡು ಗಂಟೆಯಲ್ಲಿ ಹೇಳುವ ಮಿಷ್ಕಿನ್, ತಾನು ಕಥೆ ಹೇಳುವ ಶೈಲಿಯಿಂದಲೇ ನಮ್ಮನ್ನು ಅಚ್ಚರಿಯಲ್ಲಿ ಕೆಡವುತ್ತಾನೆ. ಕಥೆಯ ನಿರೂಪಣೆಗೆ ಆತ ಅಳವಡಿಸಿಕೊಂಡಿರುವ ಕ್ರಮ ನಿಧಾನಗತಿಯದ್ದು; ಆದರೆ ಅದು ನೋಡುವವನಲ್ಲಿ ಬೇಸರ ಹುಟ್ಟಿಸುವುದಿಲ್ಲ, ನಾಟಕದ ಎದುರು

ಯುದ್ಧಂ ಸೆಯ್ : ಸಿನಿಮಾ ಮೇಕಿಂಗ್‌ನ ಕುಸುರಿ

ಹಾಗೆ ನೋಡಿದರೆ 'ಯುದ್ಧಂ ಸೆಯ್' ಮಿಷ್ಕಿನ್‌ನ 'ನಂದಾಲಾಲಾ'ಕ್ಕಿಂತಲೂ ಹಿಂದಿನ ಪ್ರಾಜೆಕ್ಟ್. ಅದಾವ ಕಾರಣಗಳಿಂದಲೋ ಏನೋ ಕಳೆದ ವಾರ ಅದು ತೆರೆ ಕಂಡಿದೆ.

'ಯುದ್ಧಂ ಸೆಯ್' ಮಾಮೂಲಿ ಥ್ರಿಲ್ಲಿಂಗ್ ಶೈಲಿಯ ಸಿನಿಮಾ. ಆದರೆ ಸಸ್ಪೆನ್ಸ್ ಕಥೆಯನ್ನೂ ಕಲಾತ್ಮಕ ಚೌಕಟ್ಟಿನಲ್ಲಿ, ಕುತೂಹಲವನ್ನೂ ಸೂಕ್ಷ್ಮಗೊಳಿಸಿ ಹೇಗೆ ಹೇಳಬಹುದು ಎಂಬುದಕ್ಕೆ ಒಂದು ಉತ್ತಮ ಉದಾಹರಣೆ. ಈ ಚಿತ್ರದಲ್ಲಿಯೂ ಕೂಡ ನಾವು ಸಂಭಾಷಣೆಯ ಯಾವ ಸಣ್ಣ ತುಣುಕನ್ನೂ, ದೃಶ್ಯದ ಒಂದು ತುಂಡನ್ನೂ ಮಿಸ್ ಮಾಡಿಕೊಳ್ಳುವಂತಿಲ್ಲ ಅಷ್ಟರ ಮಟ್ಟಿಗೆ ಚಿತ್ರಕಥೆ ಬಿಗಿಯಾಗಿದೆ. ಈಗ ನಡೆಯುವ ಅಸಂಗತವೆನ್ನಿಸುವ ಒಂದು ದೃಶ್ಯದ ಲಿಂಕ್ ಅನ್ನು ನಿರ್ದೇಶಕ ಮುಂದೆಲ್ಲೋ ಜೋಡಿಸುತ್ತಾನೆ. ಹಾಗಾಗಿ ಇಡೀ ಸಿನಿಮಾವನ್ನು ಪ್ರೇಕ್ಷಕ ಅಕ್ಷರಶಃ ಮೈಯೆಲ್ಲಾ ಕಣ್ಣಾಗಿ, ಕಿವಿಯಾಗಿ ನೋಡುವಂತಿದೆ; ಕೇಳಿಸಿಕೊಳ್ಳುವಂತಿದೆ. ಥ್ರಿಲ್ಲರ್ ಸಿನಿಮಾವೊಂದಕ್ಕೆ ಇರಬೇಕಾದ ಚೌಕಟ್ಟು ಇದೇ.



• ಮಂಜುನಾಥ್‌ಲತಾ

ಮರೆತ ಮಾತು

ನಾನು ಮೊದಲು ಹೇಳಿದ ಮಿಷ್ಕಿನ್‌ನ ವಿಶಿಷ್ಟ ಶೈಲಿಯಾದ ನೆಲದ ಮೂಲಕ, ಮನುಷ್ಯರ ಕಾಲುಗಳ ಮೂಲಕ ಘಟನೆ ಗಳನ್ನು ದೃಶ್ಯೀಕರಿಸುವ ತಂತ್ರವೊಂದು ಆತನ ಎಲ್ಲಾ ಸಿನಿಮಾಗಳಲ್ಲೂ ಹೆಚ್ಚು ಬಳಕೆಯಾಗಿದೆ. ಆತ ಯಾಕೆ ಎಲ್ಲವನ್ನೂ ನೆಲದ ಮೂಲಕವೇ ಹೇಳಲು ಹೊರಡುತ್ತಾನೆ ಎಂದು ನಾನು ಹಲವು ಬಾರಿ ಯೋಚಿಸಿದ್ದೇನೆ. ನೆಲದ ನಿಜಗಳನ್ನು ಬಿಟ್ಟುಕೊಡುವ ಯಾವುದೇ ಕಲಾವಿದ ಯಾವುದೇ ಮನಸ್ಸುಗಳನ್ನು ಮುಟ್ಟಲು ಸಾಧ್ಯವಿಲ್ಲ ಎಂಬುದನ್ನು ಅವನು ಈ ಮೂಲಕ ಸಾಂಕೇತಿಕವಾಗಿ ಹೇಳುತ್ತಿದ್ದಾನೆಯೆ? •

Regd.No.KA/RNP/BGS/2036/2010-13 Posted at : GPO, Bangalore-01. Fri/Saturday R B P LANKESH, Kannada Weekly

ಸಂಭಾವನೆ ತುಟ್ಟಿ ಸಾಧನೆ ಖೊಟ್ಟಿ!

ಈ ನಾಯಕನಟರು ಇಷ್ಟೊಂದು ಭಾರೀ ಮೊತ್ತದ ಸಂಭಾವನೆಯನ್ನು ಪಡೆಯುವಷ್ಟು ಪ್ರತಿಭಾವಂತರೇ? ಇವರಿಗೆ ನಿಜಕ್ಕೂ ಲಕ್ಷಾಂತರ ಜನ ಅಭಿಮಾನಿಗಳಿದ್ದಾರೆಯೇ? ಇವರ ಚಿತ್ರಗಳಲ್ಲಿ ಹಣ ಹೂಡುವ ನಿರ್ಮಾಪಕ ತಾನು ಹಾಕಿದ ಬಂಡವಾಳವನ್ನು ವಾಪಸ್ ಪಡೆದು ಲಾಭ ಗಳಿಸುತ್ತಾನೆಯೇ?









ಕನ್ನಡ ಸಿನಿಮಾದ ನಾಯಕ ನಟರು ಈಗ ಪಡೆಯುತ್ತಿರುವ ಸಂಭಾವನೆಯನ್ನು ನೋಡಿ ಯಾರಾದರೂ ಕನ್ನಡ ಚಿತ್ರರಂಗ 'ಪ್ರಗತಿಪಥ'ದಲ್ಲಿದೆ ಎಂದು ತಪ್ಪಾಗಿ ಅರ್ಥೈಸಬಹುದು. ಯಾಕೆಂದರೆ, ಇತ್ತೀಚೆಗೆ ಯಾವ ಕನ್ನಡ ಚಿತ್ರ ಹಿಟ್ ಆಗಿರದಿದ್ದರೂ ಇಲ್ಲಿನ ಹೆಚ್ಚಿನ ನಾಯಕ ನಟರು 'ಕೋಟಿವೀರ'ರಾಗಿದ್ದಾರೆ!

ಆದರಿದು ಸಂಭಾವನೆಯ ವಿಷಯದಲ್ಲಿ ಮಾತ್ರ!!

ಇವತ್ತು ಯಾವುದೇ ಒಬ್ಬ ನಟನಿಗೆ ಕನಿಷ್ಠ ಹತ್ತು ಲಕ್ಷ ಅಭಿಮಾನಿಗಳು ಕೂಡ ಇಲ್ಲವೆನ್ನಬಹುದು. ಹಿಂದಿನ ಕಾಲದಲ್ಲಿ ನಾಯಕನಟರಿಗೆ ಕೋಟ್ಯಾಂತರ ಅಭಿಮಾನಿಗಳಿರುತ್ತಿದ್ದರು. ಅದೇ ಅವರ ಪಾಲಿಗೆ ಆಸ್ತಿಯೂ, ಸ್ಫೂರ್ತಿಯೂ ಆಗಿರುತ್ತಿತ್ತು. ಆದರೆ ಈಗಿನ ಜಮಾನದ ನಟರಿಗೆ ಕೋಟ್ಯಾಂತರ ಅಭಿಮಾನಿಗಳನ್ನು ಸಂಪಾದಿಸುವ ಬದಲು ಕೋಟ್ಯಾಂತರ ರೂ.ಗಳನ್ನು ಸಂಪಾದಿಸುವುದರ ಬಗ್ಗೆಯೇ ಹೆಚ್ಚು ಆಸಕ್ತಿ ಎನ್ನಬಹುದು.



ಸದ್ಯ ಗಾಂಧಿನಗರದಲ್ಲಿ ಸಿಗುತ್ತಿರುವ ಅಂಕಿಅಂಶಗಳ ಪ್ರಕಾರ ಪವರ್‌ಸ್ಟಾರ್ ಪುನೀತ್ ರಾಜ್ ಕುಮಾರ್ ಅತ್ಯಂತ ಹೆಚ್ಚು ಸಂಭಾವನೆಯನ್ನು ಪಡೆಯುತ್ತಿರುವ ನಟ. ಗಾಂಧಿನಗರದ ಸೆನ್ಸೆಕ್ಸ್ ಪ್ರಕಾರ ಚಿತ್ರವೊಂದಕ್ಕೆ ಪುನೀತ್ ಚಾರ್ಜ್ ಮಾಡುತ್ತಿರುವ ರೇಟ್ ಮೂರು ಕಾಲು ಕೋಟಿ ರೂ. ಅದು ಸಾಲದೆಂಬಂತೆ ಯೋಗರಾಜ್ ಭಟ್ ನಿರ್ದೇಶನದ 'ಪರಮಾತ್ಮ' ಚಿತ್ರ ಬಿಡುಗಡೆಯಾದ ನಂತರ ಪುನೀತ್ ಸ್ವಂತ ನಿರ್ಮಾಣದ ಚಿತ್ರಗಳಲ್ಲಿ ಮಾತ್ರ ನಟಿಸುವ ಸುದ್ದಿಯೂ ಕೇಳಿಬರುತ್ತಿದೆ. ಅಂದರೆ ಆಗ ಪುನೀತ್ ಇತರೆ ನಿರ್ಮಾಪಕರಿಗೆ ಗಗನ ಕುಸುಮವಾಗಲಿದ್ದಾರೆ.

ಪುನೀತ್ ನಂತರದ ಸ್ಥಾನದಲ್ಲಿ ಸದ್ಯಕ್ಕೆ 'ಸೂಪರ್' ಚಿತ್ರದ ನಾಯಕ ಉಪೇಂದ್ರ ಅವರ ಹೆಸರು ಕೇಳಿಬರುತ್ತಿದೆ. ನಟನೆಯೊಂದಿಗೆ ಉಪೇಂದ್ರರೇ ಕಥೆ-ಚಿತ್ರಕಥೆ-ನಿರ್ದೇಶನದ ಜವಾಬ್ದಾರಿಯನ್ನೂ ವಹಿಸಿಕೊಳ್ಳುವುದರಿಂದ ಮತ್ತು ಅವರ ಸಿನಿಮಾಗಳು ತಮಿಳು ಮತ್ತು ತೆಲುಗಿಗೂ ಡಬ್ ಆಗುವುದರಿಂದ ಅವರ ರೇಟ್ ಸದ್ಯಕ್ಕೆ ಎರಡೂವರೆ ಕೋಟಿ ರೂ.

ಬಾಕ್ಸಾಫೀಸ್ ಕಿಂಗ್ ಎಂದೇ ಆರಂಭದಿಂದ ಗಾಂಧಿನಗರದ ಜನ ಪರಿಗಣಿಸಿರುವ ದರ್ಶನ್ ಇತ್ತೀಚೆಗೆ ಒಂದೆರಡು ಸೋಲುಗಳನ್ನು ಕಂಡಿದ್ದಾರೆ. ಆದರೆ ದರ್ಶನ್ ನಟಿಸಿರುವ 'ಚಿಂಗಾರಿ' ಮತ್ತು 'ಸಂಗೊಳ್ಳಿ ರಾಯಣ್ಣ' ಬಿಡುಗಡೆಯಾದ ನಂತರ ಆತನ ಬೆಲೆ ಗಗನಕ್ಕೇರಬಹುದು ಎಂದು ಎಲ್ಲರೂ ತರ್ಕಿಸುತ್ತಿದ್ದಾರೆ. ಸದ್ಯಕ್ಕೆ 1.40 ಕೋಟಿ ರೂಪಾಯಿಗಳಿಗೆ ದರ್ಶನ್ ತನ್ನ 45 ದಿನಗಳ ಕಾಲ್‌ಶೀಟನ್ನು ಮಾರಾಟ ಮಾಡುತ್ತಿದ್ದಾರೆ.

ಅದೇ ರೇಂಜಿನಲ್ಲಿದ್ದರೂ ಹತ್ತಿಪ್ಪತ್ತು ಲಕ್ಷ ಕಡಿಮೆ ಬೆಲೆಗೆ ಸಿಗುವ ಸುದೀಪ್ ಕೂಡಾ ಸದ್ಯದಲ್ಲೇ ತನ್ನ ಸಂಭಾವನೆಯನ್ನು ಹೆಚ್ಚಿಸುವ ಸಾಧ್ಯತೆ ಕೇಳಿಬರುತ್ತಿದೆ. ಸುದೀಪ್ ನಟಿಸಿ ನಿರ್ದೇಶಿಸುತ್ತಿರುವ 'ಕೆಂಪೇಗೌಡ' ಚಿತ್ರ ಬಿಡುಗಡೆಯಾದ ನಂತರ ದರ್ಶನ್ ಅನ್ನು ಓವರ್‌ಟೇಕ್ ಮಾಡಿ ಸುದೀಪ್ ಅತಿವೇಗದಲ್ಲಿ ಉಪ್ಪಿಯ ಹತ್ತಿರ ತಲುಪಬಹುದು ಎಂಬುದು ಗಾಂಧಿನಗರದ ಪಂಡಿತರ ಲೆಕ್ಕಾಚಾರ.

ಈ ಯುವಕರ ಹಾರಾಟ ಮತ್ತು ಆರ್ಭಟದಲ್ಲಿ ನಿಜವಾಗಿಯೂ ಸ್ವಲ್ಪ ಮಸುಕಾದವರೆಂದರೆ ಕ್ರೇಜಿಸ್ಟಾರ್ ರವಿಚಂದ್ರನ್ ಮತ್ತು ಹ್ಯಾಟ್ರಿಕ್ ಹೀರೋ ಶಿವರಾಜ್‌ಕುಮಾರ್. ಆದರೂ ಈ ಇಬ್ಬರು ನಟರ ಕಾಲ್‌ಶೀಟ್‌ಗಳು ಮುಂದಿನ ಎರಡು ವರ್ಷಗಳ ಅವಧಿಗೆ ಮಾರಾಟವಾಗಿವೆ ಎಂದರೆ ನೀವು ನಂಬಲೇಬೇಕು. ಸದ್ಯಕ್ಕೆ ನಿರ್ದೇಶನದ ಜವಾಬ್ದಾರಿಯ ಸಮೇತ ನಾಯಕನಾಗಿ ನಟಿಸುವುದಕ್ಕೆ ಕ್ರೇಜಿಸ್ಟಾರ್ ಬರೋಬ್ಬರಿ 90 ಲಕ್ಷ ಚಾರ್ಜ್ ಮಾಡುತ್ತಾರೆ.

ಹ್ಯಾಟ್ರಿಕ್ ಹೀರೋ ಶಿವರಾಜ್‌ಕುಮಾರ್ ಕೇವಲ ನಟನೆಗೆ 1.20 ಕೋಟಿ ಗಳಿಸುತ್ತಾರೆ. ಅವರ ವೃತ್ತಿ ಜೀವನದ 100ನೇ ಚಿತ್ರವಾದ 'ಜೋಗಯ್ಯ' ಬಾಕ್ಸಾಫೀಸ್‌ನಲ್ಲಿ ಗೆದ್ದರೆ ಶಿವಣ್ಣನ ರೇಟ್ ಇನ್ನಷ್ಟು ಹೆಚ್ಚಾಗಬಹುದೆಂಬ ಆತಂಕದಿಂದಲೇ ನಿರ್ಮಾಪಕರು ಈಗಲೇ ಶಿವಣ್ಣನನ್ನು ಬುಕ್ ಮಾಡುತ್ತಿದ್ದಾರೆ.

ಹಾಗೆ ನೋಡಿದರೆ ಬಡ ನಿರ್ಮಾಪಕರ ಪಾಲಿಗೆ ಸುಲಭವಾಗಿ ಸಿಗುವ ನಟನೆಂದರೆ ರಮೇಶ್ ಅರವಿಂದ್. ರಮೇಶ್ ಇನ್ನೂ 50 ಲಕ್ಷದ ಗಡಿ ತಲುಪಿಲ್ಲದ ಕಾರಣ ಅನೇಕ ನಿರ್ಮಾಪಕರ ಡಾರ್ಲಿಂಗ್ ಎನಿಸಿಕೊಂಡಿದ್ದಾರೆ. ಅದೇ ಸಾಲಿಗೆ ಸಲ್ಲುವ ಮತ್ತೊಬ್ಬ ನಟನೆಂದರೆ ನವರಸನಾಯಕ ಜಗ್ಗೇಶ್. ಆದರೆ ಇತ್ತೀಚೆಗೆ ಜಗ್ಗೇಶ್ ತಮ್ಮ ಸ್ವಂತ ಬ್ಯಾನರ್‌ನ ಚಿತ್ರಕ್ಕಷ್ಟೇ ಸೀಮಿತವಾಗಿರುವುದರಿಂದ ಹೆಚ್ಚಿನ ನಿರ್ಮಾಪಕರಿಗೆ ಅವರ ಕಾಲ್‌ಶೀಟ್ ಸಿಗುತ್ತಿಲ್ಲ. ಅದರಲ್ಲೂ ಜಗ್ಗೇಶ್ ರಾಜಕೀಯದಲ್ಲಿ ಸಿಕ್ಕಾಪಟ್ಟೆ 'ಬಿಜಿ'ಯಾಗಿರುವುದರಿಂದ ಮತ್ತು ಅಲ್ಲೇ ಅವರಿಗೆ ಸಿನಿಮಾಕ್ಕಿಂತಲೂ ಹೆಚ್ಚು 'ಸಂಭಾವನೆ' ಬರುತ್ತಿರುವುದರಿಂದ ಅವರ ಕಾಲ್‌ಶೀಟ್ ತಮಗೆ ಸಿಗುತ್ತಿಲ್ಲ ಎಂದು ಹಲವು ನಿರ್ಮಾಪಕರು ವ್ಯಂಗ್ಯವಾಡುತ್ತಿದ್ದಾರೆ.

ಹಳೇ ಜಮಾನದ ನಾಯಕನಟರ ಸಂಭಾವನೆಯ ಈ ಕತೆಯೊಂದಿಗೆ ಈಗಿನ ಜಮಾನದ ಹುಡುಗರ ಸಂಭಾವನೆಯ ಕತೆಯನ್ನೂ ನೋಡಿ ನಿರ್ಮಾಪಕರು ವ್ಯಥೆ ಪಡುತ್ತಿದ್ದಾರೆ. ಈಗಿನ ಹುಡುಗರ ಒಂದು ಚಿತ್ರ ಹಿಟ್ ಆದರೂ ಸಾಕು ಅವರು ಏಕ್‌ದಮ್ ತಮ್ಮ ಸಂಭಾವನೆಯನ್ನು ಹತ್ತಿಪ್ಪತ್ತು ಲಕ್ಷ ಏರಿಸುತ್ತಾರೆ. ಯಾವುದೇ ಮುಜುಗರ, ಮುಲಾಜು ಅಥವಾ ದಾಕ್ಷಿಣ್ಯವಿಲ್ಲದೇ ಈ ಹುಡುಗರೇ ಬಹಿರಂಗವಾಗಿ ತಮ್ಮ ರೇಟು ಇಷ್ಟು, ಇಷ್ಟನ್ನು ಕೊಟ್ಟರೆ ಮಾತ್ರ ತಮ್ಮ ಕಾಲ್‌ಶೀಟ್ ಕೊಡುವುದಾಗಿ ಬಹಿರಂಗವಾಗಿ ಹೇಳುತ್ತಾರೆ.

ಹೊಸಹುಡುಗರಲ್ಲಿ ಮೊದಲು ಕೋಟಿಯ ಗಡಿ ದಾಟಿದವರು ಗೋಲ್ಡನ್‌ಸ್ಟಾರ್ ಗಣೇಶ್. ಇತ್ತೀಚೆಗೆ ಈತನ ಮೂರ್ನಾಲ್ಕು ಚಿತ್ರಗಳು ಬಾಕ್ಸಾಫೀಸ್‌ನಲ್ಲಿ ಮುಗ್ಗರಿಸಿದ್ದರಿಂದ ಗಾಂಧಿನಗರದ ಪೇಟೆಯಲ್ಲಿ ಈ 'ಗೋಲ್ಡ್' ತನ್ನ ವರ್ಚಸ್ಸು ಮತ್ತು ಹೊಳಪು ಕಳೆದುಕೊಂಡಿದೆ. ಆದರೂ ಈ 'ಗೋಲ್ಡ್'ನ ಕಾಲ್‌ಶೀಟ್ ಬೆಲೆ ಒಂದೂ ಕಾಲು ಕೋಟಿ ರೂಪಾಯಿ..... ಹಾಗೊಮ್ಮೆ ಈತನ ಕಳೆದ ಹಲವು ಚಿತ್ರಗಳು ಗೆದ್ದಿದ್ದರೆ ಇಷ್ಟೊತ್ತಿಗೆ ಈ 'ಗೋಲ್ಡ್' 2 ಕೋಟಿ ದಾಟುವ ಸಾಧ್ಯತೆಗಳಿದ್ದವು.

'ದುನಿಯಾ' ಖ್ಯಾತಿಯ ಕೃಷ್ಣವರ್ಣದ ನಾಯಕನಟ ವಿಜಯ ಚಿತ್ರಗಳು ಬಾಕ್ಸಾಫೀಸ್‌ನಲ್ಲಿ ಮುಗ್ಗರಿಸಿದ್ದರೂ ಇತರರಿಗಿಂತ ತಾನೇನು ಕಮ್ಮಿಯಿಲ್ಲವೆಂಬಂತೆ ಈತನೂ ತನ್ನ ಸಂಭಾವನೆಯನ್ನು ಏರಿಸುತ್ತಲೇ ಇದ್ದಾರೆ. ಸದ್ಯಕ್ಕೆ ಈ 'ಕರಿಯ'ನ ರೇಟು ಕೇವಲ 1.25 ಕೋಟಿ ರೂ. ವಿಶೇಷವೆಂದರೆ ವಿಜಯ್ ಗೆಲ್ಲುವ ಕುದುರೆಯೆಂದು ಆತನ ಮೇಲೆ ಹಣ ಹೂಡಲು ಬಾಜಿದಾರರು ತುದಿಗಾಲಲ್ಲಿ ನಿಂತಿದ್ದಾರೆ.

'ತಾಜ್‌ಮಹಲ್' ಮತ್ತು 'ಕೃಷ್ಣನ್ ಲವ್‌ಸ್ಟೋರಿ' ಚಿತ್ರಗಳ ಯಶಸ್ಸಿನ ನಂತರ ಅಜಯ್‌ರಾವ್ ಎಂಬ ನಟ ತಾನು ಮಾಸ್ ಹೀರೋ ಎಂದು ತೀರ್ಮಾನಿಸಿರುವಂತಿದೆ. ಈ ಕಾರಣದಿಂದ ತನಗೂ 80 ಲಕ್ಷ ರೂಪಾಯಿ ಕೊಡಿ ಎಂಬ ಬೇಡಿಕೆ ಈತ ಮುಂದಿಡುತ್ತಿದ್ದಾರೆ. ಆದರೂ ಈತನಕ ಯಾವುದೇ ನಿರ್ಮಾಪಕ ಈತನಿಗೆ ಕೊಟ್ಟ ಅತಿ ದೊಡ್ಡ ಮೊತ್ತವೆಂದರೆ 37 ಲಕ್ಷ ರೂ.ಗಳು ಮಾತ್ರ.

ಯೋಗರಾಜ್ ಭಟ್ಟರ ಪಟ್ಟದ ಶಿಷ್ಯ 'ಡಿಂಪಲ್ ಸ್ಟಾರ್' ದಿಗಂತ್ ತನ್ನ ಸಂಭಾವನೆಯನ್ನು 'ಪಂಚರಂಗಿ' ನಂತರ ಕೋಟಿಗೇರಿಸುತ್ತಾರೆ ಎಂಬ ಮಾತು ಅಲ್ಲಲ್ಲಿ ಕೇಳಿಬರುತ್ತಿತ್ತು. ಆದರೆ ಇಂದಿಗೂ ದಿಗಂತ್ ಒಂದು ರೀತಿಯಲ್ಲಿ 'ಜಸ್ಟ್‌ಪಾಸ್ ಮಾರ್ಕ್' ಎಂಬಂತೆ 35 ಲಕ್ಷ ಪಡೆಯುತ್ತಿದ್ದಾರೆ.

'ಮೊದಲಾ ಸಲ' ಎಂಬ ಚಿತ್ರ 100 ದಿನ ಓಡಿದರೂ ನಿರ್ಮಾಪಕರಿಗೆ ಚಿಕ್ಕಾಸು ಲಾಭ ಬಂದಿಲ್ಲ! ಆದರೆ 'ಮೊದಲಾಸಲ' ಚಿತ್ರದ ನಾಯಕ ಯಶ್ ತನ್ನ ಚಿತ್ರ ಶತದಿನೋತ್ಸವ ಆಚರಿಸಿದೆ ಎಂಬ ಅಂಶವನ್ನು ಮುಂದಿಟ್ಟು ತನ್ನ ಸಂಭಾವನೆಯನ್ನು ಹೆಚ್ಚಿಸಿದ್ದಾರೆ. ಹೀಗಾಗಿ 27ರ ಆಜುಬಾಜಿನಲ್ಲಿದ್ದ ಈ ಯುವಕ ಈಗ 40-50 ಲಕ್ಷ ರೂ. ಕೇಳುವ ಹಂತಕ್ಕೆ 'ಬೆಳೆ'ದಿದ್ದಾನೆ.

ಇದೇ ಹುಡುಗರ ಸಾಲಿಗೆ ಸೇರಬಹುದಾದ ಚಿರಂಜೀವಿ ಸರ್ಜಾ ನಟನೆಯಲ್ಲಿ ಇನ್ನೂ ಸೈಕಲ್ ಹೊಡೆಯುತ್ತಿದ್ದರೂ ಶರವೇಗದಲ್ಲಿ ತನ್ನ ಸಂಭಾವನೆಯನ್ನು ಏರಿಸುತ್ತಲೇ ಇದ್ದಾರೆ. ಒಂದೆರಡು ಸಿನಿಮಾಗಳಲ್ಲಿ ಸಖತ್ತಾಗಿ ಫೈಟ್ ಮಾಡಿದ ಚಿರಂಜೀವಿ ಸರ್ಜಾ ಮುಂಬರುವ ದಿನಗಳಲ್ಲಿ ಬಿ ಮತ್ತು ಸಿ ಸೆಂಟರ್ ಹೀರೋ ಆಗಿ ಮೆರೆಯುವ ಸಾಧ್ಯತೆ ಇದೆ. ಮೊದಲು ಕನ್ನಡ ಚಿತ್ರದಲ್ಲಿ ನಟಿಸಿ ಆ ನಂತರ ಚಿಕ್ಕಪ್ಪ ಅರ್ಜುನ್ ಸರ್ಜಾ ತರ ತೆಲುಗಿಗೆ ಹಾರುವ ಯೋಜನೆ ಹಾಕಿಕೊಂಡಿದ್ದ ಚಿರಂಜೀವಿ ಸರ್ಜಾ ಸದ್ಯಕ್ಕೆ ವಿಧಿ ಇಲ್ಲದೆ ಗಾಂಧಿನಗರದಲ್ಲೇ ಠಿಕಾಣಿ ಹೂಡಿದ್ದಾರೆ.

ಲೂಸ್ ಮಾದ ಯಾನೆ ಯೋಗೇಶ್ ಜನಪ್ರಿಯತೆ ಒಂದು ಹಂತದಲ್ಲಿ ಎಂತಹ ಉತ್ತುಂಗಕ್ಕೇರಿತ್ತೆಂದರೆ ಆತ 'ಲೂಸ್ ಮಾದ' ಎಂಬ ಸೈಡ್ ನಟನ ಸ್ಥಾನದಿಂದ ಬಹುಬೇಗ ಯೋಗೇಶ್ ಎಂಬ ನಾಯಕನಟನಾಗಿ ರೂಪಾಂತರಗೊಂಡ. ಆದರೆ ಕೇವಲ ಎರಡೇ ಎರಡು ಚಿತ್ರಗಳ ಸೋಲು ಈಗ ಆತನನ್ನು ಸಂಪೂರ್ಣವಾಗಿ ಕುಗ್ಗಿಸಿದೆ. ಆದರೂ ಲೂಸ್ ಮಾದನ ರೇಟು 50 ಆಜುಬಾಜಿನಲ್ಲಿದೆ!

ಇನ್ನು ವಿಜಯರಾಘವೇಂದ್ರ, ಮುರುಳಿ, ತರುಣ್, ಪ್ರೇಮ್, ಆದಿತ್ಯ ಪ್ರಜ್ವಲ್ ದೇವರಾಜ್ ಮೊದಲಾದ ಯುವ ನಾಯಕನಟರು ಆರಂಭದಲ್ಲಿ ಭಾರೀ ಸುದ್ದಿ ಮಾಡಿದ್ದರೂ ಈಗ 'ಗೋವಿಂದಾ...' ಎನ್ನುತ್ತಿದ್ದಾರೆ. ಇವರಲ್ಲಿ ಪ್ರತಿಯೊಬ್ಬರೂ ಒಂದೊಂದು ಹಿಟ್ ಚಿತ್ರ ನೀಡಿದ್ದಾರೆಂಬುದು ಗಮನಾರ್ಹ. ಆದರೂ ಇವರೆಲ್ಲರ ಕಾಲ್‌ಶೀಟ್ ರೇಟು ಇವತ್ತಿಗೂ ಕಾಲು ಕೋಟಿಗಿಂತ ಹೆಚ್ಚು ಇದೆ ಎಂಬುದೇ ವಿಶೇಷ.

ಆದರೆ ನಿಜಕ್ಕೂ ಈ ನಾಯಕನಟರು ಇಷ್ಟೊಂದು ಭಾರೀ ಮೊತ್ತದ ಸಂಭಾವನೆಯನ್ನು ಪಡೆಯುವಷ್ಟು ಪ್ರತಿಭಾವಂತರೇ? ಇವರಿಗೆ ನಿಜಕ್ಕೂ ಲಕ್ಷಾಂತರ ಜನ ಅಭಿಮಾನಿಗಳಿದ್ದಾರೆಯೇ? ಇವರ ಚಿತ್ರಗಳಲ್ಲಿ ಹಣ ಹೂಡುವ ನಿರ್ಮಾಪಕ ತಾನು ಹಾಕಿದ ಬಂಡವಾಳವನ್ನು ವಾಪಸ್ ಪಡೆದು ಲಾಭ ಗಳಿಸುತ್ತಾನೆಯೇ? ಎಂಬಿತ್ಯಾದಿ ಪ್ರಶ್ನೆಗಳಿಗೆ ಖಂಡಿತವಾಗಿಯೂ ನಕಾರಾತ್ಮಕ ಉತ್ತರವೇ ಸಿಗುತ್ತಿದೆ. ಯಾಕೆಂದರೆ ಇಷ್ಟೊಂದು ದುಬಾರಿ ಹಣಕೊಟ್ಟು ಈ ನಟರನ್ನು ಹಾಕಿಕೊಂಡು ಸಿನಿಮಾ ನಿರ್ಮಿಸಿದ ನಿರ್ಮಾಪಕರೆಲ್ಲ ತಮ್ಮ ಮನೆ-ಮಠ-ಚಿನ್ನ ಕಳೆದುಕೊಳ್ಳುತ್ತಿದ್ದಾರೆ.

ಸದ್ಯದ ಮಟ್ಟಿಗೆ ಪುನೀತ್ ಮಾತ್ರ ಕನ್ನಡ ಚಿತ್ರರಂಗದಲ್ಲಿ ಗ್ಯಾರಂಟಿ ನಟನಾಗಿ ಬೆಳೆದು ನಿಂತಿದ್ದಾರೆ. ಇವರನ್ನು ಹೊರತುಪಡಿಸಿ ಬೇರ‍್ಯಾರ ಚಿತ್ರಗಳನ್ನು ಖರೀದಿಸಲು ಹಂಚಿಕೆದಾರರು ಆಸಕ್ತಿ ತೋರಿಸುತ್ತಿಲ್ಲ.

ಈಗ ನೀವೇ ಹೇಳಿ ಕನ್ನಡ ಚಿತ್ರರಂಗ ಪ್ರಗತಿಪಥದಲ್ಲಿದೆಯೇ?

● ಸದಾಶಿವ ಶೆಣೈ

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com, Printed at Rajhans Enterprises, # 134, 4th Main, Industrial Estate, Rajajinagar, Bangalore